ದೇವರಕಾಡು ಮತ್ತು ಟೆರ್‍ರಾಕೋಟಾ ಶಿಲ್ಪಗಳು

(ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ 2015-16ನೇ ಸಾಲಿನ ವಿಶೇಷ ಘಟಕ ಯೋಜನೆಯಡಿಯಲ್ಲಿ ಸಂಶೋಧನಾ ಫೆಲೋಶಿಪ್‌ಗಾಗಿ ಸಲ್ಲಿಸುತ್ತಿರುವ ಸಂಶೋಧನಾ ಪ್ರಬಂಧ)

ಸಂಶೋಧಕರು:
ಗೌತಮ ಎ.ಎಂ.

ಮಾರ್ಗದರ್ಶಕರು:
ಕೆ.ವಿ. ಸುಬ್ರಮಣ್ಯಂ
ದೃಶ್ಯಕಲಾ ಇತಿಹಾಸಕಾರರು ಮತ್ತು ವಿಮರ್ಶಕರು, ಬೆಂಗಳೂರು



ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು – 560 002

ದೇವರಕಾಡು
ಮತ್ತು
ಟೆರ್ರಾಕೋಟಾ ಶಿಲ್ಪಗಳು

(ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ 2015–16ನೇ ಸಾಲಿನ ವಿಶೇಷ ಘಟಕ ಯೋಜನೆಯಡಿಯಲ್ಲಿ ಸಂಶೋಧನಾ ಫೆಲೋಶಿಪ್‌ಗಾಗಿ ಸಲ್ಲಿಸುತ್ತಿರುವ ಸಂಶೋಧನಾ ಪ್ರಬಂಧ)

ಸಂಶೋಧಕರು:
ಗೌತಮ ಎ.ಎಂ.

ಮಾರ್ಗದರ್ಶಕರು:
ಕೆ.ವಿ. ಸುಬ್ರಮಣ್ಯಂ
ದೃಶ್ಯಕಲಾ ಇತಿಹಾಸಕಾರರು ಮತ್ತು ವಿಮರ್ಶಕರು, ಬೆಂಗಳೂರು

ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಕನ್ನಡ ಭವನ ಮೇಲ್ಮನೆ, ಚಾಲುಕ್ಯ ವಿಭಾಗ
ಜೆ.ಸಿ. ರಸ್ತೆ, ಬೆಂಗಳೂರು – 560 002

ಕೃತಜ್ಞತೆಗಳು

2015–16ನೇ ಸಾಲಿನಲ್ಲಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ವಿಶೇಷ ಘಟಕ ಯೋಜನೆಯಡಿ ದೊರೆತ ಫೆಲೋಶಿಪ್‌ನಿಂದಾಗಿ **"ದೇವರಕಾಡು ಮತ್ತು ಟೆರ್ರಾಕೋಟಾ ಶಿಲ್ಪಗಳು"** ವಿಷಯ ಕುರಿತು ಸಂಶೋಧನಾ ಪ್ರಬಂಧವನ್ನು ರಚಿಸಲು ಅವಕಾಶವಾಯಿತು. ನನ್ನ ಈ ಬರವಣಿಗೆಗೆ ಅವಕಾಶ ಕಲ್ಪಿಸಿಕೊಟ್ಟ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ **ಶ್ರೀ ಕೆ.ಎ.ದಯಾನಂದ,** ಮಾನ್ಯ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ. **ಆಶೋಕ ಛಲವಾದಿ,** ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ. **ಶ್ರೀ ಮಹದೇವಪ್ಪ ಶಂಭುಲಿಂಗಪ್ಪ ಶಿಲ್ಪಿ,** ಅಧ್ಯಕ್ಷರು, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಹಾಗೂ **ಶ್ರೀಮತಿ ಹೆಚ್.ವಿ. ಇಂದ್ರಮ್ಮ,** ರಿಜಿಸ್ಟ್ರಾರ್, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಅವರಿಗೆ ಅನಂತ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಬರವಣಿಗೆಗೆ ಪ್ರೇರೇಪಣೆ ಮಾಡಿ ಮಾರ್ಗದರ್ಶನ ನೀಡಿದ ಪೂಜ್ಯ ಗುರುಗಳಾದ **ಕೆ.ವಿ. ಸುಬ್ರಮಣ್ಯಂ** ಸರ್ ಅವರಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಆಗೀಗಿನ ಭೇಟಿಯಲ್ಲಿ ನಮ್ಮ ಅಧ್ಯಯನ ಕುರಿತಾಗಿ ಹಲವು ಆಯಾಮಗಳಿಂದ ಚರ್ಚೆ ನಡೆಸಿ ವಿಷಯದ ಕುರಿತು ನೋಡುವ ದೃಷ್ಟಿಕೋನಗಳ ಬಗ್ಗೆ ಹೆಚ್ಚು ಅರಿವು ಮೂಡಿಸಲು ಪ್ರಯತ್ನಿಸಿದ ಗುರುಗಳಾದ ಡಾ. ಎಂ.ಜಿ. ನಾಗರಾಜ ಮತ್ತು ಪ್ರೊ. ಅನ್ನಪೂರ್ಣ ಅವರಿಗೆ ನನ್ನ ಧನ್ಯವಾದಗಳನ್ನು ಸಮರ್ಪಿಸುತ್ತಿದ್ದೇನೆ ಮತ್ತು ಕ್ಷೇತ್ರ ಸಂದರ್ಶನದ ವೇಳೆ ಸಹಕಾರ ನೀಡಿದ ದೇವರಕಾಡು ಸಂಬಂಧಿತ ಪ್ರತಿಯೊಬ್ಬ ಕೊಡಗಿನ ಬಂಧುಗಳಿಗೂ ಮತ್ತು ನೆರವು ನೀಡಿದ ನನ್ನ ಆಪ್ತರಿಗೂ ನಾನು ಚಿರಋಣಿಯಾಗಿದ್ದೇನೆ. ಪುಸ್ತಕವು ರೂಪ ಪಡೆಯಲು ನೆರವಾದ ಆನಂದಕುಮಾರ. ಹೆಚ್.ಎಸ್., ರಾಜೇಂದ್ರಪ್ರಸಾದ್ ನರೇಶ್ ಮತ್ತು ಶಿವಪ್ರಸಾದ್.ಎಸ್. ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

"ದೇವರಕಾಡು ಮತ್ತು ಟೆರ್ರಾಕೋಟಾ ಶಿಲ್ಪಗಳು"

ವಿಷಯ ಸೂಚಿ

ಅಧ್ಯಾಯ – 01

ಪ್ರಸ್ತಾವನೆ

ನಮ್ಮ ಅರಿವಿನ ಪರಂಪರೆಯು, ನಮ್ಮ ಜೀವನದಷ್ಟೇ ಹಳೆಯದು. ಅರಿವು, ತಿಳಿವಳಿಕೆ ಅಥವಾ ಜ್ಞಾನದ ಇತಿಹಾಸವು ಮನುಕುಲದ ಇತಿಹಾಸದೊಡನೆ ಬೆಸೆದುಕೊಂಡಿದೆ. ಅನಾದಿ ಕಾಲದಿಂದಲೂ ಮಾನವರು, ಬದುಕಿನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ತಮ್ಮ ಪರಿಸರ ಜೀವನಾನುಭವ ಹಾಗೂ ಇತರ ಪೂರಕ ಮಾಹಿತಿಯನ್ನು ಅವಲಂಬಿಸಿರುತ್ತಿದ್ದರು. ಬದುಕನ್ನು ಸುಗಮವಾಗಿಸಲು ಬೇಕಾದಎಲ್ಲಾ ಪರಿಕರಗಳನ್ನು ಹೊಂಚಿಕೊಳ್ಳಲು ಸೃಜನಶೀಲರಾಗಿ ವಿಕಾಸಗೊಳ್ಳತ್ತಾ ರೂಪುಗೊಂಡರು.

ಸಾಂಸ್ಕೃತಿಕ ಶ್ರದ್ಧೆಯೇ ಜೀವನದ ಪ್ರಮುಖ ಅಂಶವೆನಿಸಿರುವ ಈ ನಾಡಿನಲ್ಲಿ ವಾಸ್ತವಿಕ, ಅನುಕರಣಾತ್ಮಕ, ಸಂಜ್ಞಾತ್ಮಕ, ಸಾಂಕೇತಿಕ ಮತ್ತು ಭಾವ ಪ್ರಧಾನ ಅಂಶಗಳು ಆದಿಮ ಬುಡಕಟ್ಟುಗಳ ನಂಬಿಕೆಗಳಿಂದ ನೆಲೆಗೊಂಡಿದೆ. ಈ ಬುಡಕಟ್ಟುಜನರ ನಂಬಿಕೆಗಳು, ಪದ್ಧತಿಗಳು ಚೈತನ್ಯವಾದವನ್ನು ಅವಲಂಬಿಸಿದ್ದು, ಎಲ್ಲಾ ವಸ್ತುಗಳಲ್ಲಿಯೂ ಪ್ರಾಣಿಗಳಲ್ಲಿಯೂ, ಜಡವೆಂದು ತೋರುವ ಕಲ್ಲು, ಮಣ್ಣು, ಗಿಡ–ಗಂಟೆಗಳಲ್ಲೂ ಚೈತನ್ಯ ಅಡಗಿದೆ ಎಂಬ ನಂಬಿಕೆ ಇಂದಿಗೂ ಇವರಲ್ಲಿ ಉಳಿದು ಬಂದಿದೆ.

ಮಾನವ ಪ್ರಾಚೀನತೆಯನ್ನು ಆದಿಮಾನವನ ಹಂತವೆಂದು ಪರಿಗಣಿಸಿದಾಗ, ಅವನ ಬದುಕಿನ ಊಹಾ ಚಿತ್ರವನ್ನು ಕಲ್ಪಿಸಿದಾಗ, ಅವನ ಭಯ, ಆತಂಕ, ರೋಗರುಜಿನ, ಭೂಕಂಪನ, ಪ್ರವಾಹಗಳಿಗೆ ಅವನು ತೋರುತ್ತಿದ್ದ ಪ್ರತಿಕ್ರಿಯೆ ಹೇಗಿರಬಹುದಿತ್ತು? ಬುದ್ಧಿ ಬೆಳೆದ ನಂತರ ಅವನ ಪ್ರತಿಕ್ರಿಯೆಗೋಚರಿಸುವ ಪ್ರಕೃತಿಯ ವಿಕೋಪದೊಡನೆ ಹೇಗಿರಬಹುದಿತ್ತು? ಇಂತಹ ಪ್ರಶ್ನೆ ಹಾಕಿಕೊಂಡಾಗ ತನ್ನ ಸಮಾಧಾನಕ್ಕಾಗಿ, ಭಯದ ನಿವಾರಣೆಗಾಗಿ, ದುಃಖದ ಪ್ರತೀಕಾರಕ್ಕಾಗಿ ಹುಟ್ಟಿಸಿಕೊಂಡ ಚಟುವಟಿಕೆಗಳೇ ಕಲೆಗಳಾದವು.

ಭೂಮಿ ಮತ್ತು ನಂಬಿಕೆ

ಗತಕಾಲದಿಂದಲೂ ಮನುಷ್ಯನಿಗೂ, ಮಣ್ಣಿಗೂ ಅವಿನಾಭಾವ ಸಂಬಂಧವಿದೆ.ಮಣ್ಣಿನೊಂದಿಗಿನ ಅವನ ಒಡನಾಟವು ವಿಕಾಸಗೊಂಡು ಆಚರಣೆ ಭಾಗವಾಗಿ ಶಿಲ್ಪಗಳ ಮೂಲಕ ಹೊರಹೊಮ್ಮಿಸಿದ್ದಾನೆ. ಮಣ್ಣಿನ ಶಿಲ್ಪಗಳು ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಎಲ್ಲಾ ಕಾಲಕ್ಕೂ ಸಲ್ಲುವ ಹಾಗೂ ಸಲ್ಲುತ್ತಿರುವ ಶಿಲ್ಪಕಲೆಯಾಗಿದೆ.

ಎಲ್ಲಾ ಕಾಲಕ್ಕೂ ಆಯಾ ನೆಲದ ಆದಿಮ ಗುಂಪುಗಳೇ ಪ್ರಥಮ ಕೃಷಿಕರು, ಕುಂಬಾರರು, ಕಲಾವಿದರು. ಪೂರ್ವ ಭಾರತದ ಇತಿಹಾಸವನ್ನು ಪರಿಶೀಲಿಸಿದರೆ ಸುಟ್ಟ ಮಣ್ಣಿನ ಕಿರುಶಿಲ್ಪಗಳು ಕ್ರಿ.ಪೂ.

200ರಿಂದ 300 ಅವಧಿಯಲ್ಲಿಯೇ ಕಾಣುತ್ತವೆ. ಸರ್ವಚೇತನವಾದವನ್ನು (ಅನಿಮಿಸಂ) ಒಪ್ಪುವ ಅನೇಕ ಬುಡಕಟ್ಟು ಜನಾಂಗದವರು ಒಂದು ವಸ್ತುವನ್ನು, ಒಂದು ಪ್ರಾಣಿಯನ್ನು ಕುಲದೇವತೆ ಎಂದು ಆರಾಧಿಸುವ ಪದ್ಧತಿ ಇದೆ. ಆದಿವಾಸಿ ಜನಾಂಗಗಳಲ್ಲಿ ಕುಲದೇವತಾ ಪದ್ಧತಿಯ ಧಾರ್ಮಿಕವಾದ ಹಾಗೂ ಸಾಮಾಜಿಕವಾದ ಮುಖಗಳಿವೆ.

ಶಿಲ್ಪ ಮೂಲತಃ ವೃತ್ತಿಜನ್ಯವಾದುದರಿಂದ ಇದರ ಸೃಷ್ಟಿಗೆ ಲಿಖಿತಶಾಸ್ತ್ರಗಳ ಉಪಯೋಗ ಅಲ್ಪ. ಬಹುಮಟ್ಟಿಗೆ ಕಲಿಕೆ ಅನುಭವ ಸೂತ್ರದ ಮೇಲೆ ಮುಂದುವರಿಯುತ್ತದೆ.

ಪ್ರಕೃತಿಯ ಹೆಸರಿನಲ್ಲಿ ಬುಡಕಟ್ಟು ಜನರು ಇಂದಿಗೂ ಆಚರಿಸಿಕೊಂಡು ಬಂದಿರುವ ದೇವರಕಾಡು–ಆಚರಣೆ ಪ್ರಕೃತಿಯನ್ನು ಸಂರಕ್ಷಿಸಲು ನಡೆಸಿಕೊಂಡು ಬಂದಿರುವ ಒಂದು ಧಾರ್ಮಿಕ ಪರಿಭಾಷೆ. ಅಯ್ಯಪ್ಪ, ಭೂತಪ್ಪ, ನಾಗದೇವತೆ ಇಂತಹಶಕ್ತಿ ಆರಾಧನೆಗೆ ಟೆರ್ರಾಕೋಟಾ ಶಿಲ್ಪಗಳನ್ನು ಕಾಡುಗಳಿಗೆ ಸಮರ್ಪಿಸಿ, ಅದರಲ್ಲಿ ಒಂದಿಂಚು ನಾಶವಾಗದಂತೆ ಸಂರಕ್ಷಿಸಿಕೊಂಡು ಬಂದಿರುವುದೇ ಈ ದೇವರ ಕಾಡುಗಳ ವೈಶಿಷ್ಟ್ಯ.ಈ ಕಾಡುಗಳ ವಿಸ್ತೀರ್ಣ ಚಿಕ್ಕದ್ದಾಗಿದ್ದರೂ ಇವುಗಳ ಭವ್ಯತೆ ಹಿರಿದು.

ಭೌಗೋಳಿಕ ಹಿನ್ನೆಲೆ

ಯಾವುದೇ ಒಂದು ಪ್ರದೇಶದ ಸಾಂಸ್ಕೃತಿಕ ಇತಿಹಾಸವನ್ನು ಅರಿಯಲು ಅಲ್ಲಿನ ಭೌಗೋಳಿಕ ಗುಣಲಕ್ಷಣಗಳಾದ ಶಿಲೆಗಳು, ಖನಿಜ ಹಾಗೂ ಅರಣ್ಯ ಸಂಪತ್ತು ಮುಂತಾದವುಗಳ ಪ್ರಭಾವ ಆಯಾ ಜನರ ಸಾಂಸ್ಕೃತಿಕ ಇತಿಹಾಸದ ಮೇಲೆ ಹೇಗೆ ಪ್ರಭಾವ ಬೀರಿದೆ ಎಂದು ತಿಳಿಯುತ್ತದೆ.

ಪಶ್ಚಿಮ ಘಟ್ಟಗಳಿಗೆ ಸಂಬಂಧಪಟ್ಟಂತೆ ಪ್ರದೇಶದ ಆಯ್ಕೆ ದಕ್ಷಿಣ ಭೌಗೋಳಿಕ ಮತ್ತು ಗುಡ್ಡಗಾಡು ವಲಯದ ಎರಡು ಜಿಲ್ಲೆಯಾದ ಕೊಡಗನ್ನು ಆಯ್ಕೆ ಮಾಡಿಕೊಂಡಿರುತ್ತೇನೆ. ಈ ಜಿಲ್ಲೆ ಪಾರಂಪರಿಕ ಕಲಾ ಪದ್ದತಿಯನ್ನು ಅಭ್ಯಾಸಿಸಲು ಸರಿಯಾದ ತಾಣವಾಗಿರುತ್ತದೆ. ಭೌಗೋಳಿಕ ವಿಸ್ತೀರ್ಣ 4,100 ಚದರ ಕಿ.ಮೀ. ಇದ್ದು ಕೊಡಗಿನಲ್ಲಿ ದಕ್ಷಿಣಗಂಗೆ ಎನಿಸಿಕೊಳ್ಳುವ ಕಾವೇರಿ, ಉಪನದಿಗಳಾದ ಲಕ್ಷ್ಮಣತೀರ್ಥ, ಬರಪೊಳೆ ಮತ್ತು ಹಾರಂಗಿ ಹಾಗೂ ಅಸಂಖ್ಯಾತ ಝರಿ–ತೊರೆಗಳಿಗೆ ಹೆಸರಾಗಿದೆ.

ಕಣ್ಣಿಗೆ ಹಬ್ಬವನ್ನು ಉಂಟುಮಾಡುವ ಪಶ್ಚಿಮಘಟ್ಟಗಳ ಸಾಲು, ಕಣಿವೆ, ಶೋಲಾ ಹಸಿರು ಕಾಡುಗಳಿದ್ದರೆ ಇಳಿಜಾರು ಪ್ರದೇಶಗಳಲ್ಲಿ ಒತ್ತಾದ ವಿಶಾಲವಾದ ಹುಲ್ಲುಕಾಡುಗಳು ವಿಶೇಷ ಸ್ಥಾನವನ್ನು ಪಡೆದಿವೆ.

ದೇವರಕಾಡು: ಸಂರಕ್ಷಣೆಯ ಸಂಪ್ರದಾಯ

ಈ ನಾಡಿನ ಸಂಸ್ಕೃತಿಯ ಅಡಿಪಾಯವೇ ಹಲವಾರು ಬುಡಕಟ್ಟುಗಳ ಸೇರ್ಪಡೆ. ಈ ಬುಡಕಟ್ಟುಜನರ ನಂಬಿಕೆಗಳೂ, ಪದ್ಧತಿಗಳೂ ಚೈತನ್ಯವಾದವನ್ನು ಅವಲಂಬಿಸಿದುವು.ಎಲ್ಲ ವಸ್ತುಗಳಲ್ಲಿಯೂ, ಪ್ರಾಣಿಗಳಲ್ಲಿಯೂ ಚೈತನ್ಯವಿದೆಯೆಂಬ ಕಲ್ಪನೆ ಮೇಲೆ ಜಡವೆಂದು ತೋರುವ ಕಲ್ಲು–ಮಣ್ಣು, ಗಿಡ–ಗಂಟೆಗಳಲ್ಲೂ ಚೈತನ್ಯ ಅಡಗಿದೆಯೆಂಬ ನಂಬಿಕೆ ಇಂದಿಗೂ ಉಳಿದು ಬಂದಿದೆ.

ಪ್ರಾಚೀನ ಸಮಾಜದಲ್ಲಿ ಪ್ರತಿಯೊಂದು ಬುಡಕಟ್ಟು ಸಂತತಿಯವರಿಗೂ ಒಂದೊಂದು ಕುಲದೇವತೆ ಇತ್ತು. ಗಿಡ, ಮರ, ಬಳ್ಳಿ, ಪ್ರಾಣಿ, ಪಕ್ಷಿ ಎಂದು ಪರಿಗಣಿಸಿ ಅರಾಧಿಸುತ್ತಿದ್ದು. ತಮ್ಮ ಮೂಲವನ್ನು ಯಾವುದಕ್ಕೆ ಹೋಲಿಸುತ್ತಿದ್ದರು. ಅಂಥ ಮರ ಅಥವಾ ಪ್ರಾಣಿಯನ್ನು ಕುಲಚಿಹ್ನೆ ಎಂದು ಪರಿಗಣಿಸಿ ತಂತಮ್ಮ ಕುಲವನ್ನು ನಿರ್ದೇಶಿಸಲು ಬಳಸಿಕೊಳ್ಳುತ್ತಿದ್ದರು. ಸಸ್ಯ ಸಂಕುಲಗಳನ್ನು ಪ್ರಾಣಿಗಳನ್ನು ದೇವರ ಹೆಸರಿನಲ್ಲಿ ಪೂಜಿಸಿ ರಕ್ಷಿಸುವ ಸಂಪ್ರದಾಯಗಳು ಪ್ರಪಂಚದ ನಾನಾ ಭಾಗಗಳಲ್ಲಿ ಆಚರಣೆಯಲ್ಲಿದ್ದರೂ ಕರ್ನಾಟಕದ ಕೊಡಗಿನಲ್ಲಿ ದೇವಕಾಡ್ ಅಥವಾ ದೇವರಕಾಡುಗಳೆಂದು ಕರೆಯಲ್ಪಡುವ ಪವಿತ್ರ ವನಗಳು ಸಾಕಷ್ಟು ಸಂಖ್ಯೆಯಲ್ಲಿವೆ.

ಅಧ್ಯಯನದ ವ್ಯಾಪ್ತಿ

ಕೊಡಗಿನಲ್ಲಿರುವ ಬೃಹತ್ ಶಿಲಾ ಸಮಾಧಿಗಳು, ಪ್ರಾಚೀನ ಜನವಸತಿಗಳನ್ನು ಗಮನಿಸಿದಾಗ ಪ್ರಾಗೈತಿಹಾಸಿಕ ಕಾಲದಿಂದಲೇ ಜನಸಮುದಾಯ ಇದ್ದುದ್ದಕ್ಕೆ ದಾಖಲೆ ದೊರೆಯುತ್ತದೆ. ಈ ಚೌಕಟ್ಟಿನಲ್ಲಿ ಪಶ್ಚಿಮಘಟ್ಟಕ್ಕೆ ಹೊಂದಿಕೊಂಡಂತೆ ಕೊಡಗಿನಲ್ಲಿರುವ ದೇವರಕಾಡುಗಳು ಮತ್ತು ಅಲ್ಲಿ ಕಂಡುಬರುವ ಕುಲಚಿಹ್ನೆ ಮತ್ತು ಆರಾಧನಾ ಶಿಲ್ಪಗಳನ್ನು ಅಂದಿನಿಂದ ಇಂದಿನವರೆಗೆ ಪುರಾತತ್ವ, ಮಾನವಶಾಸ್ತ್ರ ಮತ್ತು ದೇಶಿಕ ಕಲೆಯನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಂಡು ಇವುಗಳ ಸಹಾಯದಿಂದ ಇಲ್ಲಿನವರ ಕಲೆ ಮತ್ತು ನಂಬಿಕೆಗಳನ್ನು ಅಧ್ಯಯನ ಕೈಗೊಳ್ಳಲು ಮುಂದಾಗಿದ್ದು, ಬುಡಕಟ್ಟು ಜನರ ಜೀವನಮಟ್ಟ ಮತ್ತು ಅವರ ಇತಿಹಾಸ ಆರಂಭ ಕಾಲದಿಂದ ಇಂದಿನವರೆಗಿನ ಸಾಂಸ್ಕೃತಿಕ ಶಿಲ್ಪಕಲೆಯ ಪ್ರಾಮುಖ್ಯತೆಯನ್ನು ಅಭ್ಯಸಿಸಲು ಉದ್ದೇಶಿಸಲಾಗಿದೆ.

ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದ ಇಂತಹ ಶಿಲ್ಪಕಲೆಗಳು ತಮ್ಮ ಬಾಳಿನಲ್ಲಿ ಯಾವ ರೀತಿ ಕಂಡಿದ್ದರು, ಅನುಭವಿಸಿದ್ದರು ಎಂಬುದನ್ನು ಈ ಶಿಲ್ಪಗಳು ತೋರಿಸುತ್ತವೆ. ಸುಡಾವೆ ಮಣ್ಣಿನ ಪ್ರಾಣಿಗಳ ಸಣ್ಣ ಸಣ್ಣ ಆಕೃತಿಗಳು ಇಲ್ಲಿನ ವಿಶಿಷ್ಟ ಆಂತರಿಕ ದೈವ ಆಚರಣೆಗಳು ಪ್ರಾಚೀನವಾಗಿ ಎಲ್ಲಾ ಸ್ತರಗಳಲ್ಲಿಯೂ ಕಂಡುಬರುತ್ತವೆ. ಬೃಹತ್ ಶಿಲಾಯುಗದ ತಾಂತ್ರಿಕ ಕೊಡುಗೆಗಳಲ್ಲಿ ಕುಂಬಾರಿಕೆ ಪ್ರಮುಖ ಘಟ್ಟವಾಗಿದೆ.

ಅನುರೂಪವಾದ ಸುಡಾವೆ ಮಣ್ಣಿನ ಸಂಯೋಜನೆ ಆ ಕಾಲದಿಂದ ಈ ಕಾಲದವರೆಗೆ ಕಂಡುಬರುವ ಸುಡಾವೆ ಮಣ್ಣಿನ ಕೃತಿಗಳು ಇವರ ಸಂಸ್ಕೃತಿಯ ಕಲಾ ಸಂವೇದನೆಗಳ ಮೇಲೆ ಬೆಳಕು ಚೆಲ್ಲುತ್ತವೆ. ದೇವರ ವನ ಅಥವಾ ಕಾಡುಗಳಲ್ಲಿ ಕಂಡುಬರುವ ಕುಲಚಿಹ್ನೆ ಮತ್ತು ಹರಕೆಯ ಟೆರ್ರಾಕೋಟಾ (ಸುಟ್ಟ ಮಣ್ಣು) ಶಿಲ್ಪಗಳ ಬಗ್ಗೆ ಈವರೆಗೆ ಯಾವುದೇ ಅಭ್ಯಾಸ ನಡೆದಂತೆ ಕಂಡುಬರುವುದಿಲ್ಲ.

ಇದೇ ಮೊದಲ ಬಾರಿಗೆ ಬೆಳಕಿಗೆ ಬರುತ್ತಿರುವ ಈ ವಿಶಿಷ್ಟ ಶಿಲ್ಪಗಳು ಮಾನವಶಾಸ್ತ್ರೀಯ ಆಯಾಮಗಳನ್ನು ಹೊಂದಿರುವುದರಿಂದ ಈ ಆದಿಮ ಕಲೆಗಳ ಬಗೆಗೆ ಮತ್ತು ಇದಕ್ಕೆ ಪೂರಕವಾಗಿರುವ ಪ್ರಕೃತಿಯ ಬಗೆಗಿನ ಅಧ್ಯಯನ ನಡೆಸುವುದು ಸೂಕ್ತವೆಂದು ಭಾವಿಸಿದ್ದೇನೆ.

ಅಧ್ಯಯನದ ಕ್ರಮ

ಅಧ್ಯಯನದಲ್ಲಿ ಪರಿಶೋಧನಾತ್ಮಕ ಮತ್ತು ವಿವರಣಾತ್ಮಕ ಮಾಹಿತಿಗಳನ್ನು ಗುಂಪು ಚರ್ಚೆಯ ಮೂಲಕ ಸಾಂಪ್ರದಾಯಿಕ ಪದ್ದತಿಯಲ್ಲಿನ ಒಳನೋಟವನ್ನು ಅರಿಯುವುದು.

ಪಾರಂಪರಿಕ ಅಥವಾ ಸಾಂಪ್ರದಾಯಿಕ ಪದ್ದತಿಗಳ ಹಿಂದಿನ ಪರಿಸ್ಥಿತಿಯನ್ನು ಜಾಗತೀಕರಣದ ಹಿನ್ನೆಲೆಯಲ್ಲಿ ಅದರ ಇತಿಮಿತಿಯನ್ನು ಅರಿಯುವುದು ಸ್ಥಳೀಯ ಜ್ಞಾನಗಳಿಂದ ಸಮರ್ಪಕವಾಗಿ ಆರ್ಥಿಕ ಭದ್ರತೆಯನ್ನು ಪಡೆದುಕೊಂಡಿದ್ದಾರೆಯೇ? ಅವರುಗಳ ಮೂಲ ಪದ್ದತಿಗಳಿಂದ ಜೀವನೋಪಾಯ ಸಾಗಿಸಲು ಸಾಧ್ಯವಾಗಿದೆಯೇ? ಅವರುಗಳು ಬಳಸಿಕೊಂಡಿರುವ ನೈಸರ್ಗಿಕ ಸಂಪನ್ಮೂಲಗಳು ಇವತ್ತಿನ ಪರಿಸ್ಥಿತಿಗೆ ಹೊಂದಿಕೊಳ್ಳಲು ಸಾಧ್ಯವಾಗಿದೆಯೇ?

ಬದುಕು ನಿರಂತರವಾದ ಹಾಗೂ ಚಲನಶೀಲವಾದ ಪ್ರಕ್ರಿಯೆ, ಪ್ರಸ್ತುತ ಅಧ್ಯಯನವು ಪಾರಂಪರಿಕ ಗ್ರಹಿಕೆಯನ್ನು ದಾಖಲಿಸುವ ಭರವಸೆಯನ್ನು ಹೊಂದಿದೆ:

ಪೀಠಿಕೆ

ಭಾರತೀಯ ಇತಿಹಾಸ ಅದ್ಯಯನಕಾರರು ಲಿಖಿತ ಸಾಮಾಗ್ರಿಯಾದ ಶಾಸನಗಳಿಗೆ ಪ್ರಧಾನ ಸ್ಥಾನವನ್ನು ಕೊಟ್ಟು ಅಲಿಖಿತ ನಂಬಿಕೆಯಾಗಿರುವ ಜಾನಪದವನ್ನು ಉಪೇಕ್ಷಿಸುತ್ತಾ ಬಂದಿದ್ದಾರೆ.

ಅಮುಖ್ಯವೆಂದು ಕೈಬಿಟ್ಟಿರುವ ಅನೇಕ ಮುಖ್ಯ ಸಂಗತಿಗಳನ್ನು ಭಾರತ ಅದಿಮ ಜಾನಪದರು ಧ್ವನಿರೂಪದಲ್ಲಿ, ಆಚರಣೆಯ ರೂಪದಲ್ಲಿ ಅವರವರ ಭೌಗೋಳಿಕ ಸನ್ನಿವೇಶಕ್ಕನುಗುಣವಾಗಿ ಇತಿಹಾಸದ ನೆನಪುಗಳನ್ನು ಮೌಖಿಕವಾಗಿ ಆಚರಣೆಯಾಗಿ ಧಾಖಲಿಸುತ್ತಾ ರಕ್ಷಿಸುತ್ತಾ ಬಂದಿದ್ದಾರೆ.

ನಂಬಿಕೆ ಮತ್ತು ಆಚರಣೆಗಳು ಸಂಸ್ಕೃತಿ ಎಂಬ ಶಬ್ದದೊಂದಿಗೆ ಬಹುಮುಖವಾದ ಅರ್ಥವನ್ನು ಪಡೆದು ಬೆಳೆಯುತ್ತಾ ಸಾಗಿದೆ. ಮಾನವನ ಸಮುದಾಯದ ಆಚರಣೆಗಳಿಂದ ಹಿಡಿದು, ವೈಯಕ್ತಿಕವಾದ ಆಚರಣೆಗಳವರೆಗೆ ಸಂಸ್ಕೃತಿಯ ವ್ಯಾಪ್ತಿ ಹಬ್ಬಿದೆ. ಮಾನವ ಜನಾಂಗಗಳ ಇತಿಹಾಸವನ್ನು ಚಿತ್ರಿಸುವಾಗ ಬಳಸುವ ಇನ್ನೊಂದು ಪದ 'ನಾಗರೀಕತೆ' ಆಂಗ್ಲ ಬಾಷೆಯಲ್ಲಿ ಇವುಗಳನ್ನು culture ಮತ್ತು civilization ಎಂದು ಕರೆಯುತ್ತಾರೆ. ಮಾನವಶಾಸ್ತ್ರಜ್ಞರು (Anthropologists) ಸಂಸ್ಕೃತಿ ಎಂಬುದನ್ನು ನಾಗರೀಕತೆ ಎಂಬ ಅರ್ಥದಲ್ಲಿಯೇ ಬಳಸುತ್ತಾರೆ.

"By culture anthropology means the total way of a people, the social legacy the individual acquires from these groups. Our culture can be regarded as that part of environment that is the creation of man."1 (Clyde kluckhohn, mirror for man)

ಎಂಬ ಮಾತುಗಳನ್ನು ಗಮನಿಸಬಹುದು.

Culture ಎಂಬುದರ ಮೂಲ ಪದ cult ಅಥವಾ cultus ಎಂಬುದಾಗಿದೆ ಗೌರವಿಸು ಆರಾಧಿಸು ಸೇವೆಮಾಡು ಮೊದಲಾದ ಅರ್ಥವನ್ನು ಕೊಡುತ್ತದೆ. ದೈವಭಕ್ತಿ ಎಂಬ ಅರ್ಥವನ್ನು ಒಂದು ಕಡೆ ಪಡೆಯಿತು[2] (ಡಿ.ವಿ ಗುಂಡಪ್ಪ, ಸಂಸ್ಕೃತಿ) ಈ ಎರಡನೆಯ ಅರ್ಥದಿಂದಲೇ ಬಂದುದು agriculture ಎಂಬ ಶಬ್ಧ. Culture ಎಂಬುದು ಒಂದು ಬಗೆಯ ವ್ಯವಸಾಯವೇ. ಭೂಮಿಯನ್ನು ಉತ್ತು ಬಿತ್ತು ನೀರು ಗೊಬ್ಬರ ಹಾಕಿ ಹಸನು ಮಾಡಿದಂತೆ ಮಾನವನಲ್ಲಿರುವ ವಿಶೇಷವಾದ ಶಕ್ತಿಗಳು ಮೊಳಕೆಯೊಡೆದು ಬೆಳೆಯುವುದಕ್ಕಾಗಿ ಮಾಡಬೇಕಾದ ಅಂತರಂಗದ ವ್ಯವಸಾಯ ಸಂಸ್ಕೃತಿ.

ಕರ್ನಾಟಕ ಪ್ರಾಚೀನತೆ

ಪುರಾತತ್ವ ತಜ್ಞರು ಪ್ರಾಗೈತಿಹಾಸಿಕ ತಜ್ಞರು ಮತ್ತು ಮಾನವಶಾಸ್ತ್ರಜ್ಞರು ಕರ್ನಾಟಕದ ಪ್ರಾಚೀನತೆಯನ್ನು ಕುರಿತು ಮಾಡಿದ ದಾಖಲೆಗಳು ಇಂತಿವೆ.

ಇಯೋಸೀನ್ ಮತ್ತು ಮಿಯೋಸಿನ್ ಯುಗದಲ್ಲಿ ಅದಿಮಾನವರು ಬಳಸುತ್ತಿದ್ದ ಕಲ್ಲಿನ ಉಪಕರಣಗಳು ಇಂದಿನ ಕರ್ನಾಟಕದಲ್ಲಿನ ನದಿ ಕಣಿವೆಗಳಲ್ಲಿ ದೊರೆತಿದೆ. ಕರ್ನಾಟಕದ ನಾನಾ ಭಾಗಗಳಲ್ಲಿ ನವಶಿಲಾಯುಗ (ನಿಯೋಲಿಥಿಕ್) ತಾಮ್ರ ಶಿಲಾಯುಗ (ಕ್ಯಾಲ್ಕೋಲಿಥಿಕ್) ಮತ್ತು ಬೃಹತ್ ಶಿಲಾಯುಗ (ಮೆಗಾಲಿಥಿಕ್) ಸಂಸ್ಕೃತಿಗಳಿದ್ದುವೆಂದು ಮಸ್ಕಿ ಮತ್ತು ಬ್ರಹ್ಮಗಿರಿ ಎಂಬಲ್ಲಿ ನಡೆದ ಭೂಶೋಧಗಳಿಂದ ವ್ಯಕ್ತವಾಗಿದೆ. ಬ್ರಹ್ಮಗಿರಿ ಚಂದ್ರವಳ್ಳಿ ಮೊದಲಾದ ಕಡೆ ನಡೆಸಿದ ಭೂಶೋಧನೆಗಳಿಂದ ಕನ್ನಡನಾಡಿನಲ್ಲಿ

ಬದುಕಿದ್ದ ಆದಿಮಾನವವನ ಕುರುಹುಗಳ ಮೇಲೆ ಬೆಳಕು ಬೀರಿದೆ. ಹಿಂದೆ ಬಳಕೆಯಲ್ಲಿದ್ದ ತಾಮ್ರ, ಕಂಚು, ಕಬ್ಬಿಣ ಮೊದಲಾದ ಲೋಹದ ಉಪಕರಣಗಳು ಚಿನ್ನದ ಆಭರಣಗಳು, ವೃಷಭ, ಚಂದ್ರ, ವೃಕ್ಷ, ನಾಗ ಇಂತಹ ಚಿಹ್ನೆಗಳ ಆರಾಧನೆಯಂತಹ ಪುರಾತನ ಸಂಸ್ಕೃತಿಯ ಗುಣಲಕ್ಷಣಗಳ ಆಧಾರ ಲಭಿಸಿದೆ.

ಈ ಪ್ರದೇಶಕ್ಕೆ ಕುಂತಳದೇಶ ಎಂಬ ಹೆಸರು ಇತ್ತೆಂದು, ಈಜಿಪ್ಟ್, ಸುಮೇರಿಯಾ, ಫಿನಿಷಿಯಾ, ಮೊದಲಾದ ಪುರಾತನ ನಾಗರೀಕ ದೇಶಗಳೊಡನೆ ಕರ್ನಾಟಕಕ್ಕೆ ಸಂಪರ್ಕವಿತ್ತೆಂದು, ಸಿಂಧೂ ತೀರದ ಜನರಿಗೂ ಕರ್ನಾಟಕದ ಜನರಿಗೂ ಸಾಮ್ಯತೆಯಿದೆ ಎಂದು ತಜ್ಞರು ಅಭಿಪ್ರಾಯ ಪಟ್ಟಿದಾರೆ. ಇದಕ್ಕೆ ಉದಾಹರಣೆಯಾಗಿ ಸಿಂಧೂ ನಿವಾಸಿಗಳಲ್ಲಿ ಬಳಕೆಯಲ್ಲಿದ್ದ ಕೆಲವು ಅಮೂಲ್ಯ ರತ್ನಗಳು ಮೈಸೂರು ಮತ್ತು ನೀಲಗಿರಿಯಲ್ಲಿ ಮಾತ್ರ ಕಂಡುಬಂದಿವೆ. ಇವೆರಡೂ ಪ್ರದೇಶದ ಕುಂಭ ಕಲೆಯಲ್ಲೂ ಗಮನಾರ್ಹ ಸಾಮ್ಯವಿದೆ.

ಕರ್ನಾಟಕಕ್ಕೂ ಬೇರೆ ಭಾಗಗಳಿಗೂ ಹರಡಿದ ಕುಲಗಳಲ್ಲಿ ನಾಗ ಮತ್ತು ಮಹಿಷಕ ಕುಲಗಳು ಮುಖ್ಯವಾಗಿದೆ. ಕನ್ನಡ ನಾಡಿನ ಇತಿಹಾಸದ ಬಗ್ಗೆ ಪ್ರಾಚೀನ ಉಲ್ಲೇಖಗಳಿರುವುದು ಬೌದ್ಧಗ್ರಂಥಗಳಲ್ಲಿ ಮತ್ತು ಪುರಾತನ ತಮಿಳು ಮಹಾಕಾವ್ಯಗಳಲ್ಲಿ ಕಂಡುಬರುತ್ತದೆ. ಚಕ್ರವರ್ತಿಯಾದ ಸಾಮ್ರಾಟ್ ಅಶೋಕನು ಸುಮಾರು ಕ್ರಿ.ಪೂ ಮೂರನೇಯ ಶತಮಾನದಲ್ಲಿ ರಖ್ಖಿತ ಎಂಬ ಬೌದ್ದ ಬಿಕ್ಕುವನ್ನು ಬನವಾಸಿಗೆ ಇನ್ನೊಬ್ಬ ಬಿಕ್ಕುವನ್ನು ಮಹಿಷಮಂಡಲಕ್ಕೆ (ಇಂದಿನ ಮೈಸೂರು) ಬೌದ್ಧಮತ ಪ್ರಚಾರಕರನ್ನಾಗಿ ಕಳುಹಿಸಿ ಕೊಟ್ಟಿದ್ದನೆಂದು ಬೌದ್ಧ ಗ್ರಂಥಗಳು ತಿಳಿಸುತ್ತದೆ.

ಚಿತ್ರದುರ್ಗ ಜಿಲ್ಲೆಯ ಮಸ್ಕಿ, ಸಿದ್ದಾಪುರ ಮತ್ತು ಜಟಿಂಗ ರಾಮೇಶ್ವರ ಹಾಗೂ ಹಲವು ಆಸುಪಾಸಿನಲ್ಲಿ ಅಶೋಕನ ಶಾಸನಗಳು ದೊರೆತಿವೆ. ಕ್ರಿ.ಪೂ 205ರಲ್ಲಿ ವಳಾಲ ಎಂಬ ಚೋಳರಾಜನು ಸಿಂಹಳ ದ್ವೀಪದ ಮೇಲೆ ದಂಡೆಯಾತ್ರೆ ಕೈಗೊಂಡಾಗ ಮೈಸೂರಿನ ಸೇನೆಗಳು ಅವನಿಗೆ ನೆರವಾಗಿದ್ದವೆಂದು ಸಿಂಹಳಿ ಗ್ರಂಥಗಳು ದಾಖಲಿಸಿವೆ. ಕ್ರಿ.ಶ ಎರಡನೆಯ ಶತಮಾನದವನಾದ ಶಂಗುಟ್ಟವನ್ ಎಂಬ ಚೇರ ರಾಜನು ಉತ್ತರದ ಕಡೆಗೆ ದಂಡೆಯಾತ್ರೆ ಕೈಗೊಂಡು ಹೋದಾಗ ದಾರಿಯಲ್ಲಿ ನೀಲಗಿರಿ ಪರ್ವತ ಪ್ರದೇಶದಲ್ಲಿ ಕನ್ನಡಿಗರ ನೃತ್ಯವನ್ನು ನೋಡಿ ಆನಂದಿಸಿದನೆಂದು ಸುಮಾರು ಕ್ರಿ.ಶ. 465ರಲ್ಲಿ ಇಳಂಗೋ ಅಡಿಗಳ್ ಎಂಬ ತಮಿಳು ಕವಿಯಿಂದ ರಚಿತವಾದ ಶಿಲಪ್ಪಾದಿಕಾರಮ್ ಎಂಬ ಸುಪ್ರಸಿದ್ದ ಕಾವ್ಯದಲ್ಲಿ ಹೇಳಿದೆ.

ಗುಣಾಡ್ಯನ ಪೈಶಾಚೀ ಭಾಷೆಯಲ್ಲಿ ರಚಿಸಿದ ಬೃಹತ್ಕಥೆಯನ್ನು ಸಂಸ್ಕೃತಕ್ಕೆ ಅನುವಾದಿಸಿ ಸೋಮದೇವನು ಬರೆದ 'ಕಥಾಸರಿತ್ಸಾಗರ'ದಲ್ಲೂ ಕರ್ನಾಟಕದ ಉಲ್ಲೇಖವಿದೆ.

ಶೂದ್ರಕನು ರಚಿಸಿರುವ ಸುಪ್ರಸಿದ್ದ ಮೃಚ್ಛಕಟಿಕ ನಾಟಕದಲ್ಲೂ ಕರ್ನಾಟಕದ ಉಲ್ಲೇಖವಿದೆ. ನಾನ್ಯದೇವನೆಂಬ ಕರ್ನಾಟಕದ ರಾಜನು ಸಮಗ್ರ ನೇಪಾಳವನ್ನು ಸಾ.ಶ 889ರಲ್ಲಿ ಜಯಿಸಿದನೆಂದು ಸ್ವಯಂಭೂ ಪುರಾಣ ಎಂಬ ನೇಪಾಳಿ ಗ್ರಂಥವು ತಿಳಿಸುತ್ತದೆ. ಇವನು ಗಂಗಕುಲದ ನನ್ನಿದೇವ

ಆಗಿರಬಹುದೆಂದು ಆರ್.ಶಾಮಶಾಸ್ತ್ರಿಗಳು ಊಹಿಸಿದ್ದಾರೆ. ಪಾಂಡ್ಯ ರಾಜ ಶಡೈಯನ್ ಪರಾಂತಕನು ತನ್ನ ವೇಳ್ಳುಕುಡಿ ತಾಮ್ರಶಾಸನದಲ್ಲಿ ಕರ್ಣನಾಡುಗರನ್ನು ಹೆಸರಿಸುತ್ತಾನೆ. ತಮಿಳು ಭಾಷೆಯ ತೋಲ್ಕಪ್ಪಿಯಮ್ ಎಂಬ ಪ್ರಾಚೀನ ತಮಿಳು ವ್ಯಾಕರಣ ಗ್ರಂಥದಲ್ಲಿ ಸುಮಾರು ಕ್ರಿ.ಶ ಎರಡನೆಯ ಶತಮಾನದ ಅವ್ವೆಯಾರ್ ರಚಿಸಿದ ಕೃತಿಯಿಂದ ಉದ್ಧೃತವಾದ ಲಕ್ಷಯ ಪದ್ಯವಿದೆ. ಆ ಪದ್ಯದಲ್ಲಿ ಕರುನಾಡರ ಉಲ್ಲೇಖವಿದೆ. ಆ ಪದ್ಯದಲ್ಲಿ ಪ್ರಾಜ್ಞರು ವಡುಗರನ್ನು (ಎಂದರೆ ತೆಲುಗರನ್ನು) ಅರುವಳರನ್ನು (ಎಂದರೆ ತಮಿಳು ನಾಡಿನ ಒಂದು ಜನಾಂಗದವರನ್ನು) ಕರುನಾಟಕರನ್ನು, ಸ್ಮಶಾನ ಭೂಮಿಯನ್ನು, ಭೂತ ಪ್ರೇತಗಳನ್ನು ಎಮ್ಮೆ ಕೋಣಗಳನ್ನು ಸಮೀಪಿಸುವುದಿಲ್ಲ ಎಂಬ ಸೂಕ್ತಿಯಿದೆ.

ಸ್ಥೂಲವಾಗಿ ಹೇಳುವುದಾದರೆ ಹಿಂದಿನ ಮೈಸೂರು ರಾಜ್ಯವು ಇಂದಿನ ನವ ಕರ್ನಾಟಕವಾಗಿದೆ. ಈ ರಾಜ್ಯಕ್ಕೆ ವಿಫುಲವಾದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಪರಂಪರೆಯಿದೆ. ಉತ್ತರ ಭಾರತ ಮತ್ತು ದಕ್ಷಿಣ ಭಾರತದಿಂದಲೂ ಹರಿದು ಬಂದ ಸಂಸ್ಕೃತಿ ಪ್ರವಾಹಗಳಿಗೆ ಕರ್ನಾಟಕವು ಸಂಗಮ ಸ್ಥಳವಾಗಿದೆ. ಭಾರತದ ಇತರೆ ಭಾಗಗಳಲ್ಲಿ ಪ್ರಚಲಿತವಾಗಿದ್ದ ಧರ್ಮ ತತ್ವಶಾಸ್ತ್ರ, ಕಲೆ, ಆಚರಣೆ, ವಾಸ್ತುಶಿಲ್ಪ, ಸಾಹಿತ್ಯ ಮೊದಲಾದ ನಾನಾ ಜ್ಞಾನಶಾಖೆಗಳಲ್ಲಿನ ಉತ್ತಮ ಅಂಶಗಳನ್ನು ಸ್ವೀಕರಿಸಿಕೊಂಡು ಅವುಗಳಿಗೆ ದೇಸಿಯ ಸ್ವರೂಪ ಕೊಟ್ಟು ತನ್ನದನ್ನಾಗಿ ಮಾಡಿಕೊಂಡಿದೆ. ಕಾಶ್ಮೀರ ಶೈವ ಸಿದ್ದಾಂತವೂ, ತಮಿಳು ಶೈವ ಸಿದ್ದಾಂತವೂ ಅಳ್ವಾರುಗಳ ವೈಷ್ಣವ ಸಿದ್ದಾಂತವೂ ಕನ್ನಡಿಗರ ಜೀವನದಲ್ಲಿ ಅಪಾರ ಪ್ರಭಾವ ಬೀರಿದೆ. ಶಂಕರಾಚಾರ್ಯ, ಮಧ್ವಾಚಾರ್ಯ, ರಾಮಾನುಜಚಾರ್ಯ, ಬಸವಣ್ಣ, ಚೆನ್ನಬಸವಣ್ಣನೇ ಮೊದಲಾದ ಮತ ಪ್ರವರ್ತಕರು ಸಾಧಿಸಿ ಬೋಧಿಸಿದ ತತ್ವ ಸಿದ್ದಾಂತಗಳೂ, ಜೈನಧರ್ಮ, ಬೌದ್ದಧರ್ಮ, ಕ್ರೈಸ್ತಧರ್ಮ, ಸೂಫಿ ಪಂಥ, ಇಸ್ಲಾಂ ಧರ್ಮಗಳೂ ಕರ್ನಾಟಕದಲ್ಲಿ ಹಿತವಾದ ಆಶ್ರಯ ಪಡೆದು, ಅನುಯಾಯಿಗಳನ್ನು ಗಳಿಸಿಕೊಂಡಿದೆ. ಕಲೆ, ವಾಸ್ತುಶಿಲ್ಪ, ಸಾಹಿತ್ಯ, ಲಲಿತಕಲೆಗಳ ವಿಚಾರದಲ್ಲೂ ಇದೇ ಮಾತು ಅನ್ವಯಿಸುತ್ತದೆ.

ಕರಕುಶಲ ಕಲೆಗಳು

ಕರ್ನಾಟಕದ ಭವ್ಯ ಪ್ರಾಚೀನತೆಯೊಂದಿಗೆ ಪಾರಂಪರಿಕ ಕರಕುಶಲ ಕಲೆಗಳು ಪ್ರಸಿದ್ಧವಾಗಿವೆ. ಪ್ರಾಚೀನ ಜನಾಂಗಗಳ ಮುಖ್ಯ ಕಸುಬುಗಳೆಂದರೆ ಆಹಾರ ಉತ್ಪಾದನೆ, ಉಡುಪು ತಯಾರಿಕೆ ಮತ್ತು ವಸತಿ ನಿರ್ಮಾಣ ಕಾರ್ಯಗಳು. ಮನುಷ್ಯನ ವಿಕಾಸದ ಹಂತಗಳೆಂದರೆ ಹಳೆಯ ಮತ್ತು ಹೊಸ ಶಿಲಾಯುಗಗಳಲ್ಲಿ ಆತನು ಬಳಸುತ್ತಿದ್ದ ಸಲಕರಣೆಗಳು, ಅಲೆಮಾರಿ ಅಥವಾ ಬೇಟೆಗಾರಿಕೆಯ ಜೀವನ ಹಂತದಲ್ಲಿ ಬೇಟೆಗೆ ಬಳಸುತ್ತಿದ್ದ ಸಾಧನ ಸಲಕರಣೆಗಳು, ಪಶುಪಾಲನೆಯ ಯುಗದಲ್ಲಿ ಚರ್ಮದಿಂದ ತಯಾರಿಸಿಕೊಳ್ಳುತ್ತಿದ್ದ ಉಡುಪು, ಹೂಡುತ್ತಿದ್ದ ಗುಡಾರ ಮತ್ತು ಅದಕ್ಕೆ ಅಗತ್ಯವಾದ ಸಲಕರಣೆಗಳು, ಕೃಷಿ ಯುಗದಲ್ಲಿ ಅವನು ನೆಲವನ್ನು

ಹದಗೊಳಿಸಲು ಬಳಸಿಕೊಂಡ ಮರದ ಸಲಕರಣೆಗಳು ಮತ್ತು ಅನುಸರಿಸಿದ ವಿಧಾನ ಮನುಷ್ಯನ ಕುಶಲ ಕೆಲಸ ಜಾಣ್ಮೆಯನ್ನು ತೋರಿಸುತ್ತದೆ.

ಪ್ರಗತಿಯ ಹಂಬಲದಿಂದ ಮಾಡುವ ದೀರ್ಘ ಪ್ರಯತ್ನವೇ ನಾಗರಿಕತೆಯ ಕುರುಹು. ನಮ್ಮ ಸುತ್ತಲು ಹರಡಿರುವ ನಿಸರ್ಗ ಶಕ್ತಿಯ ಸ್ವರೂಪಗಳನ್ನು, ದೊರೆಯುವ ವಸ್ತುಗಳನ್ನು ಆಕಾರವನ್ನಾಗಿ ಬಳಸಿಕೊಂಡುವುಗಳು ಶಿಲ್ಪಕಲೆ ಎನಿಸಿಕೊಳ್ಳುತ್ತವೆ. ಶಕ್ತಿಗಳ ಮಿತಿ ಏನು? ವಸ್ತುಗಳ ಸ್ವಭಾವಗಳೇನು? ಎಂಬುದನ್ನು ಅವುಗಳ ಉಪಯೋಗವು ಅವಲಂಬಿಸಿರುತ್ತದೆ.

ಆದಿ ಮಾನವ ಯುಗದಿಂದ ಇತಿಹಾಸದ ಕಾಲವನ್ನು ಹಾದು ಇಂದಿನ ದಿನಕ್ಕೆ ಕಾಲಿರಿಸಿದ ನಾವುಗಳು ಹಿಂದಕ್ಕೆ ನೋಡಬಲ್ಲೆವಾದರೆ, ನಮ್ಮ ಪೂರ್ವಿಕರ ಕಲಾ ಸಾಧನೆಗಳನ್ನು ಕಾಲದ ಪರಿಮಿತಿಯಲ್ಲಿ ಎಷ್ಟು ಮಾದರಿಯ ಕಲಾಕೃತಿಗಳನ್ನು ನಿರ್ಮಾಣ ಮಾಡಿರಬಹುದು ಎಂಬುದನ್ನು ಸುಲಭವಾಗಿ ಗುರುತಿಸಬಹುದು.

ಅಧ್ಯಾಯ – 02

ಆದಿಮ ಕಲೆಯ ಇತಿಹಾಸ

ಪ್ರಾಕೃತಿಕವಾಗಿ ಮನುಷ್ಯನ ಕಲ್ಪನೆಗಳನ್ನು ನೋಡಿದರೆ ನಿಸರ್ಗಕ್ಕೂ ಮನುಷ್ಯನ ಮನಸ್ಸಿಗೂ ನಿಕಟವಾದ ನಂಟು ಸ್ಪಷ್ಟವಾಗುತ್ತದೆ. ಮನುಷ್ಯನ ಬದುಕಿನಲ್ಲಿ ಆತಂಕವೆಂಬ ಪರಿಸ್ಥಿತಿ ಒದಗಿದಾಗ, ಅದನ್ನು ನಿರ್ವಹಿಸುವ ಬಗೆ ಹೇಗೆಂದು ಅವನಿಗೆ ತಟ್ಟನೆ ತಿಳಿಯದಿದ್ದಾಗ ಅವನ ನಡವಳಿಕೆಯನ್ನು, ಮನಸ್ಸಿನ ದೋರಣೆಯನ್ನು ನಿಶ್ವಯಿಸುವುದು ಅವನ ಮನಸ್ಸಿನ ಪ್ರವೃತ್ತಿ. ನಮ್ಮ ನಡುವೆ ಈಗ ಇರುವ ಜೀವನ ಸೌಕರ್ಯಗಳು ಇರದ್ದಿದ್ದ ಆದಿಮ ಯುಗದಲ್ಲಿ ಬದುಕಿಗೆ ಆತಂಕ ಒಡ್ಡುವ ಪ್ರಸಂಗಗಳು ಮತ್ತೆ ಮತ್ತೆ ಮೇಲಡರಿ ಬರುತ್ತಿದ್ದವೆಂದು ಊಹಿಸಿಕೊಳ್ಳಬಹುದು.

ಊಟವಿಲ್ಲದೆ ಬದುಕುವುದು ಹೇಗೆ? ಬೇಟೆಯಾಡದೆ ಆಹಾರ ದೊರೆಯುವುದು ಹೇಗೆ? ಬೇಟೆಗೆ ಹೊರಟಾಗ ಪ್ರಾಣಿಯನ್ನು ಇವನೇ ಕೊಲ್ಲುವನೋ ಅಥವಾ ಪ್ರಾಣಿಯೇ ಇವನನ್ನು ಕೊಲ್ಲುವುದೋ ಎಂದು ನಿಶ್ಚಯಿಸುವುದು ಹೇಗೆ? ಬೇಟೆ ಇರಲಿ, ತನ್ನ ಗುಹೆಯಲ್ಲಿರುವಾಗಲೆ ಬೀತಿ ಕಾಡುವುದಿಲ್ಲವೆ? ನಿಸರ್ಗದಲ್ಲಿ ಅವರು ಕಂಡಿರಬಹುದಾದ ಪ್ರಸಂಗಗಳು ಜರುಗುವುದು ಅಲೌಕಿಕವಾದ, ಅಪ್ರಾಕೃತವಾದ, ಅಘೋಚರವಾದ ಶಕ್ತಿಗಳು ಅವರನ್ನು ಕಾಡಿರಬಹುದು. ಬೇಟೆಯಲ್ಲಿ ಗೆಲುವು, ಗುಹೆಯಲ್ಲಿನ ನೆಮ್ಮದಿ, ಮೈಯಲ್ಲಿ ಹುರುಪು ಇವೆಲ್ಲಾ ಕಣ್ಣಿಗೆ ಕಾಣದ ಕೆಲವು ಶಕ್ತಿಗಳಿಂದಲೇ ಆಗುವಂತವು ಎನ್ನುವ ಕಲ್ಪನೆ ಆದಿಮಾನವನ ಮನಸ್ಸಿನಲ್ಲಿ ಮೂಡಿ ಆ ಶಕ್ತಿಗಳನ್ನು ಅನುಕೂಲವಾಗಿ ಮಾಡುವ ಕಾತರ ತನ್ನ ಅರಿವನ್ನು ಮೀರಿ ಅವನ ನೆರವಿಗೆ ಬಂದಿರಬಹುದು.

ಆಧುನಿಕ ನಾಗರೀಕತೆಯ ಪ್ರಭಾವಗಳಿಗೆ ಒಳಗಾಗದೆ ಪ್ರಾಕ್ತನ ಕಾಲೀನ ಸಂಸ್ಕೃತಿಗಳ ವಿವಿಧ ಹಂತಗಳಲ್ಲಿ ಜೀವಿಸುತ್ತಿದ್ದ ಈಗಲೂ ಹಲವೆಡೆ ಜೀವಿಸುತ್ತಿರುವ ಜನರಿಗೆ ಸಂಬಂದಿಸಿದ್ದ ಕಲೆ (ಪ್ರೀಮಿಟಿವ್ ಆರ್ಟ್) ಅವರ ವಸ್ತು ನಿರೂಪಣೆಗಾಗಿ ಉಪಯೋಗಿಸಿದ ತಂತ್ರಗಳಾಗಿದೆ. ಈ ಕಲಾವಿದರು ಸಾಮಾನ್ಯವಾಗಿ ಸಾಂಪ್ರದಾಯಿಕ ಕ್ರಮದಲ್ಲಿ ಹಿರಿಯ ಕಲಾವಂತರ ಬಳಿ ಶಿಷ್ಯವೃತ್ತಿ ನಡೆಸಿ ಕಲಾವಿಧಾನಗಳನ್ನು ಕಲಿತಿರುವುದರಿಂದ ಪ್ರತಿಯೊಂದು ಪಂಗಡದ ಅನುವಂಶೀಕ ನಂಬಿಕೆ, ಆಚಾರಗಳೂ ಅವರ ಕಲೆಗಳಲ್ಲಿ ಪ್ರತಿಬಿಂಬವಾಗಿರುತ್ತದೆ. ಎಲ್ಲಾ ಬುದ್ಧಿಶಕ್ತಿಯ ಕೆಲಸ, ಭಾವವೇಶಗಳಿವೆಯೋ ಅಲ್ಲೆಲ್ಲ ಒಂದಲ್ಲ ಬಂದು ರೀತಿಯ ವಿನೋಧ, ವಿಹಾರ, ಉದ್ರೇಕ ಇದ್ದೇ ಇದೆ. ಇದು ಆದಿಯ ಜನರಲ್ಲೂ ಅವರ ಹಿಂದಿನವರಲ್ಲೂ ಇದ್ದ ಗುಣ. ಅವರ ಕಲೆ ಕೈಗಾರಿಕೆಗಳು, ಜೀವನ ಕ್ರಮಗಳು ಹೇಗಿದ್ದವೆಂದು ಊಹಿಸಲೂ ನಮಗೆ ದೊರೆತಿರುವ ಪಳಯುಳಿಕೆಗಳು ಆಧಾರಗಳನ್ನು ಒದಗಿಸುತ್ತದೆ.

ನಮಗೆ ದೊರೆತಿರುವ ಅತ್ಯಂತ ಹಳೆಯ ಕಲೆ ಪೂರ್ವ ಶಿಲಾಯುಗದ ಅಂತ್ಯಕಾಲದಲ್ಲಿ ಅಂದರೆ ಯುರೋಪಿನ, ಪ್ರಾನ್ಸ್, ಸ್ಪೇನ್ ಮತ್ತು ಅನಂತರದ ಕಾಲಕ್ಕೆ ನಿರ್ದೇಶಿಸಬಹುದಾದ ಉತ್ತರ ಆಫ್ರೀಕ ಪ್ರದೇಶಗಳಿಗೆ ಸೇರಿದ್ದಾಗಿದೆ. ಕೆತ್ತನೆ, ಉಬ್ಬುಶಿಲ್ಪ, ಪ್ರತಿಮಾ ಶಿಲ್ಪ ಮತ್ತು ಬಹಳ ಉತ್ತಮ ದರ್ಜೆಯ ವರ್ಣಚಿತ್ರಗಳಿಂದ ಕೂಡಿದ್ದು ಆ ಕಲೆಯು ಹಲವಾರು ಅಂಶಗಳಲ್ಲಿ ಆಧುನಿಕ ಅಲೆಗಿಂತ ಉತ್ತಮವೆಂದು ಪರಿಗಣಿಸಲ್ಪಡದ್ದಿದ್ದರೂ, ಕಡೆ ಪಕ್ಷ ಅದರ ಸರಿಸಮಾನವೆಂದು ಎಣಿಸಲ್ಪಟ್ಟಿದೆ. ಆದಿಮಾನವನ ಕಲಾಪ್ರೌಢಿಮೆ ಆಧುನಿಕ ಚಿತ್ರಕಾರರ ಮಟ್ಟವನ್ನೂ ಮೀರಿವೆಯೆಂದರೇ ತಪ್ಪಾಗಲಾರದು.

ಉತ್ತರ ಆಫ್ರಿಕಾ ಮತ್ತು ಸ್ಪೇನಿನ ಸ್ವಲ್ಪ ಈಚಿನ ಕಲೆ ಇಷ್ಟು ಉನ್ನತ ಮಟ್ಟವನ್ನು ತಲುಪದ್ದಿದ್ರೂ ಅನೇಕ ನೈಜ, ಸತ್ವಪೂರ್ಣ, ಜೀವಂತ ದೃಶ್ಯಗಳಲ್ಲಿ ಪ್ರಾಣಿಗಳ ವಿವಿಧ ಭಂಗಿಗಳನ್ನೂ ಮಾನವ ಜೀವನದ ವಿವಿಧ ಕಾರ್ಯಗಳನ್ನೂ ಅದರಲ್ಲೂ ಬೇಟೆಯ ದೃಶ್ಯಗಳನ್ನೂ ಅಮೋಘವಾಗಿ ರೂಪಿಸಿದೆ. ತಮ್ಮ ಸಂಸ್ಕೃತಿಯ ಪ್ರತೀಕವಾಗಿದ್ದ ಸಾಂಪ್ರದಾಯಿಕ ಕಲೆಯನ್ನ ಸೃಷ್ಟಿಸಿದ್ದರು. ಬೇರೆ ಬೇರೆ ಬುಡಕಟ್ಟುಗಳಿಗೆ ಸೇರಿದ್ದರೂ, ಆಚಾರ, ವ್ಯವಹಾರ, ನಂಬಿಕೆ ಮತ್ತು ಸಾಮಾಜಿಕ ಆಚರಣೆಗಳಲ್ಲಿ ವ್ಯತ್ಯಾಸಗಳಿದ್ದರೂ ಅವರ ಕಲೆಯಲ್ಲಿ ಕೆಲವು ಮೂಲಭೂತ ಸಾಮ್ಯಗಳಿದ್ದು ಅಲ್ಲಿ ಒಂದು ರೀತಿಯ ಐಕ್ಯವನ್ನೂ ವೈಶಿಷ್ಟ್ಯವನ್ನೂ ಕಾಣಬಹುದು. ನೇಯ್ಗೆ, ಕಬ್ಬಿಣದ ಕೆಲಸ, ಬುಟ್ಟಿ ಹೆಣೆಯುವುದು ಮುಂತಾದ ಕೆಲಸಗಳಲ್ಲಿ ಕಲಾಭಿರುಚಿ ಕಂಡುಬಂದರೂ ಶೀಲ್ಪಕಲೆಯಲ್ಲಿ ಅವರ ವೈಶಿಷ್ಟ್ಯ ಎದ್ದು ಕಾಣಿಸುತ್ತದೆ.

ಲೋಹಗಳ ಉಪಕರಣಗಳಿಂದ ವ್ಯಕ್ತಿಚಿತ್ರಗಳು, ಮುಖವಾಡಗಳು ಮತ್ತು ಮತ ಸಂಸ್ಕಾರಗಳಿಗೆ ಬೇಕಾದ ಶಿಲ್ಪಗಳನ್ನು ಮರ, ದಂತ ಅಥವಾ ಜೇಡಿಮಣ್ಣಿನಲ್ಲಿ ಅವರು ಕೆತ್ತಿದ್ದಾರೆ. ಉಬ್ಬುಶಿಲ್ಪ, ಪ್ರತಿಮೆಗಳು ಅಥವಾ ಮಣಿಗಳಿಂದ ಶೃಂಗರಿಸುತ್ತದ್ದರು. ಆಪ್ರಿಕದ ಶಿಲ್ಪಿ ದೀರ್ಘಕಾಲ ಗುರುವಿನ ಕೈಕೆಳಗೆ ಶಿಕ್ಷಣಪಡೆದು ತನ್ನ ಕಲಾಸಂಪ್ರದಾಯದಲ್ಲಿ ಕುಶಲಿಯೂ ನಿಷ್ಣಾತನೂ ಆಗಿರುತ್ತಿದ್ದ. ಸಂಪ್ರದಾಯಬದ್ದನಾಗಬೇಕಾಗಿದ್ದರೂ ತನ್ನ ಪ್ರೌಢಿಮೆಯನ್ನು ಪ್ರದರ್ಶಿಸುವ ಅವಕಾಶವಿದ್ದುದರಿಂದ ಕಲೆಯಲ್ಲಿ ವೈವಿದ್ಯತೆ ಕಂಡುಬರುತ್ತದೆ. ಮಾನವ ರೂಪವೇ ಮುಖ್ಯವಸ್ತುವಾಗಿದ್ದರೂ ಪ್ರಾಣಿ ಅಥವಾ ಮಿಶ್ರ ಜೀವಿಗಳನ್ನು ರೂಪಿಸಲಾಗಿದೆ. ಮತೀಯ, ವ್ಯವಹಾರಿಕ, ಸಾಮಾಜಿಕ ಮತ್ತು ರಾಜಕೀಯ ಸಂಬಂಧವಾದ ಆಚರಣೆಗಳಿಗೆ ಉಪಯೋಗಿಸುತ್ತಿದ್ದುದ್ದರಿಂದ ಈ ಶಿಲ್ಪಗಳಿಗೆ ಬೇಡಿಕೆ ಹೆಚ್ಚಾಗಿತ್ತು. ಮೃತರ ಆತ್ಮಗಳು, ದೇವತೆಗಳು ಮತ್ತು ಅತಿಮಾನವ ಶಕ್ತಿಗಳು ಮಾನವ ಜೀವನದ ಮೇಲೆ ಪ್ರಬಾವ ಬೀರುವುದೆಂದು ನಂಬಿಕೆ ಬಲವಾಗಿದ್ದು, ಆ ಶಕ್ತಿಗಳನ್ನು ಮಾನವ ರೂಪದಲ್ಲಿ ರೂಪಿಸುವುದಲ್ಲದೆ ಮತೀಯ ಅಥವಾ ಸಂಸ್ಕಾರಗಳ ಆಚರಣೆಯ ಸಂದರ್ಭಗಳಲ್ಲಿ ಆ ಶಕ್ತಿಗಳ ಇರುವಿಕೆಯನ್ನು ಮುಖವಾಡ ಅಥವಾ ಶಿಲ್ಪ ರೂಪದಲ್ಲಿ ತೋರಿಸಲಾಗುತ್ತಿತ್ತು.

ಉನ್ನತ ವರ್ಗದ ವ್ಯಕ್ತಿಗಳ ಉಪಯೋಗಕ್ಕಾಗಿ ಅನೇಕ ಉಪಕರಣಗಳನ್ನು ಕೆತ್ತನೆ ಕೆಲಸದಿಂದ ಕೇವಲ ಸೌಂದರ್ಯೋಪಾಸನೆ ದೃಷ್ಟಿಯಿಂದಲೇ ಶೃಂಗರಿಸುತ್ತಿದ್ದುದ್ದೂ ಉಂಟು. ಮಾನವನೆಟ್ಟಗೆ ನಡೆಯುವುದನ್ನು

ಮತ್ತು ಕಲ್ಲಿನ ಆಯುಧಗಳನ್ನು ಮಾಡುವುದನ್ನು ಕಲಿತುಕೊಂಡ ಮೇಲೆ ಅದರ ಜೊತೆಯಲ್ಲಿಯೇ ಕಲೆಯ ಸೃಷ್ಟಿಯನ್ನೂ ಮಾಡಿದ. ತಾನು ಮಾಡುತ್ತಿರುವುದು ಕಲೆ ಎಂಬ ಸ್ಪಷ್ಟ ಉದ್ದೇಶ ಅವನಿಗೆ ಇತ್ತೆಂದು ಹೇಳಲಿಕ್ಕೆ ಬಾರದಾದರೂ ತಾನು ಮಾಡಿರುವ ಪ್ರತಿಯೆಂದೂ ಕೆಲಸದಲ್ಲೂ ಉಪಯೋಗಿಸುತ್ತದ್ದ ಪ್ರತಿಯೊಂದು ಪದಾರ್ಥ ಅಥವಾ ಸಾಧನದಲ್ಲೂ ತಾಂತ್ರಿಕ ನೈಪುಣ್ಯ, ನಯ, ನಾಜೂಕುಗಳನ್ನು ತರಲು ಪ್ರಯತ್ನಿಸಿದ ಎಂಬುದೇನೋ ನಿಜ.

ಆದಿಮಾನವ ಕಲೆಯನ್ನು ಇತಿಹಾಸಪೂರ್ವ ಕಲೆ ಪ್ರಾಗ್ಯೈತಿಹಾಸಿಕ ಕಲೆ ಎಂದೂ ಕರೆಯುವುದುಂಟು. ಇದನ್ನು ಬೇಟೆಗಾರರ ಆಹಾರೋತ್ಪಾದಕರ ಕಲೆ, ಲೋಹಗಾರರ ಕಲೆ, ಎಂದು ಮೂರು ವಿಭಾಗಗಳಾಗಿ ವಿಂಗಡಿಸಬಹುದು. ಮೊಟ್ಟಮೊದಲು ಮಾನವ ಮುಖ್ಯವಾಗಿ ಬೇಟೆಗಾರನಾಗಿದ್ದುದರಿಂದ ಅವನ ಕಲೆಯಲ್ಲಿ ಬೇಟೆಯ ಚಿತ್ರಗಳನ್ನು ವಿಶೇಷವಾಗಿ ಆಣಬಹುದು. ಈ ಚಿತ್ರಗಳು ಸಾಮಾನ್ಯವಾಗಿ ಹಳೆಯ ಶಿಲಾಯುಗದ ಅಂತ್ಯಭಾಗದಲ್ಲಿ ನಿರ್ಮಿತವಾದವು. ಹಳೆಯ ಶಿಲಾಯುದ ಚಿತ್ರಗಳು, ಶಿಲ್ಪಗಳು, ಸಾಮಾನ್ಯವಾಗಿ ದುರ್ಗಮವಾದ, ಒಳಗೆ ಬೆಳಕು ಇಲ್ಲದ ಗುಹೆಗಳಲ್ಲಿ ದೊರಕುತ್ತದೆ. ಬೆಳಕಿಲ್ಲದ ಗುಹೆಗಳಲ್ಲಿ ಈ ಚಿತ್ರಗಳನ್ನು ನಿರ್ಮಿಸಿದ ಬಗೆ ಏನು ಎಂಬುದು ವಿವಾದಾಸ್ಪದ ವಿಚಾರ. ಆದರೆ ಇದು ಮೋಡಿ ಅಥವಾ ಮಾಟದ ಕುರುಹು ಎಂದು ಎಲ್ಲರೂ ಒಪ್ಪುತ್ತಾರೆ.

ಯಾರ ಕಣ್ಣಿಗೆ ಬೀಳದ ಕಡೆ ಪ್ರಾಣಿಯ ಚಿತ್ರ ಬರೆದರೆ ಆ ಪ್ರಾಣಿ ಬರೆದವನ ಬಿಲ್ಲಿಗೆ ಬಲಿಯಾಗುತ್ತದೆ ಎಂಬ ನಂಬಿಕೆಯಿಂದ ಅವರು ಹಾಗೆ ಮಾಡಿರಬಹುದು. ಆದ್ದರಿಂದ ಚಿತ್ರಗಳನ್ನು ಬರೆದ ಗುಹೆಗಳಲ್ಲಿ ಒಂದರಮೇಲೆ ಒಂದರಂತೆ ಚಿತ್ರಗಳಿವೆ. ಪಕ್ಕದಲ್ಲಿ ಸ್ಥಳ ಖಾಲಿಯಿದ್ರೂ ಅದನ್ನು ಉಪಯೋಗಿಸದೆ ಅದೇ ಜಾಗವನ್ನು ಉಪಯೋಗಿಸಿರುವುದೂ ಈ ದೃಷ್ಟಿಯಿಂದ ಗಮನಾರ್ಹವಾದುದು.

ಆದಿಮಾನವ ನವಶಿಲಾಯುಗದ ನಾಗರಿಕತೆಯನ್ನು ಸಾಧಿಸಿದ ಮೇಲೆ ಅವನ ಸಾಧನಸಂಪತ್ತು, ಸುತ್ತಮತ್ತಲ ವಾತಾವರಣ ಮುಂತಾದವು ಬದಲಾದವು. ಅವನು ಆಹಾರೋತ್ಪಾದಕನಾದ. ಒಂದು ಕಡೆ ನಿಲ್ಲುವ ಹವ್ಯಾಸವನ್ನು ರೂಢಿಸಿಕೊಂಡ. ಇದರಿಂದ ಅವನು ಕಲೆಗಳಲ್ಲಿ ಗಮನಾರ್ಹ ಬದಲಾವಣೆಗಳಾದುವು. ಈಗ ಗಮನಾವೆಲ್ಲವೂ ಹೊಸದಾಗಿ ತಾನು ಕಂಡುಹಿಡಿದ ಮಡಿಕೆಗಳನ್ನು ಮಾಡುವುದರಲ್ಲಿ ಅವುಗಳನ್ನು ಅಲಂಕರಿಸುವುದರಲ್ಲಿ ಕೇಂದ್ರೀಕೃತವಾಯಿತು. ಬುಡಕಟ್ಟು ಸಮಾಜದಲ್ಲಿ ಶಿಷ್ಟ ಮಾದರಿಯ ದೇವತೆಗಳಿಗಿಂತ ಪ್ರಕೃತಿ ಮೂಲದ ದೇವರುಗಳಿಗೆ ಹೆಚ್ಚು ಪ್ರಾಶಸ್ತ್ಯ. ಪಂಚಭೂತಗಳನ್ನೆ ಇವರು ಆರಾಧಿಸುವುದು ವಾಡಿಕೆ. ಎಲ್ಲಾ ಬುಡಕಟ್ಟುಗಳ ಕುಲದೇವರುಗಳು ಸೂರ್ಯ, ಚಂದ್ರರು, ಸೂರ್ಯ ಚಂದ್ರರ ಅನಂತರ ಇವರು ಕಲದೇವತೆ, ಕುಲ ಚಿಹ್ನೆಗಳಾಗಿ ಸ್ವೀಕರಿಸುವುದು ಪ್ರಾಣಿ, ಪಕ್ಷಿ, ಗಿಡಮರಗಳನ್ನು ಎಲ್ಲಕ್ಕಿಂತ ಮುಖ್ಯವಾಗಿವೆ.

ಬುಡಕಟ್ಟುಗಳಲ್ಲಿ ದೇವತೆಗಳೆಂದರೆ ಅವು ಹೆಚ್ಚು ಅಲೌಕಿಕ ಅಥವಾ ಕಲ್ಪನಾತ್ಮಕ ಸಂಗತಿಗಳೇ ಅಲ್ಲ. ಇವರು ನಡುವೆ ತೀರಿಕೊಂಡ ಶ್ರೇಷ್ಠ ವ್ಯಕ್ತಿಗಳು ವೀರರು ದೇವತೆಗಳಾಗಿ ಪರಿವರ್ತಿತರಾಗಿ ಇವರು ಒಮ್ಮೊಮ್ಮೆ ಕುಲದೇವತೆಗಳಾಗಿರುತ್ತಾರೆ. ಅವರ ಸಂಖ್ಯೆ ತೀರ ಕಡಿಮೆ. ಬುಡಕಟ್ಟು ಜನರು ತಮ್ಮ ಕುಲಚಿಹ್ನೆಗಳನ್ನು ಹೆಚ್ಚು ಗೌರವದಿಂದ ಕಾಣುತ್ತಾರೆ.

ಪ್ರಾಕೃತಿಕವಾದ ಸಚೇತನ ಹಾಗೂ ಅಚೇತನ ರೂಪದ ಹಲವು ಪ್ರಾಣಿಗಳು ಸಸ್ಯಗಳು ಮತ್ತು ವಸ್ತುಗಳು ಮುಂತಾದವನ್ನು ಬುಡಕಟ್ಟು ಸಮಾಜಗಳಿಗೂ ಆಪ್ತ ಸಂಬಂಧವಿದೆ ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಆ ನಂಬಿಕೆಯ ಪ್ರಕಟನೆಯಾಗಿ ಕುಲಚಿಹ್ನಾರಾದನೆ ಬಳಕೆಗೆ ಬಂದಿದೆ. ತಂತಮ್ಮ ಕುಲಗಳಿಗೆ ಸಂಬಂದಿಸಿದ ಸಾಂಕೇತಿಕ ಚಿಹ್ನೆಗಳನ್ನು ಆ ಜನ ಭಯ ಭಕ್ತಿಯಿಂದ ಕಂಡು ಆರಾಧಿಸುವ ವಿಧಾನವನ್ನು ಕುಲಚಿಹ್ನಾರಾಧನೆ ಅಥವ ಕುಲ ಸಂಕೇತಾರಾಧನೆ ಎಂದು ಕರೆಯಲಾಗಿದೆ. ಇದು ಆಯಾ ಕುಲಸ್ಥರು ನೆಚ್ಚಿಕೊಂಡು ಬಂದ ಯಾವುದೋ ಪ್ರಾಣಿಯೋ ಸಸ್ಯವೂ ಆಗಿರುತ್ತದೆಯೇ ಹೊರತು ಅವರ ಕುಲದೇವತೆಯಾದ ಒಂದು ಸಾಂಪ್ರದಾಯಿಕ ನಿರ್ದಿಷ್ಟ ದೈವದ ಪೂಜೆ ಆಗಿರುವುದಿಲ್ಲ ಆದ್ದರಿಂದ ಕುಲಚಿಹ್ನಾರಾಧನೆಯು ಶುದ್ದ ದೇವತಾರಾಧನೆ ಅಲ್ಲ.

ಯಾವುದೇ ಒಂದು ಐತಿಹಾಸಿಕ ಸಂದರ್ಭಗಳಲ್ಲಿ ಮಾನವನ ಸಮಾಜದಲ್ಲಿಯೇ ಮನುಷ್ಯ ಮತ್ತು ಪರಿಸರದ ನಡುವೆ ಒಂದು ರೀತಿಯ ಉತ್ತಮವಾದ ಸಂಬಂಧ ಕಂಡುಬರುವುದು ಸಹಜ. ಇದು ಸಂಪತ್ತಿನ ಸಂಗ್ರಹಣೆಯಾಗಿರಬಹುದು, ಉತ್ಪಾದಕಗಳನ್ನು ಪಡೆದುಕೊಳ್ಳುವುದಕ್ಕೆ ಅರಣ್ಯದ ಮೇಲೆ ಅವಲಂಬಿಸಿರುವುದಾಗಿರಬಹುದು. ಈ ರೀತಿಯ ವ್ಯವಸ್ಥೆಗಳಿಂದ ಮನುಷ್ಯ ಅರಣ್ಯ ಉತ್ಪಾದನೆಗಳನ್ನು ಯಾವುದೇ ಅಭ್ಯಂತರವಿಲ್ಲದೆ ಹೊಂದಿಕೊಳ್ಳುವುದರಲ್ಲಿ ಬಲವಾದ ನಂಬಿಕೆಯಿಟ್ಟಿದ್ದ. ಇಂತಹ ವ್ಯವಸ್ಥೆಗಳು, ಭಾರತೀಯ ಅರಣ್ಯ ಇತಿಹಾಸದಲ್ಲಿಯೂ ಸಂಭವಿಸಿದ್ದು, ಮನುಷ್ಯ ಮತ್ತು ಅರಣ್ಯದ ನಡುವೆ ಉತ್ತಮ ರೀತಿಯ ಸಂಬಂಧಗಳು ಪ್ರಪಂಚದ ಬೇರೆ ಭಾಗಗಳಂತೆಯೇ ತೋರಲ್ಪಡುತ್ತದೆ.

ಪೂರ್ವ ಇತಿಹಾಸ ಕಾಲದಲ್ಲಿ ಇಡೀ ಭಾರತ ಭೂ ಖಂಡ ದಟ್ಟವಾದ ಅರಣ್ಯಗಳಿಂದ ಆವೃತ್ತವಾಗಿತ್ತು. ಹಳೆಯ ಶಿಲಾಯುಗದ ಬಗ್ಗೆ ಚಿಂತನೆಯನ್ನು ನಡೆಸಿದ ಸಸ್ಯ ಶಾಸ್ತ್ರಜ್ಞರುಗಳು ಅಭಿಪ್ರಾಯಿಸುವಂತೆ, ಕಾಶ್ಮೀರ ಮತ್ತು ರಾಜಸ್ಥಾನ ಪ್ರದೇಶವು ಒಂದು ಸಂದರ್ಭದಲ್ಲಿ ವಿಶಾಲ ಅರಣ್ಯವನ್ನು ಹೊಂದಿತ್ತು. ಇದು ಹಿಮಾಲಯ ತಪ್ಪಲಿನ ವಿಸ್ತಾರ ಮತ್ತು ಅತಿಯಾದ ಹಿಮದ ವಾತಾವರಣದ ಪರಿಣಾಮ ವಿಶಾಲ ಅರಣ್ಯ ಹಿಮ್ಮೆಟ್ಟಬೇಕಾಯಿತು. ಈ ಸಂದರ್ಭದಲ್ಲಿ ಅರಣ್ಯಗಳು ಒಂದು ರೀತಿಯ ಮಾನವ ವಾಸಸ್ಥಳದಂತಿದ್ದು, ಎಲ್ಲಾ ಅವಶ್ಯಕತೆಯನ್ನು ಪೂರೈಸುತ್ತಿದ್ದವು. ನಂತೆ ನೂತನ ಶಿಲಾಯುಗದ ಸಂದರ್ಭದಲ್ಲಿ ಆಹಾರ ಸಂಗ್ರಾಹಕ ವ್ಯವಸ್ಥೆಯಿಂದ ಆಹಾರ ಉತ್ಪಾದನೆಯ ಕಡೆ ಸಮಾಜ ಪರಿವರ್ತನೆಗೊಂಡಿತು. ಆ ಕಲ್ಲಿನ

ಯುಗ (stone age) ಅಸ್ತಿತ್ವದಲ್ಲಿರುವಾಗಲೇ, ಅದೃಷ್ಟವಶಾತ್ ಬೆಂಕಿಯ ಬಳಕೆಯನ್ನು ಕಂಡುಕೊಂಡು ಅದರ ಮೂಲಕ ಅರಣ್ಯಗಳನ್ನು ನೆಲಸಮ ಮಾಡಿ ಸ್ಥಳಾಂತರ ಬೇಸಾಯಕ್ಕೆ ಆದ್ಯತೆಯನ್ನು ನೀಡಲಾಹಿತು

ಪುರಾತತ್ವ ಆದಾರಗಳ ಪ್ರಕಾರ ರಾಜಸ್ಥಾನದ ಜೌಗು ಪ್ರದೇಶ ಹರಪ್ಪಾ ಸಂಸ್ಕೃತಿಯ ಕಾಲದವರೆಗೂ ಅಸ್ತಿತ್ವದಲ್ಲಿತ್ತು ಎಂದು ವಿವರಿಸುತ್ತದೆ. ಹಲವಾರು ಸಂದರ್ಭಗಳಲ್ಲಿ ಪಶುಸಾಕಣೆಯನ್ನು ಅವಲಂಬಿಸಿಕೊಂಡಿದ್ದ ಮಾನವನ ಗುಂಪು ಅವುಗಳ ರಕ್ಷಣೆ ಮತ್ತು ಕೃಷಿ ಪ್ರದೇಶಗಳನ್ನು ಪಡೆದುಕೊಳ್ಳುವ ದೃಷ್ಟಿಯಿಂದ ಭಾರತದ ಭೂ ಖಂಡದಲ್ಲಿ ವಿವಿಧ ಪ್ರದೇಶಗಳಿಗೆ ಚದುರಿ ಹೋಗಿದ್ದರು. ತೇವದ ಅರಣ್ಯ ಪ್ರದೇಶಗಳಿಂದ ಕೂಡಿದ ಗಂಗಾ ಬಯಲು ಪ್ರದೇಶಗಳನ್ನು ಯಾವುದೇ ರೀತಿಯ ಉತ್ತಮ ಆಯುಧಗಳ ಸಹಾಯವಿಲ್ಲದೇ ಬೇಧಿಸಿಕೊಂಡು ಹೋಗುವುದು ಅಷೊಂದು ಸುಲಭವಾಗಿರಲಿಲ್ಲ. ಇದಕ್ಕೆ ಸಂಬಂದಿಸಿದಂತೆ ಭಾರತದ ವಾಯುವ್ಯ ಭಾಗ ಮತ್ತು ದಕ್ಷಿಣದಲ್ಲಿ ಕೃಷಿಯ ವಿಸ್ತರಣೆಗೆ ಪೂರಕವಾದ ಲಕ್ಷಣಗಳನ್ನು ಹೊಂದಿರುವ ಪ್ರದೇಶಗಳಾಗಿದ್ದವು.

ಪ್ರಾಚೀನ ಕಾಲದಲ್ಲಿ ಜನಸಂಖ್ಯೆ ಅತೀ ಕಡಿಮೆಯಿದ್ದ ವಿಶಾಲವಾದ ಅರಣ್ಯ ಪ್ರದೇಶವಿದ್ದುದರಿಂದ ಅರಣ್ಯಗಳನ್ನು ಕಡಿದು ಕೃಷಿ ವಿಸ್ತರಣೆಯಿಂದ ಯಾವುದೇ ರೀತಿಯ ಸಮಸ್ಯೆ ಉದ್ಭವಿಸುತ್ತರಲಿಲ್ಲ. ಕ್ರಮೇಣವಾಗಿ ಹಳ್ಳಿಗಳು ಪಟ್ಟಣ್ಣಗಳ ಬೆಳವಣಿಗೆಯಿಂದ ಮತ್ತು ಅರಣ್ಯಗಳು ಅವನತಿಯತ್ತ ಸಾಗಿದ ಬಗ್ಗೆ ಮತ್ತು "ಖಾಂಡವ ವನ" ಎಂಬ ಕಾಡು ಪ್ರಾಚೀನ ಕಾಲದ ಆಹಾರ ಸಂಗ್ರಹಣಾ ಸಮುದಾಯ (Food gathering Community) ಗಳಿಂದ ಸುಡಲ್ಪಟ್ಟ ಬಗ್ಗೆ ಮಹಾಭಾರತದಿಂದ ತಿಳಿದು ಬರುತ್ತದೆ. ಬುದ್ದನ ಕಾಲದಲ್ಲಿ ಮಹಾಜನಪದಗಳು ಎಂದು ಕರೆಯಲಾಗುತ್ತಿದ್ದ ಚಿಕ್ಕ ಚಿಕ್ಕ ರಾಜ್ಯಗಳನ್ನು ಕಾಣುತ್ತೇವೆ. ಅವು ಉತ್ತರದಲ್ಲಿ ವಿಂಧ್ಯ ಪರ್ವತದಿಂದ ವಾಯುವ್ಯ ಗಡಿಯಾದ ಬಿಹಾರದವರೆಗೂ ಹರಡಿದ್ದವು.

ಭಾರತದ ಉತ್ತರ ಭಾಗಗಳಲ್ಲಿ ಕೃಷಿಯನ್ನು ವಿಸ್ತರಿಸುದು ಒಂದು ಪ್ರಬಲ ಶಕ್ತಿಯಾಗಿ ಬೆಳೆಯಿತು. ಅನಿಯಂತ್ರಿತ ಕೃಷಿಯ ವಿಸ್ತರಣೆ ಮತ್ತು ಅರಣ್ಯಗಳ ನಶಿಸುವಿಕೆಯಿಂದಾಗುವ ಸಮಸ್ಯೆಗಳ ಬಗ್ಗೆ ಜಾಗೃತಿಯುಂಟಾದುದು ನಂತರದ ಬೆಳವಣಿಗೆ, ಅರಣ್ಯ ನಾಶ ಅಂತರಿಕ ಬೆಳವಣಿಗೆಯಿಂದ ಅವುಗಳನ್ನು ರಕ್ಷಿದುವಂತಹ ಧೋರಣೆಗಳು ಮೈದಳೆದವು. ಈ ಪ್ರಭಾವಶಾಲಿ ಚಿಂತನೆಗಳು, ಅರಣ್ಯಗಳನ್ನು ಕಬಳಿಸುವಿಕೆ ಅಥವಾ ವಸಾಹತಿಕರಣಗೊಳಿಸುವ ವ್ಯವಸ್ಥೆಗೆ ಕಡಿವಾಣ ಹಾಕಿ ಅವುಗಳನ್ನು ರಕ್ಷಿಸುವ ಕಡೆ ಗಮನಹರಿಸಲಾಯಿತು. ಅರಣ್ಯ ಮತ್ತು ಸ್ಥಳೀಯ ಜನತೆಯ ನಡುವೆ ಸಂಬಂಧ ಬಹಳ ಅನ್ಯೋನ್ಯವಾದುದು. ಈ ಸಂಬಂಧ ಸಾವಿರಾರು ವರ್ಷಗಳಷ್ಟು ಹಳೆಯದು. ಜೊತೆಗೆ ತನ್ನದೇ ಒಂದು ನಿರ್ದಿಷ್ಟ ಹಿನ್ನೆಲೆಯನ್ನು ಪಡೆದುಕೊಂಡಿದೆ.

ಪ್ರಾಚೀನತೆಯ ಪರಂಪರೆ

ಒಂದು ನಾಡಿನ ಇಲ್ಲವೆ ಜನಾಂಗದ ಸಂಸ್ಕೃತಿಯ ಅವಿಭಾಜ್ಯ ಅಂಗಗಳೆನಿಸಿದ ವಿವಿಧ ಬಗೆಯ ಕಲೆಗಳ ಮತ್ತು ಕಲಾಮಾಧ್ಯಮಗಳ ಮೂಲ-ಚೂಲಗಳನ್ನು ಅವುಗಳ ಪ್ರಾಚೀನತೆ-ಪರಂಪರೆಗಳನ್ನು ಗುರುತಿಸುವಲ್ಲಿ-

1) ಭೂ ಅಗೆತಗಳಲ್ಲಿ ದೊರೆತ ಅವಶೇಷಗಳು

2) ಶಾಸನ, ಸಾಹಿತ್ಯ, ಇತಿಹಾಸ, ಬಖೈರ, ಕೈಫಿಯತ್ತು ಇತ್ಯಾದಿ ಲಿಖಿತ ದಾಖಲೆಗಳು

3) ವಾಸ್ತು ಮತ್ತು ಮೂರ್ತಿಶಿಲ್ಪಗಳು ಮತ್ತು

4) ಜನಪದರಲ್ಲಿ ಈಗಲೂ ಕಂಡು-ಕೇಳಿಬರುವ ಮತ್ತು ರೂಢಿಯಲ್ಲಿರುವ ಐತಿಹ್ಯ, ನಂಬಿಕೆ, ಗಾದೆ ಆಚರಣೆ ಮತ್ತು ವಿವಿಧ ಬಗೆಯ ಮನರಂಜನೆಯ ಆಟಗಳು ನೆರವು ನೀಡಬಲ್ಲವರು.

ಜನಪದ ಕಲೆಗಳಿಗೆ ಸಂಬಂಧಿಸಿದಂತೆ ಕೊನೆಯದು ಹೆಚ್ಚು ಸಹಾಯಕಾರಿ.

ಆದರೆ ಜನಪದರು ಶಿಷ್ಟರಂತೆ ತಮ್ಮ ಕಲೆಗಳ ಬಗ್ಗೆ ಬರೆದಿಡಲಿಲ್ಲ. ಏಕೆಂದರೆ ಅವರಿಗೆ ಬರೆಯಲು ಬರುತ್ತಿರಲಿಲ್ಲ. ಪ್ರದರ್ಶನ ಪ್ರಧಾನವಾದ ಕಲೆಗಳು ಜನಪದರಲ್ಲಿ ಹೇಳಿಕೆ ಕೇಳಿಕೆ ನೋಡುವಿಕೆಗಳ ಮೂಲಕವೆ. ಒಬ್ಬನಿಂದ ಮತ್ತೊಬ್ಬನಿಗೆ. ತಂದೆಯಿಂದ ಮಗನಿಗೆ, ಮೇಳದಿಂದ ಮೇಲಕ್ಕೆ ಮನೆತನದಿಂದ ಮನೆತನಕ್ಕೆ ಅನುವಂಶಿಕವಾಗಿಯೊ ವೃತ್ತಿರೂಪದಲ್ಲೋ ಹವ್ಯಾಸವಾಗಿಯೋ ಮೂಮದುವರಿದುಕೊಂಡು ಬಂದವು. ಹೀಗೆ ಮುಂದುವರಿದುಕೊಂಡು ಬರುವಾಗ ಜನಪದ ಕಲೆಗಳ ಬಗ್ಗೆ ಆಸ್ತಕ್ತಿಯಿದ್ದ ಕೆಲವರು ಶಿಷ್ಯರು ತಾವಾಗಿಯೊ ಅಥವಾ ಜನಪದರು ಅಪೇಕ್ಷಿಸಿದರೆಂದೂ ಆ ಕಲೆಗಳಲ್ಲಿ ತಾವೂ ಒಂದಿಷ್ಟು ಕೈಯಾಡಿಸಿದರು. ಸ್ವತಃ ಮುಗ್ಧ ಜನಪದರೇ ಯಾವ ಯಾವುದೊ ಪ್ರಭಾವಗಳಿಗೆ ಒಳಗಾಗಿ ತಮ್ಮ ಕಲೆಗಳಲ್ಲಿ ಮತ್ತು ಕಲಾಪ್ರಕಾರಗಳಲ್ಲಿ ಅಷ್ಟಿಷ್ಟು ಮಾರ್ಪಾಡುಗಳನ್ನು ಮಾಡಿಕೊಳ್ಳುತ್ತ, ಹೊಸದನ್ನು ಹೊಂದಿಸಿಕೊಳ್ಳುತ್ತ ಬಂದರು. ಹೀಗೆ ಸರಳತೆಯಿಂದ ಸಂಕೀರ್ಣದತ್ತ ಜನಪದ ಕಲೆಗಳು ಸಾಗುತ್ತಿರುವವಾದರೂ ಅವುಗಳಲ್ಲಿಯ ಮೂಲ ಸೊಗಡು ಆ ಜವಾರಿತನ ಅವರಿಗೇ ತಿಳಿಯದಂತೆ ಕೆಲವು ಆಚರಣೆಗಳ ರೂಪದಲ್ಲಿ ಕೆಲಮಟ್ಟಿಗಾದರೂ ಉಳಿದುಕೊಂಡು ಬಂದಿದೆ. ಅಂತಹ ಆಚರಣೆಗಳ ವಿಶ್ಲೇಷಣೆಯಿಂದ ಜನಪದ ಕಲೆಗಳ ಮೂಲ ಮತ್ತು ಪ್ರಾಚೀನತೆಯನ್ನು ತಿಳಿದುಕೊಳ್ಳಲು ಸಾಧ್ಯವಿದೆ.

ಆದಿಮಾನವ ಧರ್ಮಸ್ವರೂಪ :

ಮಾನವಶಾಸ್ತ್ರಜ್ಞರ ಈ ಎಲ್ಲ ಪ್ರಯತ್ನಗಳನ್ನೂ, ವರ್ಣಿಸಿದ ಪಿ. ಜಿಸ್ಬರ್ಟ್‌ವಿಲ್ – ಡೆಲ್ಮ್ ಅವರಿಗೆ ತಮ್ಮ ಕೃತಜ್ಞತೆ ಸಲ್ಲಿಸುತ್ತ ತಮ್ಮ ಕೃತಿ "ಟ್ರೈಬಲ್ ಇಂಡಿಯಾ"ದಲ್ಲಿ "ಏಕದೇವತಾವಾದ" ಆದಿಮಾನವನ ಮೂಲ ಧರ್ಮಸಿದ್ಧಾಂತವಾಗಿದೆ" ಎಂದು ಅವರ ತೀರ್ಮಾನಗಳನ್ನು ಸಮರ್ಥಿಸುತ್ತಾರೆ. ಸೃಷ್ಟಿ ಸಮಸ್ತವನ್ನೂ ಅತೀತಶಕ್ತಿಯ ಪ್ರತೀಕವೆಂದೂ ಪ್ರತಿಯೊಂದು ವಸ್ತುವೂ ಆ ಅತೀತ ಚೈತನ್ಯದ ಅಭಿವ್ಯಕ್ತಿ ರೂಪವೆಂದೂ ಭಾವಿಸಿದ ಜನಪದರ ಮೂಲಭೂತ ಶ್ರದ್ಧೆ, ಅರ್ಚನಾವಿಧಾನ, ಆಚರಣೆಯ ಕ್ರಮಗಳು ಈ ಆದಿಮಾನವ ಧರ್ಮ ಸ್ವರೂಪದ ಅವಸ್ಥಾಂತರಗಳು ಎನ್ನುವುದನ್ನು ಈ ಹಂತದಲ್ಲಿ ಮರೆಯಕೂಡದು. ಧರ್ಮದಂತಹ ವಿಸ್ತ್ರತ ಪರಿಕಲ್ಪನೆಯ ಎಲ್ಲ ಮುಖದ ಚರ್ಚೆ ಇಲ್ಲಿ ಪ್ರಸ್ತುತವಲ್ಲ. ಆದರೆ ಧರ್ಮದ ಅವಸ್ಥಾಂತರಗಳ ಸಹಕಾರಿಗಳಾದ ಅನೇಕ ಸ್ಥೂಲ ರೂಪಗಳನ್ನು ಮಾತ್ರ ಹೇಳು ಪ್ರಯತ್ನವನ್ನು ಇಲ್ಲಿ ಕೈಕೊಳ್ಳಲಾಗಿದೆ.

ಧರ್ಮದ ಸ್ಥೂಲರೂಪಗಳು

ಸಾಮಾನ್ಯವಾಗಿ ಧರ್ಮ ಎನ್ನುವುದು ಮಾನವ ಜೀವನದ ಆಧಾರ; ಬದುಕಲು ಅಗತ್ಯವಾದ ಒಂದು ಶ್ರದ್ಧೆ. ಅತೀತ ಅಥವಾ ಅತಿಮಾನುಷ ಶಕ್ತಿಯ ಆಶ್ರಯ ಮತ್ತು ಅದರ ಜೊತೆಗೆ ಮಾನವನ ಒಂದು ಸ್ವೀಕೃತ; ಸ್ಥಿರ ಸಂಬಂಧವೇ ಧರ್ಮ್ ಎಂದು ಹೇಳಲಾಗುತ್ತದೆ. ಈ ಅಭಿಪ್ರಾಯಗಳನ್ನು ಇನ್ನಷ್ಟು ಸ್ಪುಟವಾಗಿ ಹೇಳುವುದಾದರೆ ಮನುಷ್ಯ ಆಧರಿಸುವ ಅಥವಾ ಅವಲಂಬಿಸುವ ಈ ಅತೀತ ಶಕ್ತಿ ಅಥವಾ ಶಕ್ತಿದೇವತೆಗಳಲ್ಲಿ ಆತ ಹೊಂದುವ ಗಾಢ ನಂಬುಗೆ ಮತ್ತು ಆತನ ಶರಣಾಗತಿ. ಧರ್ಮಸ್ವರೂಪ ಮತ್ತು ಧಾರ್ಮಿಕ ಶ್ರದ್ಧೆಯ ಯಾವದೇ ಅವಸ್ಥೆಗೂ ಈ ಮಾತು ಹೊಂದಿ ನಿಲ್ಲುವ ವ್ಯಾಪಕ ಸಾಮರ್ಥ್ಯ ಪಡೆದಿದೆಯೆನ್ನುವದು ಇಲ್ಲಿ ಗಮನಿಸಬೇಕಾದ ಅಂಶ.

ಸುತ್ತಮುತ್ತಣ ಪ್ರಪಂಚ, ನಿಸರ್ಗದ ಅದ್ಭುತ ಕಾರ್ಯ್ಗಳ ಆಚೆ ಇರುವ ಅತೀತ ಅಥವಾ ಅತಿಮಾನುಷ ಶಕ್ತಿ ಧರ್ಮದ ಒಂದು ಅತಿ ಮುಖ್ಯ ಅಂಶ. ಪ್ರಪಂಚದ ಅಸ್ತಿತ್ವದ ಮೂಲ ಕಾರಣವೊಂದರ ಪರಮಶಕ್ತಿ ಈ ಅತಿಮಾನುಷ ಚೈತನ್ಯದ ಪರಿಕಲ್ಪನೆಗೆ ಚಾಲನೆಯಾಗಿದೆ. ಇತಿಹಾಸ ಪೂರ್ವದ ಆದಿಮಾನವರಿಂದ ಮೊದಲುಗೊಂಡು ಮಾನವ ಚರಿತ್ರೆಯ ಎಲ್ಲ ಕಾಲದ ಸಮಾಜಗಳು ಈ ಅತಿಮಾನುಷ ಅಗೋಚರ

ಶಕ್ತಿಯನ್ನು ದೇವರು ಎಂದು ನಂಬಿ ಬಂದಿವೆ. ಆದಿಮಾನವರ ಜನಪದ ಬುಕಟ್ಟುಗಳ ಮಟ್ಟಿಗೆ ಹೇಳುವುದಾದರೆ ಈ ನಂಬಿಕೆಯ ಆಧಾರ ಭಯ ವಿಸ್ಮಯ ಇನ್ನುಳಿದದದ್ದೆಲ್ಲ ಆ ಬಳಿಕ.

ಆದಿಮಾನವರ ಮತ್ತು ಅತೀವ ಶಕ್ತಿಗಳ ಈ ಪ್ರಾಕೃತಿಕ ಗಾಢ ಸಂಭಂಧವನ್ನು ಗೆರೆಕೊರೆದು ತೋರಿಸುವುದು ಜಟಿಲ. ಅತೀತ ಚೈತನ್ಯ ಮಾನವನ ಕಣ್ಣೆದುರು ಆವಿಷ್ಕಾರಗೊಳ್ಳುವ ರೀತಿ ಅನಿರೀಕ್ಷಿತ ಮತ್ತು ಅಸಾಮಾನ್ಯ. ಜೊತೆಗೆ ಹೀಗೆ ವಿಸ್ಮಯಕಾರೀ ಅದ್ಭುತ ರೂಪಗಳಲ್ಲಿ ಪ್ರಕಟಗೊಳ್ಳುವ ಈ ಶಕ್ತಿಯನ್ನು ಖಚಿತವಾಗಿ ಅರ್ಥೈಸಲು ಅವನಿಗಿರುವ ಅಸಾಮರ್ಥ್ಯ. ಆದುದರಿಂದ ಸೂರ್ಯೋದಯದ ಭವ್ಯ ವೈಭವವನ್ನು ಕಂಡು ಮೂಕವಿಸ್ಮಯ, ಪ್ರಚಂಡ ಮಾರುತದ ಒಡನೊಡನೆ ನುಗ್ಗಿ ಬರುವ ಗುಡುಗು ಮಿಂಚುಗಳಲ್ಲಿ ಈ ಅತೀತ ಶಕ್ತಿಯನ್ನು ಗುರುತಿಸುತ್ತಾನೆ. ಈ ಅತೀತಶಕ್ತಿ ಅಥವಾ ದೇವರನ್ನು ಹುರಿತ ಮಾನವನ ಪ್ರತಿಕ್ರಿಯೆ ಮತ್ತು ಅವನ ಧಾರ್ಮಿಕ ಧೋರಣೆ ಸದಾ ಸಂಕೀರ್ಣವಾಗಿವೆ. “ಇಂಥ ಒಂದು ಶಕ್ತಿಗೆ ಮಾನವ ಮುಖಾಮುಖಿಯಾದಾಗ ಪ್ರೇಮ, ಕೃಜ್ಞತೆ, ಕುಬ್ಜತೆ ಅಥವಾ ತನ್ನ ಸಣ್ಣತನದ ಅರಿವು, ಕೃಪಾಯಾಚನೆ, ಪರಿವರ್ತನೆ, ಉತ್ಸಾಹ, ಆಶೆ ಇತ್ಯಾದಿ ಭಾವನೆಗಳ ಅನುಭವ ಆತನಲ್ಲಿ ಉಂಟಾಗುತ್ತದೆ.”

ಕುಲದೇವತಾರಾಧನೆ – ಕುಲಸಂಕೇತಾರಾಧನೆ

ಆದಿಮಾನವ ಗುಂಪುಗಳು ತಮ್ಮ ಜೀವನ ನಿರ್ವಹಣೆಗೆ ಕೈಕೊಂಡ ವೃತ್ತಿಗಳಲ್ಲಿ ಬೇಟೆಯಾಡುವದು ಗೆಡ್ಡೆ ಗೆಣಸು ಸಂಗ್ರಹಿಸುವುದು. ಮುಂತಾದವು ಪ್ರಥಮ ಮತ್ತು ಪ್ರಮುಖ ವೃತ್ತಿಗಳು. ಯಾವುದೇ ಒಂದು ಜನಪದ ವೃಂದದ ಆರ್ಥಿಕ ಸ್ಥರ ಆಯಾ ವೃದದ ಧಾರ್ಮಿಕ ಮಾದರಿಗಳನ್ನು ರೂಪಿಸುವಲ್ಲಿ ಕೆಲಮಟ್ಟಿಗಿನ ಪಾತ್ರ ವಹಿಸುತ್ತದೆ. ಒಂದೇ ಮಟ್ಟದ ಆರ್ಥಿಕ ಶ್ರೇಣಿಯಲ್ಲಿದ್ದರೂ ಆ ಶ್ರೇಣಿಯಲ್ಲಿ ಜೀವನ ಸಾಗಿಸುವ ವಿವಿಧ ಜನಪದ ವೃಂದಗಳು ಬೇರೆ ಬೇರೆ ಧಾರ್ಮಿಕ ಧೋರಣೆಗಳನ್ನು ಅನುಸರಿಸುತ್ತಿರಬಹುದು. ಆಯಾ ವೃಂದದ ಆರ್ಥಿಕ ಶ್ರೇಣಿಯ ಜೊತೆಗೆ ಅದರ ದೈಹಿಕ ಶಕ್ತಿ, ಸಾಮಾಜಿಕ ಪರಿಸರಗಳೂ ಅದರ ಧಾರ್ಮಿಕ ಚಟುವಟಿಕೆಗಳ ಮೇಲೆ ಪ್ರಭಾವ ಬೀರುತ್ತವೆ. ಈ ವಿಷಯವನ್ನು ಚರ್ಚಿಸಿದ ಪಿ. ಜಿಸ್ಬರ್ಟ ಇದಕ್ಕೆ ಕಾರಣವೇನೆಂದರೆ ಮನುಷ್ಯ ಅತಿಮಾನುಷ ಶಕ್ತಿಯನ್ನು ಪರಿಭಾವಿಸುವಲ್ಲಿ ಮುಖ್ಯ ಕಾರಣಗಳಾದ ಪ್ರವೃತ್ತಿ, ಪರಿಕಲ್ಪನೆ, ಸಂಕೇತಗಳು ಎಂದು ತೀರ್ಮಾನಿಸುತ್ತಾರೆ.

ಗೆಡ್ಡೆ ಗೆಣಸು ಸಂಗ್ರಹಿಸುವ, ಬೇಟೆಯಾಡುವ ಆದಿಮಾನವ ವೃಂದಗಳು ಸಾಧಾರಣವಾಗಿ ಅನುಸರಿಸುವ ಧರ್ಮ ಕುಲದೇವತಾರಾಧನೆ ಅಥವಾ ಕುಲಸಂಕೇತಾರಾಧನೆ.

ನಿಸರ್ಗದಲ್ಲಿ ಅಪರಿಮಿತವಾಗಿ ಹರಡಿರುವ ವಸ್ತುಗಳಲ್ಲಿ ಯಾವುದೋ ಒಂದು – ಕಲ್ಲುಬಂಡೆ, ಬಹುದೊಡ್ಡ ಮರ ಅಥವಾ ಒಂದು ಪ್ರಾಣಿ – ಆದಿಮಾನವ ಗುಂಪಿಗೆ ಆಸರೆ ರಕ್ಷೆಗಳನ್ನು ಒದಗಿಸಿರಬಹುದಾದ ಕಾಲದಿಂದ ಇಂಥ ಒಂದೊಂದು ವಸ್ತು ಆಯಾ ಜನಪದ ವೃಂದದ ದೇಷ್ಟಿಗೆ ಅತೀತ ಶಕ್ತಿಯ ಪ್ರತೀಕವಾಗಿ ಕಂಡಿರಬಹುದು. ಈ ಹಂತದಲ್ಲಿ ಒಂದು ಪ್ರಾಣಿ, ಒಂದು ಮರ ಅಥವಾ ಒಂದು ಗುಡ್ಡ ಆಯಾ ಗುಂಪಿನ ಕುಲಸಂಕೇತವಾಗಿ ಸ್ವೀಕೃತಿ ಪಡೆದು ಅರ್ಚನೆಯ ರೂಪಧಾರಣೆ ಮಾಡಿತು. ಭೌಗೋಳಿಕ ಪಾತಳಿಯ ವಿಭಿನ್ನ ಪ್ರದೇಶಗಳಲ್ಲಿ ವಾಸಿಸುವ ಜನಪದ ಗುಂಪುಗಳಿಗೆ ಒಂದೊಂದು ಪಂಗಡಕ್ಕೂ ಒಂದೊಂದು ಕುಲಸಂಕೇತ ರೂಪುಗೊಂಡಿರಬೇಕು. ಆಲದ ಮರವನ್ನು ದೈವವೆಂದು ಪೂಜಿಸುವುದು, ಆಕಳನ್ನು ಗೋಮಾತೆಯೆಂದು ಅರ್ಚಿಸುವ, ಪರಂಪರೆಯನ್ನು ಸ್ಮರಿಸಿಕೊಳ್ಳಬಹುದು. ಈ ಕುಲಸಂಕೇತಗಳ ಜೊತೆಗೆ ಆದಿವಾಸಿಗಳು ಏರ್ಪಡಿಸಿಕೊಳ್ಳುವ ಸಂಬಂಧ ಕೇವಲ ಸಾಂಕೇತಿಕವಾಗಿರದೆ, ಅವರ ಬದುಕಿನ ಅವಿಭಾಜ್ಯ ಅಂಗ ಪರಿಕಲ್ಪನೆಯಾಗಿ ರೂಪುಗೊಳ್ಳುತ್ತದೆ. ಆಸ್ಟ್ರೇಲಿಯಾದ ಆದಿವಾಸಿಗಳಲ್ಲಿ ಇದರ ವಿಪರೀತಾವಸ್ಥೆಯನ್ನು ಗುರುತಿಸಿದ ವಿದ್ವಾಂಸರು, "ವೊಲ್ಲೆಬಿ" ಜನಾಂಗ, ಕಾಂಗರೂ ಜಾತಿಯ ಒಂದು ಪ್ರಾಣಿ "ವೊಲ್ಲೆಬಿ" ಮೃಗದೊಂದಿಗೆ ಹೊಂದಿರುವ ರಕ್ತ ಬಾಂಧವ್ಯವನ್ನು ಸೂಚಿಸುತ್ತಾರೆ.

ಈ ಕುಲಸಂಕೇತಗಳನ್ನು ಯಾವುದೇ ರೀತಿಯಿಂದ ನಾಶಪಡಿಸುವುದು ಆ ಕುಲಗುಂಪಿಗೆ ಅಪಾಯಕಾರಿ, ಆಪತ್ಕಾರಿ ಎಂದು ಜನಪದರು ನಂಬುತ್ತ ಬಂದಿದ್ದಾರೆ ಸಂಪಿಗೆ ಮರ ಅಥವಾ ಆಲದ ಮರ, ಬನ್ನಿಮರಗಳನ್ನು ಕಡಿಯಬಾರದು ಎನ್ನುವ ನಿಷೇಧವನ್ನು ಗಮನಿಸಬಹುದು.

ಕುಲದೇವತಾರಾಧನೆಯ ಇನ್ನೊಂದು ಮಹತ್ವದ ಅಂಶವೆಂದರೆ ಬುಡಕಟ್ಟುಗಳು ವಿವಿಧ ಕುಲ ಗುಂಪುಗಳಾದುದು. ಈ ಕುಲಗುಂಪು ಆಯಾ "ಬಳಿ"ಗೆ ಆಧಾರವಾಯಿತು. ಅದೇ ಮುಂದೆ ಶಿಷ್ಟಪದ ಸಮಾಜದಲ್ಲಿ "ಗೋತ್ರ"ವಾಯಿತು. ಒಂದೇ "ಬಳಿ"ಗೆ ಸೇರಿದ ಗಂಡು ಮತ್ತು ಹೆಣ್ಣು ಮದುವೆಯಾಗಲು ಬಾರದು ಎನ್ನುವ ಆದಿಮಾನವ ಸಮಾಜದ ನಂಬಿಕೆ ಇಂದಿನವರೆಗೂ ಮುಂದುವರೆದಿರುವದನ್ನು ನಾವು ಕಾಣುತ್ತೇವೆ. ಒಮದು ಕುಲ ಸಂಕೇತವುಳ್ಳ ವೃಂದ, ರಕ್ತಸಂಬಂಧದ ದೃಷ್ಟಿಯಿಂದ ಸೋದರರಾಗುತ್ತಾರೆ. ಒಂದೇ ಕುಲಗುಂಪಿನ ಕಳ್ಳುಬಳ್ಳಿಯಲ್ಲಿ ವಿವಾಹವಾದರೆ ಕುಲಗುಂಪಿನ ನಾಶ ಎನ್ನುವುದರಿಮದ ಸಗೋತ್ರ

ಏನಾದ ನಿಷಿದ್ಧ. ಈ ಮುಂತಾದ ಕೆಲವು ನಿಷೇಧಗಳು ಆಯಾ ಕುಲಗುಂಪಿನ ವೃದ್ಧಿಗೆ ಶುದ್ಧಿಗೆ ರಕ್ಷಾಕವಚ ಎನ್ನುವುದು ಜನಪದ ವೃಂದಗಳ ನಂಬಿಕೆ.

ಕುಲಸಂಕೇತವೇ ಆರಾಧನೆಯ ವಸ್ತುವಾಗುವುದರಿಂದ ಆ ಸಂಕೇತವೇ ಆಯಾ ಕಾಲ ಗುಂಪಿಗೆ ದೇವತೆಯಾಗುತ್ತದೆ. ಆದುದರಿಂದ ಧರ್ಮದ ಈ ರೂಪವನ್ನು ಕುಲಸಂಕೇತಾರಾಧನೆ ಎಂದು ಕರೆಯುವುದಕ್ಕಿಂತ ಕುಲದೇವತಾರಾಧನೆಯೆಂದು ಕರೆಯುವುದೇ ಮೇಲು.ಷ್ಮಿಟ್ ಹೇಳುವ "ಕುಲ ಸಂಕೇತಾರಾಧನೆ ಒಂದು ನಿಗೂಢ ಆಚರಣೆ ಕುಟುಂಬ ಹಾಗೂ ಕುಲಗಳು ಕೆಲ ಪ್ರಾಣಿ ವರ್ಗಗಳ ಜೊತೆ ಖಚಿತವಾದ ರಕ್ತ ಬಾಂಧವ್ಯ ಹೊಂದಿದೆ ಎಂದು ಕೆಲವು ಜನರ ನಂಬುಗೆ ಎನ್ನುವ ಮಾತಿನೊಂದಿಗೆ ಹೆರ್ಸ್ಕೋವಿಟ್ಸ್ ಅವರ ಅಭಿಪ್ರಾಯಗಳನ್ನು ಸೇರಿಸಿದರೆ ಈ ಮಾತಿನ ಅರ್ಥ ಸ್ಫುಟಗೊಳ್ಳುತ್ತದೆ. ಪ್ರಾಣಿ ಅಥವಾ ವೃಕ್ಷಗಳ ಜೊತೆಗೆ ಮನುಷ್ಯರು ಬೆಳೆಸಿಕೊಂಡ ಈ ಸಂಬಂಧ ಅಸಾಮಾನ್ಯ ಸ್ವರೂಪದ್ದು ನಿಗೂಢವಾದದ್ದು ಎಂದು ಹೇಳುವ ಅವರು ಇದೊಂದು ಅತೀಂದ್ರಿಯ ಅವರೂಪದ ದಿವ್ಯ ಅನುಭಾವ ಸಂಬಂಧ ಎಂದು ಸ್ಪಷ್ಟೀಕರಿಸುತ್ತಾರೆ.

ಕುಲಸಂಕೇತ ಅಥವಾ ಕುಲದೇವತಾರಾಧನೆ ಧಾರ್ಮಿಕ ಶ್ರದ್ಧೆಯ ಒಂದು ಅಂಗವೇ ಹೊರತು ಅದೊಂದು ಸ್ವತಂತ್ರ ಧರ್ಮವಲ್ಲ.

ಡರ್ಖಿಮ್ ಮುಂತಾದವರ ಟೋಟೆಮಿಸಮ್ ಕುಲದೇವತಾರಾಧನೆಗೆ ಸಂಬಂಧಿಸಿದ ಅಭಿಪ್ರಾಯಗಳನ್ನು ಚರ್ಚಿಸಿ ಜಿಸ್ಬರ್ಟ್ ಅವರು, ದಕ್ಷಿಣ ಮತ್ತು ಪೂರ್ವ ಆಸ್ಟ್ರೇಲಿಯಾ ಬುಡಕಟ್ಟುಗಳಾದ ಕುರ್ನಾಯ್ ಕುಲಿನ್, ಯುಯಿನ್, ಬುಷ್ಮೆನ್ ವೃಂದಗಳ ಧಾರ್ಮಿಕ ನಂಬುಗೆಗಳಲ್ಲಿ ಏಕದೇವತಾ ಧರ್ಮ ಸ್ವರೂಪವನ್ನು ಗುರುತಿಸುತ್ತಾರೆ. ಈ ಬುಡಕಟ್ಟುಗಳು ನಂಬುವ ದೇವತಾರೂಪಿ ವಸ್ತುಗಳನ್ನು ಶಿಷ್ಟಪದ ಸಮಾಜದ ದೇವರೆಂದು ಹೇಳಲು ಸಾಧ್ಯವಿಲ್ಲ; ಆದರೆ ಏಕದೇವತಾ ಧರ್ಮ ಕಲ್ಪನೆಯ ಸ್ಥೂಲ ಬೇರುಗಳನ್ನು ಇಲ್ಲಿ ಕಾಣಬಹುದಾಗಿದೆ.

ಪರಮ ಶಕ್ತಿ - ಪಿತ

ಆದಿಮಾನವರಿಗೂ ಅತೀತ ಶಕ್ತಿಗೂ ಇರುವ ಒಂದು ಸಂಬಂಧ ಏರ್ಪಡುವಲ್ಲಿ ಆಕಾಶ ಮಹತ್ವದ ಪಾತ್ರ ನಿರ್ವಹಿಸುತ್ತದೆ. ಆಕಾಶದ ಆಚೆ ಎಲ್ಲೋ ಒಂದು ಅಗೋಚರ ನೆಲೆ ಈ ದಿವ್ಯಶಕ್ತಿಗಿದೆ ಎಂದು

ಆದಿಮಾನವರು ನಂಬುತ್ತಾರೆ. ಮಿಂಚು, ಸಿಡಿಲು ಚಂಡಮಾರುತ ಕಾಲದ ಗುಡುಗು ಇವೆಲ್ಲ ಆ ಅತೀತ ಚೈತನ್ಯದ ಕೋಪ, ರೋಷಗಳ ಸಂಕೇತಗಳೆಂದು ಅವರು ಭಾವಿಸುತ್ತಾರೆ. ಇಂಥ ಒಂದು ದಿವ್ಯಾತ್ಮವನ್ನು ಮೂರ್ತೀಕರಣಗೊಳಿಸಿ ಅರ್ಚಿಸುವ ನಂಬಿಕೆ ಮತ್ತೆ ಕೆಲವು ಬುಡಕಟ್ಟುಗಳಲ್ಲಿ ಕಂಡು ಬರುತ್ತದೆ. ಕೆಲವು ಸಲ ತಮ್ಮ ಬುಡಕಟ್ಟಿನ ಬಲಶಾಲಿ ಮುಖ್ಯಸ್ಥರನ್ನೇ ಆ ಅತೀತ ಶಕ್ತಿಯ ಪ್ರತಿನಿಧಿಯೆಂದು ಭಾವಿಸಿ ಅರ್ಚಿಸುವುದು ಉಂಟು. ಆದರೆ ಆ ಅತೀತಶಕ್ತಿ ಪ್ರತಿನಿಧಿಯೆಂದು ಭಾವಿಸಿ ಅರ್ಚಿಸುವುದು ಉಂಟು. ಆದರೆ ಆ ಅತೀತಶಕ್ತಿ ಅವರ ದೃಷ್ಟಿಯಲ್ಲಿ ಪಿತ, "ಸರ್ವಶಕ್ತ".

ವಿವಿಧ ಬುಡಕಟ್ಟುಗಳಲ್ಲಿರುವ ಇ "ಸರ್ವಶಕ್ತಪಿತ" ಕಲ್ಪನೆಯನ್ನು ಗುರುತಿಸಿದ ಜಿಸ್ಬರ್ಟ್ ಆಯಾ ಬುಡಕಟ್ಟುಗಳ ಭಾಷೆಯಲ್ಲಿರುವ ಈ ಪರಿಕಲ್ಪನೆಯ ಒಂದು ಪಟ್ಟಿಯನ್ನೇ ಕೊಡುತ್ತಾರೆ.

ಸೇಮಂಗ್‌ದವರು "ಕರೇಯಿ" ಫಿಲಿಫಾಯಿನ್ಸ್‌ದ ಬಟಾನ್ ನಿಗ್ರೋಗಳು "ತೊಲಾಂಡಿಯಾ", ಯುಯಿನ್ ಬುಕಟ್ಟು "ದರಮುಲಿಮ್" ಅಂದಮಾನದವರು "ಪಿಲುಗಾ" ಕುಲಿನ್‌ದವರು "ಬುಂದಜಿಲ್", ಆಸ್ಟ್ರೇಲಿಯಾ ಬುಡಕಟ್ಟುಗಳು "ಮೊಟೊಗೊನ್" ಅಲ್ಗೊಂಕ್ವಯನ್ಸ್ರು "ಕಿತ್‌ಷಿಮನಿಟು" ಹೀಗೆ "ಈ ಎಲ್ಲ ಹೆಸರುಗಳು ಆ ಅತೀತ ಶಕ್ತಿಯ ಗುಣವೈಶಿಷ್ಟ್ಯಗಳಿಗೆ ಸಂಬಂಧಿಸಿದವಾಗಿವೆ. ಕರ್ತ, ಸೃಷ್ಟಾರ, ರಕ್ಷಕ, ನನ್ನ ತಂದೆ, ಮುಂತಾದ ಅರ್ಥ ಹೊಂದಿದ ಈ ಶಬ್ದಗಳು ದೈವೀ ಪರಿಕಲ್ಪನೆಯ ಅನಂತ ಶಕ್ತಿ, ಸೃಷ್ಟಿ ಮಂಗಲ ಶಕ್ತಿಗಳಿಗೆ ಸಮಸ್ಪಂದಿಯಾಗಿವೆ.

ಸರ್ವಚೈತನ್ಯವಾದ (Animism)

ಜನಪದ ನಂಬುಗೆಗಳ ಮೂಲಭೂತ ರೂಪ ಆತ್ಮತತ್ವದ ಸ್ವೀಕರಣವಾಗಿದೆ. ಕುಲಸಂಕೇತಗಳನ್ನು ಆಯ್ದು ಅವುಗಳಲ್ಲಿ ಅತೀತಶಕ್ತಿಯ ಆರೋಪ ಮಾಡಿ ಅರ್ಚಿಸ ತೊಡಗಿದ ಜನಪದ ಗುಂಪುಗಳ ಪ್ರಥಮಾವಸ್ಥೆಯ ನಂಬುಗೆ ಕಾಲಾನಂತರದಲ್ಲಿ ಹಾಗೇ ಉಳಿದುಕೊಂಡು ಬಂದುದು ಜನಪದ ಶ್ರದ್ಧೆಯ ಅಚಲತೆಗೆ ಸಾಕ್ಷಿ. ಅವರ ನಂಬಿಗೆ ಮಾನವ ಧರ್ಮದ ಮೂಲಭೂತ ತತ್ವವೂ ನಿಜ. ಯಾವುದೇ ಪಗರಾಣಿ ಅಥವಾ ವಸ್ತುವಿಗೆ ತನ್ನದೇ ಆದ ಆತ್ಮವಿದೆ. ಮಾನವ ಸತ್ತ ಮೇಲೂ ಅವನ ಆತ್ಮ ನಾಶವಾಗುವುದಿಲ್ಲ. ಹಾಗೆ ಸತ್ತವರು ಅಗೋಚರವಾಗಿರುತ್ತಾರೆ. ಈ ಆತ್ಮಗಳು ಅವಿನಾಶಿ, ಶಿಕ್ಷಿಸುವ ರಕ್ಷಿಸುವ ಸಾಮರ್ಥ್ಯ ಹೊಂದಿರುತ್ತವೆ. ಇದೊಂದು ವಿಶಿಷ್ಟಶಕ್ತಿ. ಟೇಯಲರ್ ಈ ನಂಬಿಕೆಯನ್ನು ಆತ್ಮತತ್ತ್ವ ಎಂದು ಕರೆದಿದ್ದಾನೆ. ಈ ಆತ್ಮಶಕ್ತಿ ಅಲೌಕಿಕ; ಅನಿಯಂತ್ರಿತ. ಈ ನಂಬಿಕೆಯ ಹಿನ್ನೆಲೆಯಲ್ಲಿ ಮೂಡಿ ಬಂದ ಆಚರಣೆಗಳಲ್ಲಿ ಹಿರೇರ ಹಬ್ಬ ಅಥವಾ ಯಜಮಾನ ಪೂಜೆ ಗಮನಾರ್ಹವಾದುದು. ವ್ಯಕ್ತಿ ಸತ್ತ ಸ್ಥಳದಲ್ಲಿ ದೀಪ ಉರಿಸುವದು ಈ ಆತ್ಮ ತತ್ವಕ್ಕೆ

ಸಂಬಂಧಿಸಿ ಆಚರಣೆ. ವ್ಯಕ್ತಿ ಸತ್ತ ಮೂರು, ಒಂಭತ್ತು ಅಥವಾ ಹನ್ನೊಂದನೆಯ "ಒಳಗೆ ಕರೆದುಕೊಳ್ಳುವುದು" ಮತ್ತು ಅಂದಿನ ಅಡುಗೆಯಲ್ಲಿ ಸತ್ತ ವ್ಯಕ್ತಿಯ ಪ್ರೀತಿಯ ಭಕ್ಷಭೋಜ್ಯ ಅಥವಾ ತಲಬಿನ ಅವಸ್ತುಗಳನ್ನು ಸಿದ್ಧಪಡಿಸಿ ಎಡೆಮಾಡುವುದು ಇತ್ಯಾದಿ ಈ ನಂಬುಗೆಯ ಅಲಿದುಳಿದ ರೂಪಗಳು.

ಮಾನವನ ಬದುಕಿನಲ್ಲಿ "ಮಣ್ಣು"

ಮಾನವನ ಬದುಕಿನಲ್ಲಿ "ಮಣ್ಣು" ಬಹು ವಿಶಿಷ್ಟವಾದ ಪಾತ್ರವಹಿಸಿದೆ. ಮಣ್ಣನ್ನು, ದೇವರೆಂದು ಪೂಜಿಸಿದ್ದಾನೆ, "ಮಣ್ಣಿನಿಂದ ಕಾಯ" ಎಂದು ದಾಸವರೇಣ್ಯರು, ಮಣ್ಣಿನ ಪಾವಿತ್ರ್ಯ, ಮಣ್ಣಿನ ಮೋಹದ ಕುರಿತು ಹಾಡಿಹೊಗಳಿದ್ದಾರೆ. ಬೆಂಕಿಯ ಶೋಧನೆಯಿಂದ, ಸಾಮಾಜಿಕ ಸಾಂಸ್ಕೃತಿಕ ಬದುಕಿನತ್ತ ಹೆಜ್ಜೆಯಿರಿಸಿದ ಮಾನವ ಮಣ್ಣಿನಲ್ಲಿ ವಿವಿಧ ರೀತಿಯ ಪರಿಕರಗಳನ್ನು ಮಾಡಲು ಕಲಿತಿದ್ದಾನೆ. ಕೊಂದ ಪ್ರಾಣಿಯನ್ನು ಬೆಂಕಿಯಲ್ಲಿ ಬೇಯಿಸಿ ಭೋಜಿಸುತ್ತಿದ್ದವನು ಒಲೆಹೂಡಿ, ಮಡಿಕೆ, ಕುಡಿಕೆಗಳಲ್ಲಿ ಬೇಯಿಸುವುದನ್ನು ಕಲಿತ. ಅಂದಿನಿಂದಲೆ ಮಣ್ಣಿನಲ್ಲಿ ಕುಸುರಿ ಕೆಲಸವನ್ನು ಮಾಡಲು ಪ್ರಾರಂಭಿಸಿದ. ನೇಕಾರಿಕೆ, ಕಂಮ್ಮಾರಿಕೆ, ಕುಂಬಾರಿಕೆ ಇವೇ ಮೊದಲಾದವುಗಳು ಪ್ರಥಮ ಕಸುಬುಗಳೆಂದು ಪುರಾತತ್ವಜ್ಞರು ಪರಿಗಣಿಸಿದ್ದಾರೆ. "ಕುಂಬಾರಿಕೆ ಎಲ್ಲವುಗಳಿಗಿಂತ ಒಂದು ಮುಖ್ಯ ಕಸುಬಾಗಿ ಅದನ್ನು ಮಾಡುವವರು ಕುಂಬಾರರೆಂದು ಕರೆಸಿಕೊಂಡರು. ಮನುಷ್ಯನ ಆರಂಭಿಕ ಕೃಷಿ ಪರಿಸರದಲ್ಲಿ ಕುಂಬಾರಿಕೆಯು ಬಹುಮುಖ್ಯವಾಗಿ ಕಾಣೀಸಿಕೊಳ್ಳತೊಡಗಿತು ಕುಂಬಾರರು ಎರೆಮಣ್ಣಿನಲ್ಲಿ ಮಡಿಕೆ ಕುಡಿಕೆ ಮಾಡಿ ಅವುಗಳನ್ನು ಕೃಷಿಕರಿಗೆ ಒದಗಿಸುತ್ತಾ ಕಾಲಕಾಲಕ್ಕೆ ಇಂತಿಷ್ಟು "ಆಯ" ತಗೆದುಕೊಂಡು ಜೀವನ ನಡೆಸಲು ಆರಂಭಿಸಿದರು.

ನಮ್ಮ ನಾಡಿನ ಪ್ರತಿಯೊಂದು ಹಳ್ಳಿಯಲ್ಲೂ ಹೊಳಪಿಲ್ಲದ ಕಂದು, ಕಪ್ಪು, ಕೆಂಪು ಅಥವಾ ಬೂದು ಬಣ್ಣದ ಮಣ್ಣಿನ ಕುಡಿಕೆ, ಮಡಿಕೆ, ಆಯಾ ಭೌಗೋಳಿಕ ಪರಿಸರಕ್ಕನುಗುಣವಾಗಿ ಇಂತಹ ಹಲವು ಬಣ್ಣಗಳಲ್ಲಿ ಮಡಿಕೆಗಳು ಕಂಡು ಬರುತ್ತದೆ. ಅತ್ಯಂತ ಸರಳ ಮತ್ತು ಶುದ್ಧರೂಪವೆನ್ನಬಹುದಾದ ಈ ಕುಂಬಕಲೆಗೆ ಪ್ರಾಗೈತಿಹಾಸಿಕ ಕಾಲದ ಇತಿಹಾಸವಿದೆ. ಇತಿಹಾಸ ಪೂರ್ವಯುಗಕ್ಕೆ ಸೇರಿದ ಹರಪ್ಪ ಮಹೆಂಜೊದಾರೊಗಳಲ್ಲಿ ದೊರೆತಿರುವ ಆಟದ ಸಾಮಾನುಗಳಲ್ಲಿ ಗೊಂಬೆಗಳು ದೊರೆತಿದೆ. ಆಟದ ಗೊಂಬೆಗಳ ಸಮೂಹದಲ್ಲಿ ಪ್ರಾಣಿ ಗೊಂಬೆಗಳು, ಗೂಳಿಗಳು, ಪಕ್ಷಿಗಳು, ರಥಗಳು, ಟಗರುಗಳು, ಸ್ತ್ರಿ, ಮಗು ಇಂತಹ ಹತ್ತು ಹಲವಾರು ಮೂರ್ತಿಗಳು ಕಂಡುಬಂದಿದೆ.

ಸುಟ್ಟ ಜೇಡಿಮಣ್ಣಿನ ಗುಳಿಗೆಗಳಿರುವ ಮಣ್ಣಿನ ಗಿಲಿಕೆಗಳು, ಕೋಳಿ, ಹಾಗೂ ಪಾರಿವಾಳ ಆಕಾರದಲ್ಲಿರುವ ಪೀಪಿಗಳು, ಮಣ್ಣಿನ ಚಕ್ರಗಳು, ಶಂಖಗಳು, ಸುಟ್ಟ ಮಣ್ಣಿನ ಚಿಕ್ಕ ಆಟದ ಬಂಡಿಗಳು ದೊರೆತಿದೆ. ಇಂತಹ ಅತ್ಯಂತ ಪುರಾತನವಾದ ಆಟದ ಗೊಂಬೆಗಳು ಕೈಗಾರಿಕೆ ಕೇಂದ್ರವಾಗಿದ್ದ

ಚುನ್ಹುದಾರೋದಲ್ಲಿ ದೊರೆತಿದೆ. ಈ ಎಲ್ಲಾ ಆಟಿಕೆಗಳಲ್ಲಿ ಉನ್ನತ ಮಟ್ಟದ ಕಲೆಗಾರಿಕೆಗಳನ್ನು ಕಾಣಬಹುದು. ಗೊಂಬೆ ಮತ್ತು ಚಂಡುಗಳನ್ನು ಜೇಡಿಮಣ್ಣಿನಲ್ಲಿ ಮಾಡುತ್ತಿದ್ದರು ಎಂದು ಕಂಡುಬಂದಿದೆ. ಮಹೆಂಜೊದಾರೊದಲ್ಲಿ ಜೀವಸದೃಶವಾಗಿರುವ ಕೆಲವು ಹುಂಜಗಳು ದೊರೆತಿದೆ. ಅಲ್ಲಿನ ಗೂಳಿಗಳು, ಕೋಣಗಳು ಕಾಳಗಕ್ಕೆ ಸಿದ್ದವಾದ ರೀತಿಯಲ್ಲಿ ನಿರ್ಮಿತವಾಗಿದೆ. ಕಲ್ಪನೆ ಮತ್ತು ಕಲೆಗಾರಿಕೆಗಳಲ್ಲಿ ಇಂತಹ ಏಕಸೂತ್ರತೆ ಇರುವ ಗೊಂಬೆಗಳನ್ನು ಕಾಣಬಹುದಾಗಿದೆ. ಇಂತಹ ಗೊಂಬೆಗಳು ಅಂದಚೆಂದದ ಆಟಿಕೆ ಮಾತ್ರವಾಗಿರದೆ ಭಾರತೀಯ ಸಾಂಸ್ಕೃತಿಕ ಮನೋಭಾವನೆಯನ್ನು ಪ್ರತಿನಿಧಿಸುವ ಸ್ಮಾರಕಗಳಾಗಿದೆ.

ಗೊಂಬೆಗಳ ತಯಾರಿಕೆಯಲ್ಲಿ ವಿವಿಧ ಬಗೆಯ ತಾಂತ್ರಿಕತೆಯನ್ನು ಕಲೆಗಾರರು ಅನುಸರಿಸಿರುವು ಕಂಡುಬರುತ್ತದೆ. ಜೇಡಿಮಣ್ಣಿನ ಜೊತೆ ಒಣಹುಲ್ಲನ್ನು ಬಳಸಿ ಗೊಂಬೆ ತಯಾರಿಸಿ ಸುಣ್ಣ ಮತ್ತು ಕೆಮ್ಮಣ್ಣಿನಿಂದ ಅಲಂಕರಿಸಿರುವುದು ಒಂದು ಬಗೆಯಾದರೆ ತನ್ನ ಶಿಲ್ಪಸಿದ್ದಿಯನ್ನು ಮೆರೆಯಬಲ್ಲ ಕಲಾಪೂರ್ಣತೆಯನ್ನು ಏಕೈಕ ಸಾಧನವಾಗಿ ಕಲಾವಿದನು ಕಂಡುಕೊಂಡಿದ್ದನು. ಭಾರತೀಯ ಸಂಸ್ಕೃತಿಯಲ್ಲಿ ಗೊಂಬೆಗಳಿಗೊಂದು ಪ್ರಮುಖ ಸ್ಥಾನವಿದ್ದು ಪ್ರಾಚೀನ ಕಾಲದಲ್ಲಿಯೆ ಇಲ್ಲಿನ ಜನರು ತಮ್ಮ ಕಲಾ ಜೀವನದಲ್ಲಿ ಉನ್ನತ ಸ್ಥಾನವನ್ನು ನಡೆಸಿಕೊಂಡು ಬೆಳೆಸಿಕೊಂಡು ಬಂದಿರುವುದಕ್ಕೆ ಇಂತಹ ಶಿಲ್ಪಗಳು ಸಾಕ್ಷಿಯಾಗಿ ನಿಲ್ಲುತ್ತದೆ.

ಗೊಂಬೆಗಳ ಇತಿಹಾಸವನ್ನು ಕೆದಕುತ್ತಾ ಹೋದರೆ ಹತ್ತು ಹಲವು ರಂಜನೀಯ ವಿಷಯಗಳು ಗಮನಕ್ಕೆ ಬರುತ್ತದೆ. ಯಾವುದಾದರೊಂದು ಮರದ ಚೂರಾಗಲಿ ಕಲ್ಲಿನ ಚೂರಾಗಲಿ ಅಥವಾ ಬೇರಿನ ತುಂಡಾಗಲಿ ಗೊಂಬೆಯ ಆಕಾರದಲ್ಲಿದ್ದರೆ ಅದನ್ನು ಆರಿಸಿಕೊಂಡು ಬಂದು ಅದಕ್ಕೆ ಹೆಸರಿಟ್ಟು ನೋಡುವ ಕುತೂಹಲ ಹಿಂದಿನಿಂದಲೂ ಇತ್ತು ಎನ್ನುವ ಮನದಟ್ಟಾಗುತ್ತದೆ. ಮೊದಮೊದಲು ಹೀಗೆ ಕಂಡ ಗೊಂಬೆಗಳು ಅದೃಷ್ಟವನ್ನು ಕೊಡುತ್ತಿದ್ದವು ಎಂಬ ನಂಬಿಕೆ ಇತ್ತು ಇಂದಿಗೂ ಇದೆ. ಗೊಂಬೆಗಳಲ್ಲಿ ಮಂತ್ರಶಕ್ತಿಯಿದೆ ಎಂದು ಇಂದಿಗೂ ಜನ ನಂಬುತ್ತಾರೆ ಅದೃಷವನ್ನು ಕರುಣಿಸುವ ಗೊಂಬೆಗಳು ಮಳೆಯನ್ನು ಸುರಿಸುವ ಶಕ್ತಿಪಡೆದಿದೆ, ಕ್ಷಾಮ ಬಂದಾಗ ಆಹಾರವನ್ನು ಒದಗಿಸುತ್ತದೆ, ಯುದ್ದರಂಗದಲ್ಲಿ ಜಯ ಲಭಿಸುವುದಕ್ಕೆ ಸಹಾಯ ಮಾಡುತ್ತದೆ, ಅನಾರೋಗ್ಯದಿಂದ ನರಳುವವರು ಆರೋಗ್ಯ ಪಡೆಯುತ್ತಾರೆ ಎಂದು ನಂಬಿ ಅದಕ್ಕೆ ಆಧಾರವಾಗಿ ಗೊಂಬೆಗಳನ್ನು ಮಾಡಿಸಿ ತಮ್ಮ ಜೊತೆಯಲ್ಲಿ ಊರಿಂದ ಊರಿಗೆ ಕೊಂಡೋಯುತ್ತಿದ್ದರು.

ಕನ್ನಡ ನಾಡಿನಲ್ಲಿ ಮದ್ಯ ಕರ್ನಾಟಕ ಎನ್ನಿಸಿಕೊಳುವ ಚಿತ್ರದುರ್ಗದ ಸುತ್ತಾಮುತ್ತ ಇಂತಹ ಗೊಂಬೆಗಳು ಸಣ್ಣ ಸಣ್ಣ ಮಣ್ಣಿನ ಆಕೃತಿಯಾಗಿ ಮಾಡಿದ್ದು ಪ್ರಾಣಿ, ಪಕ್ಷಿ, ಗಾಡಿ, ಚಕ್ರ, ಎತ್ತು, ಹಸು ಮುಂತಾದ ಗೊಂಬೆಗಳು ದೊರೆತಿದೆ. ಹಿಂದಿನಿಂದಲೂ ಇಂತಹ ಗೊಂಬೆಗಳನ್ನು ನಮ್ಮ ಪೂರ್ವಿಕರು ಮಾಡುತ್ತಿದರೆಂದು ಈ ಗೊಂಬೆಗಳು ಸಾಕ್ಷ್ಯಾಧಾರಗಳಾಗುತ್ತದೆ. ನಮ್ಮ ಪ್ರಾಚೀನ ಕುಶಲಕರ್ಮಿಗಳು ಇಂತ ಹಲವು ಬಗೆಯ ಗೊಂಬೆಗಳನ್ನು ಮಾಡಿಟ್ಟು ಅವರುಗಳ ಕರಕುಶಲತೆಯನ್ನು ಸಾಭೀತು ಪಡಿಸಿದ್ದಾರೆ.

ಜನಪದ ಆಟಿಕೆಗಳ ಸಂದರ್ಭದಲ್ಲಿ ಆಯಾಕಾಲದ ಪರಿಸರದ ಜೊತೆಗೆ ನಿರ್ಮಾಣಗೊಂಡ ಪರಿಕರಗಳು ಆ ಜನಪದರ ವಸ್ತುಸ್ಥಿತಿಯನ್ನು ದ್ವನಿಸುತ್ತದೆ.

ಮಣ್ಣಿ ಗೊಂಬೆಗಳಲ್ಲಿ ನಮ್ಮ ಗ್ರಾಮೀಣ ಪ್ರದೇಶದ ಊರಮ್ಮ ಅಥವ ಗ್ರಾಮದೇವತೆಯ ಬೃಹತ್ ಮೂರ್ತಿಗಳು ಬಹಳ ಜನಪ್ರಿಯ. ಸುಮಾರು ಎರಡರಿಂದ ಮೂರು ಮೂರುವರೆ ಅಡಿ ಎತ್ತರದ ಮೂರ್ತಿಗಳನ್ನು ಸಾಮಾನ್ಯವಾಗಿ ಕುದುರೆಮೇಲೆ ಕುಳಿತಿರುವಂತೆ ಮಾಡಿರುತ್ತಾರೆ. ಜೇಡಿಮಣ್ಣಿನಲ್ಲಿ ಮೂಡಿಬರುವ ಈ ಗೊಂಬೆಗಳಿಗೆ ಮುಖ ರೌದ್ರವಾಗಿದ್ದು ಶಕ್ತಿದೇವರೆಂದು ಎನ್ನಿಸಿಕೊಳ್ಳುತ್ತದೆ.



ಸೋಮವಾರಪೇಟೆ ತಾಲೂಕಿನ ಕೆರೆ ಹೊನ್ನಮ್ಮನ ದೇವರಕಾಡಿನ ವಿಹಂಗಮ ನೋಟ



ಕೊಡಗಿನ ಕೆರೆಹೊನ್ನಮ್ಮನ ದೇವರಕಾಡಿನಲ್ಲಿರುವ ಬೃಹತ್ ಶಿಲಾಸಂಸ್ಕೃತಿಯ ಘೋರಿ ನೆಲೆಗಳು



ಕೊಡಗಿನ ಕೆರೆಹೊನ್ನಮ್ಮನ ದೇವರಕಾಡಿನಲ್ಲಿರುವ ಬೃಹತ್ ಶಿಲಾಸಂಸ್ಕೃತಿಯ ಘೋರಿ ನೆಲೆಗಳು



ಕೊಡಗಿನ ಕೆರೆಹೊನ್ನಮ್ಮನ ದೇವರಕಾಡಿನಲ್ಲಿರುವ ಬೃಹತ್ ಶಿಲಾಸಂಸ್ಕೃತಿಯ ಘೋರಿ ನೆಲೆಗಳು



ಕಾಂಗ್ರದಲ್ಲಿ ಕಂಡುಬಂದ ಟೆರ್ರಾಕೋಟಾ ಕುದುರೆ ಮತ್ತು ಡುಬ್ಬದ ಗೂಳಿ



ಮೊಹೆಂಜೊದಾರೊದಲ್ಲಿ ದೊರೆದಂತಹ ಟೆರ್ರಾಕೋಟಾದ ಕುದುರೆ



ಲೋಥಲ್‌ನಲ್ಲಿ ದೊರೆತ ಬಾಲವುಳ್ಳ ಕುದುರೆ



ಮೊಹೆಂಜೊದಾರೊದಲ್ಲಿ ದೊರೆತಂಥಹ ಸಾಕುನಾಯಿಯನ್ನು ಹೋಲುವ ಟೆರ್ರಾಕೋಟಾ ಶಿಲ್ಪ



ಸಿಂಧೂ ನದಿಯ ನಾಗರಿಕತೆಯನ್ನು ಬಿಂಬಿಸುವ ಗೂಳಿಯ ಟೆರ್‍ರಾಕೋಟಾ



ಮೊಹೆಂಜೊದಾರೊದಲ್ಲಿ ದೊರೆತ ಬಾಲ ಎತ್ತಿ ಬೊಗಳಲು ಸಿದ್ಧವಾಗಿರುವ ನಾಯಿಯ ಟೆರ್‍ರಾಕೋಟಾ ಶಿಲ್ಪ

ಅಧ್ಯಾಯ-03

ದೇವರ ಕಾಡುಗಳು ಮತ್ತು ಟೆರ್ರಾಕೋಟಾ ಶಿಲ್ಪಗಳು

ಪ್ರಪಂಚಕ್ಕೆ ಬೆಳಕು ನೀಡುವ ಸೂರ್ಯ-ಚಂದ್ರ, ಗಾಳಿ-ಮಳೆ ಹೀಗೆ ನೈಸರ್ಗಿಕ ಶಕ್ತಿಗಳನ್ನು ದೈವತ್ವವನ್ನು ಕಂಡುಕೊಂಡ ಆದಿಮಾನವ ಪ್ರಕೃತಿಯಲ್ಲಿನ ಮರ, ಗಿಡ, ಪ್ರಾಣಿ, ಪಕ್ಷಿಗಳಲ್ಲಿಯು ದೈವತ್ವವನ್ನು ಕಾಣತೊಡಗಿದ. ಇದರ ಜೊತೆಯಲ್ಲಿ ಇದನ್ನು ಅನುಸರಿಸುವ ಪರಿಪಾಠ ಬೆಳೆಸಿಕೊಂಡ. ಹೀಗೆ ಪಂಚಭೂತಗಳಲ್ಲಿ ಕಂಡುಕೊಂಡ ವಿಶಿಷ್ಟ ಶಕ್ತಿಯೇ ದೇವರು. ಪಂಚಭೂತಗಳು ಸಮತೋಲನದಲ್ಲಿ ಇದ್ದಾಗ ಜೀವನ ಸುಖಮಯವಾಗುತ್ತದೆ ಎಂಬ ಭಾವನೆಯಿಂದ ಅದನ್ನು ಆರಾಧಿಸುತ್ತ ಬಂದಿದ್ದಾನೆ. ಅವನ ಆರಾಧನೆಗಳಲ್ಲಿ ಪ್ರಕೃತಿ ಉಪಾಸನೆಯು ಒಂದು. ವೃಕ್ಷಗಳಲ್ಲಿ ಕಂಡುಕೊಂಡ ದೈವತ್ವದಿಂದ ಆದಿ ಮಾನವ ಅದಕ್ಕೆ 'ದೇವರಕಾಡು' ಎಂಬ ನಾಮಾಂಕಿತದಿಂದ ಪೂಜಿಸತೊಡಗಿದ. ಇದು ಅರಣ್ಯ ಸಂರಕ್ಷಣೆಗೆ ಪರೋಕ್ಷವಾಗಿ ಕಾರಣವಾಯಿತಲ್ಲದೇ ಸಂರಕ್ಷಿತ ಬನಗಳಾಗಿ ಮಾರ್ಪಾಡಾಯಿತು.

ಸಂರಕ್ಷಿತ ವನಗಳೆಂದು ಕರೆಯಲ್ಪಟ್ಟ ದೇವರಕಾಡು, ಭೂತವನ, ಅಶೋಕವನ, ನಾಗವನ, ಚೌಡಿವನ, ಹುಲಿದೇವರ ಬನ ಹೀಗೆ ವಿವಿಧ ರೀತಿಯಲ್ಲಿ ಭಯ-ಭಕ್ತಿಯ ಭಾವನೆಗಳೊಂದಿಗೆ ಸಂರಕ್ಷಿಸಿದ ವನಗಳನ್ನೇ ಪವಿತ್ರ ವನಗಳೆಂದು ಕರೆಯುವರು. ಈ ಒಂದು ಪ್ರಕೃತಿ ಆರಾಧನೆಯ ಪರಿಕಲ್ಪನೆಯೊಂದಿಗೆ ಪ್ರಕೃತಿಯ ಸೃಷ್ಟಿಯಲ್ಲಿ ವಿಶಿಷ್ಟವೆನಿಸಿದ ವೃಕ್ಷಗಳು ಸಂರಕ್ಷಿತವಾದವುಗಳು. ಆದಿಮಾನವ ಕೇವಲ ಪೂಜನೀಯ ಭಾವನೆಯಿಂದ ಕಾಡಿನ ಕೆಲವು ನಿರ್ದಿಷ್ಟ ಪ್ರದೇಶಗಳನ್ನು ಆರಾಧನೆಯ ಮೂಲಕ ಕಂಡುಕೊಂಡು, ದೈವತ್ವದ ಕಲ್ಪನೆಯೊಂದಿಗೆ (ಸಂರಕ್ಷಿಸಿದ್ದು) ಉಳಿಸಿದ್ದು, ಅವು ಭಾರತದ ಹಲವೆಡೆ ಇಂದಿಗೂ ಸಂರಕ್ಷಿತವಾಗಿ ಉಳಿದಿದ್ದು ಗಮನಾರ್ಹ ಅಂಶ. ಈ ಪರಂಪರಾಗತವಾಗಿ ಬಂದಂತಹ ವೃಕ್ಷ ಪ್ರೇಮ, ವೃಕ್ಷ ಆಚರಣೆ ರಕ್ತಗತವಾಗಿ ಒಂದು ಸ್ವಲ್ಪ ಮಟ್ಟಿಗೆ ಇಂದಿಗೂ ನೆಲೆಯೂರಿದೆ. ವನಗಳನ್ನು ಇಂದು ನೋಡಲು ಸಾಧ್ಯವಾಗದಿದ್ದಲೂ ಸಹ ಹಿಂದೆ ಆರಾಧನೆ ಮೂಲಕ ಸಂರಕ್ಷಿಸಿದ ವನಗಳ ಉಲ್ಲೇಖ ಹಲವಾರು ಗ್ರಂಥಗಳಲ್ಲಿ ತಿಳಿಯಬಹುದು. ರಾಮಾಯಣ, ಮಹಾಭಾರತದಂತಹ ಮಹಾಕಾವ್ಯಗಳಲ್ಲಿ ಅಶೋಕವನ, ಅರಣ್ಯ ಕಾಂಡ, ಕದಳಿವನ ಹೀಗೆ ಉಲ್ಲೇಖಿಸಲಾಗಿದೆ.

ಇಂತಹ ಒಂದು ಸಂರಕ್ಷಿತ ವನಕ್ಕೆ ನಿರ್ದಿಷ್ಟ ಹೆಸರನ್ನು ನೀಡಿ, ಆ ಕಾಡು ಪರಂಪರಾಗತವಾಗಿ ಪೂಜಿಸಲ್ಪಟ್ಟು 'ದೇವರ ಕಾಡು; ಎಂಬ ಹೆಸರಿನಿಂದ ಇಂದಿಗೂ ಪ್ರಸ್ತುತದಲ್ಲಿದೆ.

ದೇವರ ಕಾಡುಗಳು

ದೇವರ ಕಾಡುಗಳು ಪೂರ್ವಿಕರು ಸಂರಕ್ಷಿಸಿದ ಕಾಡುಗಳೆಂಬುದು ಸರ್ವವೇದ್ಯ. ಇದು ಸಾಮಾನ್ಯವಾಗಿ ಎಲ್ಲಾ ಪ್ರದೇಶಗಳಲ್ಲಿಯೂ ಕಾಣಸಿಗುತ್ತದೆ. ಇವು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದ್ದರು ಒಂದೇ ಅರ್ಥವನ್ನು ಹೇಳುತ್ತದೆ.

ಸಾಂಸ್ಕೃತಿಕ ಹಾಗೂ ಧಾರ್ಮಿಕ ಸಂಪ್ರದಾಯಗಳ ದೃಷ್ಟಿಯಿಂದ ಅರಣ್ಯ, ಪಕ್ಷಿ, ಸಸ್ಯಸಂಕುಲಗಳ ಸಂರಕ್ಷಣೆಗೆ ಆದಿಮಾನವರು ಹೆಚ್ಚಿನ ಆದ್ಯತೆಯನ್ನು ನೀಡುತ್ತಿದ್ದರು. ಕಾನನದಲ್ಲಿನ ಭಾಗವನ್ನು ವಿವಿಧ ದೇವ-ದೇವತೆಗಳ ಹಾಗೂ ಕುಟುಂಬದ ದೈವ ಭೂತಗಳಿಗೆ ಸಮರ್ಪಿಸಿ ರಕ್ಷಿಸಿರುವುದು ಇಂತಹ ಕಾಡುಗಳು. ಇವು ಪ್ರಕೃತಿ ಆರಾಧನೆಯ ಸಾಂಪ್ರದಾಯಿಕ ವಿಧಾನಗಳಲ್ಲಿ ಒಂದು. ಕಾಡಿನಲ್ಲಿ ಹುಟ್ಟಿ ಅಲ್ಲೇ ಬೆಳೆದು ವಿಕಾಸ ಹೊಂದಿದ ಮಾನವನಿಗೆ ಅದರ ಮಹತ್ವದ ಅರಿವಿತ್ತು. ಕಾಡನ್ನು ನಾಶಪಡಿಸಿದರ ವನ್ಯ ಜೀವಿಗಳ ಉಪಟಳ ಹೆಚ್ಚಾಗಬಹುದೆಂಬ ಭಯವು ಆವರಿಸಿತ್ತು. ಇದನ್ನರಿತ ಪೂರ್ವಜರು ಅರಣ್ಯ ಪ್ರದೇಶಗಳನ್ನು ದೇವರ ಹೆಸರಿನಲ್ಲಿ ಪೂಜಿಸುವುದರ ಜೊತೆಯಲ್ಲಿ ಸಂರಕ್ಷಿಸುವ ಕೈಂಕರ್ಯಕ್ಕೆ ತೊಡಗಿದರು.

ಆರಂಭದಲ್ಲಿ ಕಾಡಿನ ಮಧ್ಯೆ ಕಲ್ಲಿನ ರೂಪದಲ್ಲಿ ದೇವರನ್ನು ಆಹ್ವಾನಿಸಿ, ಆ ಕಲ್ಲನ್ನು ಮರದ ಬುಡದಲ್ಲಿಟ್ಟು ಸುತ್ತಲು ಕಟ್ಟೆ ಕಟ್ಟಿ ಪೂಜಿಸುವ ಸಂಪ್ರದಾಯವನ್ನು ಪ್ರಾರಂಭಿಸಿದವರು. ಇದನ್ನೇ 'ದೇವರ ಕಾನು' ಎಂದು ರಕ್ಷಿಸತೊಡಗಿ ಇಲ್ಲಿ ವರ್ಷಕ್ಕೊಮ್ಮೆ ಪೂಜೆ ಪುನಸ್ಕಾರದೊಂದಿಗೆ ಹಬ್ಬವನ್ನು ಆಚರಿಸಿ ಜನರಲ್ಲಿ ದೇವರ ಹಾಗೂ ಕಾಡುಗಳ ಬಗ್ಗೆ ಭಯ-ಭಕ್ತಿ ಮೂಡಿಸತೊಡಗಿದರು.

ಇವು ಕಾಲ ಸರಿದಂತೆ ಗುಡಿಗಳಾಗಿ ಮಾರ್ಪಾಡು ಹೊಂದಿದವು. ಜೊತೆಯಲ್ಲಿ ಧೈವಾರಾಧನೆಯಲ್ಲಿಯೂ ಮಾರ್ಪಾಡಾಗಿ ವರ್ಷಕ್ಕೊಮ್ಮೆ ಇದ್ದ ಪೂಜೆ ತಿಂಗಳಿಗೊಮ್ಮೆಯಾಗಿ ನಿತ್ಯ ಪೂಜೆಯಾಗಿ ಪ್ರಾರಂಭವಾಯಿತು.

ಭಾರತದ ವಿವಿಧ ರಾಜ್ಯಗಳಲ್ಲಿ ಪವಿತ್ರ ವನಗಳು:

ಬಹುರೂಪಿ ಜನಪದ ಸಂಸ್ಕೃತಿಗಳ ನಾಡಾದ ಭಾರತದ ಹೆಚ್ಚು ಕಮ್ಮಿ ಎಲ್ಲಾ ರಾಜ್ಯಗಳಲ್ಲಿಯೂ ವಿವಿಧ ರೂಪ-ನಾಮಗಳಲ್ಲಿ ಪವಿತ್ರ ವನಗಳು ಅಸ್ತಿತ್ವದಲ್ಲಿವೆ. ನಾಗಲ್ಯಾಂಡ್, ತ್ರಿಪುರಾ, ದೆಹಲಿ ಮತ್ತು ಅಂಡಮಾನ್-ನಿಕೋಬಾರ್ ದ್ವೀಪಗಳ ಹೊರತಾಗಿ ಬೇರೆಲ್ಲಾ ಕಡೆಗಳಲ್ಲಿಯೂ ಪವಿತ್ರ ವನಗಳಿಗೆ ಸಂಬಂಧಿಸಿದ ಧಾರ್ಮಿಕ ಜನಪದೀಯ ನಂಬಿಕೆ, ಆಚರಣೆಗಳು ಕೂಡಾ ವೈವಿಧ್ಯಮಯ. ಪವಿತ್ರ ವನಗಳ ಕೆಲವು ಪ್ರಾದೇಶಿಕ ಹೆಸರುಗಳು ಹೀಗಿವೆ.

ಕೇರಳದಲ್ಲಿ ನಾಗಕಾವು, ಸರ್ಪಕಾವು ಅಥವಾ ಕಾವು, ಮಹಾರಾಷ್ಟ್ರದಲ್ಲಿ ದೇವಬನ್ ಅಥವಾ ದೇವರಾಯಿ, ರಾಜಸ್ಥಾನದಲ್ಲಿ ಕೇಂಕ್ರಿ ಅಥವಾ ಬರಾನ್, ಬಿಹಾರದಲ್ಲಿ ಸರನ, ತಮಿಳುನಾಡಿನಲ್ಲಿ ಗುಳಿಗ್ಗಬನ, ಸಿದ್ಧರವನ ಇತ್ಯಾದಿ ಹೆಸರುಗಳಿಂದ ಖ್ಯಾತವಾಗಿದೆ.

ಕರ್ನಾಟಕದಲ್ಲಿ ದೇವರ ಕಾಡುಗಳು

ರಾಜ್ಯದ ಉಡುಪಿ, ಕೊಡಗು, ಶಿವಮೊಗ್ಗ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ದೇವರಕಾಡುಗಳು ವಿಶಾಳವಾದ ವ್ಯಾಪ್ತಿಯನ್ನು ಹೊಂದಿವೆ. ಇಲ್ಲಿಯ ಸಂಸ್ಕೃತಿ, ಸಂಪ್ರದಾಯ, ಆಚರಣೆಗಳು ಜಿಲ್ಲೆಯಿಂದ ಜಿಲ್ಲೆಗೆ ಭಿನ್ನವಾಗಿದೆ. ಉದಾಹರಣೆಗೆ: ಉತ್ತರಕನ್ನಡ ಜಿಲ್ಲೆಯ ದೇವರ ಕಾಡುಗಳು, ಹುಲಿದೇವರು, ಭೂತಪ್ಪ, ಜಟಕಪ್ಪ, ಚಡಿ, ಹುಲಿಗೆಪ್ಪ ಮೊದಲಾದ ಸ್ಥಳೀಯ ಸಂಸ್ಕೃತಿಯನ್ನು ಪ್ರತಿನಿಧಿಸುವ ಆರಾಧನಾ ಶಕ್ತಿಗಳಿಗೆ ಮೀಸಲಾಗಿವೆ. ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಬನಗಳು, ಪಂಜುರ್ಲಿ, ಗುಳಿಗ್ಗ, ರಕ್ತೇಶ್ವರಿಗಳಂತಹ ಜನಪದ ಭೂತ ದೈವಗಳಿಗೆ ಮತ್ತು 'ನಾಗನಿಗೆ' ಮೀಸಲಾದವುಗಳು. ಇವು ಇಲ್ಲಿನ ಮೂಲ ನಿವಾಸಿಗಳ ಆಸ್ತಿಗಳಾಗಿ ಆಯಾಯ ಕುಟುಂಬಗಳ ಖಾಸಗಿ ನಿರ್ವಹಣೆಗೆ ಒಳಪಟ್ಟಿದ್ದವು.

ಉತ್ತರ ಕನ್ನಡ ಜಿಲ್ಲೆಯ ಪವಿತ್ರ ವನಗಳು

ಸಿರ್ಸಿ ತಾಲೂಕಿನ ಪೂರ್ವಭಾಗದಲ್ಲಿನ ಜನಪದ ಅರಣ್ಯ ಸಂರಕ್ಷಣಾ ಕ್ರಮವನ್ನು ನೋಡಿದರೆ 20 ಶತಮಾನಗಳು ಕಳೆದು ಹೋದರೂ ಸಹ ಇನ್ನೂ ಇವರು ಅರಣ್ಯ ಆಧಾರಿತ ಬದುಕನ್ನೇ ನಡೆಯಿಸಿಕೊಂಡು ಬಂದಿದ್ದಾರೆ.

ಊರಿನ ಗ್ರಾಮಸ್ಥರೇ ಅರಣ್ಯದ ಕೆಲವು ಪ್ರದೇಶಗಳನು ಸಂರಕ್ಷಣೆ ಮಾಡುವಂಥದ್ದು. ಬನವಾಸಿ ಭಾಗದಲ್ಲಿನ ಸಂಪಗೋಡ, ದುಗ್ಲಿ, ಕೆರೆಕೊಪ್ಪಗಳಲ್ಲಿನ ಅರಣ್ಯ ಪ್ರದೇಶಗಳಿಗೆ ಹೋಗಿ ಕಟ್ಟಿಗೆ ಆ ಒಂದು ಸಂರಕ್ಷಿತ ಅರಣ್ಯ ಪ್ರದೇಶಕ್ಕೆ ಹೋಗಿ ಧಕ್ಕೆ ಉಂಟು ಮಾಡಿದ್ದಲ್ಲಿ ಹಳ್ಳಿಯ ಪ್ರಮುಖರು ಪಂಚಾಯಿತಿ ಕಟ್ಟೆಯಲ್ಲಿ ಸೇರಿ ಧಕ್ಕೆ ಉಂಟು ಮಾಡಿದವನಿಗೆ ಶಿಕ್ಷೆ ವಿಧಿಸಲಾಗುತ್ತದೆ. ಅದು ಎಣ್ಣೆಯ ರೂಪದಲ್ಲಿರಬಹುದು ಇಲ್ಲವೇ ಕಾಯಿ ಕೊಡುವ ಪದ್ಧತಿ ಮತ್ತು ಅಲ್ಪ ಮೊತ್ತದ ದಂಡವನ್ನು ಸಹ ವಿಧಿಸುತ್ತಾರೆ.

ಗ್ರಾಮದೇವರು ವರುಷಕ್ಕೊಮ್ಮೆ ವನಕ್ಕೆ ಹೋಗುವ ಪದ್ಧತಿ ಇದೆ. ಆ ಒಂದು ನಿರ್ದಿಷ್ಟ ಪ್ರದೇಶವನು ಅದು 10–15 ಗುಂಟೆ ಸೀಮಿತ ವ್ಯಾಪ್ತಿ ಪ್ರದೇಶಕ್ಕೆ ಒಳಪಡುವಂತದ್ದು.

ಬನವಾಸಿಯ ಮಧುಕೇಶ್ವರ ದೇವರು, ನರೂರು, ಭಾಷಿ ಇಲ್ಲಿನ ಗ್ರಾಮದೇವರು ಮಕರ ಸಂಕ್ರಾಂತಿ ದಿವಸ, ವಿಜಯ ದಶಮಿ ದಿವಸ, ಭೂಮಿ ಹುಣ್ಣಿಮೆ ಹೀಗೆ ವರುಷದಲ್ಲಿ ಮೂರು ಬಾರಿ ವನಕ್ಕೆ ಹೋಗುವ

ಪದ್ಧತಿ ಇದೆ. ಬನವಾಸಿಯ ಮಧುಕೇಶ್ವರ ದೇವರನ್ನು ಕಡೆಗೋಡಿನ ವನಕ್ಕೆ ಮೆರವಣಿಗೆಯೊಂದಿಗೆ ಕರೆದುಕೊಂಡು ಹೋಗುವ ಸಂಪ್ರದಾಯ ಇದೆ. ಇಲ್ಲಿ ಸಾಂಕೇತಿಕವಾಗಿ ಧರ್ಮದರ್ಶಿಯವರು ದೇವರ ಹೆಸರಿನಲ್ಲಿ ಮೃಗ ಬೇಟೆ ಆಡುವ ಪದ್ಧತಿ ಇದೆ.

ಧಾರ್ಮಿಕ ನಾಯಕರಿಂದಲು ಸಹ ಅರಣ್ಯ ಸಂರಕ್ಷಣೆಗೆ ಪುಷ್ಟಿಕೊಟು ಅದನ್ನು ಇಂದಿಗೂ ಸಹ ಮುಂದುವರಿಸಿಕೊಂಡು ಬಂದಿದ್ದನ್ನು ಬನವಾಸಿಯ ಕ್ಯಾದಗಿಕೊಪ್ಪದ ಭಾಗದಲ್ಲಿ ಕಾಣಬಹುದು. ಹಿಂದೆ ಈಡಿಗರ ಕಲ್ಲೇಶ್ವರ ಸ್ವಾಮಿಜಿಯವರು ಅರಣ್ಯ ಪ್ರದೇಶದಲ್ಲೇ ಕುಟೀರ ನಿರ್ಮಾಣ ಮಾಡಿ ಸುತ್ತಮುತ್ತಲಿನ ಭಾಗವನನು ಕಾಪಾಡಿದರು. ಸ್ವಾಮಿಜಿ ದರ್ಶನಕ್ಕೆ ಬಂದ ಭಕ್ತರು ಅಲ್ಲಿನ ಭಾಗದಲ್ಲಿನ ವೃಕ್ಷಗಳಿಗೆ ಸೀರೆ, ರವಿಕೆ ಕಟ್ಟಿ ತಮ್ಮ ಹರಕೆ ತೀರಿಸುವ ಪದ್ಧತಿಯನು ಇಂದಿಗೂ ಪಾಲಿಸಲಾಗುತ್ತಿದೆ. ಈ ಒಂದು ನಿಟ್ಟಿನಲ್ಲಿಯು ಪಾವಿತ್ರ್ಯತೆಯ ದ್ಯೋತಕವಾಗಿ ಆ ಭಾಗದ ಅರಣ್ಯ ಸಂರಕ್ಷಣೆ ಆಗಿದೆ.

ವನಭೋಜನ

ದೇವರನ್ನು ದೇವರ ಕಾಡು ಎಂದೇ ಕರೆಯಲಾಗುವ ಸಂರಕ್ಷಿತ ಅರಣ್ಯ ಪ್ರದೇಶವೊಂದಕ್ಕೆ ಪಲ್ಲಕ್ಕಿಯಲ್ಲಿ ವೈದು ಪೂಜೆಮಾಡಿ ಊರವರೆಲ್ಲ ಸೇರಿ 'ವನಬೋಜನ'ವೆಂಬ ಹೆಸರಿನಲ್ಲಿ ಸಾಮಾಜಿಕವಾಗಿ ಊಟ ಮಾಡುವ ಪದ್ಧತಿಯನ್ನು ಹಲವು ಕಡೆಗಳಲ್ಲಿ ಕಾಣುತ್ತೇವೆ. ಉದಾ: ಬನವಾಸಿ, ಗೇರುಸೊಪ್ಪಾ ಮುಂತಾದ ಭಾಗಗಗಳಲ್ಲಿ ಕಂಡುಬತ್ತದೆ.

ನಾಗಬನಗಳು

ನಾಗ–ವೃಕ್ಷ ಸಂಬಂಧ ಅವಳಿ ಚೇತನಗಳೆಂದು ವ್ಯಾಖ್ಯಾನಿಸಲಾಗಿದೆ. ಆದುದರಿಂದಲೇ ತಂಪಾಗಿರುವ ಹುತ್ತ, ಮರದ ಬೇರುಗಳು, ನೆರಳಿರುವ ಜಾಗವನ್ನು ಆಶ್ರಯಿಸುವ ಸರ್ಪ ಜೀವನ ಕ್ರಮಕ್ಕೆ ಪೂರಕವಾದ ನಾಗ ಸಂಕಲ್ಪಗಳ ಮೂಲಕ 'ನಾಗವನಗಳು' ಮೂರ್ತ ಸ್ವರೂಪವಾಗಿ ಕಾಣಿಸಿಕೊಂಡವು. ಅಪೂರ್ವ ಗಿಡ, ಮರ, ಬಳ್ಳಿ, ಪಕ್ಷಿಸಂಕುಲಗಳಿಗೆ ಆವಾಸ ಸ್ಥಾನದಂತಿರುವ ನಾಗಬನಗಳು ಸ್ವಯಂ ರಕ್ಷಿತ ಪ್ರದೇಶದಂತಿವೆ. ತಂಪನ್ನು ಅರಸುವ ತಂಪಾದ ಹುತ್ತದಲ್ಲಿ ವಾಸಿಸುವ, ಮರದ ಬುಡದ ತಂಪಿನಲ್ಲಿ ಸುಳಿದಾಡುವ ಸರ್ಪವನ್ನು ಹೀಗೆ ಮರದ ಬುಡದಲ್ಲಿ (ಅಶ್ವಸ್ಥ, ಗೋಳಿ, ಆಲ ಮುಂತಾದ ಹಾಲಿರುವ ಮರಗಳು) 'ಸಂಕಲ್ಪಿಸಿ' ಕಾಲಕಾಲಕ್ಕೆ ತಂಪರೆಯುತ್ತ ಬಂದೀತು. ಹಾಗಾಗಿಯೇ ಮರದ ಬುಡದಲ್ಲಿ ಹುತ್ತಗಳು 'ನಾಗಸ್ಥಾನ'ಗಳಾಗಿವೆ.

ನಾಗರ ಪಂಚಮಿ

ನಾಗರ ಪಂಚಮಿ ಶ್ರಾವಣ ಮಾಸದಲ್ಲಿ ಬರುತ್ತದೆ. ನಾಗ ಪಂಚಮಿಗೆ ಮೊದಲು ನಾಗನ ಹತ್ತಿರದಲ್ಲಿಯ ಕಳೆಗಿಡಗಳನ್ನು ಕಿತ್ತು ಶುಚಿ ಮಾಡುತ್ತಾರೆ. ನಾಗರ ಪಂಚಮಿಯಂದು ಬ್ರಾಹ್ಮಣ ಅರ್ಚಕರು ಬಂದು ಶಾಸ್ತ್ರೀಯವಾಗಿ ಪೂಜಾ ವಿಧಾನದ ಮೂಲಕ ಪೂಜೆ ಮಾಡುತ್ತಾರೆ. ಮೊದಲು ನೀರಿನಿಂದ ನಾಗನಕಲ್ಲು ಮತ್ತು ಕಟ್ಟೆಯನ್ನು ತೊಳೆಯುತ್ತಾರೆ. ನೀರಿನಿಂದ ಅಭಿಷೇಕ ಮಾಡುತ್ತಾರೆ. ನಂತರ ನಾಗ ಕಲ್ಲಿಗೆ ಅರಿಶಿನ ಹುಡಿಯ ಲೇಪನ ಮಾಡುತ್ತಾರೆ. ಹಾಲಿನ ಅಭಿಷೇಕ ಜೇನಿನ ಸಕ್ಕರೆಯ ಅಭಿಷೇಕ ಮಳೆನೀರಿನಿಂದ ಅಭಿಷೇಕಗಳನ್ನು ಒಂದರ ನಂತರ ಇನ್ನೊಂದರಂತೆ ಮಾಡುತ್ತಾರೆ. ನೈವೇದ್ಯಕ್ಕೆ ಬಾಳೆಹಣ್ಣು, ವೀಳ್ಯದೆಲೆ, ಅಡಿಕೆ, ತೆಂಗಿನಕಾಯಿ, ಸಿಯಾಳ ಇತ್ಯಾದಿಗಳನ್ನು ಇಡಲಾಗುತ್ತದೆ. ನಾಗನಿಗೆ ಪ್ರಿಯವಾದ ಹೂಗಳು ಕೇದಗೆ ಮತ್ತು ಹಿಂಗಾರ. ಅವುಗಳ ಜತೆಯಲ್ಲಿ ಮಲ್ಲಿಗೆ, ಸೇವಂತಿಗೆ ಹೂಗಳನ್ನು ಅಲಂಕಾರಕ್ಕಾಗಿ ಉಪಯೋಗಿಸುತ್ತಾರೆ. ನಂತರ ಮನಸ್ಸಿನಲ್ಲಿ ತಮ್ಮ ಸಂಕಲ್ಪವನ್ನು ಹೇಳಿ ದೋಷ ನಿವಾರಿಸುವಂತೆ ಪ್ರಾರ್ಥಿಸಿಕೊಳ್ಳುತ್ತಾರೆ.

ಇಂತಹ ಒಂದು ಸಂರಕ್ಷಣೆಯನ್ನು ಭಟ್ಕಳ ತಾಲೂಕಿನ ಹಾಡವಳ್ಳಿ ಗ್ರಾಮದಲ್ಲಿ ಇಂದಿಗೂ ಸಹ ನೋಡಬಹುದು.

ಹಾಡವಳ್ಳಿ ಗ್ರಾಮದ ಜೈನ ಬಸದಿಯ ಪಕ್ಕ ಆಲದ ಮರದ ಕೆಳಗಡೆ ನಾಗರ ಪ್ರತಿಮೆಯನ್ನು ಇಟ್ಟಿರುವುದನ್ನು ಕಾಣುತ್ತೇವೆ. ಇದು ಒಂದು ಎಕರೆ ಪ್ರದೇಶವನ್ನು ಒಳಗೊಂಡಿದೆ. ಗ್ರಾಮದ ಜನರು ತಿಂಗಳಿಗೊಂದು ವಿಶೇಷ ಪೂಜೆಯನು ಕೊಡುತ್ತಾರೆ. ಭಟ್ಟರಿಂದ ನಾಗ ಪ್ರತಿಮೆಗೆ ಹಾಲನ್ನು ಎರದು ಸಂಪಿಗೆ ಹೂವನ್ನು ಮುಡಿಸಿ ಹಣ್ಣು ಕಾಯಿಗಳನ್ನು ನೈವೇದ್ಯ ಮಾಡುವರು. ಅಲ್ಲದೇ ನಾಗರ ಪಂಚಮಿಯ ದಿವನ ಗ್ರಾಮಸ್ಥರು ಪೂಜಿಸುವ ಪದ್ಧತಿ ಇದೆ.

ಗ್ರಾಮದಲ್ಲಿನವರಿಗೆ ಏನಾದರೂ ತೊಂದರೆ ಕಂಡು ಬಂದಲ್ಲೂ ಸಹ ಪೂಜಿಸುವ ಸಂಪ್ರದಾಯ ಇದೆ.

ನಾಗವನಕ್ಕೆ ಹಿಂದಿನಿಂದ ನಡೆದುಕೊಂಡು ಬಂದಿದ್ದ ಪದ್ಧತಿ ಈಗಲೂ ಸಹ ಮುಂದುವರಿಸಿಕೊಂಡು ಬಂದಿದ್ದನ್ನು ಕಾಣಬಹುದು. ಇಲ್ಲಿನ ನಾಗರವನಕ್ಕೆ ಯಾರದೇ ಪ್ರವೇಶವಿಲ್ಲ. ಅಷ್ಟೇ ಅಲ್ಲ ಮರಗಳನ್ನು ಕಡಿಯಲು ಸಹ ನಿಷೇಧ ಜಾರಿಯಲ್ಲಿದೆ.

ಸಮೂಹ ನಾಗರು:

ಒಂದೇ ಜಾಗದಲ್ಲಿ 3–4 ಸಮೂಹ ನಾಗರನ್ನು ಪ್ರತಿಷ್ಠ ಮಾಡುತ್ತಾರೆ. (ಧೂಪದ ಮರ, ಗೋವ ಸಂಪಿಗೆ) ಕೆಲವು ನಾಗರು 1 ನಾಗರ ಪ್ರತಿಮಾ ಪ್ರದೇಶದ ಸುತ್ತ ಕತ್ತಿ ಹಚ್ಚದೆ ಇರುವಂತ ಬೆಳೆದ ಮರಗಳ

ಕೆಪ್ಪು ನಾಗರುಗಳಿಗೆ ವಾರ್ಷಿಕ ಒಂದೇ ಪೂಜೆ ಅದು ನಾಗರ ಪಂಚಮಿಯ ದಿವಸ. ಪೂಜೆಯ ಒಂದೂವರೆ ತಾಸಿನ ಮುಂಚೆ ಶಂಖವನ್ನು 10 ನಿಮಿಷ ಊದಿ ಬರುತ್ತಾರೆ. (ಮನೆಯ ಮಾಲೀಕರು) ನಂತರ ಪೂಜೆ.

ಉಳಿದ ಸಮೂಹ ನಾಗರಿಗೆ ಊರೊಟ್ಟಿಗೆ ಪೂಜೆ, (4–5 ಮನೆ ಸೇರಿ) ಎಲ್ಲರೂ ಕಾಯಿ ಹಣ್ಣು ವಾರ್ಷಿಕ ನಾಗರ ಪಂಚಮಿ ದಿನ. ಎಲ್ಲಾ ನಾಗರ ಪ್ರತಿಮೆಗಳ ಸುತ್ತ ವನ ಬೆಳೆದಿರುವುದು ಎಲ್ಲೆಲ್ಲೂ ಕಡಿಯುವ ನಿಷೇಧ. ನೈವೇದ್ಯಕ್ಕೆ ಉಪ್ಪು ಹಾಕದೆ ಇದ್ದ ಮುಂಬ್ರಿ. ಅಭಿಷೇಕ ಅಕ್ಕಿ ಹಿಟ್ಟು ಲೇಪ ಮಾಡುವುದು. ಮಶಿಕೆಂಡದ ಹಿಟ್ಟು ಮಾಡಿ ಕಪ್ಪನ್ನು ಲೇಪನ. ಹಾಲು ಜೇನುತುಪ್ಪದ ಅಭಿಷೇಕ. ಶುದ್ಧ ನೀರಿನ ಅಭಿಷೇಕ, ಗಂಧ ಹೂವಿನ ಪೂಜೆ ಮಾಡುವುದು, 3 ಜೊಂಬು ದೀಪ ಹಚ್ಚುವ ಪದ್ಧತಿ, ಕರ್ಪೂರಧಾರತಿ, ತುಪ್ಪದಾರತಿ ಈ ತರದ ಸಂಪ್ರದಾಯ ಸಿದ್ಧಾಪುರ ಹೆಗ್ಗರಣೆ ಕಂಡುಬರುತ್ತದೆ.

ಚೌಡಿವನ

ಚೌಡಿವನ ಓಡಾಡುವ ದೇವತೆಯಾದ್ದರಿಂದ ಕಟ್ಟಡ ಕಟ್ಟುವ ಸಂಪ್ರದಾಯವಿಲ್ಲ. ಚೌಡಿದೇವತೆ ಇರುವಲ್ಲಿ ಮುಂದೆ ಒಂದು ಕೊಳದ ಅವಶ್ಯಕತೆ ಇದೆ. (ಕೆರೆಗಳು ಇದೆ) ಕೆಲವು ಚೌಡಿದೇವತೆ ಕಮಾನಿನ ಕಟ್ಟಡ ಬಾಗಿಲು ಇಲ್ಲ.

ಚೌಡಿ ಮರವಾಗಿ ಗೋವ ಸಂಪಿಗೆ ನೆಡುವ ಪದ್ಧತಿ ಇವೆ. ಚೌಡಿಗೆ ಶುಕ್ರವಾದ ಮತ್ತು ಮಂಗಳವಾರ ಪೂಜೆ ನಡೆಯುತ್ತದೆ. ವಿಶೇಷವಾದ ಚೌಡಿ ಮುಂದೆ ಸಪ್ತಸತಿ ಪಾರಾಯಣ ನಡೆಯುವ ಸಂಪ್ರದಾಯ ಇದೆ. ಕೆಲವು ಚೌಡಿಗಳು ವನದ ಮಧ್ಯದಲ್ಲಿ ಪ್ರತಿಷ್ಠೆಗಳು ಆಗಿವೆ. ಇದರಿಂದ ಚೌಡಿವನವೆಂದು (ಬನ) ಎಂದು ಹೆಸರು ಪಡೆದಿದೆ.

ಭೂತವನ:

ಹಿಂದೂ ಧರ್ಮ ಆರಾಧನಾಲಯಗಳಲ್ಲಿ ತ್ರಿಮೂರ್ತಿಗಳ ಮತ್ತು ದುರ್ಗೆಯರ ಪ್ರಧಾನ ಪ್ರಭಾವವನ್ನು ಕಾಣುತ್ತೇವೆಯಾದರೂ ಪ್ರಾದೇಶಿಕವಾಗಿ ಹುಟ್ಟಿ ಬೆಳೆದ ದೇಶಿಯ ಕಲ್ಪನೆಗಳು ಭೂತ, ಪ್ರೇತಾದಿಗಳ ರೂಪದಲ್ಲಿ ಕಾಣಿಸುತ್ತವೆ. ದುರ್ಗೆಯಲ್ಲಿ 'ಮಾರಿ' ಸೇರಿಕೊಂಡ ಹಾಗೂ ಸಮ್ಮಿಶ್ರಿ ಕಲ್ಪನೆಗಳು ರೂಪುಗೊಳ್ಳುತ್ತವೆ.

ಭೂತ ಪಿಶಾಚಿಗಳ ಆಳ್ವಿಕೆಯಿರುವುದರಿಂದಲೂ ಅದು ದೇವರ ವೃಕ್ಷವೆಂದು ಸಂರಕ್ಷಿಸಿದೆ. ಬೆಂಗ್ಳೆಯಲ್ಲಿ 35 ಅಡಿ ಸುತ್ತಳತೆಯುಳ್ಳ ಭೂತದ ಮರವೊಂದಿದೆ. ಅದರ ತಳಭಾಗದಲ್ಲಿ ದೇವರ ಪ್ರತಿಮೆಯನ್ನು ಸಹ ಕಾಣಬಹುದು. ಈ ಒಂದು ವೃಕ್ಷದ ವಿಶೇಷವೆಂದರೆ ಈ ಮರವನ್ನು ಹತ್ತಲು ಅಥವಾ ರೆಂಬೆಕೊಂಬೆಗಳನ್ನು ಕಡಿಯಲು ಹೋದರೆ ನೂರಾರು ಜೇನು ಕಚ್ಚುವುದು.

ಭೂತವನದ ಮಧ್ಯೆ ಪ್ರತಿಷ್ಠಾಪಿಸಿದ ಸಾದಾ ಬೆಳೆದಿರುವ ಪನ್ನೇರಳೆಯ ಮರದ ಅಡಿಯಲ್ಲಿ ದೊಡ್ಡ ಕಲ್ಲಿರುವ ಭೂತ. ಭೂತನ ಕಟ್ಟೆಯು ಸಹ ಚೌಕಾಕಾರ, ಗೋಲಾಕಾರ ಕಟ್ಟೆಗಳ ಮೇಲೆ ಸ್ಥಾಪಿಸಿದ ಭೂತಗಳು. ಸುತ್ತಮುತ್ತ ಕಾಡು ವೃಕ್ಷ. (ದೇವರ ಕಾಡುಗಳು) ಮದ್ಯ ದೇವರು ಇರುವುದರಿಂದ – ದೇವರ ಕಾಡು ಎಂದು ಹೇಳಲಾಗಿದೆ.

ಪೂಜಾ ಸಂಪ್ರದಾಯ

ಆರದ್ರಾ ನಕ್ಷತ್ರದ ಆದಿತ್ಯವಾರ ವಾರ್ಷಿಕ ಪೂಜೆ. ಕಡಬು–ಅನ್ನ, ಪಾಯಸ–ಹಣ್ಣು ಕಾಯಿ ನೈವೇದ್ಯ ಮಾಡುತ್ತಾರೆ. ಗಂಧ, ಮಂಗಳ ಹಚ್ಚುವುದಿಲ್ಲ. ಅರಿಶಿನ ಕುಂಕುಮ ಹೊಯ್ಯುವ ಪದ್ಧತಿ ಇದೆ. ಕೆಲವು ಭೂತಗಳಿಗೆ (ದಾರಿಯ ಅಂಚಿನಲ್ಲಿರುವ) ಮದುವೆ ದಿಬ್ಬಣ ಬರುವಾಗ ಕಾಯಿಕೊಡುವ ಪದ್ಧತಿ (ಈಡಿಗಾಯಿ) ಇದಕ್ಕೂ ಸಹ ವಾರ್ಷಿಕ ಪೂಜೆ ನಡೆಯುತ್ತದೆ.

ಇನ್ನೂ ಕೆಲವು ಭೂತಗಳಿಗೆ ಜಾನುವಾರುಗಳು ಕಳೆದಲ್ಲಿ ಈಡಿಗಾಯಿ ಹರಕೆ ಕೊಟ್ಟಿಕೊಳ್ಳುವರು. ಮಳೆಗಾಲದ ಆರಿದ್ರ ನಕ್ಷತ್ರದಲ್ಲಿ ಪೂಜೆ ನಡೆಯುತ್ತದೆ.

ಮಾಸ್ತಿಕಾನ ಹಸಿರ ಹಬ್ಬ

ಹೊನ್ನಾವರ ತಾಲೂಕಿನ ಜಲವಳ್ಳಿ ಗ್ರಾಮದವರು ಮಾಸ್ತಿಗೆ (ಮಾಸ್ತಿಕಾನ) ವೈಶಾಖ ಮಾಸದಲ್ಲಿ ಹಸಿರು ಪೂಜೆಯನ್ನು ಮಾಡುತ್ತಾರೆ. ಇಲ್ಲಿ ಜೈನರು ಪೂಜಾರಿಗಳು. ಈ ಒಂದು ಮಾಸ್ತಿಯನ್ನು “ಗೊಡಕಲ' ಮರದ ಕೆಲಗೆ ಇಟ್ಟಿರುತ್ತಾರೆ. ಗ್ರಾಮದ ಪ್ರತಿ ಮನೆಯವರು ಒಂದೊಂದು ಬಾಳೆಗೊನೆಯನ್ನು ಹಾಗೂ ಫಲಗಳನ್ನು ನೈವೇದ್ಯ ಕೊಡುವ ಪದ್ಧತಿ ಇದೆ.

ಇದು ತಾವು ಬೆಳೆದ ಬೆಳೆಗಳು ಉತ್ತಮವಾಗಿ ಫಸಲು ಕೊಡಲಿ ಎಂಬ ಉದ್ದೇಶದಿಂದ ಆಚರಣೆಯಲ್ಲಿ ಬದಂತಹ ಹಬ್ಬ. ಗ್ರಾಮಸ್ಥರಿಗೆ ಏನಾದರೂ ತೊಂದರೆ ತಕರಾರುಗಳು ಬಂದಾಗ ಹರಕೆ ಕೊಡುವ ಪದ್ಧತಿಯು ಇಂದಿಗೂ ಸಹ ಇದೆ.

ಈ ಒಂದು ಮಾಸ್ತಕಾನ 165–20 ಗುಂಟೆ ಜಾಗವನ್ನು ವ್ಯಾಪಿಸಿದೆ. ಅಲ್ಲಿ ಸುರಗಿ ಮರಗಳು ಜಾಸ್ತಿ ಇದ್ದು, ದೇವರ ಕಾಡು ಎಂಬ ನಂಬಿಕೆಯಿಂದ ಮರಗಳನ್ನು ಯಾರು ಕಡಿಯದೆ, ಅಲ್ಲದೆ ಅಲ್ಲಿಯ ಯಾವುದೇ ವಸ್ತುವನ್ನು ಸಹ ಮುಟ್ಟುವುದಿಲ್ಲ.

ಹೊನ್ನಾವರ ತಾಲೂಕಿನ ಹೆಬ್ಬಾರ ಕೇರಿಯಲ್ಲಿ 2 ಎಕರೆ ವ್ಯಾಪ್ತಿಯ ಪ್ರದೇಶವನ್ನು "ಯಕ್ಷಿಣಿ ವನ" ಎಂದು ಕರೆಯುತ್ತಾರೆ. ಈ ಭಾಗದಲ್ಲಿ ಎರ್ಜಲು ಮತ್ತು ಸುರಗಿ ಮರಗಳು ಜಾಸ್ತಿ ಇದ್ದು ಈ ವೃಕ್ಷಗಳ ಅಡಿಯಲ್ಲಿ ಹುಲಿಯಪ್ಪ, ನಾಗದೇವತೆ, ಭೂತ, ಚೌಡಿ, ಕ್ಷೇತ್ರಪಾಲ ಹೀಗೆ ಎಲ್ಲ ದೇವರುಗಳ ವಿಗ್ರಹವಿದ್ದು ವೈಶಾಖ ಶುದ್ಧ ನವಮಿಯಂದು ಪೂಜೆ ಮಾಡುತ್ತಾರೆ. ಈ ಒಂದು ದೇವರ ಗುತ್ತಿಗೆ ಘಟ್ಟದ ಮೇಲಿನ ಜನರು ಸಹ ಪೂಜೆಯಲ್ಲಿ ಪಾಲ್ಗೊಳ್ಳುತ್ತಾರೆ. ಮೊದಲು ಇದಕ್ಕೆ ಕೋಳಿ, ಕುರಿ, ಕೊಡುವ ಪದ್ಧತಿ ಇತ್ತು. ಆದರೆ ಈಗ ಅದನ್ನು ನಿಷೇಧಿಸಲಾಗಿದೆ. ಇಲ್ಲಿ ಕೀಳು ಜಟಕಗಳಿಗೆ ನಡೆದುಕೊಳ್ಳುವ ಜನಾಂಗವೇ ಬೇರೆ ಇದ್ದಾರೆ. ಸ್ಥಳದಲ್ಲಿಯೇ ಅಡಿಗೆ ಮಾಡಿ ಊಟ ಮಾಡುವ ಪದ್ದತಿ ಇದೆ. ಸುತ್ತಲಿನ ಮರಗಳನ್ನು ದೇವರ ಕಾಡು ಎಂದು ತಿಳಿದು ಕಡಿಯಲು ನಿಷೇಧಿಸಲಾಗಿದೆ.

ಮಣ್ಣೂದ್ದರಿನ ಗ್ರಾಮದೇವರ ಹೆಸರಿನಲ್ಲಿ ವರ್ಷಕ್ಕೊಂದು ಹಬ್ಬವನ್ನು ಆಚರಿಸುತ್ತಾರೆ. ಅದನ್ನೇ ವನದೇವತೆ ಹಬ್ಬ ಅಂಥ ಕರೆಯುತ್ತಾರೆ. ನಮ್ಮ ಪೂರ್ವಜರು ನಂಬಿಕೆಗೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಟ್ಟಿದ್ದಾರೆ. ಅಲ್ಲದೇ ಆ ನಿಟ್ಟಿನಲ್ಲಿ ದೇವರಕಾಡು ಎಂಬ ಪವಿತ್ರ ಭಾವನೆಯಿಂದ ಅರಣ್ಯವನ್ನು ಇಂದಿಗೂ ಸಂರಕ್ಷಣೆ ಮಾಡುತ್ತ ಬಂದಿದ್ದಾರೆ. ಅಂತೆಯೇ ಮಣ್ಣೂದ್ದರಿನ ಗ್ರಾಮಸ್ಥರೆಲ್ಲರು ಸೇರಿ ಪವಿತ್ರ ಭಾವನೆಯಿಂದ ಗ್ರಾಮದೇವರ ಹೆಸರಿನಲ್ಲಿ ವನಕ್ಕೆ ಪೂಜೆ ಮಾಡಿ ಅಲ್ಲಿಯೇ ಊಟ ಮಾಡುವ ಪದ್ಧತಿಯನ್ನು ಇಂದಿಗೂ ಕಾಣುತ್ತೇವೆ.

ಒಮ್ಮೆ ಅರಣ್ಯದಲ್ಲಿ ಶೀಲಿಗನ (ಸಾತ್ವಿಕನೊಬ್ಬನ) ದನ ಕಾಯುವವನಿಗೆ ಅರುಣೋದಯದ ಸಂದರ್ಭದಲ್ಲಿ ಕನಸಿನಲ್ಲಿ ಬಾ ಎಂದು ಕರೆದು ತನ್ನ ನಿಜರೂಪವನ್ನು ತೋರಿದಳು. ಕನಸಿನ ಬಗ್ಗೆ ತಿಳಿದ ಶೀಲಿಗನು ಸಂತೋಷದಿಂದ ಬಂದು ನೋಡಲು ಹೆಣ್ಣಿನ ರೂಪವನ್ನು ತಳೆದ ಅರ್ಧಮುಖದ ವಿಗ್ರಹ ಸ್ಥಿರವಾಯಿತು.

ಮುಂದೆ ಆತನು ಬ್ರಾಹ್ಮಣರನ್ನು ಕರೆದು ವೇದಮಂತ್ರ ಮಾಡಿಸಿ ಹಣ್ಣುಕಾಯಿ ನೀಡಿ ಆ ದಿನದಂದು ಗ್ರಾಮ ದೇವತೆಯಾಗಿ ಪೂಜಿಸಲ್ಪಟ್ಟಳು ಇದನ್ನು ಕಾನಮ್ಮ ಎಂತಲೂ ಕರೆಯುತ್ತಾರೆ.

ಈ ಗ್ರಾಮದವರು ಈ ದೇವರಿಗೆ ವರ್ಷಕ್ಕೊಂದು ದಿನ ಹಬ್ಬವನ್ನು ಮಕರ ತಿಂಗಳ ಪುಷ್ಯ ಅಮವಾಸ್ಯೆಯ ಮಧ್ಯಾಹ್ನ ಮತ್ತು ರಾತ್ರಿ ಪೂಜೆ ಮಾಡುವರು . ಇಲ್ಲಿ ಗ್ರಾಮದೇವತೆಯ ಸುತ್ತಮುತ್ತ ಸಾಲ್ಕಣಿ ಗ್ರಾಮದ ಬ್ರಾಹ್ಮಣರು ಚಪ್ಪರವನ್ನು ಹಾಕುವರು. ಹಕ್ರೆ ಮನೆಯವರು ವಡೆ ಹಿಟ್ಟನ್ನು ಕಲಸುವರು. ಯಚಡಿ ಮಠದವರು ಎಣ್ಣೆಯನು ತಂದು ವಡೆ ಸುಡುವರು. ಇನ್ನೂ ಮಣ್ಣೂದ್ದರಿನವರು ಬಂದಿದ್ದಾರೆ. ಅಲ್ಲದೇ ಇವರು ಮಾಡುವಂಥ ಅಡಿಗೆ ಒಲೆಗಳು ಸಹ ಪ್ರತ್ಯೇಕವಿದೆ. ಇವರು ಅಡಿಗೆ ಪದಾರ್ಥಗಳನ್ನು ಕೊನೆಯವರೆಗೂ ಇವರೇ ಬಡಿಸಬೇಕು.

ರೋಗ, ದಾರಿದ್ರ್ಯದ ಬಾಧೆಗಳು ತಾಗಲು ಗ್ರಾಮ ನಿವಾಸಿಗಳೂ ಅಮ್ಮನವರ ಸ್ಥಾನಕ್ಕೆ ಬಂದು ಹರಕೆ ಪೂಜೆಯನ್ನು ಕೊಟ್ಟು ತಮ್ಮ ಕಷ್ಟವನ್ನು ಕಳೆಯುವರು. ತೊಟ್ಟಿಲು ಶಿಶು, ಉಡಿ ಸೀರೆಗಳು ಅಲ್ಲದೇ ವಡೆ ಪಾಯಸಗಳ ನೈವೇದ್ಯವನ್ನು ಕೊಟ್ಟು ಪೂಜೆ ಮಾಡುವರು.

ಇನ್ನೂ ಈ ಗ್ರಾಮದೇವರಿಗೆ ಮಳೆಗಾಲದವ ಅರಿದ್ರ ನಕ್ಷತ್ರದ ಮಂಗಳವಾರ ಮಳೆ ಬೆಳೆಗಳಿಗೆ ಸಂಬಂಧ ಪಟ್ಟ ಕೋಳಿಕುರಿ, ಹಂದಿ ಹರಕೆ ಕೊಡುವ ಪದ್ಧತಿ ಶಿಲೀಗರಲ್ಲಿದ್ದರೆ ಬ್ರಾಹಣರು ಎರಡು ಫಲವನ್ನು ನೀಡುವ ಪದ್ಧತಿ ಇದೆ.

ಕೋಳಿಗಾರಿನ ಮುದ್ದಿನ ಪಾಲದಲ್ಲಿಯ ಅಮ್ಮನವರಿಗೆ ಹಬ್ಬವೆಂದು ವರ್ಷಕ್ಕೊಂದು ಪೂಜೆಯನ್ನು ಇಡೀ ಗ್ರಾಮಸ್ಥರೆಲ್ಲರು ಸೇರಿ ವರ್ಷದ ಮೃಗಶಿರ ನಕ್ಷತ್ರದ ಮೊದಲ ಹಾಗೂ ಎರಡನೇ ಸೋಮವಾರ ಪೂಜೆ ಕೊಡುತ್ತಾರೆ. ಇಲ್ಲಿ ಪುರಾತನವಾದ ಅಡಚರೆ ಎಂಬ ಮರ 300 ಚದರ ವಿಸ್ತೀರ್ಣದಲ್ಲಿ ಹಬ್ಬಿದ್ದು 60–70 ಗುತ್ತುಗಳು ಇವೆ. ಮುಖ್ಯ ಗುತ್ತುಗಳಲ್ಲಿ ಗ್ರಾಮದ ಪ್ರತಿಯೊಂದು ಮನೆಯವರ ಮನೆದೇವರನ್ನ ಇಟ್ಟು ಪೂಜಿಸುವ ರೂಢಿ ಇದೆ. ವಿಶೇಷವಾಗಿ ವಡೆ ಪಾಯಸ, ಅನ್ನ, ನೈವೇದ್ಯ ಮನೆಗೆ ಬಂದು ಊಟ ಮಾಡುವ ಪದ್ಧತಿ ಇದೆ. ವಿಶೇಷವಾಗಿ ಸೀರೆ, ಸಂತಾನ ಪ್ರಾಪ್ತಿಗೆ ತೊಟ್ಟಿಲು ಹರಕೆ ಕೊಡುವ ಪದ್ಧತಿ ಇದೆ.

ಫಲವಂತಿಕೆಯ ಸಂಧರ್ಭದಲ್ಲಿ ಪೈರಿನ ತೆನೆಯನ್ನು ಮೊದಲು ವನದೇವತೆಗೆ ಅರ್ಪಿಸಿಯೇ ನಂತರದಲ್ಲಿ ಹೊಲಗಳಲ್ಲಿ ಗದ್ದೆಕೊಯ್ಯಲು ಶುರು ಮಾಡುವರು.

15–20 ಗುಂಟೆ ವ್ಯಾಪ್ತಿಯ ಪ್ರದೇಶವನ್ನು ದೇವರ ಹೆಸರಿನಲ್ಲಿ ಕಾಯ್ದಿರಿಸುತ್ತಾ ಬಂದಿದ್ದಾರೆ. ಈ ಒಂದು ಪ್ರದೇಶಕ್ಕೆ ಗಡಿ ಮಾಡಿದುದಲ್ಲದೆ, ಬರುವಂಥ ಜನರಿಗೆ ವರ್ಷಕ್ಕೊಂದು ದಿವಸದ ಹೊರತಾಗಿ ಉಳಿದ ದಿವಸ ನಿಷೇಧವನ್ನು ಹೇರಲಾಗಿದೆ.

ಹೊನ್ನಾವರ ತಾಲೂಕಿನ ಅರೆ ಅಂಗಡಿ ಬಳಿಯ ಕರಿಕಾನಮ್ಮನ ಗುಡ್ಡ ಹಾಗೂ ಅರಣ್ಯ ಪ್ರದೇಶದಲ್ಲಿ ದೇವರ ಕಾಡಾಗಿ ಬಿಡಲ್ಪಟ್ಟಿದೆ. (ಕರಿಕಾನ ಪರಮೇಶ್ವರಿ) ಈ ಪ್ರದೇಶದವರ ಆರಾಧ್ಯ ದೇವಿಯಾಗಿದ್ದಾಳೆ.

ಹುಲಿದೇವರು

ಹುಲಿದೇವರು ಗಡಿಹೊತ್ತಿನಲ್ಲಿ ಪೂಜೆ (ಹನಿ ಹಿಡಿಯುವ ಸಂದರ್ಭದಲ್ಲಿ ಪೂಜೆ) ಹುಲಿದೇವರ ಹತ್ತಿರ ಹುಲ್ಲು ಬೆಳೆದಿರುವ ದೊಡ್ಡ ಕಾಡುಗಳು ಇರುತ್ತವೆ. ಇದು ಹುಲಿದೇವರ ಕಾಡು ಎಂದು ಹೆಸರು ಪಡೆದಿದೆ. ಹುಲಿದೇವರ ಪೂಜೆ. ವಿಶೇಷವಾಗಿ ಒಕ್ಕಲು ಮಂದಿಗೆ ಸಂಬಂಧಪಟ್ಟಿರುತ್ತದೆ. ಹುಲಿದೇವರ ಎದುರಿನಲ್ಲಿ ತಾನಾಗಿಯೇ ಕುಂಭಗಳು ಹಾಗೂ ದೇವರ ಮುಖಗಳು ಮಣ್ಣಿನಿಂದ ಮೂಡಿಬರುವ ಪದ್ಧತಿ

ಇದೆ. ಇವು ಹುಲಿ ದೇವರ ಹೆಸರಿನಲ್ಲಿ ಹರಕೆ ಹೊತ್ತು ಹಿಂದಿನಿಂದಲೂ ಹುಲಿದೇವರ ಮುಖಗಳನ್ನೂ, ಕುಂಭಗಳನ್ನೂ ಹುಲಿದೇವರಿಗೆ ತಂದು ಅರ್ಪಿಸುವ ಪದ್ಧತಿ ನಡೆದು ಬಂದಿದೆ ಹಾಗೆ ಹಿಂದಿನಿಂದಲೂ ಅರ್ಪಿಸಲಾದ ಹುಲಿ ಮುಖಗಳು ಕುಮಭಗಳೂ ಈಗ ಮಣ್ಣಿನಿಂದ ಮೂಡಿಬರುತ್ತಿದೆ. ಹುಲಿ ದೇವರಿಗೆ ಇದೊಂದು ಆಶ್ಚರ್ಯಕರ ಮತ್ತು ವೈಜ್ಞಾನಿಕ ಸಂಶೋಧನೆಗೆ ಒಳಪಡಿಸುವ ವಿಶೇಷತೆ ಇದೆ. ಹುಲಿದೇವರಿಗೆ ಅನೇಕ ಹರಕೆ, ಹರಣ ಹೊತ್ತುಕೊಳ್ಳುತ್ತಾರೆ. ಸಾಂಸರ್ಗಿಕ ರೋಗ ದನಕರುಗಳಿಗೆ ಬಂದರೆ ಹರಕೆ ಹೊತ್ತುಕೊಳ್ಳುತ್ತಾರೆ. ಒಳಗೆ ದೀಪ ಹಚ್ಚುವ ಪದ್ಧತಿ ಇದೆ. ಇದಕ್ಕೆ ತೈಲಾಭಿಷೇಕದ ಸಂಪ್ರದಾಯ ಇದೆ. ಇದರ ಸುತ್ತಲು ಬೆಳೆದ ಕಾಡನ್ನು ಕಡಿಯುವುದಿಲ್ಲ.

ಸಾಲ್ಕಣಿ ಸಮೀಪದ ಮಣ್ಣೂರು ಗ್ರಾಮದಲ್ಲಿ ಪಾಳ್ಯದ ಬೈಲಿನ ಬಸವನ ಹೊಳೆಯ ಪಕ್ಕ ಹುಲಿದೇವರ ಕಾಡು ಇದೆ. ಈ ಹುಲಿಗೆ ವರ್ಷಕ್ಕೆ ಎರಡು ಬಾರಿ ಪೂಜೆ ನಡೆಯುತ್ತದೆ. ದೀಪಾವಳಿ ಹಬ್ಬದ ನರಕ ಚತುರ್ದಶಿ ದಿವಸ ಶೀಲಿಗರ ಗೌಡನು ಗ್ರಾಮದಲ್ಲಿನ ಪ್ರತಿ ಮನೆಗೆ ಹೋಗಿ ಕಾಯಿ, ತುಪ್ಪವನ್ನು ತಂದು ಪೂಜೆ ಮಾಡಿ ಪ್ರಸಾದವನ್ನು ಮರುದಿವಸ ಕೊಡುವ ಪದ್ಧತಿ ಇದೆ.

ಅಲ್ಲದೆ ಇದಕ್ಕೆ ಜೇಷ್ಠಮಾಸದಲ್ಲಿ ಹನಿ ಹಬ್ಬವನ್ನು ಸಹ ಮಾಡುತ್ತಾರೆ. ಕಾಯಿ ಹಣ್ಣು ನೈವೇದ್ಯ ಮಾಡುವ ಪದ್ಧತಿ ಇದೆ.

ತಾವು ಸಾಕಿದ ದನಕರುಗಳಿಗೆ ಯಾವುದೇ ರೀತಿಯ ತೊಂದರೆ ಕೊಡದಿರಲೆಂದು ಹುಲಿದೇವರ ಹೆಸರಿನಲ್ಲಿ ವರ್ಷಕ್ಕೊಂದು ಪೂಜೆಯನ್ನು ಕೊಡುತ್ತಾರೆ. ತಾವು ಬೆಳೆದ ಫಸಲನ್ನು ಮೊದಲ ಬಾರಿಗೆ ಹುಲಿದೇವರಿಗೆ ನೈವೇದ್ಯ ಕೊಟ್ಟು ಊಟ ಮಾಡುವ ಪದ್ಧತಿ ಇದೆ. ಇದನ್ನು ಹೊಸ ಅಕ್ಕಿ ಹಬ್ಬ ಎಂತಲು ಕರೆಯುತ್ತಾರೆ. ಹುಲಿದೇವರ ಜಾಗದಲ್ಲಿ ಅಶುದ್ಧವೇನಾದರೂ ಆದರೆ ಹುಲಿ ಕೂಗುವ ಶಬ್ದ ಕೇಳಿಸುತ್ತದೆ ಎಂಬುದು ಇವರ ನಂಬಿಕೆ ಅದಕ್ಕೆ ಪರಿಹಾರವಾಗಿ ಶೀಲಿಗನೆ ಶುದ್ಧ ಮಾಡಿಕೊಳ್ಳುತ್ತಾನೆ. ಕುದ್ರಗೋಡ ಭಾಗದಲ್ಲಿ ಸಹ ಇದೇ ರೀತಿಯಲ್ಲಿ ಹುಲಿದೇವರಿಗೆ ಪೂಜೆಯನ್ನು ಕೊಡುತ್ತಾರೆ. ಇಲ್ಲಿ ಕರೆ ಒಕ್ಕಲಿಗರೇ ನಡೆದುಕೊಳ್ಳುವ ಪದ್ಧತಿ ಇದೆ.

ಹೊನ್ನಾವರ ತಾಲೂಕಿನ ಜಲವಳ್ಳಿ ಗ್ರಾಮಸ್ಥರು ವರ್ಷದ ಒಂದು ದಿವಸ ಹಣ್ಣುಕಾಯಿ ಕೊಡುವ ಮೂಲಕ ತಮ್ಮ ಸಾಕುಪ್ರಾಣಿಗಳ ರಕ್ಷಣೆಗಾಗಿ ಹುಲಿಯ ಹೆಸರಿನಲ್ಲಿ ಒಂದು ವಿಗ್ರಹವನ್ನಿಟ್ಟು ಪೂಜೆ ಮಾಡುವ ಆ ಭಾಗದ ದೇವರ ಕಾಡೆಂದು ಇಂದಿಗೂ ಸಂರಕ್ಷಿಸುತ್ತ ಬಂದಿದ್ದಾರೆ.

ಇನ್ನೂ ಅಂಕೋಲಾ ತಾಲೂಕಿನ ಕುಂಟಕಣಿ ಗ್ರಾಮಸ್ಥರೆಲ್ಲರೂ ಸಹ ದೀಪಾವಳಿ ಹಬ್ಬದ ಮೊದಲ ದಿನದಂದು ಹುಲಿದೇವರಿಗೆ ಪೂಜೆ ಕೊಡುವೆ ಪದ್ಧತಿ ಇದೆ. ತಮ್ಮ ತಮ್ಮ ಮನೆಯ ದನಗಳ ಬಾಲಕ್ಕೆ ಒಂದರಂತೆ ಕಾಯಿ ಒಡೆಸುವ ಪದ್ಧತಿ ಇದೆ. ಆ ದಿವಸ ಮೇಲ್ವರ್ಗದವರ ಮನೆಯಲ್ಲಿ ದನ ಬೆಚ್ಚಿಸುವ ಪದ್ಧತಿ

ಇದೆ. ಅಂದರೆ ದನಕರುಗಳಿಗೆ ವಿಶೇಷ ಅಡಿಗೆ ಮಾಡಿ ಬಡಿಸುವರು ಅಲ್ಲದೇ ಕಾಯಿಕಡಿ ಮತ್ತು ಹಣ್ಣಾದ ಅಡಿಕೆಯನ್ನು ಕಟ್ಟೆ ಸಿಂಗರಿಸಿ ಹೊಸ ದನ ಬಿಡುವ ಶಾಸ್ತ್ರವೂ ಇದೆ. ಇಲ್ಲಿ ಅರಣ್ಯ ಸಂರಕ್ಷಣಯೆ ಜೊತೆಗೆ ಪ್ರಾಣಿ ಸಂರಕ್ಷಣೆಯೂ ಸಹ ಕಂಡುಬಂದಿದೆ.

ಬನವಾಸಿಯ ಕ್ಯಾದಗಿಕೊಪ್ಪ ಅಂಡಗಿಯಲ್ಲಿ ದೀಪಾವಳಿಯಲ್ಲಿ ಹುಲಿದೇವರ ಪೂಜೆಯನ್ನು ಮಾಡುತ್ತಾರೆ. ಈ ಒಂದು ಪ್ರಾಣಿಯ ಪೂಜೆಯಿಂದ ಆ ಭಾಗದ ಕಾಡನನು ಹುಲಿದೇವ ಕಾಡು ಎಂಬ ಹೆಸರಿನಿಂದ ಸಂರಕ್ಷಿಸಲ್ಪಟ್ಟಿದೆ. ಇದರ ವ್ಯಾಪ್ತಿ 5–30 ಎಕರೆ ವಿಸ್ತೀರ್ಣವನ್ನು ಹೊಂದಿದೆ. ವರ್ಷಕ್ಕೊಮ್ಮೆ ಜಾತ್ರೆಯು ನಡೆಯುತ್ತದೆ. ಸಂತಾನ ಪ್ರಾಪ್ತಿ, ಕೌಟುಂಬಿಕ ಸಮಸ್ಯೆಗಳಿಗೆ ಸಮಸ್ಯೆಗಳಿಗೆ ಸಂಬಂಧ ಪಟ್ಟು ರಕ್ತ ಬಲಿ, ಕೋಳಿ–ಕುರಿಗಳ ಹರಕೆ ಕೊಟ್ಟು ಅಡಿಗೆ ಮಾಡಿ ಮಾಡುವ ಪದ್ಧತಿ ಇದೆ.

ದೇವರ ಕಾಡುಗಳು ಮತ್ತು ಟೆರ್ರಾಕೋಟ ಶಿಲ್ಪಗಳು

ಜೇಡಿಮಣ್ಣು ಮತ್ತು ಮನುಷ್ಯನ ಸಂಬಂದವು ನಾಗರೀಕತೆಯಷ್ಟೇ ಹಳೆಯದು. ಮಣ್ಣನ್ನು ವಾಸಿಸುವ ಮನೆಗಳನ್ನು ನಿರ್ಮಿಸಲು ಬಳಸಲಾಗುತ್ತಿತ್ತು, ಆಹಾರ ಮತ್ತು ನೀರು ಶೇಖರಿಸಲು ಮಡಿಕೆಗಳನ್ನು ಅವಲಂಭಿಸಿದ್ದರು. ಶಿಲಾಯುಗದಿಂದ ಸಮಕಾಲೀನ ಯುಗದವರೆಗೂ ಮಣ್ಣಿನ ಅವಲಂಭನೆ ಮುಂದುವರೆದಿದೆ. ವಿಶೇಷನಾಗಿ ಗ್ರಾಮೀಣ ಮತ್ತು ಬುಡಕಟ್ಟು ಬಾಗದಲ್ಲಿ ಮಣ್ಣಿನ ವಿಬಿನ್ನ ಸಾಮಾತ್ಯಗಳನ್ನು ಅನೇಕ ಉಪಯೋಗಗಳೊಂದಿಗೆ ಭಾರತದ ಸಂಸ್ಕೃತಿಯು ಮಣ್ಣನ್ನು ಉಪಯೋಗಿಸುತ್ತಾ ಬಂದಿದೆ.

ದೇವರ ಕಾಡು ಮಣ್ಣಿನ ಸಂಪ್ರಾದಾಯದೊಂದಿಗೆ ನಿಖಟವಾದ ಸಂಪರ್ಕಹೊಂದಿದ್ದು ಮಾತೃದೇವರೆಯ ಆರಾಧಕರಾದ ಭಾರತೀಯರು ಜೇಡಿಮಣ್ಣಿನಿಂದ ಭೂಮಿದೇವಿ, ವೀರರು, ಪಶುಪ್ರಾಣಿ ಪಕ್ಷಿಗಳನ್ನು ದೇವತೆಗಳೆಂದು ಬಾವಿಸಿ ಇಂತಹ ಪವಿತ್ರ ವನಗಳಿಗೆ ಸಮರ್ಪಿಸಿದ್ದಾರೆ. ಸುಡಾವೆ ಮಣ್ಣಿನ ಶಿಲ್ಪಗಳು ಇಂತಹ ಪವಿತ್ರವನಗಳಿಗೆ ಬಹಳ ಮುಖ್ಯವಾದವುಗಳು. ಈ ಪವಿತ್ರ ವನ ಅಥವಾ ದೇವರಕಾಡುಗಳಿಗೆ ಪ್ರಮುಖವಾಗಿ ಅರ್ಪಣೆಗೊಳ್ಳುವಂಥವುಗಳು ಕುದುರೆ, ಗೂಳಿ, ನಾಯಿ, ಆನೆ, ಮತ್ತೆ ಟಗರು ಹೆಚ್ಚಾಗಿ ಈ ಶಿಲ್ಪಗಳನ್ನು ಜೇಡಿಮಣ್ಣಿನಿಂದ ಮಾಡಲ್ಪಟ್ಟಿರುತ್ತದೆ. ಮತ್ತು ಅವುಗಳು ಬಂದ ಮಣ್ಣಿಗೆ ಹಿಂದಿರುಗಲು ಮುಕ್ತವಾಗಿರುತ್ತದೆ. ಸಾಕುಪ್ರಾಣಿಗಳ ಶಿಲ್ಪಗಳನ್ನು ಶ್ರದ್ದೆಯಿಂದ ದೇವರ ಕಾಡುಗಳಿಗೆ ಅರ್ಪಿಸುವುದು ಆಸಕ್ತಿದಾಯಕವಾಗಿದೆ. ಪ್ರಾಣಿಗಳ ಚಿತ್ರಣವು ಮಾಡಬೇಕಾದಾಗ ಹಲವು ಭಾಗಗಳಾಗಿ ತಯಾರಿಸಲ್ಪಡುತ್ತದೆ. ಮೊದಲು ನಾಲ್ಕುಕಾಲುಗಳು ನಾಂತರ ದೇಹ, ತಲೆ, ನಂತರ ಮುಖದ ಲಕ್ಷಣಗಳು ಹಾಗೂ ಅಲಂಕಾರಿಕ ವಸ್ತುಗಳು ಕೊನೆಯಲ್ಲಿ ಬರುವಂತೆ ನೋಡಿಕೊಳ್ಳುತ್ತಾರೆ ಇವುಗಳು ವನಗಳನ್ನು ಸ್ಥಾಪಿಸಲು ಒಂದು ದೃಷ್ಟಿಕೋನಗಳನ್ನು ನೀಡುತ್ತದೆಂದು ನಂಬುತ್ತಾರೆ.

ಭಾರತೀಯ ಉಪಖಂಡದಲ್ಲಿ ಆರಂಭಿಕ ಸುಡಾವೇ ಶಿಲ್ಪಗಳನ್ನು ಝೋಗ್ ಮತ್ತು ಕುಲ್ಲಿ ಸಂಸ್ಕೃತಿಗಳಲ್ಲಿ (ಕ್ರಿ.ಪೂ3000) ಇದ್ದವೆಂದು ಪುರಾತನ ಗ್ರಂಥಗಳಿಂದ ಪತ್ತೆಹಚ್ಚಬಹುದು, ಅದರ ನಂತರದಲ್ಲಿ ಹರಪ್ಪನ್ ನಾಗರೀಕತೆಯಲ್ಲಿ ಕಂಡುಬರುತ್ತದೆ. ಮುಂದಿನ ಟೆರ್ರಾಕೋಟಗಳ ಪ್ರಮುಖ ಹಂತವೂ ಮೌರ್ಯ ಅವಧಿಯಲ್ಲಿ ಕಂಡುಬರುತ್ತದೆ.

1) ಮೃಣ್ಮಯ ಶಿಲ್ಪ

ಮನುಷ್ಯನು ಮಧ್ಯಶಿಲಾಯುಗದಿಂದ ನವಶಿಲಾಯುಗಕ್ಕೆ ಕಾಲಿಟ್ಟ ತರುಣದಲ್ಲಿಯೇ ಜೇಡಿ ಮಣ್ಣಿನ ಪಾತ್ರೆಗಳನ್ನು ಉಪಕರಣಗಳನ್ನೂ ಮಾಡಲು ಕಲಿತನು. ಮಧ್ಯ ಪ್ರಾಚ್ಯದಲ್ಲಿಯೂ ಮೆಡಿಡರೇನಿಯನ್ ಪ್ರದೇಶದಲ್ಲಿಯೂ ಬೇಸಾಯವನ್ನು ಹಿಡಿದ ಜನ ನೆಲೆಸಲಾರಂಭಿಸಿದ ಕಾಲ ಅದು. ಮೊದ ಮೊದಲಿನ ಮಣ್ಣಿನ ಪಾತ್ರೆಗಳು ಸೋರೆ ಬುರುಡೆಯಂತೆ ಇರುತ್ತಿದ್ದವು. ಬಿದಿರಿನಿಂದ ಮಾಡಿದ ಬುಟ್ಟಿಗಳನ್ನೋ ನಿಸರ್ಗದಲ್ಲಿ ಪಾತ್ರೆಗಳಂಥ ಪದಾರ್ಥಗಳನ್ನೋ ಅನುಕರಿಸಿರುತ್ತಿದ್ದುವು. ಪ್ರಾಚೀನ ಶೋಧಗಳಲ್ಲಿ ದೊರೆತ ಇಂಥ ಮಣ್ಣಿನ ಪಾತ್ರೆಗಳು ಹೆಂಗಸರ ಕೈ ಕೆಲಸವೇ ಎನ್ನುವುದು ಸ್ಪಷ್ಟವಾಗುತ್ತದೆ. ಮೊದಲು ಉಪಯೋಗಕ್ಕೆಂದು ಮಾತ್ರ ಸಿದ್ಧವಾದ ಪಾತ್ರೆಗಳು ಬರಬರುತ್ತ ಕಲಾತ್ಮಕವಾದವು. ಮುಂದೆ ಕೇವಲ ಕಲಾಕೃತಿಗಳೂ ಒದಗಿಬಂದುವು.

ಜೇಡಿಮಣ್ಣಿನಲ್ಲಿ ಪಾತ್ರೆ ಮೊದಲಾದ ಪದಾರ್ಥಗಳನ್ನು ಮಾಡಿದ ಮೇಲೆ ಅದನ್ನು ಸುಡುವುದರ ಗುಟ್ಟನ್ನೂ ಮನುಷ್ಯ ತುಂಬ ಹಿಂದೆಯೇ ಅರಿತುಕೊಂಡ. ಮಣ್ಣಿನ ವಸ್ತುಗಳನ್ನು ಸುಡದೆ ಇಟ್ಟರೆ ಅವು ಒಡೆಯಬಹುದು, ಬಿರಿಯಬಹುದು. ನೀರು ಸೇರಿದರೆ ಕರಗಬಹುದು, ಮಣ್ಣಿನ ಹೆಕ್ಕಳಿಕೆ ಬೀಳಬಹುದು. ಈ ತೊಂದರೆಗಳಿಂದ ತಪ್ಪಿಸಲು ಮಣ್ಣಿನ ಪದಾರ್ಥವನ್ನು ಸುಡುತ್ತಾರೆ. ಸುಟ್ಟಾಗ ಆ ಮಣ್ಣಿನಲ್ಲಿ ಭೌತಿಕ ಮತ್ತು ರಾಸಾಯನಿಕ ಪರಿವರ್ತನೆಗಳೊದಗಿ ಕಲ್ಲಿನಂತೆ ಗಟ್ಟಿಯಾಗುತ್ತದೆ. ಮೊದಲು ಮಣ್ಣಿನ್ನಿದ್ದ ಅವಶೋಷಕ ಗುಣವೂ ಮೆದುಸ್ವಭಾವವೂ ಮರೆಯಾಗುತ್ತದೆ. ಮಣ್ಣನ್ನು ಸಣ್ಣಗೆ ಸಣ್ಣಗೆ ಪುಡಿಮಾಡಿದರೂ ಈ ಗುಣಗಳೂ ಅದರಲ್ಲಿ ಮತ್ತೆ ಬರಲಾರವು. ಗಾಳೀಗೆ ಬಹುಕಾಲ ಇಟ್ಟರೂ ಮಣ್ಣೀನಲ್ಲಿರುವ ಗಾಳೀಯ ಅಂಶ ಆಗಿ ಹೋಗಿ ಗಟ್ಟಿಯಾಗಬಹುದು, ಆದರೆ ನೀರು ನಿಶೇಷವಾಗಿ ಮಾಯವಾಗಬೇಕೆಂದರೆ ಸುಡುವುದೊಂದೇ ಉಪಾಯ. ಜೇಡಿಮಣ್ಣಿನಲ್ಲಿರುವ ಅಲ್ಯೂಮಿನಿಯಂ ಸಿಲಕೇಟ್, ಹೈಡ್ರೇಟ್ ಎನ್ನುವ ಮುಖ್ಯ ಸಂಘಟಕವು ಮೂಲ ವಿವರಗಳಲ್ಲಿ ನಿರ್ಜಲವಾಗುತ್ತದೆ. ಇದೇ ಸುಡುವುದರ ಉದ್ದೇಶ.

ಜೇಡಿಮಣ್ಣಿನಲ್ಲಿ ಈ ಸಂಘಟಕವಲ್ಲದೆ ಮರಳಿರುವುದುಂಟು. ಕಬ್ಬಿಣದ ತುಣುಕುಗಳಿರುವುದುಂಟು. ಜೇಡಿಮಣ್ಣೂ ಸಾಮಾನ್ಯವಾಗಿ ಕಪ್ಪು ಬಣ್ಣದ ಛಾಯೆಯಲ್ಲಿವುರುದಿಲ್ಲವೆ? ಅದಕ್ಕೆ ಅದರಲ್ಲಿ ಅಡಗಿರುವ

ಕಬ್ಬಿಣದ ಅಂಶವೇ ಕಾರಣ. ಮಣ್ಣನ್ನು ಸುಟ್ಟಾಗ ಈ ಕಬ್ಬಿಣದ ಭಾಗದಲ್ಲಿ ಹೆಚ್ಚು ಪಾಲು ಫೆರಸ್ ಆಕ್ಸೈಡ್ ಆಗಿ ಪರಿವರ್ತಿತವಾಗಿ ಬಿಡುತ್ತದೆ. ಸುಟ್ಟ ಜೇಡಿ ಮಣ್ಣು ಕೆಂಪು ಬಣ್ಣಕ್ಕೆ ತಿರುಗುವುದು ಈ ಕಾರಣದಿಂದಲೇ. ಸುಟ್ಟ ಜೇಡಿಮಣ್ಣಿಗೆ 'ಟೆರ್ರ ಕೋಟ್ಟ' ಎನ್ನುವ ಇಟಾಲಿಯನ್ ಹೆಸರಿದೆ. ಈಗ ಬಹುವಾಗಿ ಬಳಕೆಯಲ್ಲಿರುವ ಈ ಮಾತು 1722ರ ಸುಮಾರಿಗೆ ಸಿದ್ಧವಾಯಿತು. ಲ್ಯಾಟಿನಿನ 'ಟೆರ್ರ ಕಾಕ್ಟ' ಎನ್ನುವ ಮಾತು ಇದರ ಮೂಲ. ಇದಕ್ಕೆ 'ಸುಟ್ಟ ಮಣ್ಣು' ಎಂದಷ್ಟೇ ಅರ್ಥ. ಆದರೆ 1801ರ ಸುಮಾರಿಗೆ ಸುಟ್ಟ ಮಣ್ಣಿನಿಂದ ಮಾಡಿದ ಕಲಾಕೃತಿಗಳು ಎನ್ನುವ ವಿಶೇಷಾರ್ಥವೇ ನಿಂತಿತು. ಅಲಂಕರಣಕ್ಕಾಗಿ ಮಾಡಿದ ಹೆಂಚುಗಳು, ಪಾತ್ರೆಗಳು, ಕಲಾಕೃತಿಗಳು ಮಣ್ಣಿನಲ್ಲಾಗಿ, ಮೆರಗನ್ನು ಹಾಕದೆ ಸುಟ್ಟು ಸಿದ್ಧವಾದುವಕ್ಕೆ ಈ ಹೆಸರು ಬಳಕೆಗೆ ಬಂದಿತು. ಪ್ರಾಚೀನ ರೋಮನ್ 'ಟೆರ್ರ-ಕೋಟ್ಟ'ಗಳನ್ನು ಬ್ರಿಟಿಷ್ ಮ್ಯೂಸಿಯಂ 1810ರ ವೇಳೆಗೆ ಸಂಗ್ರಹಿಸಿತು.

ಇದು ಪ್ರಾಚೀನವಾದ ಕಲೆಯೆನ್ನುವುದು ನಿರ್ವಿವಾದವಾದುವು. ಕ್ರಿಸ್ತಪೂರ್ವ ಐದಾರು ಸಾವಿರ ವರ್ಷಗಳಷ್ಟು ಹಿಂದೆಯೇ ಈ ಬಗೆಯ ಕಲಾಕೃತಿಗಳು ಸಿದ್ಧವಾದುದು ಸ್ಪಷ್ಟವಾಗಿದೆ. ಬಳಸುವ ಪಾತ್ರೆಗಳನ್ನು ಅಲಂಕರಿಸಲು ಮಣ್ಣಿನಲ್ಲಿಯೇ ಬರಳಿನಿಂದ ಅಥವಾ ಕಡ್ಡಿಯಿಂದ ವಿನ್ಯಾಸಗಳನ್ನು ಮೂಡಿಸಿ, ಕೆಲವೊಮ್ಮೆ ಕುಂಚವನ್ನೂ ಬಳಸಿ ಬರ್ಣಣಗಳ್ನು ತುಂಬಿ ಪಾತ್ರೆ ಮುಗಿದು ನೆರಳಿನಲ್ಲಿ ಒಣಗಿದ ನಂತರ ಸುಡುತ್ತಿದ್ದರು. ಇಂಥ ಪಾತ್ರೆಗಳನ್ನು ಮಾಡುವ ಉದ್ಯಮವೇ ಹಳೆಯ ಕಾಲದಲ್ಲಿ ಪರ್ಶಿಯ, ಮೆಸೋಪೊಟೋಮಿಯ (ಸಮರ್ರ, ಸೂಸ), ಮೊಹೆಂಜೊದಾರೋ, ಹರಪ್ಪಾ ಮೊದಲಾದ ಕಡೆ ಇದ್ದಂತೆ ತಿಳಿದುಬರುತ್ತದೆ. ಕ್ರಿಸ್ತಪೂರ್ವ ಮೂರು ಸಾವಿರ ವರ್ಷಗಳ ಹಿಂದೆ ಅನಟೋಲಿಯ ಮತ್ತು ಸಿರಿಯನ್ ತೀರದಿಂದ ಈ ಉದ್ಯಮವು ಯುರೋಪನ್ನು ಮುಟ್ಟಿತು. ಕ್ರೀಟಾ-ಮೈಸೀನ್ ಸಂಸ್ಕೃತಿಯ ಹಿನ್ನೆಲೆಯಲ್ಲಿ ಇದು ಬೆಳೆದು ಕ್ರಿಸ್ತಪೂರ್ವ ಒಂದು ಸಾವಿರ ವರ್ಷಗಳ ಸುಮಾರಿಗೆ 'ಪಾಲಸ್ಸೊ' ಶೈಲಿಯೆನ್ನುವುದು ಖಚಿತವಾಯಿತು.

ಮೃಣ್ಮಯ ಪಾತ್ರೆಗಳು ಸುಟ್ಟು ಗಟ್ಟಿಯಾಗಿದ್ದರೂ ಅದು ನೀರನ್ನು ಹೀರಿಕೊಳ್ಳದಿದ್ದರೂ ಆದ್ದರಿಂದ ನೀರು ಸೋರಿ ಹೋಗುವ ಸಂಭವವಿತ್ತು. ನೋಡಲು ಮಣ್ಣಿನ ಪಾತ್ರೆಯಂತೆಯೇ ಕಾಣುತ್ತಿದ್ದುದರಿಂದ ಮಣ್ಣಿನ ಪಾತ್ರೆಗಳಿಂದ ಬಗೆ ಬಗೆಯ ಬಣ್ಣಗಳನ್ನು ಬಳಿಯುವುದೂ, ಥಳಥಳ ಹೊಳೆಯುವಂತೆ ಮಾಡುವ 'ಪಾಲಿಕ್ರೋಮ್ ಗ್ಲೇಸಿಂಗ್' ಕಲೆ ಈಜಿಪ್ಟ್ ದೇಶದಲ್ಲೇ ಪ್ರೌಢದೆಶೆಯನ್ನು ಮುಟ್ಟಿದ್ದಿತು. ಬೈಸಮಟೈನ್‌ನಲ್ಲಿಯೂ ಇದು ಬೆಳೆದು, ಮೆಸೊಪೋಟೋಮಿಯ, ಈಜಿಪ್ಟ್, ಸಿರಿಯ, ಅನಟೋಲಿಯ, ಉತ್ತರ ಆಫ್ರಿಕ, ಸ್ಪೇನ್‌ಗಳು ಬಹು ಕಾಲದವರೆಗೆ ಈ ಉದ್ಯಮದ ಕೇಂದ್ರಗಳಾಗಿದ್ದುವು.

ಮೆರಗು ಹಾಕಿದ ಮೃಣ್ಮಯ ಪಾತ್ರೆಗಳಿಂದ ಹೆಚ್ಚು ಆಕರ್ಷಕವಾದ ಸಂಪಿಧಾನ ಪಿಂಗಾಣಿಯದು. ಪಿಂಗಾಣಿಯ (ಪ್ರೋರ್ಸಲೀನಿನ) ಮೂಲ ಸವಭಾವ ಜೇಡಿಮಣ್ಣು ಕೊಲಿನ್, ಕ್ವಾರ್ಟ್ಸ್, ಫೆಲ್ಸ್‌ಪರ್ ಮತ್ತು ಸುಣ್ಣದಕಲ್ಲು ತುಂಬ ಹೆಚ್ಚಿನ ಶಾಖದಲ್ಲಿ ಇದನ್ನು ಸುಟ್ಟು ಪಿಂಗಾಣಿಯನ್ನು ಮಾಡುತ್ತಾರೆ. ಉದ್ಯಮದಲ್ಲಿ ಮತ್ತು ವಿಜ್ಞಾನದಲ್ಲಿ ಶೇಕಡ ನಲವತ್ತು ಪಾಲು ಕಒಲಿನ್, ಇಪ್ಪತ್ತು ಪಾಲು ಕಾರ್ನಿಷ್‌ಕಲ್ಲು, ನಲವತ್ತು ಪಾಲು

ಮೂಳೆಬೂದಿ ಬೆರೆತಿರಬೇಕೆಂದು ನಿಶ್ಚಯಿಸಿದನು. ಇದು ಪಿಂಗಾಣಿ ಉದ್ಯಮದಲ್ಲಿ ಮೈಲಿಗಲ್ಲಾಯಿತು. ಆದರೆ ಪಿಂಗಾಣೀಯ ರಹಸ್ಯ ಮೊಟ್ಟಮೊದಲು ತಿಳಿದದ್ದು, ಚೀಣಿ ಜನರಿಗೆ. ಅದಕ್ಕಾಗಿಯೇ 'ಪಿಂಗಾಣಿ' ಎನ್ನುವುದೂ 'ಚೈನಾ' ಎನ್ನುವುದೂ ಈಗ ಪರ್ಯಾಯ ಪದಗಳಾಗಿವೆ ಚೀಣಾ ದೇಶವನ್ನು ತಾಂಗ್ ಮನೆತನದ ಅರಸರು ಕ್ರಿಸ್ತಾಬ್ದ 618ರಿಂದ 906ರವರೆಗೆ ಆಳುತ್ತಿದ್ದಾಗ ಚೀಣಾ ದೇಶದಲ್ಲಿ ಉತ್ತಮವಾದ ಮೃಣ್ಮಯ ಪದಾರ್ಥಗಳನ್ನು ಮಾಡುತ್ತಿದ್ದರು ಅವನ್ನು ಹಾಲುಗಲ್ಲಿನಲ್ಲಿ ಮಾಡಿದ ಪದಾರ್ಥಗಳಂತೆ ಕಾಣಿಸುತ್ತಿದ್ದವು. ಮೇಲೆ ಬಳಿದ ನೀಲಿ, ಹಸಿರು ಬಣ್ಣಗಳು ಹೊಳೆಯುತ್ತಿದ್ದವು. ಈ ಪದಾರ್ಥಗಳಲ್ಲಿ ಕೆಲವು ಇಂದಿಗೂ ಉಳಿದಿವೆ. ಮುಂದೆ ಸೊಂಗ್ ಮನೆತನದ ಅರಸರು ದೇಶವನ್ನಾಳ ತೊಡಗಿದಾಗ ಪಿಂಗಾಣಿ ಪದಾರ್ಥಗಳು ಇನ್ನಷ್ಟು ಕಲಾತ್ಮಕವಾಗಿ ಸಿದ್ಧವಾದವು. ಅಷ್ಟು ಮಾತ್ರವಲ್ಲದೆ, ತಾಂತ್ರಿಕ ದೃಷ್ಟಿಯಿಂದಲೂ ಈ ಪದಾರ್ಥಗಳ ದಾರ್ಢ್ಯವನ್ನು ಹೆಚ್ಚಿಸಿದರು. ಅತಿಯಾದ ಅಲಂಕರಣಕ್ಕೆ ಮನಸೋಲದೆ, ಸರಳವಾದ ಸೌಂದರ್ಯವೇ ಪಿಂಗಾಣೀಯ ಗುಣಕ್ಕೆ ತಕ್ಕದ್ದು ಎಂದು ನಿಶ್ಚಯಿಸಿದರು. ಚೀಣಿಯರು ಅರ್ಧಮರ್ಧ ಪಾರದರ್ಶಕವಾದ ಹಚ್ಚ ಹಸಿರು ಹೊಳಪನ್ನು ಬಳಸುತ್ತಿದ್ದರು.

ಚೀಣೀ ಪಿಂಗಾಣಿಗಳು ಒದಗಿಸಿದ ಸ್ಫೂರ್ತಿಯಿಂದ ಪಾಶ್ಚಾತ್ಯ ದೇಶಗಳಲ್ಲಿ ಈ ಉದ್ಯಮ ಬೆಳೆಯಿತು. ಸಂವಿಧಾನದಲ್ಲಿ ಹಲವಾರು ಸುಧಾರಣೆಗಳೂ ಒದಗಿದವು. ಕ್ರಸ್ತಾಬ್ದ ಹತ್ತನೆಯ ಶತಮಾನದಿಂದಲೂ ಇಟಲಿ ದೇಶವು ಪಿಂಗಾಣೀ ಉದ್ಯಮಕ್ಕೆ ಹೆಸರಾದುದು. ಆ ದೇಶದ ಒರ್ವಿತೊ, ಸಿಯೆನ, ಫಯೆನ್ಸ ಎಂಬ ಮೂರು ಸ್ಥಳಗಳು ಪಿಂಗಾಣೀ ಉದ್ಯಮದ ಕೇಮದ್ರಗಳಾದುವು. ಮನೆಯಲ್ಲಿ ಬಳಸುವ ಪಿಂಗಾಣೀ ಪಾತಗ್ರೆ-ಪದಾರ್ಥಗಳನ್ನು ಮಾತ್ರವಲ್ಲದೆ ಪಿಂಗಾಣಿ ಕಲಾಕೃತಿಗಳನ್ನು ಸಿದ್ಧಪಡಿಸುವುದರಲ್ಲಿ ಇಟಲಿ ದೇಶದ ಕೆಲಸಗಾರರು ಐರೋಪ್ಯ ದೇಶಗಳಲ್ಲೆಲ್ಲ ಪ್ರಸಿದ್ಧರಾದರು. ಪ್ರಾನ್ಸ್, ಸ್ಪೇನ್, ರೈನ್‌ಲಾಂಡ್‌ಗಳಲ್ಲಿ ಪಿಂಗಾಣಿ, ಉದ್ಯಮ ವಿಶೇಷವಾಗಿ ಬೆಳದದ್ದು ಅಲ್ಲಿಗೆಲ್ಲ ಹೋದ ಇಟಲಿ ಕೆಲಸಗಾರರಿಂದಲೇ. ಆದರೆ ಡಚ್ ಈಸ್ಟ್ ಇಂಡಿಯಾ ಕಂಪನಿಯು ಚೀಣೀ ಪಿಂಗಾಣಿಯ ಕಲಾಕೃತಿಗಳನ್ನು ಯುರೋಪಿನ ದೇಶಗಳೀಗೆ ಸಾಗಿಸತೊಡಗಿದ ಮೇಲೆ ಇಟಲಿ ದೇಶದ ಕೆಲಸಗಾರರ ಕೃತಿಗಳನ್ನು ಯಾರೂ ಕೇಳದಾದರು. ಚೀಣೀ ವಿನ್ಯಾಸಗಳೂ, ಚೀಣೀ ಸಂವಿಧಾನಗಳೂ ಹೆಚ್ಚು ಜನಪ್ರಿಯವಾಗಿ ಇಟಲಿಯ ಪಿಂಗಾಣೀ ಕೆಲಸಗಾರರು ಮುಂದೆ ಚೀಣೀ ಶೈಲಿಯನ್ನೇ ಅನುಸರಿಸತೊಡಗಿದರು. ಆದರೆ ಇಟಲಿಯಲ್ಲಿ ನಡೆದ ಸುಧಾರಣೆಗಳಲ್ಲಿ ಮುಖ್ಯವಾದುದು ಉಳಿದುಕೊಂಡಿತು. ಚೀಣಿಯರು ಬಳಸುತ್ತಿದ್ದ ಅರ್ಧಮರ್ಧ ಪಾರದರ್ಶಕವಾದ ಹೆಚ್ಚಹಸಿರು ಹೊಳಪಿನ ಬದಲು ಬಿಳಿಯ ಮೈಹರವನ್ನು ಮೂಡಿಸಿ ಅದರ ಮೇಲೆ ಚೀಣೀಯರ ಉಬ್ಬು ಚಿತ್ರಕ್ಕೆ ಬದಲಾಗಿ ವರ್ಣಚಿತ್ರಗಳನ್ನು ಬಿಡಿಸುವ ಕಲೆ ಇಟಲಿಯ ಕುಶಲಕರ್ಮಿಗಳ ಕೊಡುಗೆ.

2) ಕಾಂಸ್ಯಶಿಲ್ಪ

ಮಣ್ಣಿನಿಂದ ಮಾಡಿದ ಪದಾರ್ಥಗಳು ಉಳಿಯುವುದು ದುಸ್ತರವೆನ್ನುವುದನ್ನು ಕಂಡುಕೊಂಡು ಅವನ್ನು ಯಾವುದಾದರೂ ಶಾಶ್ವತವೆಂಬಂಥ ಮಾಧ್ಯಮದಲ್ಲಿ ಬೆಳೆಸಿಕೊಳ್ಳುವ ಕಾತರ ಪ್ರಾಚೀಣ ಜನಕ್ಕೆ ಇದ್ದಿತು. ಲೋಹ ಇದಕ್ಕೆ ಅನುಕೂಲವೆಂದೂ ತಿಳಿಯಿತು. ಕಂಚಿನ ಪ್ರತಿಮೆಗಳು ಮೈದೆಳೆದದ್ದು ಹೀಗೆ. ಕಂಚೆಂಬುದು ತಾಮ್ರ (ಶೇಕಡ 87 ಪಾಲು), ತವರ ಅಥವ ವಂಗ (ಶೇಕಡ 7 ಪಾಲು) ಸತುವು (ಶೇಕಡ ನಾಲ್ಕು ಪಾಲು) ಮತ್ತು ಸೀಸ (ಶೇಕಡ 87 ಪಾಲು) ಇವುಗಳ ಮಿಶ್ರಣ. ಇದರ ಗುಣ ಗಟ್ಟಿಯಾಗಿ ನಿಲ್ಲುವಂಥದು. ವಾತಾವರಣದ ಪ್ರಕೋಪಕ್ಕೆ ಬೇಗ ಒಳಗಾಗುವಂಥದಲ್ಲ. ಅಷ್ಟಲ್ಲದೆ ಬಿಸಿಲು, ಚಳಿ, ಗಾಳಿ ಎಷ್ಟಿದ್ದರೂ ಕಂಚಿನ ಹೊಳಪು ಹಾಗೆಯೇ ಇರುತತದೆ. ಒಂದು ವೇಳೆ ಮಾಸಲಾದರೂ ಬೇಗ, ಸುಲಭವಾಗಿ ತನ್ನ ಮೊದಲಿನ ಹೊಳಪನ್ನು ಮತ್ತೆ ಗಳಿಸಿಕೊಳ್ಳುತ್ತದೆ. ಅದರ ದ್ರವ ಮಾಡಿ ಎರಕ ಹೊಯ್ಯುವುದು ಸುಲಭವೇ ಮತ್ತು ಎರಕ ಹುಯ್ಯುವಾಗ ಮೂಲಕೃತಿಯ ಎಲ್ಲ ಸೂಕ್ಷ್ಮ ವಿವರಗಳೂ ಉಳಿಸಿಕೊಳ್ಳುವುದು ಕಂಚಿನ ಇನ್ನೊಂದು ಗುಣ. ಎಷ್ಟು ಸಣ್ಣ ವಿವರವಾಗಲೀ, ಎರಕ ಹುಯ್ಯುವಾಗ ಕಂಚು ಅದರಲ್ಲಿ ಹರಿದು ಅದರ ಆಕಾರವನ್ನು ತಲೆಯಬಲ್ಲದು. ಈ ಕಾರಣಗಳಿಂದ ಕಾಂಸ್ಯಶಿಲ್ಪ ಕಲೆಗೆ ಹೊಂದಿಕೊಂಡು ಬಂದಿತು.

3) ಕುಂಭಕಲೆ ಮತ್ತು ಗಾಜಿನ ಸಾಮಾನುಗಳು

ನಮ್ಮ ನಾಡಿನ ಪ್ರತಿಯೊಂದು ಹಳ್ಳಿಯಲ್ಲೂ ಹೊಳಪಿಲ್ಲದ ಕಂದು, ಕೆಂಪು, ಕಪ್ಪು ಅಥವಾ ಬೂದು ಬಣ್ಣದ ಮಣ್ಣಿನ ಕುಡಿಕೆ, ಮಡಿಕೆ ತಯಾರಿಸಿ ಮಾರಾಟ ಮಾಡುವ ಕುಂಬಾರದ ಕಸುಬು ಕುಂಬಾರಿಕೆ. ಕುಂಬಾರಿಕೆ ಒಂದು ಕಲೆ ಎನ್ನುವುದರಲ್ಲಿ ಅನುಮಾನವಿಲ್ಲ. ಅತ್ಯಂತ ಸರಳ ಮತ್ತು ಶುದ್ಧರೂಪ ಎನ್ನಬಹುದಾದ ಈ ಕಲೆಗೆ ಪ್ರಾಗೈತಿಹಾಸ ಕಾದ ಇತಿಹಾಸವಿದೆ. ಮಡಿಕೆ–ಕುಡಿಕೆ ನಿರ್ಮಿತಿಯಲ್ಲಿ ತೋರಿರುವ ವೈವಿಧ್ಯ ಮತ್ತು ಕೈಚಳಕ ಮೋಹಕವಾಗಿದೆ. ದೂರದ ಬಾವಿಗಳಿಂದ ನೀರು ಹೊತ್ತು ತರಲು 'ಗಡಿಗೆ'ಗಳನ್ನು ಬಳಸುತ್ತಾರೆ. ಗಡಿಗೆಗಳಲ್ಲಿ 'ಒಚಿಟಿ ಗಡಿಗೆ' ಪ್ರಧಾನವಾದದ್ದು. ಒಂಟಿ ಗಡಿಗೆಯಲ್ಲಿ ನೀರು ತುಂಬುವ ಪರಾಕ್ರಮಶಾಲಿ ಎನ್ನುವ ಭಾವನೆ ಜನಪದರಲ್ಲಿದೆ. ಲಂಬಾಣೀಗರ ಮದುವೆಯಲ್ಲಿ ಕುಂಬಾರನ ಮನೆಯ ಹೊಸ–ಮಡಿಕೆ–ಕುಡಿಕೆಗಳು ಇರಲೇಬೇಕು. 'ಕಳಸ' ಕಟ್ಟಿ ಮದುವೆ ಮಾಡುವುದು, ಲಂಬಾಣಿಗರ ಮದುವೆಯ ವೈಶಿಷ್ಟ್ಯ, ಪೂರ್ಣಕುಂಭ ಪೂಜೆ ಇಂದಿಗೂ ಸಾಂಪ್ರದಾಯಿಕ ಆಚರಣೆಯಾಗಿ ಬಂದುಬಿಟ್ಟಿದೆ. ಮದುವಣಗಿತ್ತಿಗೆ 'ಬಾಗಿನ' ಅಥವಾ 'ಬಳಗದ ಪುಟ್ಟಿ' ಅರ್ಪಿಸುವ ಸಂದರ್ಭದಲ್ಲಿ ಒಂದೆರಡು ಮಡಿಕೆಗಳನ್ನೂ ಪುಟ್ಟಿಯಲ್ಲಿ ಇಡಬೇಕು. ಇದು ಸಂಪ್ರದಾಯ.

ಕರ್ನಾಟಕದ ನವಶಿಲಾಯುಗದ ಮಣ್ಣಿನ ಪಾತ್ರೆಗಳು, ಬೋಕಿಗಳು, ಚೂರುಗಳು ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆ, ರಾಯಚೂರು ಜಿಲ್ಲೆಯ ವಸಗಲ್, ಭೀಮಾನದಿ ದಡದ ಕಂಶಿ, ಕೃಷ್ಣಾ ಮತ್ತು ಕಾವೇರಿ ನದಿಗಳ ಬಯಲಿನಲ್ಲೂ ದೊರೆತಿವೆ. ಈ ಮಣ್ಣಿನ ಪಾತ್ರೆಗಳು ಬೂದು, ಕಂದು, ಅಚ್ಚ ಕಪ್ಪು ಬಿಳಿ ಮತ್ತು ಅಚ್ಚ ಕೆಂಪು ಬಣ್ಣಗಳಿಂದ ಕೂಡಿವೆ. ಹೀಗೆ ಸಿಕ್ಕ ಪಾತ್ರೆಗಳನ್ನು ಅವಲೋಕಿಸಿದಾಗ ಕೆಲ ಕಲಾತ್ಮಕ ರೇಖೆ ವಿಣ್ಯಾಸಗಳು ಕಾಣುತ್ತವೆ. ಮಣ್ಣು ಹಸಿ ಇರುವಾಗಲೇ ರೇಖೆ ಬಿಡಿಸಿದ್ದುದರಿಂದ ಅವು ನಶಿಸದೆ ಉಳಿಸುಕೊಂಡಿವೆ. ನೇರಳೆ ಅಥವಾ ಕಪ್ಪುಬಣ್ಣದಿಂದ ಬಿಡಿಸಿದ ರೇಖಾಚಿತ್ರಗಳೂ ಇವೆ. 'ಜ್ಯಾಮಿತಿಯ' ರೇಖಾಚಿತ್ರಗಳೂ ಕಂಡುಬರುತ್ತವೆ. ಜಿಂಕೆ, ನವಿಲು, ಹಕ್ಕಿ, ನಾಯಿ, ಮೀನು, ಬಳ್ಳಿ, ಎಲೆಗಳು ಮೊದಲಾದ ಚಿತ್ರಗಳೂ ಇವೆ. ತೆಕ್ಕಲಕೋಟೆಯಲ್ಲಿ ದೊರೆತ ಒಂದು ಸುಟ್ಟ ಮಣ್ಣಿನ ಮುಚ್ಚಳದ ಮೇಲೆ ಹಾವು, ಜಿಂಕೆ ಹಸುಗಳ ಚಿತ್ರಗಳನ್ನು ಬಿಡಿಸಿರುವುದು ಸ್ಪಷ್ಟವಾಗುತ್ತದೆ. ಮಣ್ಣು ಹದವಾಗಿಸಿ, ಚಕ್ರದ ಮೇಲೆ ಇಟ್ಟು ತಿರುಗಿಸುತ್ತಾ ಆಕೃತಿಯಾಗಿಸುವಾಗ, ಉಗುರಿನಿಂದಲೂ ಸೂಜಿಯಿಂದಲೂ ಅಥವಾ ಮೊನಚಾದ ಕಡ್ಡಯಿಂದಲೋ ಬಿಡಿಸಿದ್ದಾರೆ. ನವಶಿಲಾಯುಗದ ಜನರು ಕಾಳು ಕಡ್ಡಿ ತುಂಬಲು 'ಚಕ್ರದ' ಸಹಾಯವಿಲ್ಲದೇ ಕೈಯಿಂದಲೇ ತಯಾರಿಸಿ ಮಾಡಿಕೊಂಡ ದೊಡ್ಡ ದೊಡ್ಡ ವಾಡೆಗಳ ಉಪಯೋಗ ಕಂಡುಕೊಂಡಿದ್ದರೆಂದು ತಿಳಿದುಬರುತ್ತದೆ.

ಮಡಿಕೆ, ಕುಡಿಕೆಗಳನ್ನು ಮಾಡುವಾಗ ಬಳಸುವ ಉಪಕರಣಗಳನ್ನು ಅತ್ಯಂತ ಸರಳವಾದವು. ಅವುಗಳಲ್ಲಿ ಪ್ರಮುಖವಾದುದು 'ಚಕ್ರ'. ಇದಂತೂ ಇರಲೇಬೇಕು. ಇಲ್ಲದಿದ್ದರೆ ಆಗುವುದೇ ಇಲ್ಲ. ಜೇಡಿ ಮಣ್ಣಿನಿಂದ ಮಾಡುವ ಮಡಿಕೆ, ಕುಡಿಕೆ, ಗಡಿಗೆಗಳಿಗೆ ತಳಹೊಂದಿಸಲು ಮಣ್ಣು ಬಳಸುತ್ತಾರೆ. ಅಗಲವಾದ ಮರದ ತುಂಡೊಂದರಿಂದ ಮಣ್ಣು ಮೆತ್ತಿ ಹದವಾಗಿ ಬಡಿಯುತ್ತಾ ನಯಗೊಳಿಸುತ್ತಾರೆ. ಮನೆಗೆ ಹೊಚ್ಚುವ ಹೆಂಚನ್ನು ತಯಾರಿಸುತ್ತಾರೆ. ಅವೆಲ್ಲವೂ ಒಣಗಿದ ಮೇಲೆ ತಯಾರಿಸುತ್ತಾರೆ. ಅವೆಲ್ಲವೂ ಒಣಗಿದ ಮೇಲೆ 'ಅವುಗೆ'ಯಲ್ಲಿ ಪೇರಿಸಿ, ಬೆಂಕಿಯಿಟ್ಟು ಗಟ್ಟಿಗೊಳಿಸುತ್ತಾರೆ. ಕುಂಭ ಕಲೆಗಾರರು ಅತ್ಯುತ್ತಮ ಪರಿಣತಿಯನ್ನು ಬಳಸಿಕೊಂಡು ಸುಂದರ ವಿನ್ಯಾಸ, ವಿವಿಧ ವರ್ಣಗಳ ಸುಂದರವಾದ ಕೆತ್ತನೆಗಳಿಂದ ಕೂಡಿದ ಮಡಿಕೆ ಕುಡಿಕೆಗಳನ್ನು ತಯಾರಿಸುತ್ತಿದ್ದಾರೆ. ಹೂಜಿ, ಹೂದಾನಿ, ಹೂಗಿಡಗಳನ್ನು ಬೆಳೆಸಲು ಸುಂದರವಾದ ಕುಂಡಗಳನ್ನು ತಯಾರಿಸುತ್ತಿದ್ದಾರೆ. ಹೂಕುಂಡಗಳ ಆಕೃತಿಗಳು ನೋಡಲು ಆಕರ್ಷಕವಾಗಿದ್ದು, ಸೂಕ್ಷ್ಮ ಕುಸುರಿ ಕಲೆಗಾರಿಕೆ ಎದ್ದು ಕಾಣುತ್ತದೆ. ವೇಕದಾನಿಗಳು ಆಸ್ತ್ರೇಗಳನ್ನು ಜೇಡಿಮಣ್ಣಿನಿಂದ ಮಾಡಲಾಗಿದ್ದು ವಿವಿಧ ಆಧುನಿಕ ಉಪಕರಣಗಳಿಂದ ಕೊರೆದು ಕಲಾತ್ಮಕಗೊಳಿಸಿರುತ್ತಾರೆ. ಮಣ್ಣಿನಿಂದ ಮಾಡಿದ ಕಲಾಕೃತಿಗಳನ್ನು ಮಾರಲು ವ್ಯವಸ್ಥೆ ಮಾಡಲಾಗಿದೆ. ನಾಗರಿಕತೆಯ ಸಂಪರ್ಕದಿಂದ 'ಕುಂಬಾರಿಕೆ'ಯಲ್ಲಿ ಹೊಸತನ ಕಂಡುಬಂದರೆ ಹಳ್ಳಿಯ ಕುಂಬಾರಿಕೆ ಮೂಲವನ್ನೇ ಉಳಿಸಿಕೊಂಡು ಜನಪದ ಶೈಲಿಯಿಂದ ಜನಪ್ರಿಯವಾಗಿದೆ.

ಬೆಳಗಾವಿ ಜಿಲ್ಲೆಯ ಖಾನಾಪುರದಲ್ಲಿ ಅಲ್ಲಿ ದೊರೆಯುವ ಉತ್ಕೃಷ್ಟ ಜೇಡಿಮಣ್ಣಿನಿಂದ ದೊಡ್ಡ ಪ್ರಮಾಣದ ಓಡೆ, ಪಡುಗ, ಮಡಕೆ, ಕುಡಿಕೆ, ಹೂಜಿಗಳನ್ನು ತಯಾರಿಸುತ್ತಾರೆ. ಅಲ್ಲಿ ಇತ್ತೀಚಿಗೆ ತರಕಾರಿಗಳನ್ನು ಕಾಯ್ದಿರಿಸುವ 'ಶೀತಕ'ಗಳನ್ನೂ ಕೂಡ ತಯಾರಿಸಲಾಗುತ್ತಿದೆ. ಹಾಸನ ಜಿಲ್ಲೆಯ ಕೋಣನೂರು, ಧಾರವಾಡ ಜಿಲ್ಲೆಯ ಲಕ್ಷ್ಮೇಶ್ವರ, ಬೆಳಗಾವಿ ಜಿಲ್ಲೆಯ ಇಟಗಿಗಳಲ್ಲಿ, ಶಿವಮೊಗ್ಗ ಜಿಲ್ಲೆಯ ಸಾಸಿವೇಹಳ್ಳಿ, ನಲ್ಲೂರಿನಲ್ಲಿ ಸುಟ್ಟ ಒಲೆ, ಹೂವಿನ ಕುಂಡ, ನೀರುಕೊಳವೆ, ನಾಡಹೆಂಚುಗಳನ್ನು ಅತಿ ಹೆಚ್ಚಾಗಿ ತಯಾರಿಸುತ್ತಿದ್ದಾರೆ. ದುಂಡನೆಯ ಆಕೃತಿಯಲ್ಲಿ ಮಾಡಿರುವ ಮಡಿಕೆಗೆ 'ನಲ್ಲಿಯ ಟ್ಯಾಪ್ ಅಳವಡಿಸಿ ಹಿಡಿಯಿರುವ ಮುಚ್ಚಳ ಇಟ್ಟು ಅತ್ಯಾಧುನಿಕಗೊಳಿಸಿರುವುದು ಕಂಡುಬರುತ್ತದೆ. ಮಡಿಕೆಯ ನೀರು ಸದಾ ತಂಪು. ಆರೋಗ್ಯಕ್ಕೆ ಒಳ್ಳೆಯದು ಎಂದು ನಮ್ಮ ಜನಪದ ಮಾತ್ರವಲ್ಲ ನಾಗರಿಕರು ಭಾವಿಸುತ್ತಾರೆ.

ಕರ್ನಾಟಕದ ಪ್ರಾಚೀನ ಜನರಿಗೆ ಕುಂಬಾರಿಕೆಯ ಜೊತೆಗೆ ಗಾಜಿನ ವಸ್ತುಗಳ ತಯಾರಿಕೆಯೂ ತಿಳಿದಿತ್ತು. ನವ ಶಿಲಾಯುಗದ ಉತ್ಖನನಗಳಲ್ಲಿ ಗಾಜಿನ ಬಳೆ, ಗಾಜಿನ ಮಣೆಗಳು ದೊರೆತಿರುವುದನ್ನು ಇಲ್ಲಿ ಸ್ಮರಿಸಬಹುದು. ಬಳೆ ಮಣೆ ಆಕರ್ಷಕವಾಗಿರುತ್ತಿದ್ದವಲ್ಲದೇ ಕಲಾತ್ಮಕವಾಗಿಯೂ ಇರುತ್ತದ್ದವು. ವಿನೋಪಯೋಗಿ ವಸ್ತುಗಳು ವರ್ಣ ಮತ್ತು ಅಲಂಕಾರ ವೈವಿದ್ಯದಿಂದ ಕೂಡಿರುವ ಕನ್ನ ನಾಡಿನ ಬಳೆಗಳು ಜನಪ್ರಿಯವಾದವು.

4) ಮಣ್ಣಿನ ಗೊಂಬೆಗಳು

ಇತಿಹಾಸ ಪೂರ್ವಯುಗಕ್ಕೆ ಸೇರಿದ ಹರಪ್ಪ ಮೊಹೆಂಜೋದಾರೋಗಳಲ್ಲಿ ದೊರೆತಿರುವ ಆಟದ ಸಾಮಾನುಗಳಲ್ಲಿ ಗೊಂಬೆಗಳೂ ದೊರೆತಿವೆ. ಅಂಥ ಗೊಂಬೆಗಳಲ್ಲಿ ಹಾಸಿಗೆಯಲ್ಲಿ ಮಲಗಿಕೊಂಡ ಮಗುವೊಂದನ್ನು ಆರೈಕೆ ಮಾಡುತ್ತಿರುವ ಸ್ತ್ರೀ ಮೂರ್ತಿಯೊಂದು ತುಂಬ ಆಕರ್ಷಕವಾಗಿದೆ. ಆ ಗೊಂಬೆಗೆ ಒಂದು ಬಗೆಯ ಬಳೆ ತೊಡಿಸಿ ಒಂದು ವಿಚಿತ್ರವಾದ ಟೋಪಿಯನ್ನು ಹಾಕಲಾಗಿದೆ. ಆಟದ ಗೊಂಬೆಗಳ ಸಮೂಹದಲ್ಲಿ ಪ್ರಾಣಿ ಗೊಂಬೆಗಳೂ ಇವೆ. ತಲೆಯನ್ನು ಅಲ್ಲಾಡಿಸಬಲ್ಲ ಗೂಳಿಗಳೂ ಅನೇಕ ಪಕ್ಷಿ, ರಥಗಳು ಮಣ್ಣೀನ ಟಗರುಗಳು ಸಿಕ್ಕಿವೆ. ಟಗರಿನ ಗೊಂಬೆಯ ಮೈಮೇಳಿನ ಉಣ್ಣೆಯನ್ನು ಸಲುಚಿಸಲು ಕೆಂಪು ವರ್ಣದ ಗೆರೆಗಳನ್ನು ಮೂಡಿಸಿದ್ದಾರೆ. ಅದನ್ನು ಎಳೆದಾಡುವ ಸಲುವಾಗಿ ಧಾರ ಕಟ್ಟಲು ಚಿಕ್ಕ ರಂದ್ರ ಮಾಡಲಾಗಿದೆ. ಸುಟ್ಟ ಜೇಡಿಮಣ್ಣಿನ ಗುಳಿಗೆಗಳಿರುವ ಮಣ್ಣಿನ ಗಿಳಿಕೆಗಳೂ ಕೋಳಿ ಹಾಗೂ ಪಾರಿವಾಳಗಳ ಆಕಾರದಲ್ಲಿರುವ ಪೀಪಿಗಳೂ ಮಣ್ಣೀನ ಚಕ್ರಗಳೂ ಶಂಖಗಳೂ ದೊರೆತಿವೆ. ಸುಟ್ಟ ಮಣ್ಣಿನ ಚಿಕ್ಕ ಆಟದ ಬಂಡಿಗಳು ಅತ್ಯಂತ ಪುರಾತನವಾದ ಆಟದ ಗೊಂಬೆಗಳೂ ಕೈಗಾರಿಕೆ ಕೇಂದ್ರವಾಗಿದ್ದ ಚುನ್ಹುದಾರೊದಲ್ಲಿ ದೊರೆತಿವೆ. ಈ ಎಲ್ಲಾ ಆಟಿಕೆಗಳಲ್ಲಿ ಉನ್ನತ ಮಟ್ಟದ ಕಲೆಗಾರಿಕೆಯನ್ನು ಕಾಣಬಹುದು. ಗೊಂಬೆ ಮತ್ತು ಚೆಂಡುಗಳನ್ನು ಜೇಡಿಮಣ್ಣು ಮತ್ತು ಕಲುಗಳಲ್ಲಿ ಮಾಡುತ್ತಿದ್ದರೆಂದು ಊಹಿಸಬಹುದ. ಮೊಹೆಂಜೊದಾರೋದಲ್ಲಿ ಜೀವ ಸದೃಶವಾಗಿರುವ

ಕೆಲವು ಪುಂಜಗಳು ದೊರೆತಿವೆ. ಅಲ್ಲಿನ ಗೂಳಿಗಳು ಕೋಣಗಳು ಕಾಳಗಕ್ಕೆ ಸಿದ್ಧವಾದ ರೀತಿಯಲ್ಲಿ ನಿರ್ಮಿತವಾಗಿದೆ. ಒಂದು ಕಡೆ ಒಂದು ಕೋಣ ಹರಿಹಾದು ಜನರ ಮೇಲೆ ಎರಗುತ್ತಿರುವಂತೆ ಕಾಣುವ ದೃಶ್ಯವೂ ದೊರೆತಿದೆ. ಆಯಾ ಕಾಲದ ವಸ್ತು, ಕಲ್ಪನೆ ಮತ್ತು ಕೆಲಗಾರಿಕೆಗಳಲ್ಲಿ ಏಕಸೂತ್ರತೆ ಇರುವ ಗೊಂಬೆಗಳನ್ನು ಕಾನಬಹುದಾಗಿದೆ. ಈ ಗೊಂಬೆಗಳು ಕೇವಲ ಅಂದ ಚೆಂದದ ಆಟಿಕೆ ಮಾತ್ರವಲ್ಲ, ಭಾರತೀಯ ಸಾಂಸ್ಕೃತಿಕ ಮನೋಭಾವನೆಯನ್ನು ಪ್ರತಿನಿಧಿಸುವ ಸ್ಮಾರಕಗಳನ್ನು ಪಾಟ್ನಾದ ಕಮ್ರಹಾತ್ ಬಲುಂದಿಬಾಗಿನ ಕದಮ್‌ಬಾನ್, ಬಿಹಾರದ ಮುಚಾಪಾವರ್, ಅಲಹಾಬಾದಿನ ಕೇಶಂಬಿ, ಶರಣ್ ಜಿಲ್ಲೆಯ ಬೆಲ್ಸಾ ಕೊಲ್ಹಾಪುರ ಭಾಗದ ಬರಹ್ಮಪುರಿ ಇಲ್ಲೆಲ್ಲಾ ಮಕ್ಕಳ ಆಟದ ವಿವಿಧ ರೀತಿಯ ಪ್ರಾನಿಗಳು, ಹಕ್ಕಿಗಳು, ಗಾಡಿಗಳು ವರ್ಣ ರಂಜಿತ ಕುಡಿಕೆಗಳು ಗೋಲಿಗಳು ದೊರೆತಿವೆ.

ಗೊಂಬೆಗಳ ತಯಾರಿಕೆಯಲ್ಲಿ ವಿವಿಧ ಬಗೆಗಳಲ್ಲಿ ಅನುಸರಿಸಿರುವುದು ಕಂಡುಬರುತ್ತದೆ. ಜೇಡಿ ಮಣ್ಣಿನ ಜೊತೆ ಹುಲ್ಲನ್ನು ಬಳಸಿ ಗೊಂಬೆ ತಯಾರಿಸಿ, ಸುಣ್ಣ ಮತ್ತು ಕೆಮ್ಮಣ್ಣಿನಿಂದ ಅಲಂಕರಿಸುವುದು ಒಂದು ಬಗೆ. ಬಡವ ತನ್ನ ಶಿಲ್ಪ ಸಿದ್ಧಿಯನ್ನು ಮೆರೆಯಬಲ್ಲ ಏಕೈಕ ಸಾಧನವಾದ ಜೇಡಿಮಣ್ಣಿನಲ್ಲಿ ಹೆಚ್ಚು ಗೊಂಬೆಗಳನ್ನು ನಿರ್ಮಿತವಾಗಿವೆ. ಅದೇನೇ ಇರಲಿ ಭಾರತೀಯ ಸಂಸ್ಕೃತಿಯಲ್ಲಿ ಗೊಂಬೆಗಳಿಗೆ ಒಂದು ಪ್ರಮುಖ ಸ್ಥಾನವಿತ್ತು. ಪ್ರಾಚೀನ ಕಾಲದಲ್ಲಿಯೇ ಭಾರತೀಯರು ಒಂದು ಉನ್ನತ ಸಂಸ್ಕೃತಿಯನ್ನು ಬೆಳೆಸಿಕೊಂಡು ಕಲಾಪೂರ್ಣವಾದ ಜೀವನವನ್ನು ನಡೆಸಿದರೆಂಬುದಕ್ಕೆ ಇವು ನಿದರ್ಶನಗಳಷ್ಟೆ.

ಕನ್ನಡ ನಾಡಿನಲ್ಲಿ ಚಿತ್ರದುರ್ಗ ಇಲ್ಲೆಯ ಚಂದ್ರವಳ್ಳಿ ಮುಂತಾದ ಕಡೆ ಸಣ್ಣ, ಸಣ್ಣ ಮಣ್ಣಿನ ಬೊಂಬೆಗಳು,ಗಾಡಿಯ ಚಕ್ರಗಳು, ಹಸು, ಎತ್ತು ಮೊದಲಾದ ಪ್ರಾಣಿಗಳ ಗೊಂಬೆಗಳು ದೊರೆತಿವೆ. ಬಹುಹಿಂದಿನಿಂದಲೂ ಮಣ್ಣಿನ ಗೊಂಬೆಗಳ ನಿರ್ಮಿತಿಯನ್ನು ಕನ್ನಡಿಗರು ಕಂಡುಕೊಂಡಿದ್ದರು ಎಂಬುದಕ್ಕೆ ಇವು ಸಾಕ್ಷ್ಯಾಧಾರಗಳು. ನಮ್ಮ ಪ್ರಾಚೀನ ಕುಶಲ ಕರ್ಮಿಗಳು ಅವರ ಮಕ್ಕಳಿಗೆ ವಿವಿಧ ಬಗೆಯ ಗೊಂಬೆಗಳನ್ನು ಮಡಿಕೊಟ್ಟು ಅವುಗಳ ಆಟಿಕೆಯಿಂದ ಮಕ್ಕಳು ಹರ್ಷಿತವಾದರೆ ತಾವೂ ಹರ್ಷಿತವಾದವರಂತೆ ಭಾವಿಸುತ್ತಿದ್ದರೆಂದು ಭಾಸವಾಗುತ್ತದೆ. ಅವರು ಮಡಕೆ, ಮುಚ್ಚಳ ಮೊದಲಾದ ಆಟಿಕೆ ವಸ್ತುಗಳನ್ನೂ ತಯಾರಿಸುತ್ತಿದ್ದರು. ಜನಪದ ಆಟಿಕೆಗಳ ಸಂದರ್ಭದಲ್ಲಿ ಆಯಾ ಕಾಲ ಪರಿಸರದ ಜೊತೆಗೆ ನಿರ್ಮಾಣಗೊಂಡ ಪರಿಕರಗಳು ಜನಪದ ವಸ್ತುಸ್ಥಿತಿಯನ್ನೇ ಧ್ವನಿಸುತ್ತವೆ. ಬೀಜಾಪುರ ಜಿಲ್ಲೆಯ ಗೊಂಬಿ ಗುಡ್ಡದಲ್ಲಿ ದೊರೆತಿರುವ ವಸ್ತುಗಳನ್ನು ನೋಡಿದಾಗ ಈ ಕೆಲಯು ಬಹುಹಿಂದೆಯೇ ಅಪಾರ ಜನಮನ್ನಣೆ ಗಳಿಸಿತ್ತು ಎಂದು ಭಾವಿಸಬಹುದು.

ಗೊಂಬೆಗಳ ಇತಿಹಾಸವನ್ನು ಕೆದಕುತ್ತಾ ಹೋದರೆ ಹತ್ತು ಹಲವು ರಂಜನೀಯ ವಿಷಯಗಳು ಗಮನಕ್ಕೆ ಬರುತವೆ. ಯಾವುದಾದರೊಂದು ಮರದ ಚೂರಾಗಲೀ ಕಲ್ಲಿನ ಚೂರಾಗಲೀ ಅಥವಾ ಬೇರಿನ ತುಂಡಾಗಲೀ ಬೊಂಬೆಯ ಆಕಾರದಲ್ಲಿದ್ದೆ ಅವನ್ನು ಅರಿಸಿಕೊಂಡು ನೋಡುವ, ಹೆಸರಿಡುವ ಕೂತೂಹಲ

ಹಿಂದಿನಿಂದಲೂ ಇತ್ತು ಎನ್ನುವುದು ಮನದಟ್ಟಾಗುತ್ತದೆ. ಮೊದಮೊದಲು ಹೀಗೆ ಕಂಡ ಬೊಂಬೆಗಳು ಅದೃಷ್ಟವನ್ನು ಕೊಡುತ್ತಿದ್ದವು ಎಂಬ ನಂಬಿಕೆಯೂ ಇತ್ತು (ಇದೆ). ಗೊಂಬೆಗಳಲ್ಲಿ ಮಂತ್ರ ಬಾಲಶಕ್ತಿಯಿದೆ ಎಂದು ಇಂದಿಗೂ ಜನ ಭಾವಿಸುತ್ತಾರೆ. ಅದೃಷ್ಟವನ್ನು ಕರುಣಿಸುವ ಬೊಂಬೆಗಳು ಮಳೆಯನ್ನು ಸುರಿಸುವ ಶಕ್ತಿ ಪಡೆದಿವೆ ಎಂಬುದಾಗಿಯೂ ಕ್ಷಾಮ ಬಂದಾಗ ಆಹಾರವನ್ನು ಒದಗಿಸುತ್ತವೆ ಎಂಬುದಾಗಿಯೂ ಜನರುಭಾವಿಸುವುದುಂಟು. ಆಡುಗಳು 'ಗೊಂಬೆಗಳ' ಪ್ರಭಾವದಿಂದ ಹೆಚ್ಚು ಹಾಲನ್ನು ಕೊಡುವುದಾಗಿಯೂ ಯುದ್ಧರಂಗದಲ್ಲಿ ಜಯ ಲಭಿಸುವುದಕ್ಕೆ ಇವು ಸಹಾಯಕವಾಗಿ ಬಳಸಬಲ್ಲವು ಎಂಬುದಾಗಿಯೂ ಜನ ನಂಬುತ್ತಾರೆ. ಅನಾರೋಗ್ಯದಿಂದ ನರಳುವವರು ಆರೋಗ್ಯ ಪಡೆಯುತ್ತಾರೆಂಬ ನಂಬಿಕೆಗೆ ಆಧಾರವಾಗಿ ಗೊಂಬೆಗಳನನು ಮಾಡಿಸಿ ಊರಿಂದ ಊರಿಗೆ ಸಾಗಿಸುವ ಗೊಂಬೆಗಳೂ ಇವೆ.

ಮಣ್ಣಿನ ಗೊಂಬೆಗಳಲ್ಲಿ ನಮ್ಮ ಗ್ರಾಮೀಣ ಪ್ರದೇಶದ ಊರಮ್ಮ ಅಥವಾ ಗ್ರಾಮದೇವತೆಯ ಬೃಹತ್ ಮೂರ್ತಿಗಳು ಬಹಳ ಜನಪ್ರಿಯ. ಎರಡರಿಂದ ಮೂರು ಮೂರುವರೆ ಅಡಿ ಎತ್ತರದ ಈ ಮೂರ್ತಿಗಳುನ್ನು ಸಾಮಾನ್ಯವಾಗಿ ಕುದುರೆಯ ಮೇಲೆ ಕುಳಿತಿರುವಂತೆ ಮಾಡಿರುತ್ತಾರೆ. ಜೇಡಿ ಮಣ್ಣಿನಲ್ಲಿ ಮೂಡಿರುವ ಈ ಬೊಂಬೆಗಳಿಗೆ ಬಣ್ಣ ಹಾಕಿರುತ್ತಾರಲ್ಲದೇ ಕಣ್ಣು, ಕಿರೀಟ, ಆಭರಣಗಳು ಎದ್ದು ಕಾಣುವಂತೆ ಕನ್ನಡಿಯ ಚೂರುಗಳನ್ನು ಸೇರಿಸಿರುತ್ತಾರೆ. ಪ್ರಮುಖವಾದ ಶಕ್ತಿದೇವತೆ ಎನಿಸಿಕೊಳ್ಳುವ ಈ ಮೂರ್ತಿಗಳ ಮುಖಭಾವ ರೌದ್ರವಾಗಿರುವಂತೆ ಬಣ್ಣ ಹಾಕಿರುತ್ತಾರೆ.

ಜೇಡಿಮಣ್ಣಿನಿಂದ ಮಾಡಿರುವ ವಿವಿಧ ಬಗೆಯ ಮುಖವಾಡಗಳು ಆಕರ್ಷಕವಾಗಿರುತ್ತವೆ. ಹುಲಿಯ ಮುಖವಾಡ ಹುಲಿಯ ಮುಖದಂತಿದ್ದು ಧರಿಸುವವರು ಮೈಗೆಲ್ಲಾ ಹುಲಿಯ ದೇಹದ ಪ್ರತಿ ರೂಪಿನಂತೆ ಮಾಡಿಕೊಂಡು ಕೈ-ಕಾಲು ಆಡಿಸಿ ನೃತ್ಯ ಮಾಡುವುದರಿಂದ ಹುಲಿಯಂತೆಯೇ ಭಾಸವಾಗುತ್ತದೆ. ಇನು ರಾಕ್ಷಸ ಮುಖವಾಡಗಳಿ ಬೇರೆ. ಕ್ರೂರತೆಯನ್ನು ಹೊರಸೂಸುವಂತೆ ಕಂಗಳನ್ನು ಕೊರೆದು, ಬಾಯಿ, ಕೀಲಿಸಿ, ಕೋರೆ ಹಲ್ಲುಗಳಿಗೆ ಬಿಳಿ ಬಣ್ಣ ಲೇಪಿಸಿ ಮುಖಕ್ಕೆ ಕುಂಕುಮ ಬಣ್ಣ ಲೇಪಿಸುವುದರಿಂದ ರಾಕ್ಷಸನಂತೆಯೇ ಭಾಸವಾಗುತ್ತದೆ. ಆಧುನಿಕ ಯುಗದಲ್ಲಿ ಹೊಸ ಮನೆ ಕಟ್ಟಿಸುವಾಗ ಜನರ ಕೆಟ್ಟ ದೃಷ್ಟಿ ಬೀಳದಿರಲೆಂದು ಇಂಥ ರಾಕ್ಷಸ ಶಿಬಿರಗಳನ್ನು ಮನೆಯ ಮುಂದೆ ಇಡುವುದುಂಟು.

ಗೊಂಬೆಗಳ ಈ ಪ್ರಕಾರದಲ್ಲಿ ಬರುವ ಮತ್ತೊಂದು ಆಕರ್ಷಕ ಮೂರ್ತಿಯೆಂದರೆ ಗಣಪತಿ. ಗೌರಿ-ಗಣೇಶ ಗಬ್ಬವೆಂದರೆ ಭಾರತೀಯರಿಗೆ ಅತಿ ಮೆಚ್ಚು. ಅರಿ ಎತ್ತರದ, ಅತಿ ಕಿರಿದದ ವಿವಿಧ ಆಕೃತಿಯ ಗಣಪತಿಗಳನ್ನು ಜೇಡಿಮಣ್ಣಿನಲ್ಲಿ ಮಾಡುತ್ತಾರೆ. ಗೌರಿಯನ್ನು ಮಣ್ಣಿನಲ್ಲಿಯೇ ಮಾಡಿ ಬಣ್ಣ ಹಾಕುತ್ತಾರೆ. ಪ್ರತಿವರ್ಷವೂ ಬಂದು ಹೋಗುವ ಈ ಹಬ್ಬದಲ್ಲಿ ಮಣ್ಣಿನ ಗಣೇಶ-ಗೌರಿಯ ಬೊಂಬೆಗಳನ್ನು ಬೀದಿ ಬೀದಿಯಲ್ಲಿ ಮನೆ ಮನೆಯಲ್ಲಿ ಕಾಣಬಹುದಾಗಿದೆ. ನವರಾತ್ರಿಯ ಸಂದರ್ಭದಲ್ಲಿ ಇಡುವ ಬೊಂಬೆಗಳು, ಅವುಗಳನ್ನು ಪೂಜಿಸುವ ರೀತಿ ಕಂಡರೆ ಬೊಂಬೆಗಳ ಹಿಂದಿರುವ ಜನಪದರ ಆಶಯ ಸ್ಪಷ್ಟವಾಗುತ್ತದೆ. ಈ

ಬಗೆಯ ಬೊಂಬೆಗಳನ್ನು ಮರದ ಹೊಟ್ಟಿನಲ್ಲಿ ಇಲ್ಲವೆ ಜೇಡಿ ಮಣ್ಣಿನಲ್ಲಿ ಮಾಡಿರುತ್ತಾರೆ. ಈ ಗೊಂಬೆಗಳಿಗೆ ಬಟ್ಟೆ, ಆಭರಣಗಳನ್ನು ಜೋಡಿಸಿ ಅಲಂಕರಿಸಿ ಪ್ರದರ್ಶಿಸುತ್ತಾರೆ. ದಸರೆಯ ಗೊಂಬೆ ಪ್ರದರ್ಶನ ಮನೆಯವರಿಗೊಂದು ಕಲಾ ಪ್ರದರ್ಶನಾವಕಾಶವನ್ನು ಒದಗಿಸುತ್ತದೆ. ಜೊತೆಗೆ ಗೊಂಬೆಗಳ ಎದುರಿಗೆ ಹೆಣ್ಣು ಮಕ್ಕಳ ಕೋಲಾಟ ಆಡುವ ಸಂಪ್ರದಾಯ ಹಿಂದಿನಿಂದ ನಡೆದು ಬಂದಿದೆ.

ಇತ್ತಿತ್ತಲಾಗಿ ಮಣ್ಣಿನಲ್ಲಿ, ಶಿವಪಾರ್ವತಿ, ವಿಷ್ಣು, ಮೇನಕೆ, ಬಸವ, ಅಕ್ಕಮಹಾದೇವಿ, ಹಾವು, ಬುದ್ಧ, ಅಂಬೇಡ್ಕರ್, ಸ್ವಾಮಿವಿವೇಕಾನಂದ, ರಾಮಕೃಷ್ಣ ಪರಮಹಂಸ, ಏಸುಕ್ರಿಸ್ತ, ಗಾಂಧಿ ಮುಂತಾದವರ ಪ್ರತಿಕೃತಿಗಳನ್ನು ಮಾಡಲಾಗುತ್ತಿದೆ. ನೀತಿ ಹೇಳುವ ಕೋತಿಗಳು, ಪುರಾಣ, ಘಟನೆಗಳ ರಾಮ–ಲಕ್ಷ್ಮಣ ಸೀತೆಯರು, ಕೃಷ್ಣನ ಬಾಲಲೀಲೆ ಮುಂತಾದ ಪ್ರತಿಕೃತಿಗಳ ಕಲಾತ್ಮಕವಾಗಿ ಮಣ್ಣೀನಲ್ಲಿ ಒಡಮೂಡಿ ಬರುತ್ತಿವೆ. ಪ್ರಸಿದಧ ಕವಿಗಳ ಕಲಾಕರರ ಪ್ರತಿಕೃತಿಗಳೂ ಮಣ್ಣಿನಲ್ಲಿ ಒಡಮೂಡುತ್ತಿರುವುದು ನಮ್ಮ ಜನರ ಸೌಂದರ್ಯ ಪ್ರಜ್ಞೆಗೆ ಸಾಕ್ಷಿ ಆಗಿವೆ. ವಿವಿಧ ಬಗೆಯ ತರಕಾರಿಗಳನ್ನು ತೆಂಗಿನಕಾಯಿ ಹೋಳು, ಹಣ್ಣೂ–ಹಂಪಲುಗಳನ್ನು ಯಥಾವತ್ತಾಗಿ ಒಡಮೂಡಿಸಿರುತ್ತಾರೆ. ಸಮಕಾಲೀನ ಸಂದರ್ಭದಲ್ಲಿ ಜನಪ್ರಿಯವಾಗಿರುವ ದೇವರುಗಳ ಪ್ರತಿಕೃತಿಗಳೂ ಸಿಗುತ್ತವೆ. ರಾಮನಗರದ ಮಣ್ಣಿನ ಆಟದ ಬೊಂಬೆಗಳು ಪ್ರಸಿದ್ಧ. ಜೇಡಿಮಣ್ಣಿನಿಂದ ತಯಾರಿಸಲಾಗುವ ಈ ಬೊಂಬೆಗಳಿಗೂ ಬಣ್ಣ ಹಾಕಿರುತ್ತಾರೆ. ಬೆಂಗಳೂರು, ಲಕ್ಷ್ಮೇಶ್ವರ, ಕೋಣನೂರು ಇಟಗಿಗಳಲ್ಲಿಯೂ ಕೂಡ ವಿವಿಧ ರೀತಿಯ ಮಣ್ಣಿನ ಬೊಂಬೆಗಳನ್ನು ತಯಾರಿಸಲಾಗುತ್ತದೆ.

ನಿರ್ಮಾಣ ಮಾಡಲು ಬರಬೇಕು. ಸೌಂದರ್ಯಕ್ಕಿಂತ ಬಳಕೆಯ ಗುಣ ಹೆಚಾಗಿರಬೇಕು. ಅವರ ಕಟ್ಟದಗಳು ಸೇನೆಯ ಸೌಕರ್ಯಕ್ಕೆಂದು ಸಿದ್ಧವಾದುವು ಎಂದು ಹೇಳುವುದಿದೆ. ಆದರೆ ಹಲವಾರು ವಾಸ್ತು ವಿವರಗಳನ್ನು ಇತಲಿಯಲ್ಲಿರುತ್ತಿದ್ದ ಎತ್ರುಸ್ಕನ್ನರ ವಾಸ್ತುಪದ್ಧತಿಯನ್ನೂ ಅಳವಡಿಸಿಕೊಂಡು ಐರೋಪ್ಯದ ವಾಸ್ತುವಿನ ಬೆಳವಣಿಗೆಗೆ ದಾರಿಮಾಡಿಕೊಟ್ಟರು. ತಾವು ಗೆದ್ದ ಊರುಗಳಲ್ಲಿ ತಮ್ಮ ಹೆಗ್ಗಳಿಕೆಯನ್ನು ಸೂಚಿಸಲು ವಿಜಯ–ತೋರಣಗಳನ್ನು ಕಟ್ಟುವುದು ಅವರಿಗೆ ಪ್ರಿಯವಾದ ಕೆಲಸವಾಗಿದ್ದಿತು. ಊರಿನಲ್ಲಿ ರಸ್ತೆಗಳನ್ನು ಅಚ್ಚುಕಟ್ಟಾಗಿ ನಿರ್ಮಿಸುವುದರಲ್ಲಿ ಅವರದ್ದು ಎತ್ತಿದ ಕೈ. ಸಾರ್ವಜನಿಕ ಕೊಳಗಳೂ ಆ ಜನರ ಕೊಡುಗೆಗಳೇ. ಊರಿನ ಸುತ್ತ ರಕ್ಷಣೆಗೆಂದು ಪೌಳಿಯನ್ನು ಕಟ್ಟುತ್ತಿದ್ದುದ್ದೂ ಉಂಟು.

ಇಂಥ ಕಟ್ಟಡಗಳಲ್ಲಿ ಅವರು ಇಟ್ಟಿಗೆಯನ್ನು ಬಳಸುತ್ತಿದ್ದರು. ಇಂಗ್ಲೆಂಡಿನಲ್ಲಿ ಮೊಟ್ಟಮೊದಲ ಇಟ್ಟಿಗೆಯ ಬಳಕೆ ಬಂದುದು ರೋಮನ್ನರಿಂದಲೇ. ಗಾರೆಗಚ್ಚನ್ನು ಹೆಚ್ಚಾಗಿ ಬಳಸಿ ಗೋಡೆಗಳನ್ನು ಕಟ್ಟುವುದರಲ್ಲೂ ಅವರು ಜಾಣರಾಗಿದ್ದರು. ಕಂಬಗಳ ರೀತಿ ವಿನ್ಯಾಸಗಳನ್ನೂ ಹೆಚ್ಚಿಸಿದರು. ರೋಮನ್ನರ ಕಂಬಗಳಲ್ಲಿ ಅಲಂಕರಣವೂ ಇದೆ, ಸುಭ್ರತೆಯ ದೃಷ್ಟಿಯೂ ಇದೆ. ಗ್ರೀಕರ ದೋರಿಕ್ ಮತ್ತು ಅಯೋನಿಕ್ ಬಗೆಯ ಕಂಬಗಳಲ್ಲದೆ ತಸ್ಕನ್, ಕೊರಿಂಥಿಯನ್ ಮತ್ತು ಸಂಮಿಶ್ರ (ಕೊರಿಂಥಿಯನ್ ಮತ್ತು ಅಯೋನಿಕ್

ಎರಡರದ್ದು) ಎಂಬ ಮತ್ತೆಮೂರು ಬಗೆಗಳನ್ನೂ ಬಳಸತೊಡಗಿದರು. ಕೊರಿಂಥಿಯಸ್ ಎಂಬುದು ಅವರ ಕಲ್ಪನೆಯೇ.

ರೋಮನ್ ಸಾಮ್ರಾಜ್ಯದ ರಾಜಧಾನಿಯು ಬೈಸಾಂಟಿಯಂಗೆ ಬದಲಾದ ಮೇಲೆ ರೋಮನ್ ದೊರೆಗಳು ಕ್ರೈಸ್ತ ಧರ್ಮಕ್ಕೆ ಒಲಿದು ಚರ್ಚುಗಳನ್ನು ಕಟ್ಟಿಸತೊಡಗಿದರು. ಬೈಸಾಂಟಿಯಂನಲ್ಲಿ ಇಸ್ತಾನ್‌ಬುಲ್‌ನ ಸಂತಸೋಫಿಯಾ ಚರ್ಚು ಐರೋಪ್ಯ ಕ್ರೈಸ್ತ ವಾಸ್ತುವಿಗೆ ನಾಂದಿಯಾಯಿತೆನ್ನಬಹುದು. ಅಲಿಂದ ಮುಂದೆ ರೋಮನ್ ವಾಸ್ತುಪ್ರಯೋಗಗಳು ಧಾರ್ಮಿಕ ಕಟ್ಟಡಗಳನ್ನು ನಡೆದು ಉತ್ತರ ಫ್ರಾನ್ಸ್‌ನಲ್ಲಿ ಗೋಥಿಕ್‌ಶೈಲಿ ಮೈದಳೆಯಿತು. ಇದು ಮುನ್ನೂರು ವರ್ಷಗಳವರೆಗೆ ಯುರೋಪಿನಲ್ಲೆಲ್ಲ ಮೆರೆಯಿತು. ಅದು ಮರೆಯಾದ ಮೇಲೂ ಅದರ ಪ್ರಭಾವ ಸುಮಾರಾಗಿಯೇ ಉಳಿದುಕೊಂಡಿತು. ಪುನರುಜ್ಜೀವನ ಯುಗದಲ್ಲಿ ಐರೋಪ್ಯವಾಸ್ತು ಹೆಚ್ಚು ಕಲಾತ್ಮಕವಾಯಿತು, ಭವ್ಯವಾಯಿತು.

ಅಧ್ಯಯನ ಕ್ಷೇತ್ರದ ಮೂಲನೆಲೆ – ಪಶ್ಚಿಮ ಘಟ್ಟ

ಜಗತ್ತಿನ ಜೀವ ಸಂಕುಲಗಳ ಅಪರೂಪದ ಎಂಟು ತಾಣಗಳಲ್ಲಿ ಭಾರತದ ಪಶ್ಚಿಮಘಟ್ಟವೂ ಒಂದು. ಜಗತ್ತಿನ ಜೀವ ವೈವಿಧ್ಯತೆಯ ತೊಟ್ಟಿಲಂತಿರುವ ಪಶ್ಚಿಮಘಟ್ಟತಾಣ, ಇದೀಗ ಅಭಿವೃದ್ಧಿಯ ನೆಪದಲ್ಲಿ ಹಲವು ಅನಾಚಾರಗಳಿಗೆ ಮೌನ ಸಾಕ್ಷಿಯಾಗಿ ನಿಂತಿದೆ.

ಗುಜರಾತ್ ರಾಜ್ಯದಿಂದ ಹಿಡಿದು ದಕ್ಷಿಣ ಭಾರತದ ಕನ್ಯಾಕುಮಾರಿಯವರೆಗೆ ಭಾರತದ ಪಶ್ಚಿಮದ ಅರಬ್ಬಿ ಸಮುದ್ರದ ಕರಾವಳಿಯುದ್ದಕ್ಕೂ 1.600 ಕಿಲೋಮೀಟರ್ ಉದ್ದ ಹಬ್ಬಿರುವ ಪಶ್ಚಿಮ ಘಟ್ಟದ ಗಿರಿಶ್ರೇಣಿಗಳು, ದಟ್ಟಕಾನನ, ಧುಮ್ಮಿಕ್ಕುವ ಜಲಪಾತಗಳು, ಆಳ ಪ್ರಪಾತದ ಕಣಿವೆಗಳು, ಮುಗಿಲೆತ್ತರಕ್ಕೆ ಬೆಳೆದು ನಿಂತ ಮರಗಳು, ಎಲ್ಲೆಡೆ ಹಸಿರಿನ ಹೊದಿಕೆ ಹೊದ್ದು ಮಲಗಿರುವ ಹುಲ್ಲುಗಾವಲು ಪ್ರದೇಶಗಳು ಇವೆಲ್ಲವೂ ಪಶ್ಚಿಮಘಟ್ಟದ ವೈಶಿಷ್ಟಗಳು.

ಮನುಷ್ಯ ಕಾಲಿಟ್ಟ ನೆಲದಲ್ಲಿ ಹುಲ್ಲು ಗರಿಕೆ ಕೂಡ ಬೆಳೆಯಲಾರದು ಎಂಬ ಹಿರಿಯರ ನಾಣ್ಣುಡಿಯೊಂದು ನಮ್ಮ ಜನಪದರ ನಡುವೆ ಚಾಲ್ತಿಯಲ್ಲಿದೆ, ಈ ಮಾತು ನಮಗೆ ಅರ್ಥವಾಗಬೇಕಾದರೆ, ಅಥವಾ ಮನನವಾಗಬೇಕಾದರೆ, ಇತ್ತೀಚಿಗಿನ ಪಶ್ಚಿಮಘಟ್ಟವನ್ನು ಕಣ್ಣಾರೆ ಒಮ್ಮೆ ಕಣ್ಣಾರೆ ನೋಡಬೇಕು. ಇವೊತ್ತಿಗೂ ಮನುಷ್ಯನೆಂಬ ಪ್ರಾಣಿ ಕಾಲಿಡಲಾಗದ ದುರ್ಗಮ ಅರಣ್ಯ ಪ್ರದೇಶದಲ್ಲಿ ಮಾತ್ರ ಅದರ ಮೂಲ ಸ್ವರೂಪ ಹಾಗೆಯೇ ಉಳಿದಿದೆ.

ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಸಹ್ಯಾದ್ರಿಯ ಗಿರಿಶ್ರೇಣಿ ಎಂತಲೂ, ಕೇರಳದಲ್ಲಿ ಮಲಬಾರ್ ಪ್ರಾಂತ್ಯ ಮತ್ತು ಮೌನ ಕಣಿವೆ ಎಂತಲೂ ಹಾಗೂ ತಮಿಳುನಾಡಿನಲ್ಲಿ ನೀಲಗಿರಿ ಮತ್ತು ಗೋವಾದಲ್ಲಿ ಕೊಂಕಣ ಪ್ರಾಂತ್ಯ ಎಂದೆಲ್ಲಾ ಬಗೆ ಬಗೆಯಲ್ಲಿ ಕರೆಸಿಕೊಳ್ಳುವ ಪಶ್ಚಿಮಘಟ್ಟದ ವೈಭವವನ್ನು ನಾವು, ಮಹಾರಾಷ್ಟ್ರದ ಮಹಾಭಲೇಶ್ವರ, ಲೋನಾವಾಲ, ಭೀಮಾಶಂಕರ,ಅಂಬೋಳಿಘಾಟ್, ಖಂಡಾಲ, ಪಂಚಾಗ್ನಿ, ಕರ್ನಾಟಕದ ಕೊಡಚಾದ್ರಿ, ಮುಳ್ಳಯ್ಯನ ಗಿರಿ, ಬ್ರಹ್ಮಗಿರಿ, ಪುಷ್ಪಗಿರಿ, ಕುಮಾರ ಪರ್ವತ, ಕುದುರೆಮುಖ, ಬಿಳಿಗಿರಿರಂಗನ ಬೆಟ್ಟ, ಹಿಮವದ್ ಗೋಪಾಲ ಸ್ವಾಮಿ ಬೆಟ್ಟ, ಕೊಡಗಿನ ತಡಿಯೊಂಬಳ್, ಕೇರಳದ ಮನ್ನಾರ್, ತಮಿಳುನಾಡಿನ ನೀಲಗಿರಿ ಮುಂತಾದ ಪ್ರದೇಶಗಳಿಗೆ ಬೇಟಿ ಸವಿಯಬೇಕಿದೆ. ಈ ಪ್ರದೇಶಗಳಲ್ಲಿ ಮತ್ತು ಕೇರಳದ ಮೌನ ಕಣಿವೆಯಲ್ಲಿ ಪಶ್ಚಿಮಘಟ್ಟದ ನಿಜವಾದ ದರ್ಶನವಾಗುವುದು.

ಪಶ್ಚಿಮಘಟ್ಟದಲ್ಲಿರುವ ಪ್ರಮುಖ 32 ಗಿರಿಪರ್ವತಗಳು ಮತ್ತು ಶ್ರೇಣಿಗಳ ಸುತ್ತಳತೆ ಒಂದು ಲಕ್ಷದ ಅರವತ್ತು ಸಾವಿರ ಚದುರ ಕಿ.ಮಿ. ಎಂದು ಅಂದಾಜಿಸಲಾಗಿದೆ.

ಜೀವ ಜಾಲದ ಜಗತ್ತಿನಲ್ಲಿ ಅಪರೂಪ ಎನ್ನಲಾದ 5 ಸಾವಿರ ಗಿಡಮೂಲಿಕೆ ಸಸ್ಯಗಳು ಮತ್ತು ಹೂವಿನ ಗಿಡಗಳು, 139 ಸಸ್ತನಿ ಪ್ರಭೇಧಗಳು, 508 ಬಗೆಯ ಪಕ್ಷಿ ಪ್ರಬೇಧಗಳು, 179 ವಿವಿಧ ಬಗೆಯ ಕಪ್ಪೆಗಳು ಪಶ್ಚಿಮ ಘಟ್ಟದಲ್ಲಿ ಕಂಡು ಬಂದಿವೆ. ಇವುಗಳಲ್ಲಿ ವಿನಾಶದ ಅಂಚಿಗೆ ತಲುಪಿರುವ 325 ಪ್ರಭೇಧಗಳು ಸೇರಿವೆ. ಇವುಗಳಲ್ಲಿ 33 ಸಸ್ತನಿ ಪ್ರಾಣಿಗಳು ಅಪಾಯದ ಸುಳಿಗೆ ಸಿಲುಕಿವೆ. ಕೇರಳದ ಮೌನ ಕಣಿವೆಯಲ್ಲಿ ಉಳಿದಿರುವ ಸಿಂಹ ಬಾಲದ ಮಂಗ ಕೂಡ ಇವುಗಳಲ್ಲಿ ಒಂದು.

ಜಗತ್ತಿನಲ್ಲಿ ಬೇರೆಲ್ಲೂ ಕಾಣಲಾಗದ 16 ಬಗೆಯ ಅಪರೂಪದ ಪಕ್ಷಿಗಳು, 1600 ವಿವಿಧ ಬಗೆಯ ಹೂವಿನ ಗಿಡಗಳು, (ಆರ್ಕಿಡ್ ಸೇರಿದಂತೆ) ಹಾಗೂ 7 ಸಸ್ತನಿ ಪ್ರಾಣಿಗಳು ಇಲ್ಲಿವೆ. ಕೇರಳದಲ್ಲಿರುವ ಅನಮುಡಿ ಶಿಖರ 8842 ಅಡಿ ಎತ್ತರವಿದ್ದು, ಪಶ್ಚಿಮಘಟ್ಟ ಅತಿ ಎತ್ತರದ ಪರ್ವತ ಎನಿಸಿಕೊಂಡರೆ, ಊಟಿ ಸಮೀಪದ ದೊಡ್ಡ ಬೆಟ್ಟ 8652 ಅಡಿ ಎತ್ತರವಿದ್ದು ಎರಡನೇ ಅತಿ ಎತ್ತರದ ಶಿಖರವಾಗಿದೆ. ಮುಗಿಲು ಚುಂಬಿಸುವಷ್ಟು ಎತ್ತರದ ಗಿರಿಶ್ರೇಣಿಗಳಿಂದಾಗಿ, ಪಶ್ಚಿಮಘಟ್ಟದ ಹಲವು ಪ್ರದೇಶಗಳಲ್ಲಿ ವಾರ್ಷಿಕವಾಗಿ 3000 ದಿಂದ 4000 ಮಿಲಿ ಮೀಟರ್ ಮಳೆಯಾಗುತ್ತಿದೆ. ಉಳಿದೆಡೆ ಸರಾಸರಿ 900 ಮಿ.ಮಿ. ಮಳೆಯಾಗುತ್ತಿದೆ. ಕೇರಳದ ಮೌನಕಣಿವೆ, ಮನ್ನಾರ್. ಊಟಿ, ಮುಂತಾದ ಗಿರಿಧಾಮದ ಪ್ರದೇಶಗಳಲ್ಲಿ ಸರಾಸರಿ ಉಷ್ಣಾಂಶ 15 ಡಿಗ್ರಿ ಸೆಲ್ಸಿಯಸ್ ನಿಂದ 24 ಡಿಗ್ರಿಯವರೆಗೆ ಇರುತ್ತದೆ.

ಇಡೀ ಪಶ್ಚಿಘಟ್ಟದಲ್ಲಿ 13 ರಾಷ್ಟ್ರೀಯ ಉದ್ಯಾನವನಗಳಿದ್ದರೆ, ಎರಡು ಜೈವಿಕ ಉದ್ಯಾನವನಗಳು ಸಹ ಇವೆ. ಪಶ್ಚಿಮಘಟ್ಟದಲ್ಲಿ ಹುಟ್ಟಿ ಹರಿಯುವ ನದಿಗಳಿಗೆ ಲೆಕ್ಕವಿಟ್ಟವರಿಲ್ಲ. ಇವುಗಳಲ್ಲಿ ಪ್ರಮುಖವಾದವುಗಳು ಕೃಷ್ಣ, ಕಾವೇರಿ, ಗೋದಾವರಿ, ಕಾಳಿ, ತುಂಗಾ, ಮಾಂಡವಿ, ಜುವಾರಿ, ಭದ್ರಾ, ಮಲಪ್ರಭ, ಘಟಪ್ರಭ, ಕಬಿನಿ,

ಹೇಮಾವತಿ. ಪೆರಿಯಾರ್ ಮುಖ್ಯವಾದ ನದಿಗಳು. ಜೊತೆಗೆ ಮಹರಾಷ್ಟ್ರ ದಿಂದ ಹಿಡಿದ ಕೇರಳದವರೆಗೆ ಸಾವಿರಾರು ಜಲಪಾತಗಳಿಗೆ, ದೂದ್ ಸಾಗರ್, ಜೋಗ ಜಲಪಾತ, ಕುಂಚಿಕಲ್, ಉಂಚಳ್ಳಿ ಜಲಪಾತಗಳನ್ನು ಪ್ರಮುಖವಾಗಿ ಹೆಸರಿಸಬಹುದು.

ಪಶ್ಚಿಮಘಟ್ಟದ ಅರಣ್ಯಗಳಲ್ಲಿ ಅಂದಾಜು 45 ಲಕ್ಷ ಬುಡಕಟ್ಟು ನಿವಾಸಿಗಳು ಬದುಕುತ್ತಿದ್ದಾರೆ ಎಂದು ಅಂದಾಜಿಸಲಾಗಿದೆ. ಇವರಲ್ಲಿ ಕುಮ್ರಿ, ಹಾಲಕ್ಕಿ, ಹಕ್ಕಲ್, ಸಿದ್ದಿ, ಕರಿಒಕ್ಕಲ, ಮರಾಟ, ಗೌಳಿ,ಮುಕ್ರಿ, ಕಾಡುಕುರುಬ, ಜೇನು ಕುರುಬ, ಸೋಲಿಗ, ತೋಡ, ಜನಾಂಗಗಳನ್ನು ಇಂದಿಗೂ ಕಾಣಬಹುದು. ಈ ಜನಾಂಗಗಳ ಜೊತೆ ಜೊತೆಯಲ್ಲಿ ಹಲವಾರು ಸಾಕುಪ್ರಾಣಿಗಳ (ಹಸು, ಮೇಕೆ, ಕುರಿ) ವಿಶಿಷ್ಟ ಜಾತಿಯ ತಳಿಗಳಿಗೆ ಪಶ್ಚಿಘಟ್ಟ ಹೆಸರುವಾಸಿಯಾಗಿದೆ. ಕೇರಳದಲ್ಲಿ ಮಾರವಾರಿ, ಕರ್ನಾಟಕದಲ್ಲಿ ಮಲೆನಾಡುಗಿಡ್ಡ, ದನಗೂರು ಕುರಿ, ಮಹಾರಾಷ್ಟ್ರದಲ್ಲಿ ಚಿಗು ಮತ್ತು ಬೀಟರ್ ಹಾಗೂ ತಮಿಳುನಾಡಿನಲ್ಲಿ ನೀಲಗಿರ್ ಮತ್ತು ಮಾಲೈಮಿಡ್ಡು ಪ್ರಮುಖ ಜಾನುವಾರು ತಳಿಗಳು.

ಭತ್ತದ ತಳಿಗಳಲ್ಲಿ ಕರ್ನಾಟಕದ ಪಶ್ಚಿಮಘಟ್ಟದ ಪ್ರಾಂತ್ಯದಲ್ಲಿ ಬೆಳೆಯುವ ಸಣ್ಣಕ್ಕಿ ಬಹಳ ಮುಖ್ಯವಾದದು. ಅದೇ ರೀತಿ ಅನೇಕ ತರಾವರಿ ತರಕಾರಿ ಬೆಳೆಗಳು ಮತ್ತು ಹಣ್ಣುಗಳಿಗೆ ಪಶ್ಚಿಮಘಟ್ಟ ಪ್ರಸಿದ್ದಿಯಾಗಿದೆ.

ಇಷ್ಟೆಲ್ಲಾ ವೈವಿಧ್ಯಮಯ ಸಸ್ಯರಾಶಿ, ಪಕ್ಷಿ ಸಂಕುಲ ಮತ್ತು ಜೀವಜಾಲಗಳನ್ನು ಹೊಂದಿರುವ ಪಶ್ಚಿಮಘಟ್ಟಕ್ಕೆ ಈಗ ಜಾಗತೀಕರಣದ ಫಲವಾಗಿ ರಭಸದಿಂದ ಸಾಗುತ್ತಿರುವ ಅಭಿವೃದ್ದಿಯ ನೆಪದಲ್ಲಿನ ಗಣಿಗಾರಿಕೆ, ಕೈಗಾರಿಕೋದ್ಯಮ, ಪ್ರವಾಸೋದ್ಯಮ ಇತ್ತೀಚೆಗೆ ಶಾಪವಾಗಿದೆ. ಕಳೆದ ದಶಕದಲ್ಲಿ ಆರಂಭವಾದ, ಮುಂಬೈ–ಗೋವಾ ನಡುವಿನ 720 ಕಿ.ಮಿ. ದೂರದ ಕೊಂಕಣ ರೈಲ್ವೆ ಇದಕ್ಕೆ ಪರೋಕ್ಷವಾಗಿ ಕಾರಣವಾಯಿತು. ಈ ಪ್ರದೇಶಗಳಲ್ಲಿ ನಿರ್ಮಾಣವಾಗುತ್ತಿರುವ ಬಂದರುಗಳು, ಜಲವಿದ್ಯುತ್ ಯೋಜನೆಗಳು, ಅಣೆಕಟ್ಟುಗಳು ಹಾಗೂ ತಲೆ ಎತ್ತುತ್ತಿರುವ ಕೈಗಾರಿಕೆಗಳ ವೇಗವನ್ನು ಗಮನಿಸಿದರೆ, ಪಶ್ಚಿಮ ಘಟ್ಟದ ಜೀವ ವೈವಿದ್ಯತೆಗೆ ಉಳಿಗಾಲವಿಲ್ಲ ಎನಿಸುತ್ತದೆ.

ಮಹಾರಾಷ್ಟ್ರ ರಾಜ್ಯವೊಂದೇ ಕೊಂಕಣ ಮತ್ತು ರಾಯಘಡ ಪ್ರಾಂತ್ಯದಲ್ಲಿ 33 ವಿಶೇಷ ಅರ್ಥಿಕ ವಲಯ ಹೆಸರಿನಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಅನುಮತಿ ನೀಡಿದೆ. ಜೊತೆ ಖಾಸಾಗಿ ಕಂಪನಿಯೊಂದಕ್ಕೆ ಲಾವಸ ಎಂಬ 12.500 ಎಕರೆ ಪ್ರದೇಶದ ದ್ವೀಪವನ್ನು ಪ್ರವಾಸೋದ್ಯಮ ನಗರವಾಗಿ ಬೆಳೆಯಲು ದೇಣಿಗೆಯಾಗಿ ನೀಡಿದೆ,

ಗೋವಾದಲ್ಲಿ ಪರವಾನಗಿ ಪಡೆದಿರುವ 300 ಕಂಪನಿಗಳಲ್ಲಿ 182 ಗಣಿಕಂಪನಿಗಳು ಗಣಿಗಾರಿಕೆ ನಡೆಸುತ್ತಿದ್ದು, ಇದರಿಂದಾಗಿ ಈವರೆಗೆ 77 ಮಿಲಿಯನ್ ಟನ್ ನಷ್ಟು ಅದಿರಿನ ದೂಳು ನದಿ ಮತ್ತು ಸಮುದ್ರ ಸೇರಿದೆ ಎಂದು ತಜ್ಞರು ಅಂದಾಜಿಸಿದ್ದಾರೆ.

ಮಹಾರಾಷ್ಟ್ರದಲ್ಲಿಯೂ ಕೂಡ ಪಶ್ಚಿಮಘಟ್ಟದ ಒಡಲಲ್ಲಿರು 56 ಹಳ್ಳಿಗಳಲ್ಲಿ ಗಣಿಗಾರಿಕೆ ನಡೆಯುತ್ತಿದೆ. ಇವುಗಳ ಜೊತೆ ಲಕ್ಷಾಂತರ ಹೆಕ್ಟೇರ್ ಅರಣ್ಯ ಭೂಮಿ ಹಿನ್ನೀರಿನಲ್ಲಿ ಮುಳುಗುಡೆಯಾಗುವ ರೀತಿಯಲ್ಲಿ ಹೊಸ ಅಣೆಕಟ್ಟುಗಳಿಗೆ ಅನುಮತಿ ನಿಡಲಾಗುತ್ತಿದೆ. ಇಂತಹ ಅಭಿವೃದ್ಧಿಯ ಅಂಧಾನುಕರಣೆ ಮುಂದಿನ ಮೂವತ್ತು ವರ್ಷಗಳ ಕಾಲ ಪಶ್ಚಿಮಘಟ್ಟದಲ್ಲಿ ಮುಂದುವರೆದರೆ, ಶೇಕಡ 27 ರಷ್ಟು ಅರಣ್ಯ ಮತ್ತು ಜೀವ ಸಂಕುಲಗಳು ನಾಶವಾಗುತ್ತವೆ ಎಂದು ಪರಿಸರ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಈಗಾಗಲೇ ಪಶ್ಚಿಮಘಟ್ಟದಲ್ಲಿ ಶೇ. 24ರಷ್ಟು ತೆಂಗಿನ ಬೆಳೆಯ ಅಭಿವೃದ್ಧಿ ಕುಂಠಿತವಾಗಿದ್ದು, ಪ್ರತಿವರ್ಷ 1.8ರಷ್ಟು ಉಷ್ಣಾಂಶ ಏರಿಕೆಯಾಗುತ್ತಿದೆ ಎಂದು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಪ್ರೊ. ರವೀಂದ್ರನಾಥ್ ಎಚ್ಚರಿಸಿದ್ದಾರೆ.



ಸೋಮವಾರಪೇಟೆ ತಾಲೂಕಿನ ಕೆರೆಹೊನ್ನಮ್ಮ ದೇವರಕಾಡು



ಕೆಂಬಟ್ಟಿ ಹೊಲೆಯರ ಮೂಲದೈವ ಪನ್ನಂಗಾಲ ತಮ್ಮೆಯ ದೇವರಕಾಡು



ಸೋಮವಾರಪೇಟೆ ತಾಲೂಕಿನ ಚಾಮುಂಡೇಶ್ವರಿ ದೇವರಕಾಡು



ವಿರಾಜಪೇಟೆ ತಾಲೂಕಿನ ಮಕ್ಕಿಶಾಸ್ತಾವು ದೇವರಕಾಡು ಒಳಾವರಣ



ಕೊಡಗಿನ ಪ್ರತಿಯೊಂದು ಜನಾಂಗವು ಒಟ್ಟಿಗೆ ಸೇರುವ ದೇವರಕಾಡು ಮಕ್ಕಿಶಾಸ್ತಾವು



ಅಮ್ಮತ್ತಿನಾಡಿನ ಭಗವತಿ ದೇವರಕಾಡಿನಲ್ಲಿರುವ ಟೆರ್ರಾಕೋಟಾ ಶಿಲ್ಪಗಳು



ಮಕ್ಕಿಶಾಸ್ತಾವಿನಲ್ಲಿರುವ ಹಳೆಯ ಟೆರ್ರಾಕೋಟಾ ಶಿಲ್ಪಗಳು

ಅಧ್ಯಾಯ – 04

ಅಧ್ಯಯನ ಕ್ಷೇತ್ರದ ಹಿನ್ನೆಲೆ

ಈಗಾಗಲೇ ನಡೆದಿರುವ ಅಧ್ಯಯನಗಳ ಇತಿಹಾಸ ಕಥನ

ದಕ್ಷಿಣ ಭಾರತದ ಇತಿಹಾಸದಲ್ಲಿ ಕೊಡಗಿನ ಸಂಸ್ಕೃತಿಯ ಬಗ್ಗೆ, ರಾಜಕೀಯ ಇತಿಹಾಸದ ಬಗ್ಗೆ ಮತ್ತು ಅವರು ಜನಾಂಗೀಯ ಅಸ್ಥಿತ್ವವನ್ನು ಹೇಗೆ ಉಳಿಸಿಕೊಂಡಿದ್ದಾರೆ? ಎಂಬುದರ ಬಗ್ಗೆ ಹಲವಾರು ಮಾಹಿತಿಗಳು ನಮಗೆ ಕಾಣಸಿಗುತ್ತದೆ. ಅಲ್ಲದೇ ಅಲ್ಲಿಯ ಸಂಸ್ಕೃತಿಯ ಬಗ್ಗೆ ಹೆಚ್ಚಾಗಿ ಒಮ್ಮತದ ಅಭಿಪ್ರಾಯವನ್ನು ನಾವು ಕಾಣುತ್ತೇವೆ ಕೊಡಗಿನ ಗುಡ್ಡಗಾಡು ಪ್ರದೇಶದಲ್ಲಿ ವಾಸಿಸುವಂತಹವರು, ಕಷ್ಟ ಸಹಿಷ್ಣುಗಳು ಉತ್ತಮ ದೇಹಾದಾಡ್ಯವನ್ನು ಹೊಂದಿದವರು, ಇವೆಲ್ಲಕ್ಕಿಂತಲೂ ಮುಖ್ಯವಾಗಿ ಅವರು ಜನಾಂಗಿಯ ಅಸ್ಥಿತ್ವವನ್ನು ಕಾಪಾಡಿಕೊಂಡವರು. ಹಾಗಾಗೀ ಕೊಡಗಿನ ಸಂಸ್ಕೃತಿಯನ್ನು ಕೊಡವ ಸಂಸ್ಕೃತಿ ಮತ್ತು ಅವರು ವಾಸಿಸುವಂತಹ ಪ್ರದೇಶವನ್ನು ಕೊಡಗು ಎಂದು ಕರೆಯಲಾಗುತ್ತದೆ ಎಂದು ಹಲವಾರು ಗ್ರಂಥಗಳು ವಿವರಿಸುತ್ತದೆ. ಇಂತಹ ಗ್ರಂಥಗಳು ತಮ್ಮದೇ ಮಾದರಿಯಲ್ಲಿ ಕೊಡಗಿನ ಆಡಳಿತ ವ್ಯವಸ್ಥೆ ಮತ್ತು ಸಂಸ್ಕೃತಿಯನ್ನು ಚಿತ್ರಸುವಂತಹ ಪ್ರಯತ್ನಗಳನ್ನು ಮಾಡಿದೆ. ಹಾಗಾಗಿ ಯಾವುದೇ ಒಂದು ವಿಷಯಗಳನ್ನು ಅಧ್ಯಯನಕ್ಕೊಳಪಡಿಸಬೇಕಾದರೆ ಚರಿತ್ರೆ ರಚನಾಶಾಸ್ತ್ರದ ಅಂಶಗಳು ಮತ್ತರು ಚರಿತ್ರೆಗೆ ಸಂಬಂದಿಸಿದ ವಿವರಣೆಗಳನ್ನು ಅನುಕೂಲವಾಗುತ್ತದೆ.

18 ಮತ್ತು 19ನೇ ಶತಮಾನದಲ್ಲಿ ನಡೆದ ಅಧ್ಯಯನಗಳು ರಾಜಕೀಯ ಮತ್ತರು ಸಾಮಾಜಿಕ ಅಂಶಗಳು ಹೆಚ್ಚು ಪ್ರಾಮುಖ್ಯತೆ ಪಡೆದುಕೊಂಡಿದ್ದವು ಅದೇ ಸಂದರ್ಭದಲ್ಲಿ ವಸಾಹತುಶಾಹಿ ಆಡಳೀತ ವ್ಯವಸ್ಥೆ ತನ್ನ ಸಾಮ್ರಾಜ್ಯಶಾಹಿ ನೀತಿಯನ್ನು ವಿಸ್ತರಿಸುವ ಉದ್ದೇಶದಿಂದ ತನ್ನದೇ ಆಡಳಿತ ವ್ಯವಸ್ಥೆಯ ಮಾದರಿಯನ್ನು ಪರಿಚಯಿಸುವಂತಹ ತವಕದಲ್ಲಿತ್ತು. ಕೊಡಗಿನ ಆಧುನಿಕ ಇತಿಹಾಸದ ರಚನೆಯ ಬಗ್ಗೆ ಹಲವಾರು ಗ್ರಂಥಗಳು ಬಿಡಿಬಿಡಿಯಾಗಿ ಪ್ರಕಟನೆಯಾಗಿದೆ. ಸಾ.ಶ. 19 ಮತ್ತು 20ನೇ ಶತಮಾನದಲ್ಲಿ ನೆಡದ ರಚನಾತ್ಮಕ ಬದಲಾವಣೆಗಳಯ ಸ್ಥಳೀಯ ಮತ್ತು ವಸಾಹತುಶಾಹಿ ಬರವಣಿಗೆಗಳು ಕೊಡಗಿನ ಬಗ್ಗೆ ಹೆಚ್ಚು ಪ್ರಮಾಣದಲ್ಲಿ ಪ್ರಕಟಣೆಯಾಗಿದೆ. ಅವುಗಳು ಸಂಶೋಧನೆಯ ಉದ್ದೇಶಗಳನ್ನು ವಿವರಿಸಲು ಚರಿತ್ರಾ ರಚನಾಶಾಸ್ತ್ರದ ವಿವರಗಳು ಅನೂಕೂಲವಾಗುವುದು ಎನ್ನುವ ದೃಷ್ಟಿಯಿಂದ ಅವುಗಳನ್ನು ಚರ್ಚಿಸಲಾಗಿದೆ.

ವೀರರಾಜೇಂದ್ರ ಒಡೆಯ ತನ್ನ ಆಡಳಿತ ಅವಧಿಯಲ್ಲಿ ರಚಿಸಿದ ರಾಜೇಂದ್ರನಾಮೆಯು ರಾಜನ ಅರಸೊತ್ತಿಗೆಯನ್ನು ಆದಾರವಾಗಿಟ್ಟುಕೊಂಡು ರಚಿಸ್ಪಟ್ಟಿರುವಂತಾಗಿದೆ. ಇದು ರಾಜನ ಆಡಳಿತ ವ್ಯವಸ್ಥೆಯನ್ನು

ಆಧಾರವಾಗಿಟ್ಟುಕೊಂಡಿದ್ದು, ರಾಜಕುಟುಂಬಕ್ಕೆ ಸಂಬಂದಿಸಿದ ವ್ಯವಸ್ಥೆಗಳನ್ನು ವಿವರಿಸುತ್ತದೆ. ಆದರೆ ರಾಜನ ಅರಸೊತ್ತಿಗೆಯ ದೊಡ್ಡಸ್ಥಿಕೆಯನ್ನು ಪ್ರಧಾನವಾಗಿರಿಸಿಕೊಂಡು ರಾಜಕುಟುಂಬಕಕೆ ಅವಮಾನಕಾರಿ ಎಂದು ಭಾವಿಸಲಾದ ಐತಿಹಾಸಿ ಸತ್ಯಗಳನ್ನು ಉದ್ದೇಶಪೂರ್ವಕವಾಗಿ ಮರೆಮಾಚಿದೆ. ಆದರೂ ಹಾಲೆರಿ ಅರಸರ ಆಡಳಿತ ವ್ಯವಸ್ಥೆಗೆ ಸಂಬಂಧಿಸಿದಂತೆ ಪೂರಕವಾದ ಮಾಹಿತಿಯನ್ನು ಹೊಂದಿದೆ.

ಸಾ.ಶ. 1811ರಲ್ಲಿ ಲಿಂಗರಾಜೇಂದ್ರ ಒಡೆಯನು ಹೊರಡಿಸಿದ ಹುಕುಂನಾಮಗಳು ನಮಗೆ 18ನೇ ಶತಮಾನದ ಉತ್ತರಾರ್ಧ ಮತ್ತು 19ನೇ ಶತಮಾನದ ಪೂರ್ವಾರ್ಧದ ದಶಕದಲ್ಲಿನ ರಾಜಕೀಯ ಮತ್ತು ಸಾಮಾಜಿಕ ಅಂಶಗಳನ್ನು ವಿವರಿಸುತ್ತದೆ. ಇವುಗಳು ರಾಜೇಂದ್ರ ನಾಮೆಯಷ್ಟೇ ಪ್ರಮುಖವಾದವುಗಳಾಗಿದ್ದು ರಾಜಕೀಯ, ಸಾಮಾಜಿಕ, ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಹೊಂದಿದೆ. ಇವುಗಳನ್ನು ಹೊರತುಪಡಿಸಿ ಕೊಡಗಿನ ಇತಿಹಾಸದ ಬಗ್ಗೆ ಬೆಳಕು ಚೆಲ್ಲುವ ಪ್ರಮುಖ ಗ್ರಂಥವೆಂದರೆ ಸೂರ್ಯನಾಥ್ ಕಾಮಥ್‌ರವರ ಸಂಪಾದಕತ್ವದಲ್ಲಿ ಪ್ರಕಟವಾದ ಕರ್ನಾಟದ ಸ್ಟೇಟ್ ಗಜೇಟಿಯರ್ ಮತ್ತು ಬಿ.ಎನ್ ಸತ್ಯನ್‌ರವರ ಮೈಸೂರು ಸ್ಟೇಟ್ ಗಜೇಟಿಯರ್ ಸಂಪುಟದಲ್ಲಿ ಕೂರ್ಗ್ ಡಿಸ್ಟ್ರಿಕ್ಟ್, ಇವುಗಳು ಕೊಡಗಿನ ರಾಜಕೀಯ ಇತಿಹಾಸ, ಬೌಗೋಳಿಕ ವ್ಯವಸ್ಥೆ, ಮತ್ತು ಸಾಮಾಜಿಕ ವ್ಯವಸ್ಥೆಯ ಬಗ್ಗೆಯೂ ಕೂಡ ವಿವರಿಸುತ್ತದೆ. ಅಲ್ಲದೇ ಕೊಡಗಿನಲ್ಲಿರುವ ವಿವಿಧ ಭೂ ಗೇಣಿ ಪದ್ದತಿಗಳು, ಜಮ್ಮಾಮಲೆ ಮತ್ತು ಕಾಫಿ ಪ್ಲಾಂಟೇಷನ್‌ಗಳ ಬೆಳವಣಿಗೆಗೆ ಪೂರಕವಾದಂತೆ ಆರ್ಥಿಕ ವ್ಯವಸ್ಥೆಯ ಬಗ್ಗೆಯೂ ಕೂಡ ಉಪಯುಕ್ತ ಮಾಯಿತಿಗಳನ್ನು ನೀಡುವಲ್ಲಿ ಈ ಗ್ರಂಥಗಳು ಯಶಸ್ವಿಯಾಗುತ್ತದೆ.

ಪ್ರಾಂಸಿಸ್ ಬುಕಾನನ್‌ರ 1807ರಲ್ಲಿ ಪ್ರಕಟವಾದ ಜರ್ನಿ ಫ್ರಂ ಮದ್ರಾಸ್ ಥ್ರೂ ದಿ ಕಂಟ್ರಿಸ್ ಆಫ್ ಮೈಸೂರು ಕೆನರ ಅಂಡ್ ಮಲಬಾರ್ ಎಂಬ ಪ್ರವಾಸಿ ಗ್ರಂಥವು ಕೊಡಗಿನ ಭೌಗೋಳಿಕ ಲಕ್ಷಣ, ಸಾಮಾಜಿಕ, ಆರ್ಥಿಕ, ರಾಜಕೀಯ ಪರಿಸ್ಥಿತಿಯ ಬಗ್ಗೆ ಸಂಪೂರ್ಣ ವಿವರಣೆಯನ್ನು ನೀಡುತ್ತದೆ. ಅಲ್ಲದೇ ಅಂದು ಅಸ್ಥಿತ್ವದಲ್ಲಿದ್ದ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳ ಬಗ್ಗೆ ಬೆಳಕು ಚೆಲ್ಲುತ್ತಾ ಕೊಡಗು ದಟ್ಟವಾದ ಅರಣ್ಯ ಪ್ರದೇಶಗಳಿಂದ ಕೂಡಿದುದಾಗಿದೆ. ಸಾರಿಗೆ ಸಂಪರ್ಕ ವ್ಯವಸ್ಥೆಯನ್ನು ಕಲ್ಪಿಸುವಂತಹ ಸೌಕರ್ಯಗಳಿಲ್ಲ ಅಲ್ಲಯ ಪ್ರಮುಖ ಬೆಳೆ ಭತ್ತ ಇದನ್ನು ಒಂದು ಪ್ರದೇಶದಿಂದ ಬೇರೊಂದು ಪ್ರದೇಶಕ್ಕೆ ರವಾನಿಸಬೇಕಾದರೆ ಎತ್ತಿನ ಗಾಡಿಗಳನ್ನು ಅವಲಂಬಿಸಬೇಕಾಯಿತು ಎನ್ನತ್ತಾ ಕೊಡಗಿನ ಬುಡಕಟ್ಟು ಸಮುದಾಯಗಳಾದ ಕುರುಬರು,ಎರವರು ಬಗ್ಗೆಯೂ ಮಾಹಿತಿಯನ್ನು ನೀಡುತ್ತಾರೆ.

ಬಕಾನನ್ ವರದಿಗಳಷ್ಟೇ ಪ್ರಮುಖವಾದ ಮಾಹಿತಿಗಳನ್ನು ಹೊಂದಿರುವಂತಹ ಮಾರ್ಕ ವಿಲ್ಕಸ್ ಕೂಡ ತನ್ನ ಪುಸ್ತಕದಲ್ಲಿ 18ನೇ ಶತಮಾನದ ಕೊನೆಯ ದಶಕದಲ್ಲಿ ರಾಜಕೀಯ ವ್ಯವಸ್ಥೆ ಅದರಲ್ಲು ಟಿಪ್ಪುವಿನ ಕಾಲದ ಕೊಡಗಿನ ರಾಜಕೀಯ ಹಾಗೂ ಸಾಮಾಜಿಕ ಪರಿಸ್ಥಿತಿಗಳ ಬಗ್ಗೆ ಅಗತ್ಯ ವಿವರಗಳು ದೊರಕುತ್ತದೆ. ಟಿಪ್ಪು ಸುಲ್ತಾನ್ ಮೈಸೂರು ಪ್ರಾಂತದಲ್ಲಿ ಹೆಚ್ಚು ಪ್ರಭಾವಶಾಲಿಯಾಗಿದ್ದಾಗ ಕೊಡಗು ಪ್ರಾಂತಗಲ್ಲಿಯೂ ಕೂಡ

ತನ್ನ ರಾಜಕೀಯ ಹಸ್ತಕ್ಷೇಪವನ್ನು ವಿಸ್ತರಿಸಿದ್ದನು. ಕೊಡಗಿನೊಂದಿಗೆ ಟಿಪ್ಪುವಿನ ಸಂಬಂಧ ಅವನ ಆಡಳಿತ ವ್ಯವಸ್ಥೆಯ ವಿಸ್ತರಣೆ ಮತ್ತು ಬ್ರಿಟೀಷ್ ನಾಯಕರುಗಳ ವಿರುದ್ದದ ಹೋರಾಟದ ಬಗ್ಗೆ ವಿವರಣೆಗಳನ್ನು ವಿಲ್ಕ್ಸ್ ನೀಡುತ್ತಾರೆ.

ಕೊಡಗಿನ ಬಗೆಗೆ ವಿವರಣೆಯನ್ನು ನೀಡುವ ಮತ್ತೊಂದು ಪ್ರಮುಖ ಗ್ರಂಥವೆಂದರೆ, 1817ರಲ್ಲಿ ಕಾನರ್‌ನು ಬರೆದ ಕೊಡಗು ಸರ್ವೇ. ಇದು ಕೊಡಗಿನ ಬೌಗೋಳಿಕ ವ್ಯವಸ್ಥೆಗಳಿಂದ ಹಿಡಿದು ಅಲ್ಲಿನ ಸಾಮಾಜಿಕ, ರಾಜಕೀಯ, ಹಾಗೂ ಆರ್ಥಿಕ ವ್ಯವಸ್ಥೆಗಳ ಬಗ್ಗೆ ವಿವರಗಳನ್ನು ನೀಡುತ್ತದೆ. ಕೊಡಗಿನ ಒಟ್ಟು ಬೌಗೋಳಿಕ ವ್ಯವಸ್ಥೆಗಳನ್ನು ಕೇಂದ್ರವಾಗಿಟ್ಟುಕೊಂಡು ಅಲ್ಲಿನ ದಟ್ಟವಾದ ಅರಣ್ಯಗಳ ಲಕ್ಷಣ ಮತ್ತು ನೈಸರ್ಗಿಕ ಸಂಪತ್ತಿನ ಬಗ್ಗೆಯೂ ಕೂಡ ವಿವರಿಸುವ ಕೊಡಗು ಸರ್ವೆಯೂ ಕೊಡಗಿನ ಒಟ್ಟು ಭೂ ಪ್ರದೇಶ ವಿಸ್ತೀರ್ಣ ಮತ್ತು ಭೂಮಿಯ ವಿವಿಧ ಲಕ್ಷಣಗಳನ್ನು ವಿವರಿಸುತ್ತದೆ. 1855ರಲ್ಲಿ ಮೋಗ್ಲಿಂಗ್ ಬರೆದ ಕೂರ್ಗ್ ಮೆಮೊರಿಸ್, 1870ರಲ್ಲಿ ರಿಕ್ಟರನು ಬರೆದ ಗಜೆಟಿಯತ್ ಆಫ್ ಕೂರ್ಗ್, 1878ರಲ್ಲಿ ಲಿವಿಸ್ ರೈಸ್ ಬೆರದ ಕೂರ್ಗ್ ಗಜೆಟಿಯರ್,1855ರಲ್ಲಿ ಹಂಟರನು ಸಂಪಾದಿಸಿದ ಪ್ರಕಟಿಸಿದ ಇಂಪೀರಿಯಲ್ ಗೆಜೆಟಿಯರ್, 1892ರಲ್ಲಿ ಬೇಡೆನ್ ಪೂವೆಲ್ ಮೂರು ಸಂಪುಟಗಳಲ್ಲಿ ಬರೆದ ದಿ ಲ್ಯಾಂಡ್ ಸಿಸ್ಟಮ್ ಅಫ್ ಬ್ರಿಟಿಷ್ ಇಂಡಿಯಾ, 19ನೇ ಶತಮಾನದ ಕೊಡಗಿನ ಇತಿಹಾಸದ ಬಗ್ಗೆ ಬೆಳಕು ಚೆಲ್ಲುತ್ತದೆ.

ರಿಕ್ಟರನು ಬರೆದ ಗಜೆಟೆಯರ್ ಆಫ್ ಕೂರ್ಗ್ ಇದು ಕೊಡಗಿನ ರಾಜಕೀಯ ವ್ಯವಸ್ಥೆಯ ಬಗ್ಗೆ ಆರ್ಥಿಕ ಸಾಮಾಜಿಕ, ದಾರ್ಮಿಕ ವ್ಯವಸ್ಥೆ ಮತ್ತು ಚರ್ಚುಗಳ ಬಗ್ಗೆ ವಿವರಣೆಯನ್ನು ನೀಡುತ್ತದೆ. ಅಲ್ಲದೇ ವಸಹತುಶಾಹಿ ಆಡಳಿತ ವ್ಯವಸ್ಥೆ ಮತ್ತು ಕೊಡಗಿನ ಕೊನೆಯ ರಾಜನಿಂದ ಕೊಡಗು ಬ್ರಿಟಿಷ್ ಹತೋಟಿಗೆ ಒಳಪಟ್ಟ ಬಗ್ಗೆ ಕೊಡಗಿನಲ್ಲಿ ಅಸ್ಥಿತ್ವದಲ್ಲಿದ್ದ ಗೇಣಿಯ ವ್ಯವಸ್ಥೆಯ ಬಗ್ಗೆಯೂ ವಿವರಣೆ ಹೊಂದಿದೆ. ಇದೇ ರೀತಿಯ ವಿವರಣೆಯನ್ನು ಹೊಂದಿರುವ ಇನ್ನೊಂದು ಪ್ರಮುಖ ಗ್ರಂಥವೆಂದರೆ ಬೆಡನ್ ಪೋವೆಲ್ ಬರೆದ ದಿ ಲ್ಯಾಂಡ್ ಸಿಸ್ಟಮ್ ಆಫ್ ಬ್ರಿಟೀಷ್ ಇಂಡಿಯಾ. ಇದು 19ನೇ ಶತಮಾನದಲ್ಲಿ ಇಡೀ ಭಾರತದಾದ್ಯಂತ ಇದ್ದಂತಹ ಒಟ್ಟು ಭೂಮಿಯ ಲಕ್ಷಣಗಳ ಬಗ್ಗೆ ವಿವರಣೆ ನೀಡುತ್ತದೆ.

ಕೊಡಗಿನಲ್ಲಿ ಅಸ್ತಿತ್ವದಲ್ಲಿದ್ದ ಭೂ ಗೇಣಿ ಪದ್ದತಿಗಳಾದ, ಜಮ್ಮಾಮಲೆ, ಗೇಣಿ ಮಲೆ, ಕಾಫಿ ಸಾಗುವಳಿ ಮಲೆ, ಬಾಣೆ, ಬರಿಕೆ, ದೇವರಕಾಡುಗಳ ಬಗ್ಗೆ ಸೂಕ್ಷ್ಮವಾಗಿ ಗಮನಿಸಿರುವುದನ್ನು ಕಾಣಬಹುದು. ಮೋಗ್ಲಿಂಗ್ ಮತ್ತು ರಿಕ್ಟರ್‌ರವರ ಗ್ರಂಥಗಳು ಅಂದಿನ ಕ್ರೈಸ್ತಪಾದ್ರಿ ಸಮುದಾಯವು ಅವರ ಕೊಡುಗೆಗಳು ಕೊಡಗಿನ ಇತಿಹಾಸಕ್ಕೆ ಗಣನೀಯವಾಗಿದೆ. ಲೀವಿಸ್ ರೈಸ್, ಹಂಟರ್, ಬೆಡನ್ ಪೋವೆಲ್ ಅವರ ಕೊಡುಗೆಗಳು ಕೊಡಗಿನ ಇತಿಹಾಸವನ್ನು ಚಿತ್ರಿಸುವಂತ ಪ್ರಯತ್ನಗಳನ್ನು ಮಾಡಿದ್ದಾರೂ, ಅವರ ವಿಶ್ಲೇಷಣೆಗಳು ಸಾಮ್ರಾಜ್ಯಶಾಹಿ ಆಳರಸರಿಗೆ ತಮ್ಮ ಸರಕಾರದ ಆಕಾಂಕ್ಷೆಗಳನ್ನು ಪೂರೈಸಲು ಹಾಗೂ ಅವುಗಳನ್ನು

ನ್ಯಾಯಸಮ್ಮತಗೊಳಿಸಲು ಸಹಾಯಕವಾದವು ಎಂದರೆ ತಪ್ಪಾಗಲಾರದು ಅವುಗಳೆಲ್ಲವೂ ಸಾಮ್ರಾಜ್ಯಶಾಹಿ ಆಡಳಿತ ವ್ಯವಸ್ಥೆಯ ಹಿನ್ನೆಲೆಯಲ್ಲಿ ಬರೆಯಲ್ಪಟ್ಟಂತಹವುಗಳು.

ಕೊಡಗಿನಲ್ಲಿ ಜಾತಿ ಮತ್ತು ಉಪಜಾತಿಗಳು ಬಹಳಷ್ಟು ಕಂಡುಬರುತ್ತದೆ. ಪ್ರತ್ಯೇಕ ಜಾತಿಗಳ ಆಚರಣೆ ಮತ್ತು ಸಂಪ್ರದಾಯಗಳು ಕೂಡ ಕಂಡುಬರುತ್ತದೆ. ಈ ರೀತಿಯ ಸಂಪ್ರದಾಯಗಳು ತಮ್ಮದೇ ಇತಿಹಾಸವನ್ನು ಹೊಂದಿಕೊಂಡು ಬಂದಿದೆ. ಕೊಡಗಿನ ಜಾತಿ, ಉಪಜಾತಿ ಮತ್ತು ಪಂಗಡಗಳ ಬಗ್ಗೆ ಹಾಗೂ ಆಚರಣೆ, ಸಂಪ್ರದಾಯಗಳ ಬಗ್ಗೆ 1871 ರಲ್ಲಿ ರಾಬ್ ಕೂಲ್ ಬರೆದ ಕೂರ್ಗ್ ಸಿವಿಲ್ ಲಾ ಹಾಗೂ 1887ರಲ್ಲಿ ರಿಕ್ಟರನು ಬರೆದ ಎತ್ನಾಗ್ರಾಫಿಕಲ್ ಕಂಪೆಂಡಿಯಮ್ ಆಫ್ ಕೂರ್ಗ ಉಪಯುಕ್ತ ಮಾಹಿತಿಯನ್ನು ನೀಡುತ್ತದೆ. ಕೊಡಗಿನ ಜನರ ಸಾಂಸ್ಕೃತಿಕ ಪೂರ್ವಗ್ರಹಗಳು ಹೇಗೆ ಅಲ್ಲಿನ ಗುಲಾಮ ಪದ್ಧತಿಗೆ ಎಡೆಮಾಡಿಕೊಟ್ಟವು ಮತ್ತು ಆ ವ್ಯವಸ್ಥೆಯು ಸಂಸ್ಕೃತಿಯ ಮುಖ್ಯವಾಹಿನಿ ಜೊತೆಗೆ ಯಾವ ರೀತಿಯ ಸಂಬಂಧಗಳನ್ನು ಇರಿಸಿಕೊಂಡಿತೆನ್ನವ ಬಗ್ಗೆ ರಿಕ್ಟರನು ನಮಗೆ ಮಹತ್ವದ ಸುಳಿವುಗಳನ್ನು ನೀಡುತ್ತಾರೆ. ಎಡ್ಗರ್ ಥರ್ಸ್ಟನ್‌ನ ಎತ್ನಾಗ್ರಾಫೀಕಲ್ ನೋಟ್ಸ್ ಇನ್ ಸದರನ್ ಇಂಡಿಯಾ (1907) ಮತ್ತು ಕಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸೌತ್ ಇಂಡಿಯಾ (1909) ಎನ್ನುವ ಗ್ರಂಥಗಳು ಎಲ್.ಎ ಕೃಷ್ಣ ಅಯ್ಯರ್‌ರವರ ದಿ ಕೂರ್ಗ್ ಟ್ರೈಬ್ಸ್ ಅಂಡ್ ಕಾಸ್ಟ್ (1948) ಕೊಡಗಿನ ವಿವಿಧ ಜಾತಿಯ ಗುಡ್ಡಗಾಡು ಜನರ ಮೂಲ, ಸ್ವರೂಪ, ಆಚರಣೆ ಹಾಗೂ ಸಂಪ್ರದಾಯಗಳನ್ನು ಮಾನವಕುಲಶಾಸ್ತ್ರದ ನೆಲೆಯಿಂ ವಿವರಿಸಲು ಪ್ರಯತ್ನಪಟ್ಟಿದೆ. ಇವುಗಳೆಲ್ಲವು ಕೊಡಗಿನಲ್ಲಿ ವಾಸಿಸುವ ವಿವಿಧ ಸಮುದಾಯಗಳು ಮತ್ತು ಪಂಗಡಗಳ ನಡುವೆ ಉತ್ತಮ ಮಾಹಿತಿ ನೀಡುತ್ತವೆ.

ಹಾಗೆಯೆ ಕೊಡಗಿನ ಸಮಾಜದ ಆಂತರಿಕ ವಿನ್ಯಾಸಗಳನ್ನು ಗಂಭೀರವಾಗಿ ಅಧ್ಯಯನ ನಡೆಸಿದ ಎಂ.ಎನ್ ಶೀನಿವಾಸ್‌ರ ದಿ ರಿಲೀಜನ್ ಆಂಡ್ ಸೊಸೈಟಿ ಎಮಂಗ್ ದ ಕೂರ್ಗ್ಸ್ ಆಫ್ ಸೌತ್ ಇಂಡಿಯಾ (1952) ಒಂದು ಮಹತ್ವದ ಕೃತಿ. ಇದು ದಕ್ಷಿಣ ಭಾರತದಲ್ಲಿ ಕೊಡವ ಸಮುದಾಯದ ಸಂಸ್ಕೃತಿ ಆವರಣೆ, ಮತ್ತು ಸಂಪ್ರದಾಯಗಳನ್ನು ವಿವರಿಸುತ್ತದೆ. ಆದರೆ ಈ ಕೃತಿಯೂ ಕೂಡ ಕೊಡವ ಸಂಸ್ಕೃತಿಯಲ್ಲಿ ಒಟ್ಟು ಬೇರೆಯ ಅಂಶಗಳನ್ನು ವಿಶ್ಲೇಷಿಸುವ ಗೋಜಿಗೆ ಹೋಗಿಲ್ಲ. 20ನೇ ಶತಮಾನದ ಪ್ರಥಮಾರ್ದದಲ್ಲಿ ಕೊರವಂಡ ಅಪ್ಪಯ್ಯ, ನಡಿಕೇರಿಯಿಂದ ಚಿಣ್ಣಪ್ಪ ಹಾಗೂ ಪಾಂಡಂದ ಮುತ್ತಣ್ಣರವರ ಕೃತಿಗಳು ಕೊಡಗಿನ ಚರಿತ್ರಯನ್ನು ಚರ್ಚಿಸುವಾಗ ಬಹಳ ಅಸ್ಪಷ್ಟವಾದ ರಾಷ್ಟ್ರೀಯವಾದವನ್ನು ಹೊರಸೂಸುತ್ತದೆ ಮತ್ತು ವಸಾಹತುಕಾಲದ ಭೂರ್ಜ್ವಾಭಾವನೆ ಹಾಗೂ ಆಸಕ್ತಿಗಳನ್ನು ಪ್ರತಿನಿಧಿಸುತ್ತದೆ.

1970-80ರ ದಶಕದಲ್ಲಿ ಕೊಡಗಿನ ಇತಿಹಾಸ ಮತ್ತು ಸಂಸ್ಕೃತಿಯ ಮೇಲೆ ಹೆಚ್ಚು ಗಮನ ಸೆಳೆದ ಬರಹಗಾರರು ಐ.ಎಂ.ಮುತ್ತಣ್ಣ, ಬಿ.ಡಿ.ಗಣಪತಿ, ಕೆ.ಕೆ.ಸುಬ್ಬಯ್ಯ, ಎಂ.ಪಿ. ಕಾರ್ಯಪ್ಪ, ಪೊನ್ನಮ್ಮ ಕಾರ್ಯಪ್ಪನವರು ಕೃತಿಗಳು ಕೊಡಗು ಮತ್ತು ಕೊಡಗರ ಜೀವನ ಶೈಲಿಗಳ ಬಗ್ಗೆ, ಸಂಪ್ರದಾಯಗಳ ಬಗ್ಗೆ ಮಾತ್ರ ಬರೆಯಲ್ಪಟ್ಟ ಬರಹಗಳು ಕೊಡವ ಸಂಸ್ಕೃತಿ ಮತ್ತು ಆಚರಣೆ, ಸಾಮಾಜಿಕ ಜೀವನದ ಬಗ್ಗೆ ಮಾತ್ರ

ಬೆಳಕು ಚೆಲ್ಲುವಂತಹವುಗಳಾಗಿದೆ. ಇವುಗಳ ತಮ್ಮದೇ ಸಂಸ್ಕೃತಿಯ ಬಗ್ಗೆ ವೈಭವೀಕೃತವಾಗಿ ಸೃಷ್ಟಿಸುವಂತಹ ಪ್ರಯತ್ನಗಳನ್ನು ಮಾಡಲಾಗಿದೆ. ಈ ಗ್ರಂಥಗಳು ತಮ್ಮ ಸಂಪ್ರದಾಯಗಳ ಬಗ್ಗೆ ವೈಭವೀಕೃತ ಚಿತ್ರಗಳನ್ನು ಕೊಡುವುದನ್ನು ಗಮನಿಸಿದರೆ, ಅವು ಸ್ವಾತಂತ್ರ್ಯೋತ್ತರ ಭಾರತದ ಕೊಡವರ "ಐಡೆಂಟಿಟಿಯ"ಯ ಬಗೆಗಿನ ಸಂದಿಗ್ಧತೆಯಿಂದಾಗಿ ಉದ್ಭವಿಸಿದವು ಎಂಬಂತೆ ಭಾಸವಾಗುತ್ತದೆ.

ಈ ಎಲ್ಲಾ ಕೃತಿಗಳಿಗೆ ಹೋಲಿಕೆ ಮಾಡಿದರೆ ಯಾವುದೇ ಪೂರ್ವಗ್ರಹವಿಲ್ಲದೇ ಶಿಸ್ತುಬದ್ಧವಾಗಿ ರಚಿಸಲ್ಪಟ್ಟ ಡಿ.ಎನ್. ಕೃಷ್ಣಯ್ಯರವರ ಕೊಡಗಿನ ಇತಿಹಾಸ ಒಂದು ಅಪೂರ್ವವಾದ ಕೃತಿಯಲ್ಲದ್ದರೂ ಇದು ಸಂಪ್ರದಾಯ ಮತ್ತು ವೈಭವಿಕೃತ ವ್ಯವಸ್ಥೆಯಿಂದ ಸಂಪೂರ್ಣವಾಗಿ ದೂರವಿದ್ದಂತೆ ಕಾಣುತ್ತದೆ. ಮಾತ್ರವಲ್ಲ ಕೃಷ್ಣಯ್ಯರವರು ಗ್ರಂಥ ರಾಜಕೀಯ, ಆರ್ಥಿಕ, ಸಾಮಾಜಿಕ ವ್ಯವಸ್ಥೆಯ ಬಗ್ಗೆ ವಿವರಣೆ ನೀಡುತ್ತದೆ. ಜೊತೆಗೆ ಕೊಡಗಿನ ಬೌಗೋಳಿಕ ಲಕ್ಷಣ ಮತ್ತು ವಸಾಹತುಶಾಹಿ ಆಡಳಿತ ವ್ಯವಸ್ಥೆಯ ಸಂದರ್ಭದ ರಾಜಕೀಯ ಬೆಳವಣಿಗೆ, ಹಾಲೇರಿ ರಾಜನ ಕೊನೆಯ ರಾಜ ಪದಚ್ಯುತವಾಗುವ ಮೂಲಕ ಹೀಗೆ ಕೊಡಗು ಸಂಪೂರ್ಣವಾಗಿ ಬ್ರಿಟೀಷರ ಹತೋಟಿಗೆ ಒಳಪಟ್ಟಿತು, ಎಂಬ ಅಂಶ ಈ ಗ್ರಂಥದಲ್ಲಿ ಕಂಡು ಬರುತ್ತದೆ. ಇದೇ ರೀತಿಯಲ್ಲಿ ಮಾಹಿತಿಗಳನ್ನು 1964 ಮತ್ತು1982ರ ನಡುವೆ ಪ್ರಕಟವಾದ ಕರ್ನಾಟಕ ಸರ್ಕಾರದ ಗಜೆಟಿಯರ್‌ಗಳು ಕೂಡ ಈ ನಿಟ್ಟಿನಲ್ಲಿ ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ.

ಅಲ್ಲದೇ 1990ರ ದಶಕದ ಚರಿತ್ರಾರಚನ ವಿಧಾನ ಕ್ರಮಕಗಕೆ ಮಹತ್ವ ನೀಡಿಮತ್ತು ಶಿಸ್ತು ಬದ್ಧವಾದ ಅಧ್ಯಯನದಿಂದ ಮೂಡಿಬಂದ ಕೆಲವು ಲೇಖನಗಳು ಕೊಡಗಿನ ಇತಿಹಾಸ ಮತ್ತು ಸಮಾಜದ ಕುರಿತು ಬೆಳಕನ್ನು ಚೆಲ್ಲುತ್ತದೆ. ಕೊಡಗಿನ ವಸಹತುಶಾಹಿ ವ್ಯವಸ್ಥೆಯ ಬಗ್ಗೆ ಗಂಭಿರವಾದ ಚೀಂತನೆಯನ್ನೊಳಗೊಂಡಿರುವಂತಹ ಚಿಂತಕರಾದ ಬಿ.ಸುರೇಂದ್ರರಾವ್, ವೀಣಾ ಪೊಣಚ್ಚ, ಸಿ.ಜೆ. ಹುಸೇನ್ ಖಾನ್, ಎಂ.ಜಿ. ನಾಗರಾಜ್, ಟಿ.ಪಿ. ವಿಜಯ್, ಕೆ.ಎಂ ಲೋಕೇಶ್ ಮತ್ತು ಬಿ.ಉದಯರವರು ಲೇಖನಗಳು ಈ ನಿಟ್ಟಿನಲ್ಲಿ ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ. ಇವುಗಳೆಲ್ಲವು ಕೊಡಗಿನ ಸಾಮಾಜಿಕ, ಆರ್ಥಿಕ ವ್ಯವಸ್ಥೆಯ ಬಗ್ಗೆ ಬೆಳಕು ಚೆಲ್ಲುವ ಮತ್ತು ಕೊಡಗನ್ನು ರಾಜಕೀಯ ವ್ಯವಸ್ಥೆಯ ಹಿನ್ನೆಲೆಯಲ್ಲಿ ನೋಡದೆ ಆರ್ಥಿ ಮತ್ತು ಅಲ್ಲಿನ ಸಾಮಾಜಿಕ ವ್ಯವಸ್ಥೆಯ ಮೂಲಕವಾಗಿ ಅಧ್ಯಯನಕ್ಕೊಳಪಡಿಸುವ ಬೆಳವಣೀಗೆ ತೃಪ್ತಿದಾಯಕವಾಗಿದೆ.

ಈ ಮೇಲೆ ತಿಳಿಸಿದ ಎಲ್ಲಾ ಗ್ರಂಥಗಳು 19ನೇ ಮತ್ತು 20ನೇ ಶತಮಾನದಲ್ಲಿ ಬರವಣಿಗೆಗೊಳಪಟ್ಟ ಗ್ರಂಥಗಳಾಗಿದ್ದು, ಅವುಗಳು ಕೊಡಗಿನ ಇತಿಹಾಸ, ರಾಜಕೀಯ ಆಡಳಿತ, ಸಾಮಾಜಿಕ ಮತ್ತು ಸಾಂಸ್ಕೃತಿಕ, ವ್ಯವಸ್ಥೆಯ ಬಗ್ಗೆ ವಿವರಣೆ ನೀಡುವಂತಹವುಗಳಾಗಿದೆ ಮತ್ತು ಇವೆಲ್ಲವು ಬಿಡಿಬಿಡಿಯಾಗಿ ಪ್ರಕಟಣೆಯಾದ ಗ್ರಂಥಗಳಾದಿವೆ. ಹೀಗೆ ಬಿಡಿಬಿಡಿಯಾಗಿ ಪ್ರಕಟಣೆಯಾದ ಗ್ರಂಥಗಳಲ್ಲಿ ಎಲ್ಲಿಯೂ ಕೂಡ ಕೊಡಗಿನಲ್ಲಿ ಬ್ರಿಟಿಷರ ಅರಣ್ಯ ಆಡಳಿತ ವ್ಯವಸ್ಥೆಯ ಬಗ್ಗೆ ಸವಿವರವಾದ ಅದ್ಯಯನ ಮಾಡಿರುವುದು ಕಂಡುಬರುವುದಿಲ್ಲ ಮತ್ತು ಅಧ್ಯಯನದ ಗ್ರಹಿಕೆಯೂ ಕೂಡ ತುಂಬಾ ಸೂಕ್ಷ್ಮ ಮಟ್ಟದ್ದಾಗಿದೆ.

ಕೊಡಗಿನ ಅರಣ್ಯ ಮತ್ತು ಭೂ ನಿಬಂಧನೆಗಳು

ಸಾವಿರದ ಎಂಟು ನೂರ ಹದಿನೇಳರಲ್ಲಿ (1817) ಲೆ॥ ಕಾನರ್ ಬಹುಶಃ ಮೊದಲ ಬಾರಿಗೆ ಕೊಡಗಿನ ಸರ್ವೆ ಮಾಡಿದನೆಂದು ಹೇಳಲಾಗುತ್ತದೆ. ಇಲ್ಲಿ ಬೆಳಯುವ ಸಸ್ಯಗಳನ್ನು ಕುರಿತು ಹೇಳುವಾಗ ಬೇರೆಡೆಗಳಿಗಿಂತ ಪುಷ್ಕಳವಾಗಿ ಬೆಳೆದ ವಿಶಿಷ್ಟ ಸಸ್ಯ ಮಾದರಿಗಳು ಕೊಡಗಿನಲ್ಲಿವೆ ಎಂದು ಗುರುತಿಸಿದ್ದಾನೆ.

ಮಲೆನಾಡು ಕಣಿವೆಯ ತಗ್ಗುಗಳಲ್ಲಿ ಬೆಳೆದ ಕಾಡುಗಳಲ್ಲಿ ಸೈಂಧವ, ಭೀಮಾಕೃತಿಯ ವೃಕ್ಷ ಸಮೂಹವಿದೆ ಎಂದು ಹೇಳಿದ್ದಾನೆ. ಈಗಿನ ಸಸ್ಯಶಾಸ್ತ್ರೀಯ ಅಧ್ಯಯನಗಳು ಕೊಡಗಿನಲ್ಲಿ ಸುಮಾರು 747 ಸಸ್ಯ ಮಾದರಿಗಳನ್ನು ಗುರುತಿಸಿವೆ. ಇಲ್ಲಿನ ಸಸ್ಯವರ್ಗ ತೇವಪರ್ಣ ಜಾತಿ, ಅರೆ ಹರಿದ್ವರ್ಣ ಹಾಗೂ ನಿತ್ಯಹರಿದ್ವರ್ಣ ಮಾದರಿಗಳನ್ನು ಕುರುಚಲು ಹಾಗೂ ಹುಲ್ಲುಗಾವಲು ಪ್ರದೇಶವನ್ನು ಹೊಂದಿದೆ.[3] (ಎಂ.ಜಿ. ನಾಗರಾಜ ಕೆಂಬಟ್ಟಿ ಹೊಲೆಯರ ಸಂಸ್ಕೃತಿ)

ಕೊಡಗಿನ ಸಂರಕ್ಷಿತ ಅರಣ್ಯ ಪ್ರದೇಶಗಳು

ವನ್ಯಜೀವಿಗಳಿಗೆ ಆವಾಸ ಸ್ಥಾನವಾಗಿರುವುದರಿಂದ ಮತ್ತು ನೈಸರ್ಗಿಕ ಸಂಪನ್ಮೂಲಗಳ ಹಿತದೃಷ್ಟಿಯಿಂದ ಕೊಡಗಿನ ಕೆಲವು ಅರಣ್ಯ ಪ್ರದೇಶಗಳನ್ನು ಸಂರಕ್ಷಿತ ಮತ್ತು ಮೀಸಲು ಅರಣ್ಯವೆಂದು ಘೋಷಿಸಲಾಗಿದೆ. ಮೀಸಲು ಅರಣ್ಯ ಪ್ರದೇಶವು ಸುಮಾರು 3,30,240 ಎಕರೆಯಷ್ಟಿದೆ ಕೊಡಗು ಜಿಲ್ಲೆಯು ಉತ್ತರ ಭಾಗದಲ್ಲಿ ತಲಕಾವೇರಿ, ಪುಷ್ಪಗಿರಿ ಮತ್ತು ಬ್ರಹ್ಮಗಿರಿ ರಕ್ಷಿತಾರಣ್ಯಗಳಿವೆ. ದಕ್ಷಿಣ ಭಾಗದಲ್ಲಿ ನಾಗರಹೊಳೆ (ರಾಜೀವ್‌ಗಾಂಧಿ) ರಾಷ್ಟ್ರೀಯ ಉದ್ಯಾನವನ ಇವುಗಳಲ್ಲಿ ಪ್ರಮುಖವಾದವು.

ಈ ಅರಣ್ಯ ಪ್ರದೇಶವು ಪೈಸಾರಿ, ದೇವರಕಾಡು ಮತ್ತು ಊರುಡುವೆಗಳನ್ನೊಳಗೊಂಡಿಲ್ಲ. ಮೀಸಲು ಮತ್ತು ರಕ್ಷಿತಾರಣ್ಯಗಳು ಅರಣ್ಯ ಇಲಾಖೆಯ ಆಡಳಿತಕ್ಕೆ ಒಳಪಟ್ಟಿದೆ. ಪೈಸಾರಿ ಮತ್ತು ಗ್ರಾಮಕ್ಕೆ ಸಂಬಂಧಪಟ್ಟ ಕಾಡುಗಳು ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತದೆ.

ದೇವರಕಾಡುಗಳು ಪವಿತ್ರ ಕಾಡುಗಳೆಂದು ನಂಬಲಾಗಿದ್ದು, ಒಂದು ದೇವತೆ ಅಥವಾ ದೇವಾಸ್ಥಾನಕ್ಕೆ ವಂತಿಸಿರಲಾಗುತ್ತದೆ. ದೇವರ ಕಾಡುಗಳಿಂದ ದೊರಕುವ ಉತ್ಪನ್ನಗಳನ್ನು ಕೇವಲ ದೇವಸ್ಥಾನದ ಕಾರ್ಯಕ್ಕಾಗಿ ಬಳಸಲಾಗುತ್ತದೆ. ಊರುಡುವೆಗಳು ಸರ್ಕಾರದ ಜಾಗಗಳಾಗಿದ್ದು ಕಂದಾಯ ಇಲಾಖೆಯ ಆಡಳಿತಾಧೀನವಾಗಿರುತ್ತದೆ.

ಕೊಡಗಿನ ಈಶಾನ್ಯ ಭಾಗದಲ್ಲಿ ಬನಗಳೆಂದು ಮೀಸಲಿರಿಸಿರುವ ಜಾಗಗಳಿವೆ. ಅಂತಹ ಕಡೆ ರೈತರು ತಮ್ಮ ದನಕರುಗಳನ್ನು ಮೇಯಿಸಬಹುದು. ಉರುವಲು ಮುಂತಾದ ದಿನಬಳಕೆ ವಸ್ತುಗಳನ್ನು ಆ ಪ್ರದೇಶಗಳಿಂದ ಸ್ಥಳೀಯರು ಪಡೆಯಬಹುದು.

ಕೊಡಗಿನ ಕಾಡುಗಳು ಇಲ್ಲಿನ ಸ್ಥಳೀಯರಿಂದ ಮಲೆ–ಕಾಡು ಮತ್ತು ಕಣಿವೆ–ಕಾಡು ಮುಂತಾಗಿ ಕರೆಸಿಕೊಂಡರೂ ಈ ಕಾಡುಗಳು ನಿತ್ಯಹರಿದ್ವರ್ಣ ಮತ್ತು ಎಲೆಉದುರುವ ಕಾಡುಗಳಾಗಿದೆ. ಬೆಲೆಬಾಳುವ ಅನೇಕ ಉಪಯುಕ್ತ ಮರಗಳನ್ನು ಅರಣ್ಯಗಳು ಹೊಂದಿವೆ. ಸಂಪಿಗೆ, ಹೆಬ್ಬಲಸು, ಕೈಮು, ಕೋನಪೈನಿ, ಎಣ್ಣೆಮರ, ಧೂಪ, ಪೂನ್, ಕುವೆ, ಎಬನಿ, ನೊಗ, ಗಂಡಗರಿಗೆ, ಇರುಳು, ನಂದಿ, ಹೊನ್ನೆ, ತೇಗ, ಬೀಟೆ, ಗೇರು, ಹಲಸು, ನಾಗಸಂಪಿಗೆ, ಮಾವು, ಬಳಂಜಿ, ಪಂಡಪೈನೆ, ಹಾಲುಮಡ್ಡಿ, ಮತ್ತು, ಉಳುವೆ, ಹುಳುವೆ, ನೇರಳೆ, ಪಾಲೆ, ಜಂಟ್ಲ, ಅರಿಶಿಣ, ತೇಗ, ಪಾಲ್‌ಮಣಿ, ಕರ್ಪಚಕ್ಕೆ, ಆಲ, ಅತ್ತಿ, ಕಡಪರ, ಕೊಟ್ಟೆ, ಚೋರೆಮರ, ಬಾಣೆ, ನೆಲ್ಲಿ, ಜಿಮ್ಮಿಮರ, ಗೋಳಿ, ಬಸರಿ, ಅಳಲೆ, ಗಂಟೆಮರ, ದಿಂಡಿಗ, ಗಂಧ, ಗರುಕಲು, ಲೂದಿ, ಕೂಳಿ, ಗೊದ್ದ ಇನ್ನೂ ಹಲವಾರು ಉಪಯುಕ್ತ ಮರಗಳಿಂದ ತುಂಬಿ ಕಾಡುಗಳು ಸಮೃದ್ಧವಾಗಿದೆ. ಇಂತಹ ಅರಣ್ಯ ಪ್ರದೇಶವು ತನ್ನ ಒಡಲಲ್ಲಿ ಹಲವಾರು ವಿಶಿಷ್ಟ ಪ್ರಾಣಿ, ಪಕ್ಷಿ, ಕೀಟಗಳಿಗೆ ನೆಲೆಯಾಗಿದೆ.[4]

ಕೊಡಗು ಜಿಲ್ಲೆಯ ಜೀವ ವೈವಿಧ್ಯತೆ

ವಿಸ್ಮಯಕಾರಿ ಜೀವವೈವಿಧ್ಯತೆಯ ಆಗರವಾಗಿರುವ ಇಲ್ಲಿನ ಅರಣ್ಯಗಳಲ್ಲಿ ಸಸ್ಯಹಾರಿ ಪ್ರಾಣಿ ವರ್ಗಕ್ಕೆ ಸೇರಿದ ಆನೆ, ಕಾಡೆಮ್ಮೆ, ಹುಲ್ಲೆ, ಹುಲ್ಲೆಯ ಜಾತಿಗೆ ಸೇರಿರುವ ನಾಲ್ಕು ಕೊಂಬಿನ ಕೊಂಡುಕುರಿ, ಕಾಡುಹಂದಿಗಳು ಮತ್ತು ಜಿಂಕೆಯ ಜಾತಿಗೆ ಸೇರಿದ ಕಡವೆ, ಸಾರಂಗ, ಕಾಡುಕುರಿ ಹಾಗೂ ಬೆಕ್ಕಿನ ಗಾತ್ರದ ಕೂರ ಹಂದಿ ಮುಂತಾದವುಗಳ ಬೀಸುತ್ತವೆ.

ಮಾಂಸಾಹಾರಿ ಗುಂಪಿಗೆ ಸೇರಿದ ಮಾರ್ಜಾಲ ಜಾತಿಯ ಹುಲಿ, ಚಿರತೆ, ಕಾಡು ಬೆಕ್ಕು, ಹುಲಿಬೆಕ್ಕು ಅಲ್ಲದೆ ಕಬ್ಬೆಕ್ಕು, ಮುಂಗುಸಿ ಮತ್ತು ಅಪರೂಪವೆನಿಸುವ ಮರನಾಯಿಗಳು, ಬೇಟೆಗಾರ ಪ್ರಾಣಿಗಳಾದ ಕತ್ತೆಕಿರುಬ, ತೋಳ, ಕೆನ್ನಾಯಿ, ನೀರ್ನಾಯಿ, ಮುಳ್ಳುಹಂದಿ, ಕೀಟಭಕ್ಷಕ ಚಿಪ್ಪುಹಂದಿ ಮತ್ತು ಕರಡಿಗಳಿವೆ.

ವಾನರವರ್ಗದಲ್ಲಿ ಕೋತಿ, ಮುಚ್ಚ, ನೀಲಗಿರಿ ಮುಚ್ಚ ಮುಸುವ ಕಾಡುಪಾಪ ಮತ್ತು ಅಪರೂಪದ ಸಿಂಗಲೀಕ ಸೇರಿವೆ. ಈ ಪ್ರಾಣಿಗಳಲ್ಲದೆ ಮೊಲ, ಹಾರುವ ಅಳಿಲು, ಕೆಂಚಳಿಲು ಮುಂತಾದವೂ ಈ ಕಾಡುಗಳಲ್ಲಿವೆ. ಉರಗಸಂಕುಲಕ್ಕೆ ಸೇರಿದ ಹಲವಾರು ವಿಷವುಳ್ಳ ಮತ್ತುವಿಷ ರಹಿತ ಹಾವುಗಳು, ಮೊಸಳೆ, ಉಡಗಳೂ ಇವೆ.

ಕೆರೆತೊರೆ ತೋಡುಗಳಲ್ಲಿ ಮಳ್ಳಿಮೀನು (ಕೊಯಿಲೆ ಮೀನು) ಕಂಡಿಮೀನು, ಐಮೀನು, ಕಳಚೆಮೀನು, ಹಾವುಮೀನು, ಚಾಪಳೆಮೀನು, ಗೆಂಡೆ ಮೀನು, ಕಣ್ಣಿಮೀನ, ಬರೆಮೀನು, ರೆಂಡೆಮೀನು, ಚುಡುಮೀನುಗಳಲ್ಲದೆ ಹಂದಿಮೀನು (ಮಹರೇರ್) ಕಾರ್ಪ್ ಮ್ಯೂರೆಲ್ ಮುಂತಾದ ಮೀನುಗಳಿವೆ. ಮೆದುಚಿಪ್ಪಿನ ಆಮೆ, ಕರಿ ಆಮೆ, ಟ್ರಾವಂಕರ್ ಆಮೆ, ಬೆಳೆವಾಮೆ, ಬೆತ್ತದಾಮೆ ಮುಂತಾದ ಕೂರ್ಮ ವರ್ಗದ

ಪ್ರಾಣಿಗಳೂ ಇವೆ. ಇನ್ನು ಕೀಟ ಜಗತ್ತು ಬಹಳ ವೈವಿಧ್ಯಮಯವಾಗಿದೆ. ಚಿಟ್ಟೆ, ಪತಂಗಗಳು ಉಜ್ವಲ ವರ್ಣಮಯ ಪಕ್ಷಿಗಳು ಇಲ್ಲಿನ ಕಾಡುಗಳಲ್ಲಿವೆ.[5]

ಇಲ್ಲಿನ ಕಾಡುಗಳಲ್ಲಿ 280 ಜಾತಿಯ ವೈವಿಧ್ಯತೆ ಇದೆ. 109 ಜಾತಿಯ ಪಕ್ಷಿಸಂಕುಲಗಳು, ಸೂಕ್ಷ್ಮಜೀವಿಗಳು, ಜೇನುಹುಳುಗಳು ಇವೆ. ಆದ್ದರಿಂದಲೇ ಇಲ್ಲಿನ ಕಾಡುಗಳು ತಮ್ಮ ವೈವಿಧ್ಯಪೂರ್ಣಶಾಸ್ತ್ರೀಯ ರಚನೆಯಿಂದಾಗಿ ಪ್ರಪಂಚದಲ್ಲಿಯೇ ಹೆಚ್ಚಿನ ಮಹತ್ವಪಡೆದವುಗಳಾಗಿದೆ.

(ಅಡಿಬರಹ: ಕೊಡಗಿನ ಖಗರತ್ನಗಳು, ಡಾ.ವಿ.ಎಸ್. ನರಸಿಂಹನ್)

ದೇವರ ಹೆಸರಿನಲ್ಲಿ ಪ್ರಕೃತಿಯನ್ನು ಸಸ್ಯಸಂಕುಲಗಳು ಮತ್ತು ಪಶುಪಕ್ಷಿಗಳನ್ನು ಪೂಜಿಸುವ ಸಂಪ್ರದಾಯವನ್ನು ಜಗತ್ತಿನ ನಾನಾ ಭಾಗಗಳಲ್ಲಿ ಕಾಣಬಹುದಾಗಿದೆ. ಇಂತಹ ಕೆಲವು ಆಚರಣೆಗಳು ಕೊಡಗು ಜಿಲ್ಲೆಯಲ್ಲಿಯೂ ಚಾಲ್ತಿಯಲ್ಲಿದೆ. ದೇವರ ಕಾಡುಗಳೆಂದು ಕರೆಯಲ್ಪಡುವ ಪವಿತ್ರ ವನಗಳ ರಕ್ಷಣೆಯನ್ನು ಪ್ರಾಚೀನ ಕಾಲದಿಂದಲೂ ಯಾವುದೇ ಒಂದು ದೇವ ಅಥವಾ ದೇವತೆಯ ಹೆಸರಿನಲ್ಲಿ ನಮ್ಮ ಪೂರ್ವಜರು ಮಾಡುತ್ತಾ ಬಂದಿದ್ದಾರೆ. ಪ್ರತಿಹಳ್ಳಿಗಳಲ್ಲಿ ಒಂದಕ್ಕಿಂತ ಹೆಚ್ಚು ದೇವರ ಕಾಡುಗಳನ್ನು ಸಂರಕ್ಷಣೆ ಮಾಡುವಲ್ಲಿ ಇಂದಿನ ಪೀಳಿಗೆಯವರೂ ಹಿಂದೆ ಸರಿಯದೆ ಜವಾಬ್ದಾರಿಯುತ ನಿಲುವನ್ನು ತಳೆದಿದ್ದಾರೆ.

ಸುಮಾರು 1214 ದೇವರಕಾಡುಗಳು 3,650 ಚದರ ಕಿ.ಮೀ. ವಿಸ್ತೀರ್ಣವನ್ನು ಒಳಗೊಂಡಿದೆ.[6] ಪ್ರಪಂಚದಲ್ಲಿಯೇ ಅತಿ ಹೆಚ್ಚು ಸಾಂದ್ರತೆ ಹೊಂದಿರುವ ಈ ದೇವರ ಕಾಡುಗಳು ಪ್ರತಿ ಮುನ್ನೂರು ಎಕರೆಗಳಲ್ಲಿ ಕಂಡುಬರುತ್ತದೆ. ಪ್ರತಿಹಳ್ಳಿ ಅಥವಾ ಗ್ರಾಮಗಳಿಗೊಂದು ದೇವರ ಕಾಡಿರುವುದು ಕೊಡಗಿನ ವಿಶೇಷ. ಇಪ್ಪತ್ತನಾಲ್ಕು ಹಳ್ಳಿಗಳಿಗೆ ಹತ್ತು ಇಂತಹ ದೇವರಕಾಡುಗಳನ್ನು ಕೊಡಗಿನ ಪೂರ್ವಜರು ಉಳಿಸಿ ಇಂದಿನವರು ಪೋಷಿಸುತ್ತಿದ್ದು ಹೆಮ್ಮೆಯ ವಿಷಯವಾಗಿದೆ.

ಇಪ್ಪತ್ತೆಂಟು ಸ್ಥಳೀಯ ಸಮುದಾಯಗಳು ಇದರಲ್ಲಿ ಸ್ಥಳೀಯ ಜಮ್ಮಾ ಮುಸಲ್ಮಾನರು ಸೇರಿದಂತೆ ಈ ದೇವರ ಕಾಡುಗಳ ಭಕ್ತರಾಗಿದ್ದರು.

ಕೇವಲ ದೇವರ ಕಾಡುಗಳಿಗೆ ಸಂಬಂಧಪಟ್ಟಂತೆ ಕೊಡಗಿನ ಜೀವವೈವಿಧ್ಯತೆ ಈ ಕೆಳಗಿನಂತಿದೆ.

ಸಾಮಾನ್ಯವಾಗಿ ಒಂದು ಹಳ್ಳಿಯ 22% ಭೂಪ್ರದೇಶವನ್ನು ದೇವರಕಾಡುಗಳು ಆಕ್ರಮಿಸಿಕೊಂಡಿದ್ದರೂ ಸುಮಾರು 47.34%ನಷ್ಟು ಕಾಡುಮರಗಳು 44.91% ಪಕ್ಷಿಸಂಕುಲಗಳು ಮತ್ತು 21.11%ನಷ್ಟು ಶಿಲೀಂದ್ರ ವರ್ಗಕ್ಕೆ ಸೇರಿರುವಂತಹವು ಈ ನಿತ್ಯಹರಿದ್ವರ್ಣ ಕಾಡುಗಳಲ್ಲಿ ಇವೆ.

(ಕೊಡಗಿನ ಖಗರತ್ನಗಳು, ಡಾ. ಎಸ್.ವಿ. ನರಸಿಂಹನ್ ಪುಟ–26)

ಕೊಡಗಿನ ನಿತ್ಯಹರಿದ್ವರ್ಣ ಕಾಡುಗಳಲ್ಲಿ ಕಂಡುಬರುವ ಮರಗಳು:

ಐನಿ, ಹೆಬ್ಬಲಸು, ಅಜಿಲ್ (Dysoxylum malabaricum) ಕೃಮು, ಕಿರಲ್ ಬೋಗಿ (Hopea parviglora), ಕಾಲ್‌ಪೈನಿ (Diplersocarpus indicus) ಕೋನಪೈನಿ, ಎಣ್ಣೆಮರ, ವೆಲ್ತಪೈನಿ, ಧೂಪ, ಪಾಲಿ, ಪೂನ್, ಕುವೆ, ಎಬನಿ, ನೊಗ, ಗಂಡುಗರಿಗೆ, ಇರುಳು (Xylia xylocarpa) 18 ನಂದಿ, ಹೊನ್ನೆ, ತೇಗ, ಬೀಟೆ, ಹಲಸು, ಅತ್ತ, ನಾಗಸಂಪಿಗೆ, ಮಾವು, ಬೆಳಂಜಿ (Acrocarpus fraxinifolius) ಪಂಡಪೈನಿ, ಹಾಲುಮಡ್ಡಿ (Canarsum) ಮತ್ತಿ, ಉಳುಮೆ, ಹುಳುವೆ, ನೇರಳೆ, ಬುರುಗ, ಪಾಲೆ, ಜಂಟ್ಲ, ನೀರ್‌ವೆನ್‌ಟೀಕ್, ಚಲ್ಲ, ಅರಿಶಿನ ತೇಗ, ಚಟ್ಟುವಮರ, ಸಂಪಿಗೆ, ಪೆರುಮರ, ಕಟ್‌ಕಂಬಳ, ಪಾಲ್‌ಮಣಿ, ಕರ್ಪಮರ, ಲವಂಗ ಪಟ್ಟೆಮರ, ಗೇರುಮರ, ಚೀನಿ (Tetranules nudiflora) ಕಡಪರ (Ausneervosa) ಮಲೆ ಅಂಬಟ್ಟೆ, ಅಂಬಟ್ಟೆ, ಕೊಟ್ಟ, ಚೋರೆಮರ, ಬಾಣೆ, ಕನ್ಡಿವಾಗೆ (Albizzia Spicial) ಅರಿಅಜಿಲ್ (Veperia billoculoria), ಕಾಕೇಚಪಾಯ (Polythia fragrans) ಮಲ್ಲರಾಮ್, ಜಿಮ್ಮಿಮರ, ಕಲ್‌ಜಿನ್ ಟೀಕ್, ತೊಟ್ಟಿಲ, ಆರಂಜಿ, ಜಾಜುಗ್ರಿ (ಂಟಣುಚಿಟಿಘ ಣಂಥುಛಿಂಡುಚಿ) ತಾರಿ, ಬೊಳ್ಳುರುಪು, (Engenia gardenisi) Neeli (Bischofiajavanica), ಬಂಗನ, ಪಾಲಪಣ್ಣ್‌ಮರ, ಇಬ್ರಾಹಿಂ, ದುನ್ನೆ ದುನ್ನೆ (Dillemia Pentagyna) ಕೊಂಗೆಪಣ್‌ಮರ, ಪಣ್‌ಕೆಪುಳಿ, ಕರ್ತಕಂಟೆ (Diospyres nilagirica) ಯೀಯಮರ (Strombosia Cylanica) ಕುಳುಮಾವು, ಅಡಕಪೈನಿ, ಕಂಕರಕೈಮರ, ನೈ ಇರುಪು (Hopea wightiana) ಕೂಮತ್ತಿ (Nephelianslongana).

ಕೊಡಗಿನ ಪೂರ್ವ ಭಾಗದ ಕಾಡುಗಳಲ್ಲಿ ಕಂಡುಬರುವ ಮರಗಳು

ಅಡ್ಲೆ, ಅಳಲೆ,, ಅಂಬಟ್ಟೆ, ಅರಳಿಮರ, ಅರಿಶಿನ ತೇಗ, ಅಪರ್‌ಗಣೆ, (Dalbergia paniculata), ಬಾಣೆ, ಬಸರಿ, ಬಸವನಪಾದ, ಬೆಂಡೆ, ಬಿಲವಾರ, ಬೀಟೆ, ಬೂರುಗ, ಚೆನ್ನಂಗಿ, ದಿಂಡಿಗ, ದೊಡ್ಡಿ, ಶ್ರೀಗಂಧ, ಗಂಟೆಮರ, ಗರುಕಲು, ಗೇರು, ಊದಿ, ಗೊದ್ದ, ಗೋಜಿಮರ, (Bridelia retusa), ಹಾಲೆ, ಹೆಬ್ಬೇವು, ಹೊನ್ನೆ, ಹುಲಿಚೆಲ್ಲು, ಇಪ್ಪೆ, ಇರ್ಪು, ಕಿರಲ್‌ಬೋಗಿ, ಜಲಗಂಟಿ, ಜಲ (Shorea laccifera) ಕಡಿಯಲ, ಕಾಡುತೇಗ, ಕಕ್ಕೆ, ಕರಡಿ, ದಲ್‌ಮರ, ಕಿಲುಂಗಿ, ತಿಗ್‌ದು, ಕೂಳಿ, ಕುಳಿಮಾವು, ಬೆಟ್ಟುತಂಡ್ರಿ ಮರ, (Machillus Macarantha) ಮಳಲಿ, ಪಾದ್ರಿ, ಮತ್ತಿ, ಮಾವು, ಮುಕುರ್ಚಿ, ಮುರ್ಕಲು, ನಂದಿ, ನಸ್ರೆಮರ, ನವಲಾಡಿ, ನೀಲಿ, ಗೊಬ್ಬರನೈರುಲ್ (Bischofia Javanica) ನೀರ್‌ನೊಕ್ಕಿ, ನಿರಂಜಿ, ನೆಲ್ಲಿ, ನೆಲಗೊದ್ದ,

ನೇರಳೆ, ನೊಗ, ಸ್ಯಾಗಡೆ, ಸೊಲ್ಲೆಮರ, (Cordia myxa), ತೇಡಲಿ, ತಡಸಲು ತಣಪು (Disphrose tomenlosa) ಲೂದಿ, ಕೋಣನಕೊಂಬುಮರ (Stereospermuns Xylocorpum) ಹಲುವೆ (Terminalia Paniculata)

1. **ಜಿಲ್ಲೆಯಲ್ಲಿ ಕೃಷಿಗೆ ಪೂರಕವಾಗಿರುವ ಮುಖ್ಯ ಅಂಶಗಳು ಮತ್ತು ದಟ್ಟಾರಣ್ಯಗಳಿಂದ ಆಗುವ ಪ್ರಯೋಜನಗಳು**

ಜಿಲ್ಲೆಯಲ್ಲಿ ಅರಣ್ಯ ಸಂಪತ್ತು ಹೇರಳವಾಗಿರುವುದರಿಂದ ಇಲ್ಲಿನ ಸಾಮಾನ್ಯ ಹಳ್ಳಿಗಾಡಿನ ಜನರಿಗೂ, ರೈತರಿಗೂ ಅನೇಕ ಪ್ರಯೋಜನಗಳಿವೆ.

- ಕಾಲಕ್ಕೆ ತಕ್ಕ ಹಾಗೆ ಮಳೆ ಬೀಳುತ್ತದೆ.
- ಕೊಡಗಿನ ಕೃಷಿಯು ಮಳೆಯಾಶ್ರಿತವಾಗಿರುವುದರಿಂದ ಅನುಕೂಲಕರ ವಾತಾವರಣ ಸೃಷ್ಟಿಯಾಗಿ ಮಳೆ ಬೀಳುವುದರಿಂದ ವ್ಯವಸಾಯವೂ ಚೆನ್ನಾಗಿ ಆಗುತ್ತದೆ.
- ಮಳೆ ಬೀಳುವುದರಿಂದ ಹಳ್ಳ, ಕೆರೆ, ನದಿ, ತೊರೆಗಳು, ತುಂಬುವುದರಿಂದ ಪ್ರಾಣಿಗಳಿಗೂ ಮನುಷ್ಯರಿಗೂ ನೀರಿನ ತೊಂದರೆಗಳು ಉದ್ಭವಿಸುವುದಿಲ್ಲ.
- ಚೆನ್ನಾಗಿ ಮಳೆಯಾದರೆ ಕಾಡು ಮತ್ತಿತರ ಕಡೆಗಳಲ್ಲಿ ಸೊಪ್ಪು ಸೆದೆ ಚೆನ್ನಾಗಿ ಹುಟ್ಟಿಕೊಳ್ಳುತ್ತದೆ. ಸೊಂಪಾಗಿ ಬೆಳೆದ ಹುಲ್ಲು ಮತ್ತಿತರ ಸಸ್ಯಗಳೂ ಜಾನುವಾರುಗಳಿಗೆ ಮೇವಾಗುತ್ತದೆ.
- ಅರಣ್ಯ ಉತ್ಪನ್ನಗಳು ಹೆಚ್ಚಾಗಿ ದೊರಕುತ್ತದೆ.
- ಮಳೆ ನೀರನ್ನು ಇಂಗಿಸಿ ಅಂತರ್ಜಲ ಮಟ್ಟವನ್ನು ಹೆಚ್ಚಿಸುವಲ್ಲಿ ಕಾಡುಗಳು ಸಹಕಾರಿಯಾಗಿವೆ.
- ಉದುರಿ ಬಿದ್ದ ಎಲೆಗಳು ಕೊಳೆತು ಮಣ್ಣಿಗೆ ಸೇರುವುದರಿಂದ ಮೇಲ್ಪದರದ ಮಣ್ಣು ಅತ್ಯಂತ ಫಲಭರಿತ ಮಣ್ಣಾಗಿರುತ್ತದೆ.
- ರಭಸವಾಗಿ ಬರುವ ಮಳೆಗಾಳಿಗಳು ಫಲವತ್ತಾದ ಮೇಲ್ಮೈಮಣ್ಣನ್ನು ಕೊಚ್ಚಿಕೊಂಡು ಹೋಗುತ್ತದೆ. ಹೆಚ್ಚು ಗಿಡ ಮರಗಳಿರುವ ಭೂ ಪ್ರದೇಶದಲ್ಲಿ ಮಣ್ಣು ಕೊಚ್ಚಿಹೋಗುವ ಸಂಭವ ಕಡಿಮೆ ಇರುತ್ತದೆ.
- ಒಂದು ಪ್ರದೇಶದ ಭೂಸಂಪತ್ತು ಉಳಿಯುವುದು ಅಥವಾ ಹಾಳಾಗುವುದು ಅಲ್ಲಿನ ಅರಣ್ಯ ಸಂಪತ್ತನ್ನು ಅವಲಂಬಿಸಿರುತ್ತದೆ.

ಗುಡ್ಡಗಾಡು ಇಳಿಜಾರು ಮುಂತಾದೆಡೆ ಮಳೆಯ ನೀರನ್ನು ಸ್ವೀಕರಿಸಿ ನಂತರ ಅದನ್ನು ಭೂಮಿಯಲ್ಲಿ ಇಂಗಿಸಲು ಅತಿ ದಟ್ಟವಾದ ಗಿಡಮರಗಳಿಂದ ತುಂಬಿರುವ ಅರಣ್ಯಪ್ರದೇಶಗಳಿರಬೇಕಾದ ಅಗತ್ಯವಿರುತ್ತದೆ.

ಇಲ್ಲದಿದ್ದರೆ ಬಿದ್ದ ಮಳೆನೀರು ಹೊಳೆ ಸಮುದ್ರದೆಡೆಗೆ ಮಣ್ಣಿನೊಂದಿಗೆ ಕೊಚ್ಚಿಕೊಂಡು ಹೋಗಿ ಪೋಲಾಗುವ ಸಂಭವವಿರುತ್ತದೆ. ಆದರೆ ಕೊಡಗಿನ ಹೆಚ್ಚು ಭಾಗ ಮಲೆನಾಡಾಗಿರುವುದರಿಂದ ಮಳೆಯ ಪ್ರಮಾಣವು ಹೆಚ್ಚಾಗಿರುತ್ತದೆ. ಪಶ್ಚಿಮ ಘಟ್ಟದ ಕಣಿವೆ ಪ್ರದೇಶಗಳ್ಲಿ ಶೋಲಾ ಹಸಿರುಗಾಡುಗಳೂ ನೈಸರ್ಗಿಕವಾಗಿ ತಮ್ಮದೇ ವಿಶೇಷತೆಯನ್ನು ವಿಶಾಲವಾದ ಹುಲ್ಲುಗಾವಲುಗಳೂ ಸ್ಪಂಜಿನಂತೆ ವರ್ತಿಸಿ ಮಳೆನೀರನ್ನು ಹೀರಿಕೊಂಡು ನೆಲದೊಳಗೆ ಇಂಗಲು ಸಹಾಯ ಮಾಡುವುದರ ಜೊತೆಗೆ ಭೂ ಸವಕಳಿಯನ್ನು ತಡೆಗಟ್ಟುತ್ತದೆ. ಜಿಲ್ಲೆಯಲ್ಲಿ ಹೇರಳವಾಗಿರುವ ಅರಣ್ಯ ಸಂಪತ್ತಿನಿಂದ ಇಲ್ಲಿನ ಹವಾಗುಣವು ಅಪ್ಯಾಯಮಾನವಾಗಿದೆ. ಇಲ್ಲಿನ ವಾಯುಗುಣವನ್ನು ಮಳೆಮಾರುತಗಳು ಮತ್ತು ಪ್ರಾಕೃತಿಕ ಲಕ್ಷಣಗಳು ರೂಪಿಸುತ್ತವೆ. ಮೇರುಗಿರಿಗಳು ಬೆಟ್ಟಸಾಲುಗಳು ಕೂಡ ಇಲ್ಲಿ ಬೀಳುವ ಹೆಚ್ಚಿನ ಪ್ರಮಾಣದ ಮಳೆಗೆ ಕಾರಣವಾಗಿದೆ.

ಈ ಎಲ್ಲಾ ಲಕ್ಷಣಗಳು ಜಿಲ್ಲೆಯಲ್ಲಿ ಕೃಷಿಗೆ ಪೂರಕ ವಾತಾವರಣವನ್ನು ಕಲ್ಪಿಸಿಕೊಟ್ಟಿವೆ. ಜಿಲ್ಲೆಯಲ್ಲಿ ಅರಣ್ಯ ಸಂಪತ್ತು ಹೇರಳವಾಗಿರುವುದರಿಂದ ಸಾವಯವ ಸಾರವನ್ನು ಹೊಂದಿದ ಫಲವತ್ತಾದ ಭೂ ಪ್ರದೇಶವಿದೆ. ಭಾಗಮಂಡಲ, ಮಡಿಕೇರಿ, ನಾಪೋಕ್ಲು ಪ್ರದೇಶದಲ್ಲಿ ಅತ್ಯಧಿಕ ಮಳೆಯಾಗುತ್ತದೆ. ಈ ಪ್ರದೇಶದ ಮಣ್ಣು ಲಾಟರಿಟಿಕ್ (ಸಡಿಲ) ಮಾದರಿಯಾಗುತ್ತದೆ. ಹಾಗೆಯೇ ದಕ್ಷಿಣ ಕೊಡಗಿನ ವೀರಾಜಪೇಟೆ, ಪೊನ್ನಂಪೇಟೆ ಶ್ರೀಮಂಗಲ ಪ್ರದೇಶಗಳ ಮಣ್ಣು ಜಿಗಟು, ಜೇಡಿ ಮಣ್ಣಿನ ಸ್ವರೂಪದ್ದಾಗಿದೆ. ಇಲ್ಲಿ ಮಡಿಕೆ ಬೀಡು ಎಂಬ ಹೆಸರಿನ ಗ್ರಾಮವೂ ಇದ್ದು ಇಲ್ಲಿನ ಮಣ್ಣಿನ ಸ್ವರೂಪವನ್ನು ಪುಷ್ಟೀಕರಿಸುವಂತಿದೆ.[7]

ಅಡಿಟಿಪ್ಪಣಿಗಳು:

1. ಕೆಂಬಟ್ಟಿ ಹೊಲೆಯರ ಸಂಸ್ಕೃತಿ – ಎಂ.ಜಿ. ನಾಗರಾಜು, ಉಪಸಂಸ್ಕೃತಿ ಅಧ್ಯಯನ ಮಾಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ (ಪುಟ 29–32)
2. ಕೆಂಬಟ್ಟಿ ಹೊಲೆಯರ ಸಂಸ್ಕೃತಿ – ಎಂ.ಜಿ. ನಾಗರಾಜು, ಉಪಸಂಸ್ಕೃತಿ ಅಧ್ಯಯನ ಮಾಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ (ಪುಟ 33–34)
3. ಕೆಂಬಟ್ಟಿ ಹೊಲೆಯರ ಸಂಸ್ಕೃತಿ – ಎಂ.ಜಿ. ನಾಗರಾಜು, ಉಪಸಂಸ್ಕೃತಿ ಅಧ್ಯಯನ ಮಾಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ (ಪುಟ 36–37)
4. MYSORE STATE GAZATTER-COORG DISTRICT– BY B.N. SRI SATHYAN
5. ಕೊಡಗಿನ ಖಗರತ್ನಗಳು, ಡಾ. ವಿ.ಎಸ್. ನರಸಿಂಹನ್ (ಪುಟ 25)
6. ಕೊಡಗಿನ ಖಗರತ್ನಗಳು, ಡಾ. ವಿ.ಎಸ್. ನರಸಿಂಹನ್ (ಪುಟ 26)

7. ಕೆಂಬಟ್ಟಿ ಹೊಲೆಯರ ಸಂಸ್ಕೃತಿ – ಎಂ.ಜಿ. ನಾಗರಾಜು, ಉಪಸಂಸ್ಕೃತಿ ಅಧ್ಯಯನ ಮಾಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ (ಪುಟ 33–34)

1. **ಕೊಡಗಿನ ಭೂ ನಿಬಂಧನೆಗಳು**

ಭೂ ನಿಬಂಧನೆಗಳು ಸ್ಥಳದ ಸ್ವಾಧೀನ ಹೊಂದಿದವರು ಅದನ್ನು ಪಡೆದುಕೊಂಡ ಹಿಂದಿರುವ ಚರಿತ್ರೆಯನ್ನು, ಸ್ವಾಧೀನ ಹೊಂದಿದವರಿಗೆ ಸ್ಥಳದ ಮೇಲೆ ಹೊಂದಿರುವಂತಹ ಹಕ್ಕು ಮತ್ತು ಸವಲತ್ತು ಸೂಚಿಸುವ ಪಟ್ಟಿಯಾಗಿದ್ದು, ಸರ್ಕಾರ ಮತ್ತು ಭೂಹಿಡುವಳಿದಾರರಿಗೆ ಸ್ಥಳದ ಬಗ್ಗೆ ಇರುವ ಸಂಬಂಧವನ್ನು ಇದು ಸೂಚಿಸುತ್ತದೆ. ಭೂ ನಿಬಂಧನೆಗಳು ವಿವಿಧ ದರ್ಜೆಗೆ/ವರ್ಗಕ್ಕೆ ಸೇರಿದ ಸ್ಥಳಗಳಿಗೆ ನಿಗದಿಪಡಿಸಿದ ಭೂಕಂದಾಯದ ಬಾಪ್ತು ಪಾವತಿಸಬೇಕಿರುವ ಮೊತ್ತದ ಬಗ್ಗೆಯೂ ತಿಳುವಳಿಕೆ ನೀಡುತ್ತದೆ.

ಕೊಡಗು ಜಿಲ್ಲೆಗೆ ಅನ್ವಯಿಸುವ ಕೆಲವು ಭೂನಿಬಂಧನೆಗಳನ್ನು ಕೂರ್ಗ್‌ಲ್ಯಾಂಡ್ ಮತ್ತು ರೆವಿನ್ಯೂ ರೆಗ್ಯೂಲೇಷನ್ 1899ರ ಅಡಿಯಲ್ಲಿರುವ ನಿಯಮಗಳ ಅನುಬಂಧ 3ರಲ್ಲಿ ವ್ಯಾಖ್ಯಾನಿಸಲಾಗಿದೆ. ದಿನಾಂಕ: 18–02–1910ರಂದು ಕೊಡಗಿನ ಸೆಟ್ಲ್‌ಮೆಂಟ್ ಅಧಿಕಾರಿಯಾಗಿದ್ದ ಗಸ್ತವ್ ಹಲ್ಲರ್‌ರವರು ತಯಾರಿಸಿರುವ ವರದಿಯ ಅಧ್ಯಾಯ–5ರಲ್ಲಿ ವ್ಯಾಖ್ಯಾನಿಸಲಾಗಿರುವ ಮತ್ತು ರೂಲ್ಸ್ ಆಫ್ ಕ್ಲಾಸಿಫ್ಲೈಯರ್‌ನಲ್ಲಿ ಉಲ್ಲೇಖಿಸಲಾಗಿರುವ, ದಿನಾಂಕ: 14–05–1885ರಂದು ಸರ್. ಜೆ.ಬಿ. ಲಯಲ್‌ರವರ ಟಿಪ್ಪಣಿಯಲ್ಲಿ ಮತ್ತು ಕಂದಾಯ ಇಲಾಖೆಯ ಕಡತಗಳಲ್ಲಿ ನಮೂದಿಸಲ್ಪಟ್ಟ ಭೂನಿಬಂಧನೆಗಳು ಈ ಕೆಳಗಿನಂತಿವೆ.

ಪರಾಧೀನ ಬಾಣೆ:ಮೂಲತಃ 'ಬಾಣೆ' ನಿಬಂಧನೆಯಲ್ಲಿ ಮಂಜೂರಾಗಿದ್ದು ನಂತರ ಅದರ ಜೋಡಣೆಯ ತರಿ ಜಮೀನಿನ (ಭತ್ತದ ಬೇಸಾಯ ಮಾಡುವ ಸ್ಥಳ) ಭಾಗದಿಂದ ಬೇರೆಯಾದ ಕಾರಣ ಭೂಕಂದಾಯಕ್ಕೆ ಒಳಪಟ್ಟ ಸ್ಥಳವಾಗಿರುತ್ತದೆ.

ಬಾಣೆ: ತರಿಜಮೀನಿನ ಪ್ರಯೋಜನಕ್ಕಾಗಿ ಮಂಜೂರಾಗಿರುವ 'ಅರಣ್ಯ ಪ್ರದೇಶ ಮತ್ತು ಬಾಣೆಯೆಂದು ನಿಬಂಧನೆ ಇರುವ ಸ್ಥಳಕ್ಕೆ ಜೋಡಣೆಯಾಗಿರುವ ಸದರಿ ತರಿ ಜಮೀನು ಬೇಸಾಯಗಾರನ ಸ್ವಾಧೀನವಿರುವವರೆಗೂ 'ಬಾಣೆ' ಎಂದು ನಿಬಂಧನೆ ಇರುವ ಸ್ಥಳವನ್ನು ಭೂಕಂದಾಯವಿಲ್ಲದೆ ಹೊಂದಿರುವ ವ್ಯವಸಾಯಗಾರನ ವ್ಯವಸಾಯ ಮತ್ತು ವಾಸ್ತವಿಕ ಉಪಯೋಗಕ್ಕೆ ಬಾಣೆಯಿಂದ ಸೌದೆ ಮತ್ತು ಮರಮುಟ್ಟುಗಳನ್ನು ಹೊಂದಿಸಿಕೊಳ್ಳುವ ಮತ್ತು ಭತ್ತದ ಗದ್ದೆಗೆ ಬೇಕಾದ ಸೊಪ್ಪು ಗೊಬ್ಬರಗಳು ಮತ್ತು ಜಾನುವಾರಗಳನ್ನು ಮೇಯಿಸುವ ಅವಕಾಶಗಳನ್ನು ಬಾಣೆ ಎಂದು ನಿಬಂಧನೆ ಇರುವ ಭೂಮಿಗೆ ಜೋಡಣೆಯಾಗಿರುವ ತರಿಜಮೀನಿನ ವ್ಯವಸಾಯಗಾರ ಹೊಂದಿರುತ್ತಾನೆ.

ಪ್ರಿವಿಲೆಜ್ಡ್ ಬಾಣೆ: ದಿನಾಂಕ: 21-05-1886ಕ್ಕಿಂತ ಮುಂಚಿತವಾಗಿ ಮಂಜೂರಾಗಿದ್ದು ಮತ್ತು ಹತ್ತು ಎಕರೆಯವರೆಗೆ ಕಂದಾಯ ಪಾವತಿಸದೆ ವ್ಯವಸಾಯ ಮಾಡಬಹುದಾಗಿದ್ದ ಬಾಣೆ.

ಅನ್‌ಪ್ರಿವಿಲೆಜ್ಡ್ ಬಾಣೆ: ದಿನಾಂಕ; 21-05-1886ರ ನಂತರವೇ ಮಂಜೂರಾಗಿರುವ ಮತ್ತು ಕಂದಾಯ ಪಾವತಿಸದೆ ವ್ಯವಸಾಯ ಮಾಡುವ ಸೌಲಭ್ಯ ಇಲ್ಲದ ಬಾಣೆ. ವ್ಯವಸಾಯ ಮಾಡಿದರೆ ಅಂತಹ ಭಾಗಕ್ಕೆ ಕಂದಾಯ ಪಾವತಿಮಾಡಬೇಕಿತ್ತು.

ಬಾರಿಕೆ: ತರಿಭೂಮಿಯಾಗಿ ಉಪಯೋಗಿಸಬಹುದಾದ ಮತ್ತು ತರಿಭೂಮಿಯಾಗಿ ಪರಿವರ್ತಿಸುವ ತನಕ ಕಂದಾಯಕ್ಕೆ ಬಾರದ ಕೆಳಮಟ್ಟದ ಬಾಣೆಯಾಗಿರುತ್ತದೆ.

ಭಟಮಾನ್ಯ: ಬ್ರಾಹ್ಮಣರಿಗೆ ಕಂದಾಯವಿಲ್ಲದೆ ರಾಜರು ಮಂಜೂರು ಮಾಡಿರುವ ಸ್ಥಳ

ಬಿಡ್ಕುಳ (ಮನೆದಳ): ವ್ಯವಸಾಯ ಮಾಡದಿರುವ ವ್ಯಕ್ತಿಗಳಿಗೆ ಮನೆ ನಿವೇಶನ, ಈ ಸ್ಥಳದಲ್ಲಿ ವ್ಯವಸಾಯ ಮಾಡಿದ್ದಲ್ಲಿ ಸಾಮಾನ್ಯದರದ ಭೂಕಂದಾಯ ವಿಧಿಸಬಹುದಾಗಿತ್ತು.

ಏಲಕ್ಕಿ ಗೇಣಿಮಲೆ: ಮೊದಲಿಗೆ ಗೇಣಿಮಲೆ ಎಂದು ನಿಬಂಧನೆಯಿದ್ದು ನಂತರ ಏಲಕ್ಕಿ ಗೇಣಿ ಮಲೆ ಎಂದು ಬದಲಾವಣೆಗೊಂಡಿರುತ್ತದೆ. ಈ ಮಲೆಗಳನ್ನು ಕಾಲಕಾಲಕ್ಕೆ ತಕ್ಕಂತೆ ಕಮಿಷನರ್‌ರವರು ಗೇಣಿಗೆ ನೀಡುತ್ತಿದ್ದು ಅದರ ವರಮಾನವನ್ನು ಅರಣ್ಯ ಇಲಾಖೆಗೆ ಪಾವತಿಸಲಾಗುತ್ತಿತ್ತು. 1980ರಲ್ಲಿ ಅರಣ್ಯ ಸಂರಕ್ಷಣೆಗೆ ಕಾಯ್ದೆ ಜಾರಿಗೆ ಬಂದ ನಂತರ ಈ ರೀತಿ ಗೇಣಿಗೆ ನೀಡುವ ಸೌಲಭ್ಯವಿರುವುದಿಲ್ಲ.

ಏಲಕ್ಕಿ ಸಾಗು: ಮೊದಲು ಕಾಫಿ ಸಾಗುವಳಿ ಮಲೆ ಎಂಬ ನಿಬಂಧನೆಯಿದ್ದು ಕಾಫಿ ಸಾಗುವಳಿಯು ಫಲಕಾರಿಯಾಗದಿದ್ದ ಕಾರಣ ಏಲಕ್ಕಿ ವ್ಯವಸಾಯ ಇರುವ ಸ್ಥಳ.

ಗೌಡುಂಬಳಿ: ಗ್ರಾಮದ ಪಟೇಲರಿಗೆ ನಿಗದಿತ ಕಂದಾಯದೊಂದಿಗೆ ಮಂಜೂರು ಮಾಡಿರುವ ಸ್ಥಳ (1961ರ ನಂತರ ಈ ನಿಬಂಧನೆ ರದ್ದುಗೊಂಡಿದ್ದು ಅದನ್ನು ಪೈಸಾರಿ/ಸಾಗು ಸ್ಥಳವೆಂದು ಪರಿವರ್ತಿಸಲಾಗಿದೆ.)

ಹಿತ್ಲು: ವ್ಯವಸಾಯಗಾರನಿಗೆ ವಾಸದ ಮನೆ, ಜಾನುವಾರುಗಳ ಕೊಟ್ಟಿಗೆ ಮತ್ತು ಕೈತೋಟಗಳನ್ನು ನಿರ್ಮಿಸಿಕೊಳ್ಳುವುದಕ್ಕಾಗಿ ಅವನು ಹೊಂದಿರುವ ತರಿ ಜಮೀನಿಗೆ ಜೋಡಣೆಯಾಗಿ ಮಂಜೂರಾಗಿರುವ "ಅರಣ್ಯ ಪ್ರದೇಶ" ಈ ಸ್ಥಳಕ್ಕೆ ಭೂಕಂದಾಯ ಇರುವುದಿಲ್ಲ ಮತ್ತು ಈ ಸವಲತ್ತುಗಳು ತರಿ ಜಮೀನಿನಿಂದ ಬೇರ್ಪಟ್ಟಲ್ಲಿ ಇರುವುದಿಲ್ಲ.

ಪರಾಧೀನ ಹಿತ್ಲು: ಮೂಲತಃ 'ಹಿತ್ಲು' ನಿಬಂಧನೆಯಲ್ಲಿ ಮಂಜೂರಾಗಿದ್ದು ನಂತರ ಅದರ ಜೋಡಣೆಯ ತರಿ ಜಮೀನಿನ ಭಾಗದಿಂದ ಬೇರೆಯಾದ ಕಾರಣ ಭೂಕಂದಾಯಕ್ಕೆ ಒಳಪಟ್ಟಿದೆ.

ಮೊಲ ಅಥವಾ ಸಾರಿಗೆ: ಕಂದಾಯವಿರುವ ಖುಷ್ಕಿ ಜಮೀನು

ಹುಲ್ಲುಗಾವಲು: ಜಾನುವಾರುಗಳ ಮೇವಿಗೆ ನೀಡಿರುವ ಜಮೀನು

ಜಹಗೀರ್ ಬಾಣೆ: ಜಹಗೀರ್ ಸ್ಥಳಕ್ಕೆ ಜೋಡಣೆಯಾಗಿರುವ ಬಾಣೆ

ಜಹಗೀರ್ ಭೂಮಿ ಭೂಕಂದಾಯವಿಲ್ಲದೆ ಹೊಂದಿಕೊಂಡಿರುವ ತರಿ ಜಮೀನು

ಜಮ್ಮಾ ಬಾಣೆ: ಜಮ್ಮ ತರಿ ಜಮೀನಿಗೆ ಜೋಡಣೆಯಾಗಿರುವ ಬಾಣೆ

ಜಮ್ಮ ಭೂಮಿ: ಸಾಮಾನ್ಯ ಭೂಕಂದಾಯದ ಅರ್ಧದಷ್ಟು ಭೂಕಂದಾಯ ಪಾವತಿಸಬೇಕಿರುವ ತರಿ ಜಮೀನು

ಜಮ್ಮ ಮಲೆ: ಪಶ್ಚಿಮ ಘಟ್ಟಗಳ ಕಾಯ್ದಿರಿಸಿದ ಅರಣ್ಯಗಳಲ್ಲಿ ಏಲಕ್ಕಿ ಬೆಳೆಯಲು ಅನುವಂಶಿಕ ಅಧಿಕಾರವನ್ನು ನೀಡಿರುವ ಭಾಗಗಳು (ಮೀಸಲು ಅರಣ್ಯ)

ಜೋಡಿಭೂಮಿ: ಅರ್ಧದಷ್ಟು ಭೂಕಂದಾಯವನ್ನು ಧಾರ್ಮಿಕ ಸಂಸ್ಥೆಗೆ ವಹಿಸಿರುವ ತರಿ ಜಮೀನು. ಆ ರೀತಿ ವಹಿಸಿರುವ ಭಾಗವನ್ನು ಜೋಡಿ ಎಂದು ಹೆಸರಿಸಲಾಗಿದೆ.

ಕುರಾವು: ತರಿ ಭೂಮಿಯ ಮೇಲ್ಭಾಗದಲ್ಲಿ ತರಿಭೂಮಿಯ ರಕ್ಷಣೆಗಾಗಿ 16ರಿಂದ 30 ಅಡಿ ಅಗಲವಿರುವ ಸ್ಥಳ.

ಮಠಸ್ಥಳ: ಕಂದಾಯವಿಲ್ಲದೆ ಲಿಂಗಾಯಿತ ಮಠಗಳಿಗೆ ರಾಜರು ಮಂಜೂರು ಮಾಡಿದ ಸ್ಥಳ 1977ರ ಕರ್ನಾಟಕ ಹಲವು ಇನಾಂ ರದ್ದಿಯಾತಿ ಕಾಯ್ದೆ ಮೂಲಕ ರದ್ದು ಪಡಿಸಲಾಗಿದೆ.

ನಾಯಿಮಣ್ಣು: ಗ್ರಾಮದ ಕುಳುವಾಡಿಗೆ ನಿಗದಿತ ಕಂದಾಯದೊಂದಿಗೆ ನೀಡಿರುವ ಸ್ಥಳ (1961 ಮೈಸೂರು ಗ್ರಾಮ ಕಛೇರಿಗಳ ರದ್ದಿಯಾತಿ ಕಾಯ್ದೆ 1961 ಮೂಲಕ ಈ ನಿಬಂಧನೆ ರದ್ದುಗೊಂಡಿದ್ದು ಅದನ್ನು ಪೈಸಾರಿ ಸಾಗು ಸ್ಥಳವೆಂದು ಪರಿವರ್ತಿಸಲಾಗಿದೆ.)

ಪೈಸಾರಿ ಸ್ಥಳ: ಸಿ.ಆರ್.ಸಿ. ಸೆಕ್ಷನ್ 42ರ ಪ್ರಕಾರ ಸರ್ಕಾರದ ಸ್ವತ್ತೆಂದು ಪ್ರಕಟಿಸಲಾಗಿದ್ದು, 1927ರ ಕಾಯ್ದೆ 16ರ ಸೆಕ್ಷನ್ 29ರಂತೆ ಸಂರಕ್ಷಿತ ಅರಣ್ಯವೆಂದು ಅಥವಾ ಅದೇ ಕಾಯ್ದೆ ಸೆಕ್ಷನ್ 3 ರಂತೆ ಮೀಸಲು ಅರಣ್ಯವೆಂದು ಕೂರ್ಗ್ ಗೆಜೆಟ್‌ನಲ್ಲಿ ಪ್ರಕಟಿಸದಿರುವಂತಹ ಎಲ್ಲ ಬಂಜರು ಮತ್ತು ಅರಣ್ಯ ಪ್ರದೇಶಗಳು.

ರೆಡೀಮ್ಡ್:ಹಿಡುವಳಿದಾರನು ಮರಗಳ ಹಕ್ಕಿನ ಬಗ್ಗೆ ನಿಗದಿತ ಮೌಲ್ಯವನ್ನು ಪಾವತಿ ಮಾಡಿರುವ ಸ್ಥಳ

ಸಾಗು ಜಾಗ: ಸಾಗು ನಿಬಂಧನೆ ಇರುವ ಖುಷ್ಕಿ ಜಮೀನು

ಸಾಗು ಜಾಗ ನಿಬಂಧನೆ ಅಥವಾ ಸ್ಥಳ: ಸಾಧಾರಣ ರೈತವಾರಿ ನಿಬಂಧನೆ ಹಿಡುವಳಿದಾರನು ಕಂದಾಯದ ಬಾಪ್ತು ನಿಗದಿತ ಮೌಲ್ಯವನ್ನು ಪೂರ್ಣವಾಗಿ ಪಾವತಿ ಮಾಡಬೇಕಿರುವ ಸ್ಥಳ

ಸರ್ವಮಾನ್ಯ: ಧಾರ್ಮಿಕ ಸಂಸ್ಥೆಗಳಿಗೆ ಕಂದಾಯವಿಲ್ಲದೆ ಮಂಜೂರು ಮಾಡಿರುವ ಸ್ಥಳ

ಉಂಬಳಿ ಭೂಮಿ: ವಿವಿಧ ಸೇವೆಗಳ ಸಲ್ಲಿಕೆಗೆ ಮಂಜೂರಾದ ತರಿ ಜಮೀನು. ಈ ಸ್ಥಳಕ್ಕೆ ವಿಶೇಷವಾಗಿ ಕಡಿಮೆಗೊಳಿಸಿದ ಭೂಕಂದಾಯವಿದ್ದು ಅದು ನಿಯತಕಾಲಿಕ ಪರಿಷ್ಕರಣೆಗೆ ಒಳಪಟ್ಟಿರುವುದಿಲ್ಲ.

ಅನ್‌ರೆಡೀಮ್ಡ್: ಹುಡುವಳಿದಾರನು ಮರಗಳ ಹಕ್ಕಿನ ಬಗ್ಗೆ ನಿಗದಿತ ಮೌಲ್ಯವನ್ನು ಪಾವತಿ ಮಾಡದಿರುವ ಸ್ಥಳ.

ಊರುಗುಪ್ಪೆ: ವಾಸದ ಮನೆ, ದನದ ಕೊಟ್ಟಿಗೆ ಅಥವಾ ಇನ್ಯಾವುದೇ ಕಟ್ಟಡಗಳನ್ನು ನಿವೇಶನವಾಗಿ ಮಂಜೂರು ಮಾಡಲು ಗ್ರಾಮ ಠಾಣಗಳಾಗಿ ಕಾಯ್ದಿರಿಸಿರುವ ಬಾಣೆ

ಉತ್ತಾರ: ಕಂದಾಯವಿಲ್ಲದೆ ದೇವಸ್ಥಾನಗಳಿಗೆ, ಮಠಗಳಿಗೆ ರಾಜರು ಮಂಜೂರು ಮಾಡಿದ ಸ್ಥಳ (ಕರ್ನಾಟಕ ಹಲವು ಇನಾಂ ರದ್ದಿಯಾತಿ ಕಾಯ್ದೆ 1972ರ ಮೂಲಕ ರದ್ದುಪಡಿಸಲಾಗಿದೆ.)

ವಂತಿ ಹೊಲ: ಕೊಡಗಿನ ಈಶಾನ್ಯ ಭಾಗದಲ್ಲಿರುವ ಖುಷ್ಕಿ ಜಮೀನು

ಅರಮನೆ ಪರಂಬು: ಬಾಣೆ ಜೋಡಣೆಯಿಲ್ಲದಿದ್ದ ತರೀ ಭೂಮಿಗೆ ಅರಮನೆಗೆ ಸಂಬಂಧಿಸಿದ (ಸರ್ಕಾರದ)ಸ್ಥಳದಿಂದ ತರೀ ಭೂಮಿಯ ವ್ಯವಸಾಯಕ್ಕೆ ಅಗತ್ಯವಿರುವ ಸವಲತ್ತುಗಳನ್ನು ನೀಡುತ್ತಿದ್ದು ಅಂತಹ ಸವಲತ್ತುಗಳನ್ನು ಒದಗಿಸುತ್ತಿದ್ದ ಅರಮನೆಗೆ ಸೇರಿದ ಸ್ಥಳಗಳಿಗೆ ಅರಮನೆ ಪರಂಬು ಎಂದು ಹೆಸರಿಸಲಾಗಿದೆ.

ದೇವರಕಾಡು: ಸಾಮಾನ್ಯವಾಗಿ ಯಾವುದಾದರೂ ದೇವರ ಅಥವಾ ದೇವಸ್ಥಾನಕ್ಕೆ ನಿಗದಿಪಡಿಸಿದ ಅರಣ್ಯ ಪ್ರದೇಶ (ಸಂರಕ್ಷಿತ ಅರಣ್ಯ)

ಗೆರೆಕಾಡು: ತರಿ ಭೂಮಿಯ ಮೇಲ್ಭಾಗದಲ್ಲಿ ತರಿಭೂಮಿಯ ರಕ್ಷಣೆಗಾಗಿ 16 ಅಡಿ ಅಗಲಕ್ಕಿಂತ ಹೆಚ್ಚಿಲ್ಲದ ಸ್ಥಳ

ಹೊಸಗಾಮೆ: ವ್ಯವಸಾಯಕ್ಕೆ ಈ ಮೊದಲು ತಯಾರಿ ಮಾಡದಿದ್ದ ತರಿ ಭೂಮಿ (ಹೊಸದಾಗಿ ವ್ಯವಸಾಯಕ್ಕೆ ತಯಾರಿ ಮಾಡಿದ ತರಿಭೂಮಿ)

ಮಂದು: ಗ್ರಾಮದ ಹಬ್ಬಗಳಲ್ಲಿ ಕುಣಿತಕ್ಕೆ ಕಾಯ್ದಿರಿಸಿರುವ ಸ್ಥಳ (ಸಂರಕ್ಷಿತ ಅರಣ್ಯ)

ವೈಯಕ್ತಿಕ ಫಲಾನುಭವ: ಹಿಡುವಳಿದಾರನು ತಾನು ಹೊಂದಿರುವ ಸ್ಥಳದಲ್ಲಿ ಯಾವುದೇ ಶುಲ್ಕ ಪಾವತಿಸದೆ ತನ್ನ ವಾಸ್ತವಿಕ ಉಪಯೋಗಕ್ಕೆ ಮತ್ತು ವ್ಯವಸಾಯಕ್ಕೆ ಅಗತ್ಯವಿರುವ ತನ್ನ ಸ್ಥಳದಲ್ಲಿ ಬೆಳೆದ (ಸರ್ಕಾರದ ಏಕಸ್ವಾಮ್ಯತೆ ಇರುವ ಶ್ರೀಗಂಧವನ್ನು ಹೊರತುಪಡಿಸಿ ಉಳಿದ) ಎಲ್ಲಾ ಮರಮುಟ್ಟುಗಳನ್ನು ಕಡಿಯುವ ವಿಶಿಷ್ಟ ಹಕ್ಕನ್ನು ಹೊಂದಿದ್ದಲ್ಲಿ ಅವನ ಸ್ಥಳದಲ್ಲಿ ಬೆಳೆಯುವ ಮರಮುಟ್ಟು ಮತ್ತು ಇತರ ಅರಣ್ಯೋತ್ಪನ್ನಗಳ ವೈಯಕ್ತಿಕ ಫಲಾನುಭವವನ್ನು ಅನುಭವಿಸುತ್ತಿರುವವನೆಂದು ತಿಳಿಯತಕ್ಕದ್ದು.

ತನ್ನ ವೈಯಕ್ತಿಕ ಮತ್ತು ಕಾರ್ಮಿಕ ವರ್ಗದವರ ಉಪಯೋಗಕ್ಕೆ ಹೊರತುಪಡಿಸಿ ಇನ್ನುಳಿದವರ ಉಪಯೋಗಕ್ಕಾದರೆ ಅಸಿಸ್ಟೆಂಟ್ ಕಮಿಷನರ್‌ರವರ ಅನುಮತಿ ಇಲ್ಲದೆ ಬೇರೆ ಗ್ರಾಮದಲ್ಲಿ ತನ್ನ ಸ್ವಂತ ಉಪಯೋಗಕ್ಕೆ ಸಹ ಬಳಸಿಕೊಳ್ಳುವ ಅಧಿಕಾರ ಇವರಿಗೆ ಇರುವುದಿಲ್ಲ.

ಸಾಗುಕಂದಾಯ: ತರಿ ಜಮೀನಿಗೆ ರೂಢಿಯಲ್ಲಿರುವ ಪೂರ್ಣಪ್ರಮಾಣದ ಭೂಕಂದಾಯ.

ಟೆಂಕತನ ತೆರುವಳಿದರ: ಮರಮುಟ್ಟುಗಳ ಅಧಿಕೃತ ಮೌಲ್ಯ.

ಊರಂಬಲ: ಪಂಚಾಯ್ತಿ ಸಭೆ ನಡೆಸಲು ಗ್ರಾಮದಲ್ಲಿ ಕಾಯ್ದಿರಿಸಿದ ಸ್ಥಳ. (ಸಂರಕ್ಷಿತ ಅರಣ್ಯ)

ಊರುಡುವೆ: ಗ್ರಾಮ ಅರಣ್ಯ. ಕೊಡಗಿನ ಈಶಾನ್ಯ ಭಾಗದಲ್ಲಿನ ಸಂರಕ್ಷಿತ ಅರಣ್ಯ.

ವರ್ಗ: ತರಿ ಜಮೀನಿನ ಒಂದು ಹಿಡುವಳಿ.

ಇದಿಷ್ಟೂ 1899ರ ಕೂರ್ಗ್ ಲ್ಯಾಂಡ್ ಮ್ತು ರೆವೆನ್ಯೂ ರೆಗ್ಯೂಲೇಷನ್ ಮತ್ತು ಅದರಡಿ ರಚಿಸಿದ್ದ ನಿಯಮಗಳು.

ಸ್ವಾತಂತ್ರ್ಯ ನಂತರದಲ್ಲಿ, 1964ರ ಕರ್ನಾಟಕ ಭೂಕಂದಾಯ ಅಧಿನಿಯಮವು ದಿನಾಂಕ 01–04–1964ರಂದು ಜಾರಿಗೆ ಬಂದಿತು ಮತ್ತು 1899ರ ಕೂರ್ಗ್‌ಲ್ಯಾಂಡ್ ಮತ್ತು ರೆವಿನ್ಯೂ ರೆಗ್ಯೂಲೇಷನನ್ನು ರದ್ದುಪಡಿಸಿತು.

ಕೊಡಗು ಜಿಲ್ಲೆಯ ಹಲವು ಭೂ ನಿಬಂಧನೆಗಳನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964ರಲ್ಲಿ ಮುಂದುವರಿಸಲಾಯಿತು.

ಕರ್ನಾಟಕ ಭೂಕಂದಾಯ ಅಧಿನಿಯಮ 1964 ಸೆಕ್ಷನ್ 79(2)ರ ಮೂಲಕ ಕೊಡಗು ಅಥವಾ ಯಾವುದೇ ಆದೇಶಗಳ ಮೂಲಕ ಅನುಭವಿಸುತ್ತಿರುವ ಸವಲತ್ತುಗಳನ್ನು ಉಳಿಸಿಕೊಳ್ಳಲಾಗಿದೆ. ಕರ್ನಾಟಕ

ಅರಣ್ಯ ನಿಯಮ 1969ರ ನಿಯಮ 138ರಿಂದ 141ರ ಮೂಲಕ ಹಿತ್ಲು ಏಲಕ್ಕಿ, ಗೇಣಿಮಲೆ, ಜಮ್ಮ ಮಲೆ ಎಂಬ ಸ್ಥಳಗಳಿಗೆ ಸಂಬಂಧಿಸಿದಂತೆ ಮರಗಳ ಹಕ್ಕುಗಳ ಬಗ್ಗೆ ನಮೂದಿಸಲಾಗಿದೆ.

ಕರ್ನಾಟಕ ಭೂಕಂದಾಯ ಅಧಿನಿಯಮದ ಸೆಕ್ಷನ್ 79ರ ಅಡಿಯಲ್ಲಿ ಸವಲತ್ತುಗಳನ್ನು ಪಡೆಯಬೇಕಿದ್ದಲ್ಲಿ ಅಂತಹ ಸ್ಥಳಕ್ಕೆ ತರಿಭೂಮಿಯ ಜೋಡಣೆ ಅತ್ಯಾವಶ್ಯಕ. ಈ ರೀತಿ ಭೂಮಿಯೊಂದಿಗೆ ಜೋಡಣೆಗೊಂಡ 'ಬಾಣೆ'ಯು ತರಿ ಜಮೀನಿನ ನಿಬಂಧನೆಯನ್ನು ಪೂರ್ವಪದವಾಗಿ ಹೊಂದುವುದರಿಂದ 'ಜಮ್ಮ' ತರಿ ಜಮೀನಿಗೆ ಜೋಡಣೆಗೊಂಡ 'ಬಾಣೆ' – 'ಜಮ್ಮ ಬಾಣೆ'ಯಾಗುವುದು 'ಸಾಗು' ತರಿ ಭೂಮಿಗೆ ಜೋಡಣೆಗೊಂಡ 'ಬಾಣೆ' 'ಸಾಗುಬಾಣೆ' ಯಾಗುವುದು ಹೀಗೆಯೇ ಜಾಗಿರ್ ತರಿ ಜಮೀನಿಗೆ ಜೋಡಣೆಗೊಂಡ ಬಾಣೆ 'ಜಾಗಿರ್ ಬಾಣೆ' ಉಂಬಳಿ ಬಾಣೆ ಆಗುವುದು'

ಕರ್ನಾಟಕ ಭೂಕಂದಾಯ ಅಧಿನಿಯಮ ಜಾರಿಗೆ ಬಂದ ನಂತರ ಕೊಡಗಿನಲ್ಲಿ ಆರ್.ಟಿ.ಸಿ.ಯಲ್ಲಿ ಹಾಲಿ ಉಪಯೋಗಿಸಬಹುದಾದಂತಹ ಭೂ ನಿಬಂಧನೆಗಳ ಈ ಕೆಳಗಿನಂತಿವೆ.

1) ಸಾಗು
2) ಜಮ್ಮ
3) ಜಹಗೀರ್
4) ಉಂಬಳಿ
5) ಪರಾಧೀನ
6) ಬಾಣೆ
7) ಬಾರಿಕೆ
8) ಹಿತ್ಲು
9) ಕುರಾವು
10) ಹುಲ್ಲುಗಾವಲು
11) ಜಮ್ಮಮಲೆ
12) ಪೈಸಾರಿ

ವ್ಯವಸಾಯೇತರ ಜಮೀನುಗಳಿಗೆ ಸಂಬಂಧಿಸಿದಂತೆ ನಿಬಂಧನೆಗಳು

1) ಬಿಡ್ಕುಳ (ಮನೆದಳ)
2) ವ್ಯವಸಾಯೇತರ
3) ಕೃಷಿಯೇತರ

4) ವಾಣಿಜ್ಯೋದ್ಯಮ

5) ಕೈಗಾರಿಕೆ

ಮರದ ಹಕ್ಕುಗಳ ಬಗ್ಗೆ 11ನೇ ಐಟಂನಲ್ಲಿ

1) ರೆಡೀಮ್ಡ್

2) ಅನ್‌ರೆಡೀಮ್ಡ್

ನಮೂದಿಸಬಹುದಾದ ಹಲವು ಇನ್ನಿತರ ಪದಗಳು ನಿಬಂಧನೆ ಹೊಂದಿಲ್ಲದಂತಹವು

1) ದೇವರಕಾಡು

2) ಮಂದು

3) ಊರಂಬಲ

4) ಊರುಡುವೆ

5) ವರ್ಗ

6) ವರ್ಗದಾರ

7) ಅರಣ್ಯ (ಮೀಸಲು ಸಂರಕ್ಷಿತ ಇತ್ಯಾದಿ)[11]

<u>ಅಡಿಟಿಪ್ಪಣಿಗಳು:</u>

8. Religion and Society among the Coorg of South India – M.N. Srinivas

9. ಬೆಟ್ಟದಿಂದ ಬಟ್ಟಲಿಗೆ– ಎಚ್.ಎಲ್.ನಾಗೇಗೌಡ, ವಿಶ್ವಕನ್ನಡ ಸಮ್ಮೇಳನ ಸಾಹಿತ್ಯ ಮಾಲೆ


10. Mysore and Coorg Gazetteer Complied for the Govt. of India by Lewis Rice, Vol.3.1878

11. ಕೊಡಗಿನ ಭೂನಿಬಂಧನೆ, ಭೂ ಹಿಡುವಳಿ, ಮರದ ಹಕ್ಕುಗಳು – ಕೆ.ಜಿ.ಉತ್ತಪ್ಪ, ವಿಜಯ್, ವಕೀಲರು.

ಆಧಾರ ಗ್ರಂಥಗಳು

1. ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಕೊಡಗು ಜಿಲ್ಲೆ – (ಮು.ಸಂ.) ಸೂರ್ಯನಾಥ ಯು. ಕಾಮತ್, ಬೆಂಗಳೂರು, 1992
2. ಕನ್ನಡ ವಿಷಯವಿಶ್ವಕೋಶ, ಜಾನಪದ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ–2006
3. ಕೆಂಬಟ್ಟಿ ಹೊಲೆಯರ ಸಂಸ್ಕೃತಿ – ಎಂ.ಜಿ. ನಾಗರಾಜು, ಉಪಸಂಸ್ಕೃತಿ ಅಧ್ಯಯನ ಮಾಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ
4. ಕೊಡಗಿನ ಭೂ ನಿಬಂಧನೆ, ಭೂ ಹಿಡುವಳಿ, ಮರದ ಹಕ್ಕುಗಳು – ಕೆ.ಜಿ.ಉತ್ತಪ್ಪ, ವಿಜಯ್, ವಕೀಲರು, KODAGU MODEL FOREST TRUST, COLLEGE OF FORESTRY
5. ಕೊಡಗಿನ ಖಗರತ್ನಗಳು – ಡಾ. ವಿ.ಎಸ್. ನರಸಿಂಹನ್
6. ಕೊಡಗು ಜಿಲ್ಲೆಯ ಸುಗ್ಗಿಕಟ್ಟೆಗಳು – ಎಂ. ಜಿ. ನಾಗರಾಜು
7. ಕೃಷಿ ಪಾರಂಪರಿಕ ಜ್ಞಾನ – ಸಂಪಾದಕರು: ಡಾ. ಸ.ಚಿ.ರಮೇಶ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ
8. ಕೃಷಿ ಬೆಳವಣಿಗೆ – ಡಿ.ವೆಂಕಟರಾವ್, ವಿದ್ಯಾನಿಧಿ ಪ್ರಕಾಶನ, ಗದಗ
9. ದಕ್ಷಿಣ ಭಾರತೀಯ ದೇಶಿ ಕೃಷಿ ವಿಜ್ಞಾನ ಕೋಶ ಸಂಪುಟ–1 – ಪ್ರಧಾನ ಸಂಪಾದಕ: ಪ್ರೋ. ಅಂಬಳಿಕೆ ಹಿರಿಯಣ್ಣ, ಕಾರ್ಯನಿರ್ವಾಹಕ ಸಂಪಾದಕ: ಪ್ರೋ. ಆರ್ವಿಯಸ್ ಸುಂದರಂ, ಸಂಪಾದಕ: ಪ್ರೊ. ಸ.ಚಿ. ರಮೇಶ್
10. ಪೂಮಲೆ ಕುಡಿಯರು – ಐತಿಚಂಡ ರಮೇಶ್
11. ಬೆಟ್ಟದಿಂದ ಬಟ್ಟಲಿಗೆ– ಎಚ್.ಎಲ್.ನಾಗೇಗೌಡ, ವಿಶ್ವಕನ್ನಡ ಸಮ್ಮೇಳನ ಸಾಹಿತ್ಯ ಮಾಲೆ
12. ಬೆಳೆಗಳು – ವಿಜಯ್ ಅಂಗಡಿ
13. ಶಾಸನ ಮತ್ತು ಜನಪದದಲ್ಲಿ ರಾಗಿ – ಪೂರಿಗಾಲಿ ಎಸ್. ಬಾಲಕೃಷ್ಣನ್, ನಿವೃತ್ತ ವಿಜ್ಞಾನಿ (CFTRI) ಮೈಸೂರು.
14. MYSORE STATE GAZETTEER-COORG DISTRICT- BY B.N. SRI SATHYAN


15. MYSORE AND COORG GAZETTEER COMPILED FOR THE GOVERNMENT OF INDIA BY LEWIS RICE VOL.3, 1878
16. RELEGION AND SOCIETY AMONG THE COORGS OF SOUTH INDIA – M.N. SRINIVAS
17. ಸಸ್ಯಲೋಕ (ವೈಜ್ಞಾನಿಕ ಲೇಖನಗಳು) ಈಶ್ವರಲಾಲ್ ಬಿ. ಸೇಡಂಕರ್


KODAGU
ಕೊಡಗು
N
Pushpagiri 1712
PUSHPAGIRI WILDLIFE SANCTUARY
Kotebetta 1620
To Mangalore
R Payaswini
To Hassan
R Kaveri
To Bangalore
To Periyapatna
To Mysore
To Hunsur
Brahmagiri 1360
TALAKAVERI WILDLIFE SANCTUARY
To Kannoor
R Barapole
BRAHMAGIRI WILDLIFE SANCTUARY
Legend
Evergreen Forests
Moist Deciduous Forests
Dry Deciduous Forests
Grass/ Shola Forests
Scrub / Open Jungles
Interesting Places
Waterfalls
Mountain Peaks
Roads
Rivers and Reservoirs
Sacred Groves
10 5 0 5 10
Scale

ಕೊಡಗು ಜಿಲ್ಲೆಯ ನಕ್ಷೆ



ಕೇರಳ ಮತ್ತು ಕೊಡಗಿನ ಗಡಿ ಪ್ರದೇಶದಲ್ಲಿರುವ ಪಶ್ಚಿಮ ಘಟ್ಟಗಳ ಸಾಲು



ನಾಲ್ಕ್‌ನಾಡು ಅರಮನೆಯ ತಪ್ಪಲಿನಲ್ಲಿರುವ ಗದ್ದೆ ಮತ್ತು ದೇವರಕಾಡು



ಯಡವನಾಡು ದೇವರಕಾಡಿನ ಬಯಲಿನಲ್ಲಿರುವ ಗದ್ದೆ

ಅಧ್ಯಾಯ – 05

ಕೊಡಗಿನ ದೇವರ ಕಾಡುಗಳನ್ನು ಸಂರಕ್ಷಿಸುವ ಜನಾಂಗಗಳ ವಿವರ

ಕೊಡವರು

ಕನ್ನಡದಲ್ಲಿ ಮಾನಾಡುವಾಗ ಕೊಡಗಿನಲ್ಲಿರುವವರು ಕೊಡಗಿನಲ್ಲಿರುವವರು 'ಕೊಡಗ'ರು. ಅದೇ ಕೊಡವ ಬಾಷೆಚುಲ್ಲಿ ಮಾತನಾಡುವಾಗ ನಂಗ ಕೊಡವ ಅರ್ಥಾತ್ ನಾವು ಕೊಡವರು. ಇಂಗ್ಲೀಷ್ರು ಕೊಡವರನ್ನು ಕೂರ್ಗಿ ಎಚಿದು ಕರೆದರು. ಕೊಡವ ಎನ್ನುವುದೊಂದು ನಿರ್ದಿಷ್ಟ ಜನಾಂಗ ಇಡೀ ಕೊಡವ ಬಾಷಿಕರನ್ನು ಸೇರಿಸಿ ಕೊಡಗಿನ ಕೊಡಗರು ಎಂಬುವುದು ಕೂಡಾ ವಾಡಿಕೆಯಲ್ಲಿದೆ. ಈಗಾಗಲೇ ಚ್ಚರ್ಚಿಸಿರುವಚಿತೆ ಕುಡು ಮೂಲಧಾತುವಿನಿಂದಾಗಿ ಕೊಡವ, ಕೊಡಗರು ಎಚಿದು ಎನ್ನಲಾಗುತ್ತದೆ3. ಅದೇ ರೀತಿ ಕೊಡವ ಒಚಿದು ನಿರ್ದಿಷ್ಟ ಜನಾಂಗ ಸೂಚಕವಾಗಿಯೂ ಕುಡವ ಬಾಷೆ ಮಾತನಾಡುವ ಎಲ್ಲಾ ಭಾಷಿಕ ವರ್ಗಗಳ ಸೂಚಕವಾಗಿಯೂ ಕೊಡವರು ಎಚಿದು ಚಾಲ್ತಿಚುಲ್ಲಿ ಬಂದಿರಬೇಕು ಎನಿಸುತ್ತದೆ. ಗ್ವಜೆಟಿಯರ್ ಆಫ್ ಇಚಿಡಿಯಾ, ಕೂರ್ಗ್ ಡಿಸ್ರಿಕ್ಟ್‌ನಲ್ಲಿ ಹೇಳೀರುವಚಿತೆ ಪಾಚಿಡ್ಯ ರಾಜನ ರಾಜ್ಯ ವಿಸ್ತಾರವನ್ನು ನಿರೂಪಿಸುವಾಗ ಸಂಘಂಕಾಲದ ತಮಿಳು ಸಾಹಿತ್ಯದಲಿ ಕೊಡಗನ್ನು ಕುರಿತಾಗಿ ಕುಡಹಂ ಎಂಬ ಶಬ್ದ ಬರುತ್ತದೆ. ಅಹಃ ಎಚಿದರೆ ತಮಿಳಿನಲ್ಲಿ ಅವಾಸ ಸ್ಥಳ ಅಥವಾ ಮನೆ ಎಂದಾಗುತ್ತದೆ. ಕುಡು+ಅಹಂ=ಕುಡಹಂ ಆಗುತ್ತದೆ. ಅಲ್ಲಿ ಕೂಡಾ ಕುಡು ಮೂಲಾಧಾತು ಇರುವುದು ವ್ಯಕ್ತವಾಗುತ್ತದೆ.

As the badag prople on the Niligiris have been named: Burghers". So is; Coorg; 79nglicised from "Kodumale" a name which has born from the remotest ages and which its meaning "Steep Mountains" graphyically the character of this remarkable alpine land ಎಚಿದು ರಿಕ್ಟರ್‌ನ ಗ್ವಜೆಟಿಯರ್ ಆಫ್ ಕೂರ್ಗ್ ನಲ್ಲಿ ಉಲ್ಲೇಖಿಸಿದೆ.

ಕಾಪಾಳ ಜನಾಂಗ

ಕಾಪಾಳಾ ಶಬ್ಧದ ವ್ಯತ್ಪತ್ತಿಯನ್ನು ಗಮನಿಸಿದರೆ ಕಾಪ+ಆಳ ಎಂದಾಗುತ್ತದೆ. ಕಾಯುವ+ಆಳು= ಕಾವಲುಗಾರ, ಕಾಯುವ ಕೆಲಸದವ ಎಂದಾಗುತ್ತದೆ. ಹದಿನೇಳನೇ ಶತಮಾನದ ಕೊನೆಚು ಭಾಗದಲ್ಲಿ ಇವರನ್ನು ದೊಡ್ಡವೀರರಾಜ ಯವಕಪಾಡಿಯಲ್ಲಿರುವ ನಾಲ್ಕುನಾಡು ಅರಮನೆಗೆ ಕಾವಲು ಕಾಯಲು ನೇಮಕ ಮಾಡುತ್ತಾನೆ. ಅದಕ್ಕೂ ಹಿಂದಿನಿಂದಲೇ ಇವರನ್ನು ಕೊಡಗಿನಲ್ಲಿ ನೆಲೆನಿಂತಿದ್ದರು ಎನ್ನಲಾಗುತ್ತದೆ.

ಅಮ್ಮ ಜನಾಂಗ

ಈ ಹೆಸರು ಹೇಗೆ ಬಂತುಎನ್ನುವುದಕ್ಕೆ ನಾನಾರೀತಿಯ ವಿಶ್ಲೇಷಣೆಗಳನ್ನು ಮಾಡಲಾಗುತ್ತದೆ. ಕೊಡವ ಕುಲದವರು ಬ್ರಾಹ್ಮಣರ ಹೆಂಗಸರನ್ನು "ಅಮ್ಮ ಅಥವಾ ಅಮ್ಮೆ" ಇತ್ಯಾದಿ ಸಂಬೋದನೆ ಮಾಡುತ್ತಾರೆ. ವಿಪ್ರರಿಗೆ ಕೊಡವ ಕುಲದಲ್ಲಿ ವಿಶೇಷವಾದ ಮರ್ಯಾದೆಯಿದೆ. ಕಾವೇರಿ ದೇವಿಕೂಡಾ ವಿಪ್ರಕುದಾಕೆಯೇ ಅತದ್ದರಿಂದ "ಕಾವೇರಮ್ಮೆ" ಆಗಲು ಕಾರಣ ಎನ್ನಲಾಗುತ್ತದೆ. ಕವೇರಮುನಿ, ಅಗಸ್ತ್ಯಕೂಡ ವಿಪ್ರ ಕುಲದವರೇ. ಹೆಂಗಸರನ್ನು ಅಮ್ಮ ಎಚಿದು ಕರೆದರೆ ಗಂಡಸರನ್ನು ಸ್ವಾಮಿ ಎಚಿದು ಗ್ವರವ ಪೂರ್ವಕವಾಗಿ ಕ್ವರಯಲಾಗುತ್ತದೆ. ಆದರೆ ಅಮ್ಮ ಎಂಬ ಸಂಬೋಧನೆ ಯಾಕೆ ಎಂಬುದು ಕುತೂಹಲಕರವಾಗಿದೆ. ಪುತ್ತರಿಪಾಟ್‌ನಲ್ಲಿ ನೋಡುವಾಗ "ಅಮ್ಮಂಡ, ಕೊಡವಚಿಡ ಪುತ್ತರಿ ನಮ್ಮೆ" ಎನ್ನಕಾಗುತ್ತದೆ. ಇಗ್ಗುತಪ್ಪನು ಅಮ್ಮಂಗೂ ಕೊಡವಂಗೂ ಓಣತ್‌ರ ಮುಂಬಾಡ್" ಎನ್ನುವ ಆಧಾರ ಪ್ರಕಾರಗಳು ಕೊಡಗಿನಲ್ಲಿ ಪುತ್ತರಿ ಆಚರಣೆಗೂ ಹಿಂದಿನಿಂದಲೇ ಇಲ್ಲಿ ಕೊಡವ, ಅಮ್ಮ ಜನಾಂಗದವರು ವಾಸವಿದ್ದರು ಎಚಿದು ತಿಳಿಯುತ್ತದೆ. ಐವ ಮಕ್ಕ ದೇಬುವ ಹಾಡಿನಲ್ಲಿ ಕೂಡಾ "ಪತ್ತಡಮ್ಮ ಸುಬ್ಬಮ್ಮ, ಚೆಂಡಂಡಮ್ಮ ಪೊನ್ನಮ್ಮ, ಬಾನಚಿಡಮ್ಮ ಮಾದಮ್ಮ" ಇವರ ಪ್ರಸ್ತಾಪ ಬರುತ್ತದೆ. ಐದು ದೇವತೆಯರು ಕೊಡಗಿಗೆ ಬಂದು ನೆಲೆಸುವ ಪ್ರಸ್ತಾಪ ಬರುತ್ತದೆ.

ಕೆಂಬಟ್ಟಿ ಜನಾಂಗ

ಕೊಡವ ಕುಲದ ಇನ್ನೊಂದು ಮುಖ್ಯವಾದ ಜನಾಂಗ ಕೆಂಬಟ್ಟಿ. ಸದಾ ಹಸಿರುಟ್ಟಿರುವ ಬೀಡಿನಲ್ಲಿ ಕೆಂಬಟ್ಟಿಗಳು ಮಣ್ಣಿನ ಮಕ್ಕಳಾಗಿ ಬಾಳಿದ್ದಾರೆ. ಹೊಟ್ಟೆಗೆ ತುತ್ತು, ನೆತ್ತಿಗೆ ಸೂರು ಇವನ್ನು ಕಾಡುಕೊಟ್ಟ ನೆಲೆಚಿುಲ್ಲಿಯೋ, ಅರಸಿಯೋ ದುಡಿಡೋ ಪಡೆದುಕೊಳ್ಳುವ ಬಾಳು ಅವರದು. ಆದರೂ ಕಳೆದುಕೊಂಡ ತನ್ನದೊಂದು ನೆಲದ ಒಡೆತನವನ್ನು ಒಚಿದಷ್ಟಾದರೂ ದೊರಕಿಸಿಕೊಳ್ಳಬೆಂಕೆಂಬ ಅವರ ಆಸೆ ಶತಶತಮಾನಗಳಿಂದಲೂ ಕಾಯುತ್ತಲೇ ಬಂದಿದೆ. ಯತ್ನವನ್ನು ತನಗೆ ಅನುಕೂಲಿಸುವ ಮುಖಗಳಲ್ಲಿ ಮಾಡಿದೆ. ಅದೊಂದು ರೀತಿ ಮಾನಸಿಕ ತೃಪ್ತಿ, ಮನೋಸಾಮಾಜಿಕ ಹಂಬಲ ಕೂಡಾ. ಒಚಿದು ಶಿಷ್ಟೀಕರಣಗೊಳಿಸಿಕೊಳ್ಳುವ ಆ ಪ್ರಯತ್ನದಲ್ಲಿ ಪ್ಮರಾಣಗಳಚಿತೆ ಕ್ರತೆಯನ್ನು ಈ ದಲಿತ ವರ್ಗ ಬದುಕಿಗೆ ಜೋಡಿಸಿಕೊಂಡಿರುವುದುಂಟು ಅದರಲ್ಲಿ ಇತಿಹಾಸದ ಎಳೆ ತೆಳುವಾಗಿಯಾದರೂ ಇರುವುದುಂಟು.

ಸ್ಥಳೀಚಿು ನದಿ, ಬೆಟ್ಟ (ಬಾಳುವ ನೆರೆ–ನೆಲೆ) ಕುರಿತಂತೆ ಹೆಣೆದುಕೊಳ್ಳುವ ಪುರಾಣವು ಆಚಿುಾ ನೆಲೆಚಿು ಜನರ ನಂಬಿಕೆ, ಪದ್ಧತಿ ಹಾಗೂ ಧಾರ್ಮಿಕ ವಿಧಿಗಳನ್ನು ಸಂಸ್ಕೃತೀಕರಣಗೊಳಿಸುವ ಮೊದಲ

ಹಚಿತವಾಗಿದೆ ಎಂಬುದು ಶ್ರೀನಿವಾಸ ಅವರ ಮಾತು. ಆದರೆ ಇದು ಸಂಸ್ಕೃತಾನುಕರಣವಾಗಬೇಕಿಲ್ಲ. ಬ್ರಾಹ್ಮಣೀಕರಣವೇ ಆಗಬೇಕಿಲ್ಲ. ಕಾರಣ ಶಿಷ್ಟೀಕರಣಗಳ ರೂಪ ಒಚಿದೇ ವರ್ಗದ ಪಡಿಯಚ್ಚು ಎನ್ನುವಚಿತಿಲ್ಲ. ಈ ದೃಷ್ಠಿಯಿಚಿದ ಎರಡು ವಿಭಿನ್ನ ಸಂಸ್ಕೃತಿಗಳ ಅಥವಾ ಒಚಿದೇ ಸಂಸ್ಕೃತಿಯ ವಿಭಿನ್ನ ಅಂಗಗಳ ನಡುವೆ ನಡೆವ ವರ್ಗಾವಣೆ ಪ್ರಕ್ರಿಯೆಯೇ ಸಂಸ್ಕೃತೀಕರಣ ಎನ್ನಲಾಗುತ್ತದೆ. ಎಂಬ ಅಭಿಪ್ರಾಯ ಗಮನಾರ್ಹವಾಗುತ್ತದೆ. ಅದಿಮ ಸಂಸ್ಕೃತಿ, ಬುಡಕಟ್ಟು ಸಂಸ್ಕೃತಿ, ದಲಿತ ಸಂಸ್ಕೃತಿ ಇತ್ಯಾದಿ ಜನಪದೀಚು ಉಪಸಂಸ್ಕೃತಿಗಳು ಭಾರತದ ಎಲ್ಲ ವರ್ಗಗಳ ಮೇಲೂ ಪ್ರಭಾವ ಬೇರಿರುವಲ್ಲಿ ಸಂಸ್ಕೃತಿಕರಣ-ಶಿಷ್ಟೀಕರಣ ಒಚಿದು ಜಾತಿ ಅಥವಾ ಜನಾಂಗದ ನಕಲು ಎನಿಸದು. ಆಚುಾ ಉಪಸಂಸ್ಕೃತಿಯ ನೆಲೆಚುಲ್ಲಿ ಅವರವರ ಶಿಷ್ಟವೇ ಅವರಿಗೆ ಶ್ರೇಷ್ಟವೇ ಆಗಿರುತ್ತದೆ. ಅದಾಗಿ "ಊರೊಳಗಣ ಹೊಲೆಚು ಊರಹೊರಗಣ ಕುಲಜ ಇವರಲ್ಲಿ ಆರು ಹಿರಿದೆಂದು ಬಲ್ಲಡೆ ಲಿಂಗ ಪ್ರಾಣಸಂಬಂಧಿ ಎಂಬೆ" ಎನ್ನವ ಬಾಲಸಂಗಣ್ಣನ ವಚನ, ಪರಿಶಿಷ್ಟತನ ಹಾಗೂ ಶಿಷ್ಟತನದ ವ್ಯಾಖ್ಯೆ ಎನಿಸುತ್ತದೆ. ವಿನಿಮಯ ಮಾನವ ಸಹಜ ಕ್ರಿಯೆ. ಕೆಳಗಿನ ಹಚಿತದವರು ಎನ್ನಲಾದ ಜನವಾದರೂ ತಮ್ಮ ಸಂಸ್ಕೃತಿಯ ಅಂಗಳದಲ್ಲಿ ಅಳವಡಿಸಿಕೊಂಡ ಕೃತೆಯನ್ನು ಪುರಾಣವೆಚಿದರೂ ಜನಪದೀಚು ಅಚಿತರಾತ್ಮನನ್ನು ಒಳಗಾಗಿಸಿಕೊಂಡಿರುತ್ತಾರೆ. ಸ್ವಂತ ಸಂಸ್ಕೃತಿಯನ್ನು ಜತನದಿಂದ ಕಾಪಿಟ್ಟುಕೊಂಡಿರುತ್ತಾರೆ. ಅಚಿದರೆ ಮೇಲಿನದರಲ್ಲಿ (!) ಅವರದು ಕರಗಿ ಹೋಗಿಲ್ಲ ಎನ್ನುವುದು ಗಮನಾರ್ಹ ಜನಪದ ಪುರಾಣ, ಕತೆಗಳ ಮೂಲಕ ತನ್ನತನ ಉಳಿಸಿಕೊಂಡು ಇತಿಹಾಸದ ಎಳೆಗಳನ್ನು ಉಳಿಸಿಕೊಂಡಿದೆ ಎನ್ನಬಹುದು. ಅಚಿತಾಗಿ ಪುರಾಣೋಪನಿಷತ್ತುಗಳೂ, ನೂರಾರು ಪ್ಮಣ್ಯಕ್ಷೇತ್ರಗಳಿಗೆ ಸಂಬಂಧಿಸಿದ ಸ್ಥಲಪ್ಮರಾಣಗಳೂ, ಭಕ್ತಿ, ಭಾವ ಜಾನಪದ ಗೀತೆಗಳೂ ಕೂಡ ಭಾರತದ ಮಟ್ಟಿಗೆ ಸೀಮಿತ ಪ್ರಮಾಣದ ಅಮೂಲ್ಯ ಐತಿಹಾಸಿಕ ಮೂಲ ಸಾಮಗ್ರಿಗಳೇ ಹೌದು ಎಂಬುದನ್ನೂ ಮರೆಯುವಚಿತಿಲ್ಲ.

ಪ್ರಾಚೀನದಿಂದಲೂ ಕೊಡಗಿನಲ್ಲಿ ಬೆಟ್ಟದ ಕ್ವಡೆಯ ಗದ್ದೆಗಳಲ್ಲಿ ಕರ್ತು (ಕೆಂಬತ್ತಿ ಭತ್ತ) ಬೆಳೆಯುತ್ತಿದ್ದರು (ಅದು ಕರತ, ಕತರ ಎಂಬ ರೂಪದಲ್ಲಿ ಕೇತಾರ ಎಚಿದರೆ ಭತ್ತ ಬೆಳೆವ ನೆಲೆ ಎಂಬುದರ ಅಪಭ್ರಂಸನಾಗಿ ಕಾಣುತ್ತದೆ.) ಈ ಭತ್ತ ಕೆಂಪುಬಣ್ಣದ ದಪ್ಪ ಭತ್ತ. ರುಚಿಯಲ್ಲಿ ಸಿಹಿ. ಬೇಗ ಬೆಳೆ ಬರುತ್ತದೆ. ವರ್ಷಕ್ಕೆ ಕನಿಷ್ಠ ಎರಡು ಬೆಳೆ ಬರುವಚಿತಹದು. ರಾಜರ ವನಗಳಲ್ಲಿ ಬಿಳಿ ಭತ್ತದ ಜೊತೆಗೆ ಇದನ್ನು ಬೆಳೆಯುತ್ತಿದ್ದರು. ಇದರ ಕೃಷಿ ಕೆಲಸಕ್ಕೆ ಕಂಬಟ್ಟಿಗಳೇ ಹೆಚ್ಚು ತೊಡಗಿಕೊಂಡಿದ್ದವರು.

ಕೊಡಗಿನ ಪಾರಂಪರಿಕ ಪದ್ದತಿಯಂತೆ ಹಿಂದಿನ ಕಾಲದಲ್ಲಿ ಕುಳುವಾಡಿ ಎಂಬ ಒಚಿದು ಜವಾಬ್ದಾರಿಕೆಯ ಕೆಲಸ ಇತ್ತು. ಆ ಕೆಲಸವನ್ನು ಜನಾಂಗದವರು ನಡೆಸುತ್ತಿದ್ದರು ಎನ್ನಲಾಗುತ್ತದೆ.

ಕುಡಿಯ ಜನಾಂಗ

ಕೊಡಗು ಬೆಟ್ಟಕಾಡುಗಳ ನಾಡು. ಈ ಕಾಡಿನೊಳಗೆ ಜೀವನ ನಿರ್ವಹಣೆ ಮಾಡುವ್ವದೆಂದರೆ ಸತ್ತು ಹುಟ್ಟುವ್ವದೆಂದರ್ಥ. ಪ್ರತಿದಿನ ಸುತ್ತಹುಟ್ಟುವಷ್ಟು ಕಷ್ಟ ಜೀವನ. ಹೀಗೆ ಕಾಡಿನೊಳಗೆ ಕಾಡಿನ ಮಕ್ಕಳಾಗಿ ಬಾಳುತ್ತಿರುವ ಕುಡಿಯ ಜನಾಂಗಕ್ಕೆ ತಮ್ಮದೇ ಆದ ಹಿನ್ನೆಲೆ ಇದೆ. ಕೊಡವ ಜನಪದ ಸಂಸ್ಕೃತಿಯ ಮೂಲ ಇರುವುದೇ ಕುಡಿಯ ಜನಾಂಗದಲ್ಲಿ ಎನ್ನಲಾಗುತ್ತದೆ. ಕುಡಿಯ ಜನಾಂಗದಲ್ಲಿ ಮೂರು ವಿಭಾಗಗಳಿವೆ. ಪೂಮಲೆ ಕುಡಿಯ, ತೇಮಲೆ ಕುಡಿಯ ಮತ್ತು ಅಡಿಕೆ ಕುಡಿಯ. ಪೂಮಲೆ ಕುಡಿಯರದು ಕೊಡವ ಭಾಷೆಚೂದರೆ ತೇಮೆಲೆ ಕುಡಿಯರದು ಮಲೆಚೂಳ ಮಿಶ್ರಿತ ಕೊಡವಬಾಷೆ. ಅಡಿಕೆ ಕುಡಿಯರದು ತುಳು ಬಾಷೆ. ಇವರು ಒಟ್ಟಾಗಿ ಒಚಿದೇ ಕಡೆ ನೆಲೆಸುವುದಿಲ್ಲ. ಒಂದೊಂದು ಬೆಟ್ಟಕಾಡು(ಮಲೆ) ಒಂದೊಂದು ಮನೆತನಕ್ಕೆಂಬಂತೆ ದೂರ ದೂರ ನೆಲೆಸಿರುತ್ತಾರೆ. ಬೊಳ್ಳೆ ಕಳ್ಳ್ (ಬಗಿನೆ ಸೇಂದಿ) ಮತ್ತು ಏಲಕ್ಕಿ ಇವರ ಜೀವನದಲ್ಲಿ ಬಹುಮುಖ್ಯವಾದ ವಸ್ತುಗಳು.

ಐರಿ ಜನಾಂಗ

ಈ ಜನಾಂಗದವರು ಹಾಲೇರಿ ರಾಜಮನೆತನದ ಆಳ್ವಿಕೆ ಪ್ರಾರಂಭವಾಗುವಾದ ಅಚೆದರೆ ಕ್ರಿ.ಶ.1633ನೆ ಇಸವಿಯ ನಚಿತರ ಕೊಡಗಿಗೆ ಬಂದಿರಬಹುದು ಎನ್ನಲಾಗುತ್ತದೆ. ಕೊಡವ ಜನಾಂಗದ ಮದುವೆ ಹಾಡಿನ ಮೊದಲು ಬಟ್ಟೆಪಾಟ್ ಸ್ಥರಿದಂತೆ ಬೇರೆ ಬೇರೆ ಜನಪದಗೀತೆಗಳಲ್ಲಿ 'ತಚ್ಚಯಿರಿ' ಎಂಬ ಶಬ್ದ ಬರುತ್ತದೆ. ಅಚೆಇೂರ್ ತಚ್ಚಾಯಿರಿ ಐಯ್ಯಾಂಡೇಕೆಜ್ಞ ಇಂಬ ಸಾಲುಗಳೂ ಬರುತ್ತದೆ.

ಮಾರಂಗಿ ಜನಾಂಗ

ಈ ಜನಾಂಗದವರನ್ನು ಚಾಂಡಾಲಕುಲದವರೆಂದು ಪಟ್ಟೋಲೆ ಪಳಮೆಯಲ್ಲಿ ಕ್ಬರೆಯಲಾಗಿದೆ. ಇವರು ಮಲಬಾರ್ ಕಡೆಯಿಚಿದ ಕೊಡಗಿಗೆ ಬಂದು ನೆಲೆಸಿದವರೆಂದು ರಿಕ್ಟರ್ ಅಭಿಪ್ರಾಯ ಪಟ್ಟಿದ್ದಾರೆ. ಕೊಡವ ಕುಲದ ಪ್ರಧಾನ ಆಚರಣೆಗಳಲ್ಲಿ ಮದುವೆಗಳಲ್ಲಿ ತಿಥಿಯಲ್ಲಿ ಇವರ ಪಾಲುದಾರಿಕೆ ಮಹತ್ವದ್ದು. ಕೆಂಬಟ್ಟಿ ಜನಾಂಗದವರಿಗೂ ಇವರಿಗೂ ಸಾಮ್ಯತೆ ಇದ್ದು ಇವರು ಕೂಡಾ ಕುಟ್ಟದಿಂದ ಬೇರೆ ಬೇರೆ ಕಡೆಗೆ ಬಂದು ನೆಲೆಸಿದವರು

ಮೇದ ಜನಾಂಗ

ಮೇದ ಜನಾಂಗದವರು ಇಲ್ಲದಿದ್ದರೆ ಕೊಡವ ಕುಲದಲ್ಲಿ ಯಾವುದೇ ಹಬ್ಬ ಹರಿದಿನಗಳಿಲ್ಲ. They are quiet people not robust in body and of a sollow brown complexion with black

straight hair. They are drummers at the coorg festivals and it is their previllage ti receive annually at harvest time from each coorg house of their district. As much reaped paddy, as they can bind up with a rope 12 cubits in length. (ರಿಕ್ಟರ್)

ಕೊಡವ (ನಾಯಿಬಿದ)

ಕೊಡವ ಕುಲದವರ ಮದುವೆ ಸಬಿದರ್ಭ ಕೌರ ಪದ್ದತಿ ಇದೆ. ಕೊಡವ ವರನು ಬಿಳಿ ಕುಪ್ಪಸ (ಕುಪ್ಯ) ಸೊಂಟಕ್ಕೆ ಕೆಂಪು ವಸ್ತ್ರ ಕಟ್ಟಿ ಕನ್ನಿಮೂಲೆ ಕೋಣೇಯಲ್ಲಿರುವ ದೀಪಕ್ಕೆ ಅಕ್ಕಿ ಹಾಕಿ ನಮಸ್ಕರಿಸಿ ಅಲ್ಲಿ ಸೇರಿದ ಹಿರಿಯರ ಕಾಲು ಮುಟ್ಟಿ ನಮಸ್ಕರಿಸಿ ಮುಖ ಕ್ಷೌರ ಮಾಡಿಸಿಕೊಳ್ಳಲು ಅಂಗಳಕ್ಕೆ ಬರುತ್ತಾನೆ. ಚಾಪೆಬಿು ಮೇಲೆ ಮಕ್ಕಾಲಿ ಇರಿಸಲಾಗಿರುತ್ತದೆ. ಒಬಿದು ಕಂಚಿನ ಬಟ್ಟಲಲ್ಲಿ ಹಾಲನ್ನು ಇಟ್ಟಿರಲಾಗುತ್ತದೆ. ಕ್ಷೌರಕ್ಕೆ ಹಾಲನ್ನು ಉಪಯೋಗಿಸಿ ಕೊಡವ ಹಜಾಮರು ಗ್ವರಿಕೆಯಿಬಿದ (ಬ್ರಶ್) ವರನ ಮುಖಕ್ಕೆ ಸವರಿ ಕೌರ ಮಾಡುತ್ತಾರೆ. (ಅಬಿದರೆ ಗಲ್ಲ ಮತ್ತು ಮೀಸೆಬಿುನ್ನು ನೇರ್ಪಗೊಳಿಸಿ ಕ್ಷೌರ ಮಾಡುವುದು) ಕ್ಷೌರ ಆದ ನಬಿತರ ಕಂಚಿನ ಬಟ್ಟಲಲ್ಲಿರುವ ಹಾಲು, ಕುದಲನ್ನ ಒಬಿದು ಮರದ ಬುಡಕ್ಕೆ ಹಾಕುವ ಕ್ರಮ ಇದೆ. ಇದಕ್ಕೆ ಪ್ರತಿಯಾಗಿ ಈಗಾಗಲೆ ಚಾಪೆಬಿುಲ್ಲಿ ಇರಿಸಲಾಗಿರುವ ಮುತ್ತರಿ ಪಚ್ಚಿಯದಲ್ಲಿ ಒಬಿದು ಸೇರು ಅಕ್ಕಿ, ಒಬಿದು ತೆಂಗಿನಕಾಯಿ,ಒಬಿದು ಚಿಪ್ಪು ಬಾಳೆಹಣ್ಣು, "ಒರ್ ಪಣ" (ಹಿಂದಿನ ಕಾಲದ ಹಣ) ಇವುಗಳನ್ನು ಹಜಾಮ್ಮರಿಗೆ ಗ್ಷರ ಪೂರ್ವಕವಾಗಿ ನೀಡಲಾಗುತ್ತದೆ. ವರನು ಸೊಂಟಕ್ಕೆ ಕಟ್ಟದ್ದ ಕೆಂಪು ವಸ್ತ್ರ, ಕೌರಕ್ಕೆ ಉಪಯೋಗಿಸದ ಚಾಪೆ ಮತ್ತು ಕೌರಕ್ಕೆ ಬಳಸಿದ ಕಂಚಿನ ಬಟ್ಟಲನ್ನು ಆತನಿಗೇ ಕೊಡಲಾಗುತ್ತಿತ್ತು. (ಕಂಚಿನ ಬಟ್ಟಲಿಗೆ ಬದಲಾಗಿ ಐದು ಹಣ ಕೊಡುವ ಪದ್ಧತಿಯೂ ಹಿಂದೆ ಇತ್ತಂತೆ)

ಬಾಣಿಯ ಜನಾಂಗ

ಒಬಿದಾನೊಂದು ಕಾಲದಲ್ಲಿ ಎತ್ತ್‌ಪೋರಾಟ್ ಮೂಲಕ ಕೇರಳಕ್ಕೆ ಅಕ್ಕಿ ವಸ್ತುಗಳನ್ನು ಕೊಡಗಿಗೆ ತರುವ ಪರಿಪಾಠವಿತ್ತು. ಮಂಡೆಕಣ್ಣೆ ಕೋಂದಿರೂ ಅಜ್ಜಯ್ಯ ಎಬಿದು ಕೊಡವ ಜನಪ್ ಗೀತೆಯೊಂದು ತಿಳಿಸುತ್ತದೆ.(ಚಾವು ಪಾಟ್) ಬಹುಶಃ ಅಂದಿನ ಕಾಲದಲ್ಲಿ ವಸ್ತು ವಿನಿಮಯ ಪದ್ದತಿ ಇದ್ದಿರಬೇಕು. ಕ್ರಮೇಣ ಅದು ಹಣಕ್ಕೆ ಮಾರುವ ಪದ್ದತಿಗೆ ತಿರುಗಿರಬೇಕು. ಕೊಡಗಿನಲ್ಲಿ ಮಳೆಗಾಲ ವಿಪರೀತವಿರುತ್ತಿದ್ದರಿಂದ ಅಗತ್ಯ ವಸ್ತುಗಳಾದ ಬೆಲ್ಲ, ತೆಂಗಿನಕಾಯಿ, ಮೀನು, ಉಪ್ಪು ಇತ್ಯಾಗಿಗಳನ್ನು ಶೇಖರಿಸಿ ಇಡಲಾಗುತ್ತಿತ್ತು ಹೀಗೆ ಕೊಡವರು ಅಕ್ಕಿಯನ್ನು ಕೇರಳಕ್ಕೆ ಸಾಗಿಸುತ್ತಿದ್ದರು. ಇದನ್ನರಿತ ಕೇರಳದ ಮಂದಿ ತೆಂಗಿನಣ್ಣೆ ಮಾರಲೆಬಿದು ಕೊಡಗಿಗೆ ಬರತೊಡಗಿರಬೇಕು. ಇದಕ್ಕೆ ಬದಕಾಗಿ ಅವರು ಇಲ್ಲಿಂದ ಅಕ್ಕಿಯನ್ನು ಪಡೆಯುತ್ತಿದ್ದರು ಎನ್ನಲಾಗುತ್ತದೆ. ಹೀಗೆ ತೆಂಗಿನ ಎಣ್ಣೆ ತೆಗೆಯುವುದನ್ನೆ ಪ್ರಾಧಾನ ವ್ಲತ್ತಿಯನ್ನಾಗಿ ಮಾಡಿಕೊಂಡವರು

ಗಾಣಿಗರು, ಗಾಣಿಗ ಶಬ್ದವೇ ಬಾಣಿಯ ಆಗಿರಬೇಕು(ಗ್ಹಣದಲ್ಲಿ ಕೆಲಸ ಮಾಡುವವನು ಗಾಣಿಗ) ವೃತ್ತಿಯಲ್ಲಿ ಗಾಣಿಗರಾದ ಇವರದು ಜಾತಿಯಲ್ಲಿ ನಾಚುರ್,(ನಾಚುರ್ಗಳು ಮಲೆಚುಾಳ ಭಾಷಿಕರು-ಕೇರಳದಲ್ಲಿ) ಇವರ ಮೂಲ ಕೇರಳದ ಮಾದಮಾಟ್ ಪರಂಬು ಎನ್ನಲಾಗುತ್ತದೆ.

ಬೂಣೆ ಪಟ್ಟ

ಪಟ್ಟ ಎಚಿದರೆ ಕೊಡವ ಬಾಷೆಚುಲ್ಲಿ ಬ್ರಾಹ್ಮಣನೆಚಿದು ಅರ್ಥ. ಆದರೆ ಇವರು ಬ್ರಾಹ್ಮಣರಲ್ಲ. ಕೇವಲ 25 ಜನಸಂಖ್ಯೆ ಇರುವ ಇವರು ಸಚಿತತಿ ಅಳಿವಿನಚಿಚಿನಲ್ಲಿದೆ. ದೃಡಕಾಯರಾದ ಇವರು ಸಚಿತತಿ ಹಿಂದೆ ಯುದ್ಧವುಂದರಲಲಿ ಭಾಗವಹಿಸಿದ ಪರಿಣಾಮ ಜನಸಂಖ್ಯೆ ಕಡಿಮೆಯಾಯಿತೆಂದು ಹೇಳುತ್ತಾರೆ. ಯಾವ ಯುದ್ಧವೆಚಿದು ಗೊತ್ತಿಲ್ಲ. ಇವರು ಬ್ರಾಹ್ಮಣ ಪಂಗಡಕ್ಕೆ ಸೇರಿದವರಾಗಿರಬೇಕೆಂದು ಭಾವಿಸಿ ಇವರನ್ನು ಬೇರೆ ಬೇರೆ ಕೊಡವ ಕುಲದವರು ಮದುವೆಗಳಿಗೆ ಕ್ಕರೆಯಲು ಹಿಂಜರಿಯುತ್ತಿದ್ದರೆಂದು ಹೇಳಲಾಗುತ್ತದೆ. ಆದ್ದರಿಂದ ಈ ಜನಾಂಗ 20ವರ್ಷಕ್ಕೆ ಮೊದಲು ಸರ್ಕಾರಕ್ಕೆ ಅರ್ಜಿ ಕೊಟ್ಟು ಅಧೀಕೃತವಾಗಿ 'ಬೀನಚಿಡ' ಎಚಿದು ಮನೆಹೆಸರನ್ನು ಅಧಿಕೃತವಾಗಿ ಮಾಡಿಸಿಕೊಂಡರು. ಬೀನೆಪಟ್ಟಡ ಹೆಸರು ಬೀಸಚಿಡ ಆಗಿದ್ದು ಹೀಗೆ.

ಕೊಡವ ಮಡಿವಾಳ

ಹಿಂದೆ ಒಚಿದಾನೊಂದು ಕಾಲದಲ್ಲಿ ಕೊಡವ ಕುಲದಲಿ ವೃತ್ತಿ ಆಧಾರದಲ್ಲಿ ವಿಂಗಡಣೆ ಮಾಡಿರುವ ಸಾಧ್ಯತೆಯನ್ನು ಯೋಚಿಸುವುದಾದರೆ ಕೆಲವೊಂದು ಮೂಲನಿವಾಸಿಗಳು ಈ ರೀತಿಯಲ್ಲಿ ನಿಯೋಜಿಸಿರಬೇಕೆಂದು ಊಹಿಸಬಹುದು. ಈ ಊಹೆಗೆ ಕಾರಣವೇನೆದರೆ ಕೊಡವ ಮಡಿವಾಳರ ಮಡಿಮಾಡುವ ವೃತ್ತಿಯೊಂದನ್ನು ಹೊರತುಪಡಿದಿದರೆ ಮಿಕ್ಕಂತೆ ಅವರು ಎಲ್ಲಾ ಮೂಲ ಕೊಡವ ಪದ್ಧತಿಯನ್ನು ಚಾಚೂ ತಪ್ಪದೆ ಪಾಲಿಸುತ್ತಾರೆ. ಮದುವೆ ಸಚಿದರ್ಭ ಚಪ್ಪರಕ್ಕೆ ಮೇಲ್ಕಾಪು ಕಟ್ಟುವುದು ಇವರ ಕೆಲಸ. ದೇವಾಲಯಗಳಲ್ಲಿ ದೇವರ ಕಾಣಿಕೆಹುಂಡಿ ಇಡುವಾಗ ಮಡಿ ಹರಸುವುದು, ದೈವಾವೇಶ ಬರುವ ಸಚಿದರ್ಭದಲ್ಲಿ ಮಡಿ ಬಟ್ಟೆ ಹಾಸುವುದು, ದೇವಾಲಯಗಳ ಹಬ್ಬದ ನಚಿತರ ಶುದ್ದಕಲಶ ಮಾಡುವ ಮುತ್ತ (ಶುದ್ದ ಕಲಶ ಬ್ರಾಹ್ಮಣ ಅರ್ಚಕರು ಮಾಡುತ್ತಾರೆ) ಚೌಳು ನೀರು ಚಿಮುಕಿಸಿ ಶುದ್ದ ಮಾಡುವ ಕ್ರಮ ಇದೆಲ್ಲ ಇವರ ವೃತ್ತಿ ಜವಾಬಾsರಿಗಳು. ಮನೆಗಳಲ್ಲಿ ಹೆತ್ತ ಸೂತಕ ಇರುವಾದ ಕೊಡವರ ಮನೆಗಳಲ್ಲಿ ಏಳನೇ ದಿನಕ್ಕೆ ಮನೆಗೆ ಬಂದು ಚೌಳು ನೀರನ್ನು ಚಿಮಿಕಿಸಿ ಶುದ್ದ ಮಾಡುವ ಕ್ರಮವಿದೆ. ಮದುವೆ ಮುಹೂರ್ತದಲ್ಲಿ ವಧು/ವರ ಚಪ್ಪರ ಪ್ರವೇಶ ಮಾಡುವ ಮುನ್ನ ಮಡಿವಾಳ ಮಡಿ ವಸ್ತ್ರ ಹಾಸುತ್ತಾ ಬರುತ್ತಾನೆ. ನೆಚಿಟರಿಗೆ ಬಾಳೆ ಇಟ್ಟಿರುತ್ತದೆ. ಅದನ್ನು ಕಡಿದು ನೆಚಿಟರು ಮನೆಗೆ ಬರುವಾಗಲೂ ಮಡಿ ಹಾಸುವ ಕೆಲಸ ಇವರದೇ. ವಧೂವಿನ ಮನೆಗೆ ವರನು ಹತ್ತುವ ವೇಳೆಯೂ ಈ ಕೆಲಸ ಮಾಡುತ್ತಾರೆ. ಮನೆಚುಲ್ಲಿ ಯಾರಾದರೂ

ಮೃತಪಟ್ಟಾಗ ಕೂಡ ಸೂತಕ ಕಳೆದು ಶುದ್ಧಕ್ರಿಯೆ ಮಡಿವಾಳರ ಜವಾಬ್ದಾರಿ. ಪ್ರತಿ ಹಬ್ಬಗಳಿಗೆ ಮನ್ನ (ಪುತ್ತರಿ,ಕಾವೇರಿ ಸಂಕ್ರಮಣ ಇತ್ಯಾದಿ) ಊರಿನ ಬಟ್ಟೆಯನ್ನೂ ಶುಚಿಗೊಳಿಸಿಕೊಡುವ ಊರುಗಳಲ್ಲಿ ಇವರಿಗೆ ಊಮೆ ಪದ್ದತಿ ಇತ್ತು.(ಈಗ ಊಮೆ ಪದ್ದತಿ ಕಡಿಮೆಯಾಗಿದೆ)

ಮಲಿಯ ಜನಾಂಗ

ಮಲೆಯ ಅಥವಾ ಮಲಿಯ ಹೆಸರೇ ಹೇಳುವಂತೆ ಮಲೆ ಮೂಲದ್ದು. ಮಲೆಯಲ್ಲಿರುವಾತ ಎಂಬುವ್ಯದರಿಂದ ಈ ಹೆಸರು ಹುಟ್ಟಿಕೊಂಡಿರಬೇಕು. ಮಲೆಚುಲ್ಲಿದ್ದಾತನಿಗೆ ಮದ್ದು ಗೊತ್ತಿರಲೇಬೇಕು. ಇವರು ಕೊಡಗಿನಲ್ಲಿ ನೆಲೆ ನಿಲಲ್ಲು ಕಾರಣವಾದದು ಕೊಡಗಿಗೆ ಬಂದ ಮಾರಕ ರೋಗ ಸಿಡುಬು, ವಾಚಿತಿ, ಬೇದಿಯಂಥ ಕಾಯಿಲೆ ಇದಕ್ಕೆ ಸರಿಯಾದ ಔಷದೋಪಚಾರ ಮಾಡುವ ವ್ಯವಸ್ಥೆ ಇರಲಿಲ್ಲ. ಆನ ಒಚಿದೇ ಸಮನೆ ಸಾಯುತ್ತಿದ್ದಾಗ ಕೊಡಗಿನ ಅಗಿನ ರಾಜನ ಸೈನ್ಯಾಧಿಕಾರಿ ಮಲೆಚುಾಳ ದೇಶದ ಕಣ್ಣೂರು ಜಿಲ್ಲೆಯ ಚಿರಕಲ್ಲ್ ರಾಜನ ಬಳಿ ಜನರನ್ನು ಕಳುಹಿಸುತ್ತಾನೆ. ಅಲ್ಲಿನ ಕಯತ್‌ಕೋಟೆ ಎನ್ನುವಲ್ಲಿಂದ ತಂತ್ರ ಮಂತ್ರ ಔಷಧ ಪ್ರವೀಣರಾದ ಮಲಯಾನ್ ಕುಲದ ಹನ್ನೆರಡು ಮಂದಿ ಪಚಿಡಿತರನ್ನು ಅವರ ಹನ್ನೆರಡು ದೇವತೆಗಳನ್ನು ಕೊಡಗಿಗೆ ಕಳುಹಿಸಿಕೊಡುತ್ತಾನೆ. ಇವರನ್ನು ರಾಜನು ಕೊಡಗಿನ ಬೇರೆ ಬೇರೆ ಕಡೆ ನೆಲೆಗೊಳಿಸುತ್ತಾನೆ. ತಮ್ಮೊಡನೆ ಬಂದ ದೇವತೆಗಳನ್ನು ಇವರು ತಮ್ಮೊಡನೆ ಆಚೂಾಯ ಊರಿನಲ್ಲಿ ನೆಲೆಗೊಳಿಸಿದರು ಆ ದೇವರಿಗೆ ಆರಾಧನೆ ಮಾಡುವುದಲ್ಲದೆ ಆಚೂಾ ಭಾಗದ ಜನರ ಕಾಯಿಲೆಗಳಿಗೆ ಔಷದೋಪಚಾರ, ಯಂತ್ರ ಮಂತ್ರದ ಮೂಲಕ ಶರೀರಕ್ಕೆ ರಕ್ಷೆ ಇತ್ಯಾದಿಗಳನ್ನು ಮಾಡುತ್ತಾ ಇರತೊಡಗಿದರು. ಕೆಲವು ಭೂತ ಕೋಲಗಳನ್ನು ಇವರು ಕಟ್ಟುತ್ತಾರೆ. ಇಷ್ಟಲ್ಲದೆ ಚಾವಡಿಕಾರಾಗಿಯೂ (ಚೌಡಿಕಾರ) ಇವರನ್ನು ರಾಜ ನೇಮಿಸಿಕೊಂಡ ಎನ್ನಲಾಗುತ್ತದೆ. (ರಾಜನಿಂದ ವ್ಮರಣದಂಡನೆಗೆ ಒಳಗಾದವರನ್ನು ಇವರು ಶೀರಚ್ಛೇದ ಮಾಡುತ್ತಿದ್ದರು) ಇವರು ಬಂದಿದ್ದು ಕೊಡಗಿನ ವೀರರಾಜನ ಕಾಲದಲ್ಲಿ ಎಚಿದು ಮೂರ್ನಾಡಿನ ಮಲೆಚುರ ಮಾದಯ್ಯ ಹೇಳುತ್ತಾರೆ.

ಹೆಗ್ಗಡೆ ಜನಾಂಗ

The Hegdes are independent cultivators, who immigrated from Malayalam and settled chiefly in yedenalkunadu. Like the precediny tribe, they conform to coorg customs but are equally excluded from the community of coorgs, in whose presence they are allowed to seated on a mat, the Hegdes much not touch it. In

bodily appearance and complexion they resemble the coorgs. ಎಂದು ರಿಕ್ಟರ್ ತನ್ನ ಗ್ವಜೆಟಿರ್ ಆಫ್ ಕೂರ್ಗ್‌ನಲ್ಲಿ ಹೇಳಿದ್ದಾನೆ.

ಬೇರೆ ಬೇರೆ ಜಿಲ್ಲೆಗಳಲ್ಲಿ ಹೆಗ್ಗಡೆ, ಹೆಗಡೆ ಮುಂತಾದ ಜನಾಂಗಗಳು ನೆಲೆಚೂದರೆ ಕೊಡಗಿನ ಹೆಗ್ಗಡೆ ಜನಾಂಗಕ್ಕೂ ಇವರಿಗೂ ಸಂಬಂಧ ಇಲ್ಲ. ಇವರು ಸುಮಾರು 12ನೆ ಶತಮಾನಕ್ಕೂ ಮೊದಲು ಕೊಡಗಿಗೆ ಬಂದು ನೆಲೆಸಿದವರು ಎನ್ನಲಾಗುತ್ತದೆ. ಇವರ ಮೂಲ ಮಲಬಾರ್ ಎಚಿದು ಕೆಲವರು ಹೇಳಿದರೆ ಮತ್ತೆ ಕೆಲವರು ದಕ್ಷಿಣ ಕನ್ನಡ ಅಥವಾ ಉತ್ತರ ಕನ್ನಡದಿಂದ ಬಂದವರಾಗಿರಬಹ್ಮದೆಂದು ಹೇಳುತ್ತಾರೆ.

ಕೋಯವ ಜನಾಂಗ

The Koyavas are potters are met with in every Nad, where they ply their trade ಎಚಿದು ಕೊಡಗು ಗ್ವಜೆಟಿಯರ್ನಲ್ಲಿ ಹೇಳಲಾಗಿದೆ. ಕೊಡವ ಜಾನಪದ ಗ್ಭಿತೆಯಾದ ಮಂಗಲ ಪಾಟ್‌ನಲ್ಲಿ ಹೇಳಿರುವಚಿತೆ ಎನ್ನಡೋರ್ ಪೆತ್ತವ್ವ ಕುಂಬಾರಡ ಕೇರಿಕ್ ಕೆಂಗಲಕ್ ಪೋಯಿತ್ ಎನ್ನಲಾಗಿದೆ. ಇದನ್ನೆ ಕುಂಬಾರಡ ಕೇರಿಕ್ ಎನ್ನುವ ಬದಲು ಕೋಯವಡ ಕೇರಿಕ್ ಎನ್ನಲಾಗುತ್ತದೆ. ಗ್ವಜೆಟಿಯರ್‌ನಲ್ಲಿ ಕುಂಬಾರರು ಹಳ್ಳಿ ಸಮುದಾಯದ ಅಯಗಾರರಲ್ಲಿ ಒಬ್ಬರು. ಕೊಡಗಿನ ಕುಂಬಾರರು ಹಳ್ಳಿ ಸಮುದಾಯದ ಆಯಗಾರರಲ್ಲಿ ಒಬ್ಬರು. ಕೊಡಗಿನ ಕುಂಬಾರರಲ್ಲಿ ಮೈಸೂರು ಸೀಮೆ, ಕೇರಳ, ದ.ಕನ್ನಡದಿಂದ ಬಂದವರಿದ್ದಾರೆ.

ಕನ್ನಡ ಮಾತಾಡುವ ಮೈಸೂರು ಸೀಮೆಯವರನ್ನೂ ಮಲೆಯಾಳ ಮಾತಾನಾಡುವ ಕೇರಳದವರನ್ನೂ ಕೊಯಯ್‌ರಿ ಎಂದು ಕರೆಯುತ್ತಾರೆ. ಇವರ ಇತರ ಹೆಸರುಗಳು ಕೊಯವ, ಕೊಡೋಳ, ಮಂಬೋಳ ಚೋಯ ಎಚಿದೂ ಕರೆಯುತ್ತಾರೆ. ಮೂರ್ನಾಡು ನಾಪೋಕ್ಲು ಬಳಿ ಕೊಳಗೇರಿ ಬೆಟ್ಟಗೇರಿ ಮೊದಲಾದ ಕಡೆಗಳಲ್ಲಿ ದಕ್ಷಿಣ ಕನ್ನಡದ ಬೆಳ್ತಂಗಡಿ, ಉಜಿರೆ ಕಡೆಗಳಿಂದ ವಲಸೆ ಬಂದ ಕನ್ನಡ ಬಾಷಿಕ ಕುಂಬಾರರಿದ್ದಾರೆ. ಇವರು ದೊಡ್ಡವೀರರಾಜನ ಕಾಲದಲ್ಲಿ ವಲಸೆ ಬಂದವರೆಂದು ಹೇಳಲಾಗುತ್ತದೆ. ಇವರ ಹೆಂಗಸರು ಕೊಡವರಂತೆ ಬಟ್ಟೆ ಧರಿಸುತ್ತಾರೆ" ಎಂದು ಹೇಳುತ್ತಾರೆ.

ಇಂದು ಕೊಡಗಿನ ಎಲ್ಲಾ ದೇವರಕಾಡುಗಳಲ್ಲಿಯೂ ಟೆರ್ರಾಕೋಟಾ ಶಿಲ್ಪಗಳನ್ನು ಮಾಡಿಕೊಡುವವರು ಇದೇ ಜನಾಂಗದವರಾಗಿದ್ದಾರೆ. ಮಾಡುವ ಸಚಿದರ್ಭದಲ್ಲಿ ಹಲವು ಕಟ್ಟುನಿಟ್ಟುಗಳನ್ನು ಪಾಲಿಸಬೇಕಾಗಿರುವ್ವದರಿಂದ ಒಂದು ತಿಂಗಳ ಕಾಲ ಮಾಂಸಾಹಾರಗಳನ್ನು ಸೇವಿಸುವಂತಿಲ್ಲ. ಮೇದ ಮತ್ತು ಮಡಿವಾಳ ಜನಾಂಗದವನ್ನೊಳಗೊಂಡು ಕೋಯವ ಜನಾಂಗದವರು ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಈ ಹರಕೆಯ ಶಿಲ್ಪಗಳನ್ನು ಮಾಡುತ್ತಾರೆ.

ಕೊಡವ ನಾಯರ್ ಜನಾಂಗ

ಹೆಸರೇ ಹೇಳುವಚಿತೆ ಇವರು ಮಲೆಯಾಳಿ ಮೂಲದ ನಾಯರ್ ಜನಾಂಗದವರು. ಕೂಡಂಡ ಮನೆತನದವರು ಕೊಡಗಿನ ರಾಜನ ಕಾಲದಲ್ಲಿ ಕೊಡಗಿಗೆ ಬಂದವರೆಂದು ಹೇಳಲಾಗುತ್ತದೆ. ಕೇರಳದ ಕಾಸರಗೂಡು ಜಲ್ಲೆಯ ಕೊಡತ್ತೂರು ಇವರ ಮೂಲ ನೆಲೆ. ಇವರು ಶಾಸ್ತ್ರಾವು (ಸಾರ್ತ್ತಾವು) ದೇವತೆಯೊಂದಿಗೆ ಬಂದವರೆನ್ನಲಾಗುತ್ತದೆ.

ಪಣಿಕ ಜನಾಂಗ

ಪಣೀಕ ಜನಾಂಗದವರು ಕೇರಳದಿಂದ ಬಂದವರು ಕೇರಳದ ಮಾಯಿಡಾ ಎಂಬುದು ಇವರ ಮೂಲ ಎಚಿದು ತಿಳಿದು ಬರುತ್ತದೆ. ಬಲ್ಲತ್ ಪೊವ್ವಯಮ್ಮೆರ ಪಾಟ್‌ನಲ್ಲಿ "ಮಲ್ಲಲಾಯಿ ಮಾಡಾಯಿ- ಮಾಡಾಯಿ ತಿರಿಕ್ಕಲ್, ಮಿನಿಮಲೆ ಪೋವ್ವದಿ- ಪತ್ತ್‌ಕೋಟ್ ಪಾತಾಳ – ಒಚಿದ್ ಅರೆ ನಾಪದೂ–ಇಚ್ಚಕುಳ್ಳ ದೇವಡ–ಏರಕೇಳಿ ಕೆಪಲ" ಎಂಬ ಪ್ರಸ್ತಾಪ ಬರುತ್ತದೆ. ಇಚಿಥ ಮಾಡಾಯಿ ಮಡಿಯಂಗೋಲ್ ಕ್ಷೇತ್ರದ ವ್ಮಡಿಂಞ್ ಇಂಬ ಪಂಗಡದವರೆ ಪಣಿಕ ಜನಾಂಗದವರು ಎನ್ನಲಾಗುತ್ತದೆ. ಮಾಡಾಇಯಲ್ಲಿ ನಾನಾ ದೇವರ ಮೂಲಸ್ಥಾನ ಕೂಡಾ ಅಗಿದೆ. ಕೊಡಗಿನಲ್ಲಿ ಕ್ಷೇತ್ರಪಾಲನನ್ನು ಕೇತ್‌ರಪ್ಪ ಎನ್ನಲಾಗಿದೆ.

"ಮದಮುಳ್ಳ ರಾಜ್ಯ" ಮಲೆಯಾಳದಿಂದ ಬಂದ ಪಣೀಕರು ಬಯತ್ತೋರ್ ಪೆರಿಯಾರ್ ದೇವರಲ್ಲಿ ಇರಲು ನೆಲೆ ಕೇಳುತ್ತಾರೆ. ಬಯತ್ತೂರು ಪೆರಿಯಾರ್ ದೈವಾವೇಶ ಬರುವ ಕೋರತಚ್ಚ ಇವರಿಗೆ ಸ್ಥಾನ ಕೊಡುತ್ತಾರೆ. ಅಲ್ಲಿಂದ ಕೊಡಗಿನ ರಾಜನನ್ನು ತಮಗಿರಲು ಜಾಗ ಬೇಕು ಎಚಿದು ಕೇಳುತ್ತಾರೆ. ಹೀಗೆ ಕೊಡಗಿನ ಕಾವೇರಿ ಕ್ಷೇತ್ರಕ್ಕೆ ಹೋಗಿ "ಐದು ಎರಡು ಏಳು ಸ್ಥಾನಗಳನ್ನು ಕರುಣಿಸು" ಎಚಿದು ಬೇಡುತ್ತಾರೆ, ಹೀಗೆ ನೆಲೆನಿಂತವರು ತೆರೆ ಸಂಸ್ಕೃತಿಯ ಪಣಿಕರು. ಮಲೆಚಿಯಾಳಿ ಭಾಷೆಚಿುಲ್ಲಿ ಪಣಿಕ ಎಚಿದರೆ ಮಲೆಚಿುನ್ ಅರ್ಥಾತ್ ಮಲೆಯ ಜನಾಂಗದವರು. ಇವರು ಮಲೆಯಲ್ಲಿ "ಬಾಂಗಾಡ್ ಬನತ್ತಿಲ್, ತಣ್‌ಪ್ ಕುಳ್‌ಪ್‌ಲ್" ನೆಲೆಸಿದ್ದರಿಂದ ಮಲಯ (ಮಲೆಗಳಲ್ಲಿ ತಣ್ಣಗೆ ವಾಸವಿರುವವರು) ಮಲೆಚಿುನ್ ಎಂದು ಹೆಸರಾಗಿದೆ ಎನ್ನಲಾಗುತ್ತದೆ.

ಕಣಿಯ ಜನಾಂಗ

ಕಣಿಯರ ಕುಲ ಕಸುಬು ಜೋತಿಷ್ಯ. ಇವರು ಮೂಲತಃ ಕೇರಳದಿಂದ ಬಂದವರೆನ್ನಲಾಗಿದೆ. ಕೊಡವ ಜನಪದದ ಪ್ರತಿಯೊಂದು ಹಾಡಿನಲ್ಲು ಸಾಮಾನ್ಯವಾಗಿ ಅಚ್ಚುತ ಕಣಿಯ ಕಾಣಿಸಿಕೊಳ್ಳುತ್ತಾನೆ. ನಾಮಕರಣ, ಮದುವೆ, ತಿಥಿಗಳಿಗೆ ದಿನ ನಿಶ್ಚಯ ಈತನ ಜವಾಬ್ದಾರಿ. ಈತ ಕೊಡವ ಕುಲದ ಲೌಕಿಕ, ಪಾರಮಾರ್ಥಿಕ ಸಮಸ್ಯೆಗಳಿಗೆ ಪರಿಹಾರ ಸೂಚಕನಾಗಿಯೂ ಕೆಲಸ ಮಾಡುತ್ತಾನೆ. ಕೈಲ್‌ಪೊಳ್ದ್‌ನಿಂದಾರಂಭವಾಗಿ ಪ್ರತಿಯೊಂದು ಹಬ್ಬ ಹರಿದಿನಗಳಿಗೂ ಈತನೇ ಜ್ಯೋತಿಷಿ. ಕಣಿಯರು ದೇವಿಯ ಆರಾಧಕರು



ವಿರಾಜಪೇಟೆ ತಾಲೂಕಿನ ಬಿಳುಗುಂದ ಬಳಿಯಿರುವ ದೇವರಕಾಡಿನಲ್ಲಿರುವ ಭಗವತಿ ದೈವದ ಗುಡಿ



ದೇವರಕಾಡಿನಲ್ಲಿ ಪನ್ನಂಗಾಲತಮ್ಮೆ ಹಬ್ಬದ ಸಂದರ್ಭದ ಕೆಂಬಟ್ಟಿ ಜನಾಂಗದ ದೇವರಗುಡ್ಡ



ಮಕ್ಕಿಶಾಸ್ತಾವು ಬೇಟೆ ದೇವರ ಪೂಜೆಗೂ ಮುನ್ನ ಡೊಳ್ಳು ಬಡಿಯಲು
ಸಿದ್ಧವಾಗಿ ನಿಂತಿರುವ ಮೇದ ಜನಾಂಗದವರು

ಅಧ್ಯಾಯ – 06

ಕ್ಷೇತ್ರಕಾರ್ಯದಲ್ಲಿ ದೊರೆತ ದೇವರಕಾಡುಗಳ ಅಂಕಿಅಂಶಗಳು

ಕೊಡಗು ಜಿಲ್ಲೆಯ 4104 ಚ.ಕಿ.ಮೀ. ವ್ಯಾಪ್ತಿಯಲ್ಲಿ 1214 ದೇವರ ಕಾಡುಗಳನ್ನು ಪಟ್ಟಿಮಾಡಲಾಗಿದ್ದು, ವೈವಿಧ್ಯಮಯ ಸಸ್ಯಗಳು, ಗಿಡಗಳು, ಮಿಗಿಲಾಗಿ ಪ್ರಾಣಿ ಸಂಕುಲವಿದೆ. ಜಗತ್ತಿನ ಯಾವುದೇ ಕಾಡುಗಳಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಸ್ಥಳೀಯ ಜನಾಂಗಗಳು ಕಾಡುಗಳನ್ನು ಸಂರಕ್ಷಿಸಿದ ಉದಾಹರಣೆಗಳಿಲ್ಲ. ಹೀಗಾಗಿ ಕೊಡಗಿನ ದೇವರಕಾಡು ಎಂ ಪರಿಕಲ್ಪನೆಗೆ ಹೆಚ್ಚಿನ ಮಹತ್ವ ಬಂದಿದೆ.

ಕ್ಷೇತ್ರಕಾರ್ಯಕ್ಕೆ ಆಯ್ಕೆಮಾಡಿಕೊಂಡ 574 ದೇವರಕಾಡುಗಳು ಅವುಗಳ ವಿಸ್ತೀರ್ಣ, ಅಲ್ಲಿ ದೊರೆತ ಶಿಲ್ಪಗಳು ಹಾಗೂ ಶಿಲ್ಪಗಳ ಮಾದರಿಗಳ ವಿವರ ಈ ಕೆಳಕಂಡಂತಿದೆ.

1. ಅಯ್ಯಪ್ಪ – ಲೋಹದ ಶಿಲ್ಪ (ತ್ರಿಶೂಲ)
2. ಭಗವತಿ – ಮರದ ಶಿಲ್ಪ
3. ಭದ್ರಕಾಳಿ – ಶಿಲೆಯ ಶಿಲ್ಪ
4. ಗ್ರಾಮದೇವರು – ಮರ ಮತ್ತು ಟೆರ್ರಾಕೋಟಾ ಶಿಲ್ಪ
5. ಬಸವೇಶ್ವರ – ಮರ ಮತ್ತು ಶಿಲೆಯ ಶಿಲ್ಪ
6. ತಮ್ಮಚ – ಟೆರ್ರಾಕೋಟಾ ಶಿಲ್ಪ
7. ಚೌವುಂಡಿ – ಶಿಲೆ ಮತ್ತು ತ್ರಿಶೂಲ
8. ಮಾರಮ್ಮ – ಮರದ ಶಿಲ್ಪ
9. ವಿಷ್ಣುಮೂರ್ತಿ – ಮರದ ಶಿಲ್ಪ
10. ಮುತ್ತಪ್ಪ – ಲೋಹದ ಶಿಲ್ಪ (ತ್ರಿಶೂಲ)

ಕ್ರ.ಸಂ.	ಗ್ರಾಮದ ಹೆಸರು	ದೈವದ ಹೆಸರು	ವಿಸ್ತೀರ್ಣ
1	ಐವತ್ತೋಕ್ಲು ಗ್ರಾಮ	ಅಯ್ಯಪ್ಪ	14.10
2		ಕುಲಿಕೆ ಅಯ್ಯಪ್ಪ	0.54
3		ಮೇದಾರ ಅಯ್ಯಪ್ಪ	1.97
4		ಮೇದಾರ ಅಯ್ಯಪ್ಪ	2.26
5		ಮೂರ್ತಿ ದೇವ	0.36
6	ಐಯ್ಯಂಗೇರಿ	ಅಯ್ಯಪ್ಪ	16.52
7		ಅಯ್ಯಪ್ಪ	2.01
8		ಕಬಿಲಾರ	0.55

9		ಕಬಿಲಾರ ಹೊಳೆತಾಳೆ	0.40
10		ಕಬಿಲಾರ ಹೊಳೆತಾಳೆ	0.82
11		ಪೋವಾಡಿ	0.48
12	ಅವಂದೂರು	ಅಂಜದೆಸೀರ್	31.36
13		ಅಯ್ಯಪ್ಪ	0.32
14		ಅಯ್ಯಪ್ಪ	0.72
15		ಅಯ್ಯಪ್ಪ	0.74
16		ಚಾಮುಂಡಿ	2.43
17		ಗ್ರಾಮದೇವರು	5.68
18	ಬಿ. ಬಡಗ	ಅಯ್ಯಪ್ಪ	0.13
19		ಅಯ್ಯಪ್ಪ	1.37
20		ಅಯ್ಯಪ್ಪ	1.70
21		ಅಯ್ಯಪ್ಪ	3.34
22		ಅಯ್ಯಪ್ಪ	3.92
23		ಭಗವತಿ	3.62
24		ಭಗವತಿ	0.09
25		ಭಗವತಿ	2.40
26		ದೇವರಬನ	7.17
27		ಕರಿಂಬೆಟ್ಟ ಅಯ್ಯಪ್ಪ	3.65
28		ಕೃಷ್ಣ ದೇವರ	0.21
29		ಪೊದನೂರು	4.27
30	ಬಲ್ಲಮವಟ್ಟಿ	ಅಯ್ಯಪ್ಪ	0.46
31		ಅಯ್ಯಪ್ಪ	0.66
32		ಅಯ್ಯಪ್ಪ	1.55
33		ಅಯ್ಯಪ್ಪ	59.51
34		ಭಗವತಿ	1.12
35	ಬೆಸಂಗೂರು	ಅಯ್ಯಪ್ಪ	0.60
36		ಕ್ಷೇತ್ರ	0.16
37		ಕ್ಷೇತ್ರ	0.17
38		ತಮ್ಮಚ	0.69
39	ಭಾಗಮಂಡಲ	ಅಯ್ಯಪ್ಪ	1.55
40		ಅಯ್ಯಪ್ಪ	3.85
41		ಅಯ್ಯಪ್ಪ	3.85
42		ಅಯ್ಯಪ್ಪ	8.23
43		ಭಗವತಿ	0.10
44		ಚವುಂದು	0.29

45		ಕೈಕರಿಕ	0.85
46		ಪುಂಜುರ್ಲಿ	8.38
47		ಪುಂಜುರ್ಲಿ	1.52
48		ಪುಂಜುರ್ಲಿ	1.52
49		ಸಂಗಮ	93.00
50	ಚೇರಂದೆಟ್ಟಿ	ಅಯ್ಯಪ್ಪ	8.52
51		ಅಯ್ಯಪ್ಪ	1.85
52		ಅಯ್ಯಪ್ಪ	1.15
53		ಅಯ್ಯಪ್ಪ	0.65
54		ದೇವರನಾಡೆ	0.65
55		ಉರುಂಬಾಲ ಶಾರ್ಥವು	8.07
56		ಉರುಂಬಾಲ ಶಾರ್ಥವು	0.10
57	ಚೇರಂಗಾಲ	ಅಯ್ಯಪ್ಪ	2.01
58		ಭದ್ರಕಾಳಿ	0.35
59		ಭದ್ರಕಾಳಿ	0.81
60		ಭಗವತಿ	7.17
61		ಕಾವೇರಮ್ಮ	379.85
62	ದೊಡ್ಡಪುಲಿಕೋಟು	ಭಗವತಿ	11.08
63	ಕಡಿಯತ್ತೂರು	ಅಯ್ಯಪ್ಪ	0.46
64		ಭಗವತಿ	1.22
65		ಊರುಗುಪ್ಪ ಹೊಗುವಂದೆ	3.44
66	ಕಾರುಗುಂದ	ಅಯ್ಯಪ್ಪ	0.35
67		ಅಯ್ಯಪ್ಪ	13.13
68		ಭಗವತಿ	0.21
69		ವಿಷ್ಣುಮೂರ್ತಿ	4.37
70	ಕಳಗದಾಳು	ಅಯ್ಯಪ್ಪ	8.71
71		ಅಯ್ಯಪ್ಪ	2.30
72		ಭಗವತಿ	0.42
73		ಭಗವತಿ	1.42
74		ದೇವಸ್ಥಾನ ಜಾಗ	0.10
75		ಕುಡಿಕೆ ಅಯ್ಯಪ್ಪ	1.90
76	ಕೊಳಕೇರಿ	ಅಯ್ಯಪ್ಪ	0.08
77		ಅಯ್ಯಪ್ಪ	0.49
78		ಅಯ್ಯಪ್ಪ	2.47
79		ಬೆಟ್ಟತಪ್ಪ	5.59
80		ಭದ್ರಕಾಳಿ	1.24

81		ಕಡುಮುಡಿ ಅಯ್ಯಪ್ಪ	1.24
82	ಕೊಪಟ್ಟಿ	ದೇವರಮೊಟ್ಟೆ ತುಂಡು	125.99
83		ವಿಷ್ಣು	1.33
84		ವಿಷ್ಣುಮೂರ್ತಿ	0.85
85		ಗ್ರಾಮದೇವರು	1.58
86		ಗ್ರಾಮದೇವರು	206.24
87	ಕೊರಂಗಾಲ	ಸುಬ್ರವ	59.34
88		ವಿಷ್ಣು	2.19
89	ಕುಂಜಿಲ	ಅಳಂಗೇರಿ ಅಯ್ಯಪ್ಪ	10.42
90		ಅಯ್ಯಪ್ಪ	2.77
91		ಬೇರಂಗಾಡು	5.49
92		ಕೈರಾಮ	0.68
93		ಕಂದತಿ ಅಯ್ಯಪ್ಪ	2.73
94		ಕೊಟ್ಟನಿ ಅಯ್ಯಪ್ಪ	0.45
95		ಮಲೆಮುಡಿ ಅಯ್ಯಪ್ಪ	0.21
96		ಪೊಲೆಲ ಅಯ್ಯಪ್ಪ	0.83
97		ಪೋವಾಕನಿ	1.75
98		ಸೋಮೇಶ್ವರ	0.60
99	ನಲದಿ	ಅಯ್ಯಪ್ಪ	0.15
100		ಅಯ್ಯಪ್ಪ	0.49
101		ಅಯ್ಯಪ್ಪ	0.98
102		ಅಯ್ಯಪ್ಪ	5.37
103	ನಾಪೋಕ್ಲು	ಅಯ್ಯಪ್ಪ	0.04
104		ಅಯ್ಯಪ್ಪ	0.10
105		ಅಯ್ಯಪ್ಪ	0.16
106		ಅಯ್ಯಪ್ಪ	0.45
107		ಅಯ್ಯಪ್ಪ	4.81
108		ಅಯ್ಯಪ್ಪ	21.59
109	ನೆಜ್ಜಿ	ಅಯ್ಯಪ್ಪ	2.76
110		ಭಗವತಿ	4.57
111		ಇಗ್ಗುತ್ತಪ್ಪ	354.84
112	ಪಡಕಲ್ಲು	ಅಯ್ಯಪ್ಪ	4.57
113		ದೇವರ ಕೆರೆವಾಡಿ	11.13
114		ಉರವರ ಡೋಲು	2.18
115	ಪೆರೂರು	ಬೊಮ್ಮಕುಡಿ	1.05
116		ಇಗ್ಗುತ್ತಪ್ಪ	26.96

117	ಸಣ್ಣಪುಲಿಕಟ್ಟು	ಅಯ್ಯಪ್ಪ	8.07
118		ಅಯ್ಯಪ್ಪ	0.59
119		ಗ್ರಾಮದೇವರು	20.57
120	ಸಿಂಗತ್ತೂರು	ಉರುಂಬಾಲ	0.37
121		ವಿಷ್ಣುಮೂರ್ತಿ	3.20
122		ವಿಷ್ಣುಮೂರ್ತಿ	2.48
123	ಯೆಮ್ಮೆಮಡು	ಮಸಿಲ್ಸ್	4.36
124	ಯೆವಕಪಡಿ	ಅಯ್ಯಪ್ಪ	7.42
125		ಪನ್ನಿಯಂಗತಮನೆ	0.23
126		ಪನ್ನಿಯಂಗತಮನೆ	0.44
127		ಪನ್ನಿಯಂಗತಮನೆ	1.44
128		ಪನ್ನಿಯಂಗತಮನೆ	2.40
129			
130	ಅಬ್ಯುತ್ಮಂಗಲೆ	ಅಯ್ಯಪ್ಪ	18.36
131		ಅಯ್ಯಪ್ಪ	8.34
132			
133		ಚಾಮುಂಡಿ	0.40
134	ಕುಡ್ಲೂರು	ಗ್ರಾಮದೇವರು	0.08
135		ಗ್ರಾಮದೇವರು	0.11
136		ಗ್ರಾಮದೇವರು	0.12
137		ಗ್ರಾಮದೇವರು	0.46
138		ಗ್ರಾಮದೇವರು	0.51
139	ಕುದುಮಂಗಳೂರ್	ಗ್ರಾಮದೇವರು	0.43
140		ಗ್ರಾಮದೇವರು	1.70
141	ಮೊದುರ್	ಪೂವತ್ತಿ	0.26
142		ಗ್ರಾಮದೇವರು	0.18
143		ಗ್ರಾಮದೇವರು	1.00
144		ಗ್ರಾಮದೇವರು	1.00
145		ಗ್ರಾಮದೇವರು	1.45
146		ಗ್ರಾಮದೇವರು	1.50
147		ಗ್ರಾಮದೇವರು	30.00
148	ಮುಲೂರು	ಕಾಳಿ	0.89
149		ಗ್ರಾಮದೇವರು	0.09
150		ಗ್ರಾಮದೇವರು	0.21
151		ಗ್ರಾಮದೇವರು	0.40
152		ಗ್ರಾಮದೇವರು	0.43

153		ಗ್ರಾಮದೇವರು	0.59
154	ನಂಜರಾಯಪಟ್ಟಣ	ನಂಜುಂಡೇಶ್ವರ	3.10
155		ಪಾಳಿಮಂಟಿ	10.62
156	ನರ್ಗನೆ	ಭೂತನಕಾಡು	0.97
157		ಮರಿದೇವ	0.35
158		ಪಕ್ಕದ ಚಾಮುಂಡಿ	3.04
159		ಉಲ್ಲರತಮ್ಮ	2.35
160		ಗ್ರಾಮದೇವರು	0.94
161		ಗ್ರಾಮದೇವರು	1.35
162	ನೆಲ್ಲಿಕುಡಿಕೇರಿ	ಅಯ್ಯಪ್ಪ	1.30
163		ಅಯ್ಯಪ್ಪ	2.16
164		ಬರಡಿ	35.05
165		ಚಾಮುಂಡಿ	6.32
166		ಮಹದೇವ	2.56
167		ಮನಮ್ಮ	0.88
168		ಮರಮ್ಮ	0.55
169		ಮರಮ್ಮ	9.29
170		ವಿಷ್ಣುಮೂರ್ತಿ	0.38
171		ವಿಷ್ಣುಮೂರ್ತಿ	1.04
172		ಗ್ರಾಮದೇವರು	1.22
173	ರಂಗಸಮುದ್ರ	ಚಾಮುಂಡಿ	1.20
174		ಚಾಮುಂಡಿ	1.27
175	ಸಾಸವತ್ತೂರು	ದೇವರಬನ	0.16
176	ವಲ್ಲೂರ್ ತ್ಯಾಗತೂರು	ಬಡ್ಡಿ	0.88
177		ಬಸವಣ್ಣ	0.42
178		ಚೌಡಮ್ಮ	1.44
179		ದಂಡಿನ ಮಾರಮ್ಮನ	0.46
180		ಹೊಟಿಮಮ್ಮ	1.44
181		ಕಾಡಪ್ಪ	0.43
182		ಕೋಟೆ	4.08
183		ಮಾರಮ್ಮ	0.43
184		ಮಾರಮ್ಮ	0.56
185		ಮಾರಮ್ಮ	2.48
186		ಸುಖ್ಖಿ	3.70
187		ಗ್ರಾಮದೇವರು	0.56
188		ಗ್ರಾಮದೇವರು	3.61

189	ವಿರೂಪಾಕ್ಷಪುರ	ಚೌಡಮ್ಮ	0.15
190			
191	ಅರೆಕಾಡು	ಅಯ್ಯಪ್ಪ	0.89
192		ಭಗವತಿ	0.54
193		ವಿಷ್ಣುಮೂರ್ತಿ	0.08
194		ವಿಷ್ಣುಮೂರ್ತಿ	0.08
195	ಬಡಗ	ಭಗವತಿ	1.16
196	ಬಂಬೆಲ್ಲಚು	ಅಜಪ್ಪ	0.08
197		ಗ್ರಾಮದೇವರು	0.23
198	ಬಟ್ಟಗೇರಿ	ಅಕ್ಕಿಕಲ್ಲು ಅಯ್ಯಪ್ಪ	0.42
199		ಅಕ್ಕಿಕಲ್ಲು ಅಯ್ಯಪ್ಪ	12.71
200		ಗ್ರಾಮದೇವರು	17.78
201	ಬಿಳಿಗೇರಿ	ಅಜಪ್ಪ ದೇವರ	0.96
202		ಬಕ್ಕಬಾನೆ ಅಯ್ಯಪ್ಪ	3.48
203		ಬೊಕ್ಕಾಡು ಅಯ್ಯಪ್ಪ	1.93
204		ಈಶ್ವರ	0.20
205	ಬಿಳಿಗೇರಿ	ಭಗವತಿ	0.50
206		ಮಹದೇವರ ಮತ್ತು	1.14
207		ಗ್ರಾಮದೇವರು	0.46
208	ಗಾಳಿಬೀಡು	ಕುಂಡುಮಲಿ ಅಯ್ಯಪ್ಪ	5.20
209		ನೈಡಲಪ್ಪ	6.43
210		ಪೊಡ	6.88
211		ಯಲಡಾಲು ಅಯ್ಯಪ್ಪ	8.76
212	ಹಾಕತೂರು	ಭಗವತಿ	0.14
213		ಹೊದ್ದೆಟ್ಟೆಇ ಅಯ್ಯಪ್ಪ	8.24
214		ಪುಲಿಚೌಂಡಿ	18.71
215	ಹೆರವಂದು	ಕ್ಷೇತ್ರಪಾಲ	23.93
216		ಕ್ಷೇತ್ರಪಾಲ	23.95
217		ಅಯ್ಯಪ್ಪ	51.13
218	ಹೊಸಕೇರಿ	ಅಯ್ಯಪ್ಪ	8.56
219		ಅಯ್ಯಪ್ಪ	8.92
220		ಚಿಲಿಪಿಲಿ ಮಹದೇವ	3.12
221		ಕಬ್ಬಕ್ಕಿ	5.57
222	ಇಬಿವಲವಾಡಿ	ಭದ್ರಕಾಳಿ	1.78
223		ಭದ್ರಕಾಳಿ	2.17
224		ಭದ್ರಕಾಳಿ	2.80

225		ಕಾದು ಅಯ್ಯಪ್ಪ	1.10
226	ಇಕೋವ್	ಅಯ್ಯಪ್ಪ	1.31
227		ಅಯ್ಯಪ್ಪ ಮತ್ತು ಚಂಡಿ	4.77
228		ಪೂರೊಟು ಅಯ್ಯಪ್ಪ	1.82
229	ಮೊನ್ನಂಗೇರಿ	ಭದ್ರಕಾಳಿ	2.36
230		ಭದ್ರಕಾಳಿ	22.57
231		ಮೆಕೇರಿ ಅಯ್ಯಪ್ಪ	6.12
232		ಶ್ರೀ ಭದ್ರಕಾಳಿ	1.56
233	ಕಾಡಗಡಲು	ಅಯ್ಯಪ್ಪ	2.17
234		ಬೆಟ್ಟಪ್ಪ	2.99
235		ಪೂವತಪ್ಪ	5.54
236	ಕಗ್ಗೊಡ್ಲು	ಬೆಳ್ಳಿಚೆಟ್ಟಿಮನ್ಯೆ	8.24
237		ಬೆಮಪ್ಪ	14.51
238		ಪೂವತಪ್ಪ	5.28
239	ಕಾಲೂರು	ಅಯ್ಯಪ್ಪ	38.24
240		ಅಯ್ಯಪ್ಪ	4.15
241		ಅಯ್ಯಪ್ಪ	10.92
242		ಚಾಮುಂಡಿ	5.84
243		ಗ್ರಾಮದೇವರು	0.34
244	ಕಂತೂರ್	ಅಯ್ಯಪ್ಪ	0.61
245		ಅಯ್ಯಪ್ಪ	0.89
246		ಅಯ್ಯಪ್ಪ	3.07
247		ಬೆಟ ಚೌಡಿ ಅಯ್ಯಪ್ಪ	0.81
248		ಭಗವತಿ	1.55
249		ಭಗವತಿ	1.20
250	ಕರಾವಳೆ ಬಡಗ	ಭದ್ರಕಾಳಿ	1.90
251		ಕಬ್ಬಕ	2.40
252		ಕರವಾಲೆ ಭಗವತಿ	2.93
253	ಕಟಗೇರಿ	ಅಪ್ಪಂದ್ಯಪ್ಪ	3.54
254		ಅಪ್ಪಂದ್ಯಪ್ಪ	319.61
255	ಕೆಲಗೇರಿ ನಿಡುಗನೆ	ಬೈತಲಪ್ಪ	3.24
256		ಬೈತಲಪ್ಪ	4.06
257		ಶ್ರೀ ಅಯ್ಯಪ್ಪ	12.51
258	ಕಿಗ್ಗಲು	ಅಯ್ಯಪ್ಪ	0.15
259		ವಿಷ್ಣುಮೂರ್ತಿ ದೇವ	0.37
260	ಎಂ. ಬಡಗ	ಅಮ್ಮಂಡಿ ಕರಿವಾಡ	0.84

261		ಭದ್ರಕಾಳಿ	0.33
262		ಅಯ್ಯಪ್ಪ	3.61
263	ಮಾಡೆ	ಮಾಡೆ ಅಯ್ಯಪ್ಪ	15.28
264		ಮಾಡೆ ಮಹದೇವಪ್ಪ	6.84
265	ಮಕ್ಕಂದುರ್	ಶ್ರೀ ಭದ್ರಕಾಳಿ	12.63
266	ಮೆಕೇರಿ	ಅಯ್ಯಪ್ಪ	3.82
267		ಉರುಪರಂಬು ಅಯ್ಯಪ್ಪ	5.12
268	ನಿದವಟ್ಟು	ಭದ್ರಕಾಳಿ	3.19
269		ಭಗವತಿ	16.83
270		ಮಹದೇವರ್	4.87
271	ಸೊದ್ಲುರ್ ಕಟ್ಟೆಮಡು	ಅಯ್ಯಪ್ಪ	21.62
272		ಭದ್ರಕಾಳಿ	0.28
273		ಭದ್ರಕಾಳಿ	47.37
274		ಕಟ್ಟೆಮಡು	0.28
275		ಮಾಪಿಳ ಭಾದೆವ	3.80
276		ತಲಮುದಿ ಅಯ್ಯಪ್ಪ	10.38
277			
278	ಅರವತ್ತೊಕ್ಲು	ಅಯ್ಯಪ್ಪ	3.28
279		ಅಯ್ಯಪ್ಪ	14.05
280		ಅಯ್ಯಪ್ಪ	16.74
281		ಮಹದೇವಪ್ಪ	2.74
282	ಅರವತ್ತೊಕ್ಲು	ಅಯ್ಯಪ್ಪ	1.47
283		ಭಗವತಿ	0.09
284		ನಾಡು ದೇವಸ್ಥಾನ	0.30
285	ಅತೂರ್	ಮದರಸ ಅಯ್ಯಪ್ಪ	4.56
286	ಬಿ. ಶೆಟ್ಟಿಗೇರಿ	ಅಯ್ಯಪ್ಪ	3.07
287		ಅಯ್ಯಪ್ಪ	3.91
288		ಕಲಯ್ಯಪ್ಪ	0.32
289		ಕಹ	2.56
290	ಬಡಗ (ಕುಟ್ಟ)	ಅಯ್ಯಪ್ಪ	0.70
291		ಅಯ್ಯಪ್ಪ	6.32
292		ಚಾಮುಂಡಿ	2.70
293		ಹೊರನಾಡು	3.44
294	ಬಡಗ ಬನ್ನಂಗಾಲ	ಬಸವನಗುಡಿ ಜಾಗ	0.26
295		ಭಗವತಿ	0.20
296		ಚೌಡಮ್ಮ	0.08

297	ಬಡಗಕೇರಿ	ಅಮೃತ ಅಯ್ಯಪ್ಪ	1.36
298		ಅಮೃತ ಅಯ್ಯಪ್ಪ	1.79
299		ಅಯ್ಯಪ್ಪ	15.62
300		ಭಗವತಿ	0.35
301		ಕುತಿಯಲು ಅಯ್ಯಪ್ಪ	3.53
302		ಮಹದೇವ	3.97
303	ಬಾಲಾಜಿ	ಅಯ್ಯಪ್ಪ	61.76
304		ಬಸವೇಶ್ವರ	0.06
305		ಬಸವೇಶ್ವರ	0.09
306		ಭದ್ರಕಾಳಿ	0.67
307		ಗ್ರಾಮದೇವರು	3.17
308		ಹನುಮಂತ	0.02
309	ಬಾಲೆಲೆ	ಮಾರಿಗುಡಿ	0.28
310	ಬಾಲ್ಯಮಂಡುರು	ಅಯ್ಯಪ್ಪ	6.67
311		ಬಸವೇಶ್ವರ	0.06
312		ಬಸವೇಶ್ವರ	0.32
313		ಭದ್ರಕಾಳಿ	2.28
314		ದುರ್ಗಿ	0.33
315		ಹೊಳೆ	2.67
316	ಬೀಲೂರು	ಅಯ್ಯಪ್ಪ	1.00
317		ಅಯ್ಯಪ್ಪ	1.28
318		ದುರ್ಗಿ	0.09
319		ಮಹದೇವರಗುಡಿ	1.20
320		ಅಯ್ಯಪ್ಪ	2.58
321	ಬೇಗೂರು	ಭಗವತಿ	0.55
322		ಚಾಮುಂಡಿ	1.34
323		ಮಹದೇವರ	0.94
324	ಬೆಕ್ಕೆಸೊಡ್ಲುರ್	ಅಯ್ಯಪ್ಪ	0.47
325		ದುರ್ಗಿ	0.70
326		ಹೊಲ್ಸ್	0.13
327		ಕೃಷ್ಣ	0.85
328		ಮಹದೇವ	0.44
329		ಮಹದೇವ	0.70
330		ಮಹದೇವ	1.71
331	ಬೆಳ್ಳೂರು	ಅಯ್ಯಪ್ಪ	3.56
332		ಭದ್ರಕಾಳಿ	9.63

333		ಚಾಮುಂಡಿ	0.29
334		ದುರ್ಗಿ	0.09
335		ಹೊಳೆದೇವ	1.45
336	ಬೆರುಗ	ಅಯ್ಯಪ್ಪ	3.63
337		ಬೊಡಂಜ	77.44
338		ಮಹದೇವ	0.67
339		ಮಾಲೆ	1.20
340		ಮುತ್ತಪ್ಪ	0.12
341		ಮುತ್ತಪ್ಪ	0.42
342		ಮುತ್ತಪ್ಪ	0.95
343		ಮುತ್ತಪ್ಪ	8.20
344		ಮುತ್ತಪ್ಪ	36.50
345	ಬೆಸಗೂರು	ಭದ್ರಕಾಳಿ	1.54
346		ಭದ್ರಕಾಳಿ	11.05
347		ಮದ್ರಾಸ್ ಅಯ್ಯಪ್ಪ	0.22
348		ಮದ್ರಾಸ್ ಅಯ್ಯಪ್ಪ	0.32
349		ಮಹದೇವರಗುಡಿ	0.74
350	ಭದ್ರಗೋಳ	ಬಸವಣ್ಣ	1.30
351		ಗ್ರಾಮದೇವರು	1.50
352	ಬಿರುನನಿ	ಅಯ್ಯಪ್ಪ	5.27
353		ಅಯ್ಯಪ್ಪ	17.86
354		ಭಗವತಿ	2.28
355		ಮದ್ರಾಸ್ ಅಯ್ಯಪ್ಪ	1.12
356		ಮಲೆದೇವ	8.47
357		ಪುತ್ತೂತು ಭಗವತಿ	0.18
358		ಪುತ್ತೂತು ಭಗವತಿ	5.23
359	ಚಹೆನಿವಾಡ	ಅಯ್ಯಪ್ಪ	4.64
360		ಅಯ್ಯಪ್ಪ	4.77
361		ಭಗವತಿ	0.71
362		ಭಗವತಿ	1.00
363		ಕಡಲಪ್ಪ	3.34
364		ವಿಷ್ಣುಮೂರ್ತಿ	0.37
365		ವಿಷ್ಣುಮೂರ್ತಿ	3.61
366	ಚೆನ್ನಂಗಿ	ಬಸವನಗುಡಿ	0.40
367	ಚೆನ್ನಯನಕೋಟೆ	ಬಸವಣ್ಣ	0.24
368		ಬಸವಣ್ಣ	5.56

369	ಚಿಕ್ಕಮಂಡುರು	ಅಯ್ಯಪ್ಪ	1.21
370		ಬೇಟೆಕುರುಬ	4.52
371		ಭಗವತಿ	0.91
372		ಕಾಳಿ	5.24
373	ದೇವನೂರು	ದುರ್ಗಿ	1.48
374		ಹೊಲ್ಸ್	0.31
375		ಮಹದೇವರಗುಡಿ	2.28
376		ನಗಮನಿ ಅಯ್ಯಪ್ಪ	3.56
377	ಧನುಂಗಾಲ	ಅಯ್ಯಪ್ಪ	4.19
378		ಬಸವೇಶ್ವರ	1.18
379		ಬಸವೇಶ್ವರ	1.19
380		ಮರುಡೇಶ್ವರ	6.46
381		ಮರುಡೇಶ್ವರ	9.06
382	ಇ. ನೆಮ್ಮಲೆ	ಅಯ್ಯಪ್ಪ	1.27
383		ದುರ್ಗ	4.43
384		ಹೊಲ್ಸ್ ದೇವ	4.43
385	ಇಚೂರು	ಅಯ್ಯಪ್ಪ	10.60
386		ಬೇಟೆಕಂಬ	0.19
387		ಡಬ್ಬಚಮ್ಮ	1.38
388		ವಿಷ್ಣುಮೂರ್ತಿ	1.24
389	ಹಲ್ಲಿಗಟ್ಟು	ಅಯ್ಯಪ್ಪ	19.55
390		ಭಗವತಿ	3.00
391		ಹೊಲೆಯ	0.17
392		ಮಾರಮ್ಮ	0.30
393	ಹರಿಹರ	ಭಗವತಿ	0.64
394		ಹೊಲೆದೇವ	0.72
395		ಮಾದಪ್ಪ	0.75
396		ಸುಬ್ರಯ	0.01
397	ಹತುರ್	ಅಯ್ಯಪ್ಪ	2.52
398		ಭದ್ರಕಾಳಿ	16.37
399		ಮಹದೇವ	3.06
400	ಹೆಬ್ಬಾಲೆ	ಅಯ್ಯಪ್ಪ	17.60
401		ಅಯ್ಯಪ್ಪ	23.30
402		ಅಯ್ಯಪ್ಪ ಭದ್ರಕಾಳಿ	78.24
403		ಬಸವಣಣ್ಣ	0.20
404		ಬೇಟೆ ಕುರುಬಾರ	3.09


405		ಬೇಟೆ ಕುರುಬಾರ	35.33
406	ಹುಡಿಕೇರಿ	ಅಯ್ಯಪ್ಪ	0.18
407		ಅಯ್ಯಪ್ಪ	0.88
408		ಅಯ್ಯಪ್ಪ	23.30
409		ಭದ್ರಕಾಳಿ	0.05
410		ಭದ್ರಕಾಳಿ	52.95
411		ಹೊಲೆ	0.70
412		ಹೊಲೆ	1.00
413		ಹೊಲೆ	2.25
414	ಹುಡೂರು	ಅಯ್ಯಪ್ಪ	16.54
415		ಭಗವತಿ	0.70
416		ಭಗವತಿ	2.51
417		ದೊಡ್ಡ	1.92
418		ಹೊಲೆ	0.10
419	ಹೈಸೊದ್ಲುರ್	ಇಗುಂದ ಅಯ್ಯಪ್ಪ	0.57
420		ಇಗುಂದ ಅಯ್ಯಪ್ಪ	3.50
421		ಮಹದೇವ	0.07
422		ಮಹದೇವ	0.35
423	ಕೈಕೇರಿ	ಅಯ್ಯಪ್ಪ	1.20
424		ಅಯ್ಯಪ್ಪ	1.55
425		ಅಯ್ಯಪ್ಪ	3.32
426		ಚಾಮುಂಡಿ	0.29
427		ಹೊಲೆ	1.35
428		ಯಾದವಪಾರೆ ಅಯ್ಯಪ್ಪ	15.24
429	ಕಂದಗಾಲ	ಅಯ್ಯಪ್ಪ	1.31
430	ಕನೂರು	ಭದ್ರಕಾಳಿ	2.95
431		ಮಹದೇವ	0.30
432		ಮಹದೇವ	0.54
433	ಕಿರುಗೂರು	ಭದ್ರಕಾಳಿ	4.21
434		ಗ್ರಾಮದೇವರು	2.38
435		ಗ್ರಾಮದೇವರು	8.74
436		ದುರ್ಗಿ	7.35
437		ಹೊಲೆ	0.70
438		ಕುಟ್ಟಿಚಟ್ನ	1.15
439		ಕುಟ್ಟಿಚಟ್ನ	15.15
440	ಕೊನಂಗೇರಿ	ಅಯ್ಯಪ್ಪ	45.45

441		ಕೋಟಿ ದೇವರಗುಡಿ	0.11
442		ನಾಗ	0.44
443		ತುಪ್ಪನಾನಿ	1.20
444		ವಿಷ್ಣು	0.06
445		ವಿಷ್ಣು	0.25
446	ಕೊಂಗನ	ಭಗವತಿ	4.30
447		ಬಿಂತಂಡ	0.96
448		ಹೊಲೆ	3.40
449		ನೀರ್ಜಿ	5.11
450		ಪಾಡೆಮೇಡು	0.86
451	ಕೊತುರ್	ಅಯ್ಯಪ್ಪ	0.44
452		ಭದ್ರಕಾಳಿ	0.44
453		ಭಗವತಿ	0.26
454		ಹೊಲೆ	0.82
455		ಮಹದೇವ	0.32
456		ಮಹದೇವ	1.37
457		ಮಂದತಪ್ಪ	1.80
458		ಮಾರಮ್ಮ	0.92
459	ಕೊತ್ತಂಗೇರಿ	ಅಯ್ಯಪ್ಪ	0.91
460		ಅಯ್ಯಪ್ಪ	3.15
461		ಅಯ್ಯಪ್ಪ	5.52
462		ಮಹದೇವ	0.38
463		ವಿಷ್ಣು	3.22
464	ಕುಮತುರ್	ಅಯ್ಯಪ್ಪ	12.07
465		ಭಗವತಿ	2.09
466		ಹೊಲೆ	0.75
467		ಮಾಲೆ	0.23
468	ಕುಂದ	ಅಯ್ಯಪ್ಪ	5.76
469		ವಿಷ್ಣುಮೂರ್ತಿ	0.57
470	ಕುರ್ಚಿ	ಅಯ್ಯಪ್ಪ	0.41
471		ಅಯ್ಯಪ್ಪ	0.45
472		ಅಯ್ಯಪ್ಪ	0.49
473		ಅಯ್ಯಪ್ಪ	1.16
474		ಅಯ್ಯಪ್ಪ	2.96
475		ಭದ್ರಕಾಳಿ	2.18
476		ನಂದಭೈರವ	1.26

477		ರಾಮೇಶ್ವರ	0.31
478	ಕುಟ್ಟ	ಅಯ್ಯಪ್ಪ	1.49
479		ಬಸವೇಶ್ವರ	1.09
480		ಭಗವತಿ	1.20
481		ಚಾಮುಂಡಿ	0.50
482		ಚಾಮುಂಡಿ	4.14
483		ಗ್ರಾಮದೇವರು	0.10
484		ಗ್ರಾಮದೇವರು	19.46
485	ಕುತ್ತಂದಿ	ಅಯ್ಯಪ್ಪ	2.09
486		ಅಯ್ಯಪ್ಪ	8.44
487		ಬೇಟೆ ಕರಿಂಬ	0.10
488		ಭಗವತಿ	3.98
489		ಜಡೆ ಅಯ್ಯಪ್ಪ	0.71
490		ಕದ್ರಪ್ಪ	7.87
491		ಕುಂದಚ	3.47
492		ಮಲ್ಲಚ	2.25
493	ಮಲ್ದರೆ	ಬಸವೇಶ್ವರ	0.66
494		ಚೌಡಮ್ಮ	0.60
495	ಮಂಚಳ್ಳಿ	ಅಯ್ಯಪ್ಪ	1.49
496		ಬೈರಪ್ಪ	0.83
497		ಚಾಮುಂಡಿ	0.16
498	ಮಾಯಮುಂಡಿ	ಮಹದೇವರ ಕಾಡು	15.60
499		ಮಾಂರಿಗುಡಿ ಜಾಗ	0.05
500	ಮೆಕೂರ್–ಹೊಸ್ಕ್ರೀ	ಬಸವನಗುಡಿ	0.19
501	ಮುಗುತಗೇರಿ	ಅಯ್ಯಪ್ಪ	19.47
502		ಭಗವತಿ	45.97
503		ದೇವರಹಳ್ಳಿ	8.30
504		ಕುಟ್ಟಿಚಾಟಿಯ	0.30
505		ಕುಟ್ಟಿಚಾಟಿಯ	7.73
506	ಮುಂದ್ರುಟೆ	ಭಗವತಿ	4.18
507		ಪುಡಿಯತು ಮಲೆ	49.75
508	ನಡಿಕೇರಿ	ಅಯ್ಯಪ್ಪ	1.83
509		ಕೃಷ್ಣ	1.05
510		ಮಡಸ್ವ	2.18
511		ಮಹದೇವ	0.50
512		ಸುಬ್ರಯ	1.43

513		ಸುಬ್ರಾಯ	37.28
514		ವಿಷ್ಣು	1.30
515	ನಲ್ಲೂರು	ಮದ್ರಾಸ್ ಅಯ್ಯಪ್ಪ	1.58
516		ಮದ್ರಾಸ್ ಅಯ್ಯಪ್ಪ	8.25
517	ನಿಡುಗುಂಬ	ಚಾಮುಂಡಿ	0.51
518		ಚಾಮುಂಡಿ	0.72
519	ನಿಟ್ಟೂರು	ಅಯ್ಯಪ್ಪ	0.57
520		ಭೈರ	1.74
521		ಮಹಲಿಂಗ	2.62
522	ನೊಕ್ಯ	ಬೆಟ್ಟ ಕುರುಬಾರ	4.35
523	ಪರಕಟಗೇರಿ	ಮಹದೇವ	2.30
524		ಮಹದೇವ	7.55
525		ಮಹದೇವ	13.20
526	ಪೊರಡು	ಕಿಕ್ಕಿತ್ಲು ಅಯ್ಯಪ್ಪ	2.80
527		ಪೂನ್ಯ ಭಗವತಿ	7.10
528		ಪೂನ್ಯ ಭಗವತಿ	9.61
529	ರುದ್ರ ಬೇಡು	ಅಯ್ಯಪ್ಪ	4.29
530		ಅಯ್ಯಪ್ಪ	6.78
531		ತಲಸಥ ರಾಯಣ್ಣ	2.90
532	ರುದ್ರಗುಪ್ಪೆ–1	ಅಲ್ಲಪ್ಪ	1.16
533		ಅಯ್ಯಪ್ಪ	27.76
534		ಭಗವತಿ	0.11
535		ಚೋಳಿಯಂದಪ್ಪ	0.69
536	ರುದ್ರಗುಪ್ಪೆ–11	ಅಯ್ಯಪ್ಪ	0.75
537		ಅಯ್ಯಪ್ಪ	1.04
538		ಅಯ್ಯಪ್ಪ	1.65
539		ಅಯ್ಯಪ್ಪ	3.59
540		ಅಯ್ಯಪ್ಪ	23.65
541	ಶ್ರೀಮಂಗಲ	ಕೃಷ್ಣ	0.25
542	ಟಿ.ಶೆಟ್ಟಿಗೇರಿ	ಅಯ್ಯಪ್ಪ	0.17
543		ಅಯ್ಯಪ್ಪ	2.97
544		ಅಯ್ಯಪ್ಪ	4.62
545		ಅಯ್ಯಪ್ಪ	35.40
546		ಭಗವತಿ	15.74
547		ಮಹದೇವ	4.83
548		ಪೊಲೆ	0.34

549	ತೈಲ	ಅಯ್ಯಪ್ಪ	3.60
550		ಅಯ್ಯಪ್ಪ	16.20
551	ತವಲಗೇರಿ	ಬಯಪ್ಪ	5.42
552		ಭಗವತಿ	4.00
553		ಕುರುಬಾರ	0.25
554		ಮಹದೇವ	1.36
555		ಮಾಲೆ	4.18
556		ಸುಬ್ರಯ	0.44
557		ಸುಬ್ರಯ	4.15
558	ತೇರಾಜು	ಮದ್ರಾಸ್ ಅಯ್ಯಪ್ಪ	1.30
559		ಮದ್ರಾಸ್ ಅಯ್ಯಪ್ಪ	3.79
560		ಮದ್ರಾಸ್ ಭಗವತಿ	0.47
561		ಮದ್ರಾಸ್ ಕಾಮ	6.34
562	ತುಚಮಕೇರ್	ಅಯ್ಯಪ್ಪ	0.69
563		ಭದ್ರಕಾಳಿ	1.03
564		ಹೊಲೆ	0.19
565		ಮಹದೇವರ ಕಾಡು	0.41
566	ವಿ. ಬದಾ	ಅಯ್ಯಪ್ಪ	0.20
567		ಅಯ್ಯಪ್ಪ	2.30
568		ಬಲಮುಂಡಿ	1.88
569		ಕಮರತು ಬನ	4.70
570		ನಡಿಕೇರಿ	5.12
571		ವಿಷ್ಣುಮೂರ್ತಿ	2.72
572	ಡಬ್ಲ್ಯೂ. ನೆಮ್ಮಲೆ	ಅಯ್ಯಪ್ಪ	6.20
573		ಭಗವತಿ	41.28
574		ಹೊಲೆ	1.02



ಕೊಡಗಿನಲ್ಲಿರುವ ದೇವರಕಾಡುಗಳ ಬೌಗೋಳಿಕ ಸ್ಥಾನ ವ್ಯವಸ್ಥೆಯ ಬಿಂದುಗಳು

ಉಪಸಂಹಾರ

ಕ್ರಿಯೆ ಇಲ್ಲದೆ ಸಂಸ್ಕೃತಿ ಇಲ್ಲ. ಅಂದರೆ ಸಂಸ್ಕೃತಿಯು ಕೇವಲ ಸ್ಥಗಿತ ಸ್ಥಿತಿಯಲ್ಲಿ ನಿಂತಂತೆ ಕಾಣುತ್ತಲೇ ನಡೆಯುವ ನಮೂನೆಗಳ ಅನನ್ಯ ಸ್ಥಿತಿಯೊಂದು ಸಂಸ್ಕೃತಿಯಲ್ಲಿ ಅಂತರ್ಗತವಾಗಿರುತ್ತದೆ. ಹೀಗೆ ಮನುಷ್ಯ, ಸಮಾಜ ಮತ್ತು ಸಂಸ್ಕೃತಿಗಳು ಸಾವಯವ ಸಂಬಂಧವನ್ನು ಪಡೆದಿದೆ. ಒಂದರೊಳಗೊಂದು ಬೆರೆಯುತ್ತಾ, ಬೆಳೆಯುತ್ತಾ ವಿಶಿಷ್ಟ ವ್ಯಕ್ತಿತ್ವವನ್ನು ಒಡಮೂಡಿಸುತ್ತದೆ.

ಕಾಡಿನ ಅಲೆಮಾರಿ ಜೀವನದಿಂದ ಊರಿನ ನೆಲೆಯೂರಿದ ಬದುಕಿಗೆ ಬಂದರೂ ಕಾಡುತನದಲ್ಲೇ ಬಾಳಬೇಕಾದ ಮನಸ್ಸಿನಲ್ಲಿರುತ್ತಾನೆ.

ಪ್ರಸ್ತುತ ಅಧ್ಯಯನ ಇಲ್ಲಿಯವರೆಗೆ ಪ್ರಕಟವಾಗಿರುವ ಎಲ್ಲಾ ಅಧ್ಯಯನಗಳಿಗಿಂತಲೂ ಹಲವು ದೃಷ್ಟಿಕೋನದಲ್ಲಿ ಮುಂದುವರಿದಿದೆ, ಆದರೆ ಪೂರ್ಣವಾಗಿಲ್ಲ. ಸುಲಭವಾಗಿ ಹುಡುಕಲು ಅಸಾಧ್ಯವಾದ ನಿತ್ಯಹರಿದ್ವರ್ಣ ಕಾಡುಗಳಲ್ಲಿ ದೈವಗಳನ್ನು ಆರಾಧಿಸುತ್ತಿರುವ, ಮಲೆಗಳಲ್ಲಿ ವಾಸ ಮಾಡಿಕೊಂಡಿರುವ ಕೊಡಗು ಮೂಲ ನಿವಾಸಿಗಳಾದ ಕೆಂಬಟ್ಟಿಗಳು, ಕುಡಿಯರು, ಐರಿಗಳು, ಮಾರಂಗಿಗಳು ಹಾಗೂ ಕೊಡವರು. ಅದರಲ್ಲೂ ವಿಷಯದ ಅರಿಯುಳ್ಳ ಹಿರಿಯರನ್ನು ಭೇಟಿ ಮಾಡಿ ಸಂಗ್ರಹ ಕಾರ್ಯ ನಡೆಸಲು ಸಾಧ್ಯವಾದದ್ದು ಕೇವಲ ನಲವತ್ತು ದಿನಗಳು ಮಾತ್ರ.

ಕ್ಷೇತ್ರಕಾರ್ಯದಲ್ಲಿ ಎದುರಿಸಿದ ಸಮಸ್ಯೆಗಳು ಹಲವಾರು. ಮುಖ್ಯವಾಗಿ ಕೆಲವನ್ನು ಇಲ್ಲಿ ಸೂಚಿಸುವುದು ಸೂಕ್ತ.

1) ಆಧುನಿಕತೆಯ ಜಾಡಿನಲ್ಲಿರುವ ಈ ಸಂದರ್ಭದಲ್ಲಿ ತಮ್ಮ ವಾಸಸ್ಥಾನಗಳ ಸುತ್ತಮುತ್ತ ಇರುವ ಕಾಡಿನ ಬಗ್ಗೆಯಾಗಲೀ, ಮೂಲ ದೈವದ ಬಗ್ಗೆಯಾಗಲೀ ಅಥವಾ ಅವರು ನಡೆಸುವ ಸಂಪ್ರದಾಯಗಳ ಬಗ್ಗೆಯಾಗಲೀ, ಆಚರಣೆಯ ಬಗ್ಗೆಯಾಗಲಿ ಸಂಪೂರ್ಣ ತಿಳಿಯದಾಗಿದ್ದಾರೆ.

2) ಕೊಡಗಿನ ಕೆಲವು ಜನಾಂಗದವರಿಗೆ ದೇವರಕಾಡಿನ ಕಲ್ಪನೆಯಾಗಲೀ, ಅವರ ಪೂರ್ವಿಕರ ಆಚಾರ-ವಿಚಾರಗಳ ಬಗ್ಗೆ ತಿಳುವಳಿಕೆ ಹಾಗೂ ಪೂರ್ವಿಕರ ಬಗ್ಗೆ ಗೌರವವನ್ನು ಉಳಿಸಿಕೊಳ್ಳದಿರುವುದು.

3) ಬಹಳಷ್ಟು ಜನರಿಗೆ ತಮ್ಮ ಜನಾಂಗದ ಮೂಲ ಹಾಗೂ ಅವರ ವೈಶಿಷ್ಟ್ಯಗಳ ಅರಿವು ಇಲ್ಲದಿರುವುದು.

4) ವಿಷಯ ಗೊತ್ತಿರಬಹುದಾದ ಹಿರಿಯರಲ್ಲೂ ಹೆಚ್ಚಿನವರು ಹೊರಗಿನವರೊಡನೆ ತಮ್ಮ ದೈವಗಳ ನಂಬಿಕೆಗಳ ವಿಚಾರಗಳ ಕುರಿತು ಮಾತನಾಡಲು ಇಚ್ಛೆ ಇಲ್ಲದೆ ಅಥವಾ ಯಾವುದೋ ಭಯದಿಂದ ಹೇಳಿದರೆ ತಮಗೆ ಯಾವುದೋ ವಿಪತ್ತು ಸಂಭವಿಸುತ್ತದೆ ಎಂದು ಭಾವಿಸುವುದು.

5) ಸರಿಯಾದ ಮಾಹಿತಿ ಕೊಡಬಲ್ಲ ತಿಳುವಳಿಕಸ್ಥರ ತೀವ್ರ ಕೊರತೆ ಮತ್ತು ಹೆಚ್ಚಿನ ದೇವರಕಾಡುಗಳು ಅರಣ್ಯ ಇಲಾಖೆಯ ವ್ಯಾಪ್ತಿಗೆ ಬರುವುದರಿಂದ ಕ್ಷೇತ್ರಕಾರ್ಯಕ್ಕೆ ಕರೆದುಕೊಂಡು ಹೋಗಲು ಭಯಪಡುವರು.

6) ಕೊಡಗಿನಲ್ಲಿ ಇರುವ ಇಪ್ಪತ್ಮೂರು ಜನಾಂಗಗಳಿಗೆ ಒಂದು ಕೇಂದ್ರಸ್ಥಾನವಾದ ದೇವರಕಾಡಾಗಲೀ, ಏಕಸಂಸ್ಕೃತಿಯಾಗಲೀ ಇಲ್ಲದೇ ಹಂಚಿಹೋಗಿರುವುದರಿಂದ ಪ್ರತಿಯೊಂದು ಭೌಗೋಳಿಕ ಪರಿಸರದಲ್ಲೂ ಬೇರೆ ಬೇರೆ ದೇವರು ಹಾಗೆಯೇ ಆಚರಣೆಗಳೂ ಬೇರೆಯಾಗಿರುವುದರಿಂದ ಒಟ್ಟು ವಿಷಯ ಸಂಗ್ರಹಣೆಗೆ ಇರುವ ಅಡ್ಡಿ.

7) ಸಂರಕ್ಷಿತ ಕಾಡುಗಳಲ್ಲಿರುವ ದೇವರಕಾಡುಗಳಿಗೆ ಭೇಟಿ ಮಾಡಲು ಇರುವ ಅಡ್ಡಿ ಆತಂಕಗಳು.

ಪ್ರಸ್ತುತ ಅಧ್ಯಯನವು ಕೊಡಗು ಜಿಲ್ಲೆಯಲ್ಲಿ ನಡೆಸಿದ ಕ್ಷೇತ್ರಕಾರ್ಯವನ್ನು ಮಾತ್ರ ಅವಲಂಬಿಸಿದೆ. ಈ ಅಧ್ಯಯನವನ್ನು ಕೊಡಗು ಭಾಷಿಕರಾದ ಕೋಯವ ಜನಾಂಗದವರು ಕುಂಬಾರರಾಗಿದ್ದು, ಅವರು ಮಾಡುವ ಸುಡಾವೆ ಮಣ್ಣಿನ ಅಂದರೆ ಟೆರ್ರಾಕೋಟಾ ಶಿಲ್ಪಗಳನ್ನು ಕುರಿತು ಮತ್ತು ಅದರ ಆಚರಣೆಗಳನ್ನು ಹಾಗೂ ಬೇರೆ ಕೊಡವ ಭಾಷಿಕ ಜನಾಂಗದವರು ತಮ್ಮ ಹರಕೆಗೆ ಬಳಸುವ ಮಣ್ಣಿನ ಶಿಲ್ಪಗಳು ಮತ್ತು ನಂಬಿಕೆಗಳ ಕುರಿತಾಗಿ ಪ್ರಚಲಿತ ಅಭಿಪ್ರಾಯಗಳ ಖಚಿತ ನಿಲುವಿಗೆ ಬರಲು ಯತ್ನಿಸಿದ್ದೇನೆ.

ಕೊಡಗು ಮೂಲ ನಿವಾಸಿ ಜನಾಂಗಗಳು ಮುಖ್ಯ ಶಾಖೆಗಳಾಗಿ ವಿಭಜನೆಗೊಂಡಿರುವ ದೇವರಕಾಡಿನ ದೈವಗಳನ್ನು ಮತ್ತು ಅವರು ಅನುಸರಿಸುವ ವಿವಿಧ ಪದ್ಧತಿಗಳನ್ನು ಸಂರಕ್ಷಿಸಲು ಬಳಸುವ ನಿಯಮಗಳನ್ನು ಪ್ರಕರಣಗಳ ಹಿನ್ನೆಲೆಯಲ್ಲಿ ದಾಖಲು ಮಾಡುವ ಪ್ರಯತ್ನ ನಡೆದಿದೆ.

ಕೊಡಗು ಕಾಡುಗಳ ಸಂರಕ್ಷಣೆಯಲ್ಲಿ ದೈವಗಳ ಪರಿಕಲ್ಪನೆ, ಅಲ್ಲಿಯ ಶಿಲ್ಪಗಳಲ್ಲಿರುವ ವೈವಿಧ್ಯತೆ, ಪ್ರತಿ ಜನಾಂಗಗಳಲ್ಲಿರುವ ಪ್ರತ್ಯೇಕ ದೈವದ ನಿಯಮ ಮತ್ತು ನಂಬಿಕೆಗಳನ್ನು ಇಲ್ಲಿ ದಾಖಲಿಸಿದ್ದೇನೆ.

ಪ್ರತಿ ದೇವರಕಾಡುಗಳಲ್ಲಿರುವ ಸಸ್ಯಪ್ರಬೇಧಗಳ ವೈವಿಧ್ಯತೆ ಮತ್ತು ಇರಬಹುದಾದ ಪ್ರಾಣಿಪಕ್ಷಿಗಳ ವೈವಿಧ್ಯತೆಯನ್ನು ದಾಖಲಿಸಿದ್ದೇನೆ.

ಆದಿಮ ಕಲೆಯ ವಿಚಾರಗಳನ್ನು ತಿಳಿಸುತ್ತಾ ನಂಬಿಕೆ ಮತ್ತು ನಿಷೇಧಗಳ ಬಗೆಗೆ ಹಾಗೂ ತೆರೆದುಕೊಳ್ಳುತ್ತಿರುವ ಹೊಸ ವಿವೇಚನೆಗಳಿಗೆ ಜಾನಪದ ಸಂಪತ್ತು, ಚಾರಿತ್ರಿಕವಾಗಿ, ಸಾಂಸ್ಕೃತಿಕವಾಗಿ, ಭಾಷಿಕವಾಗಿ, ಹೊಸ ತಲೆಮಾರು ಹೇಗೆ ಕಳೆದುಕೊಳ್ಳುತ್ತಿದೆ ಎಂಬುದನ್ನು ಈ ಪ್ರಬಂಧದಲ್ಲಿ ತೋರಿಸುವ ಪ್ರಯತ್ನ ಮಾಡಿದ್ದೇನೆ.

ಮುಂದಿನ ಸಂಶೋಧಕರು ಮಾಡಬಹುದಾದ ಕಾರ್ಯದತ್ತು ಗಮನ ಸೆಳೆಯುವ ಉದ್ದೇಶದಿಂದ ಕೆಲವು ವಿಚಾರಗಳನ್ನು ಪ್ರಸ್ತಾಪಿಸಲಾಗಿದೆ.

- ಪ್ರತಿ ದೈವದ ದೇವರಕಾಡುಗಳು ಮತ್ತು ಅವುಗಳನ್ನು ಸಂರಕ್ಷಿಸುತ್ತಿರುವ ಜನಾಂಗಗಳ ಜಾನಪದೀಯ ನಂಬಿಕೆಗಳ ಸಂಗ್ರಹ.
- ಕರ್ನಾಟಕದ ವಿವಿಧ ಭಾಗಗಳಲ್ಲಿರುವ ದೇವರಕಾಡುಗಳ ಸಮಗ್ರ ಅಧ್ಯಯನ
- ಗ್ರಾಮ ಮತ್ತು ಕಾಡಿನ ಸರಹದ್ದುಗಳಲ್ಲಿರುವ ಗ್ರಾಮದೇವತೆಗಳು ಮತ್ತು ಕಾಡೊಳಗಿರುವ ನಂಬಿಕೆಗಳು ಮತ್ತು ಆಚಾರಗಳ ಕುರಿತು ತುಲನಾತ್ಮಕ ಅಧ್ಯಯನ ನಡೆಸಬಹುದು.

ಈ ಹಿನ್ನೆಲೆಯಲ್ಲಿ ಮುಂದಿನ ಸಂಶೋಧಕ ಗಮನಿಸಿ ಮುಂದುವರೆದರೆ ಈ ವಿಚಾರದ ಬಗ್ಗೆ ಒಂದು ಸಮಗ್ರ ಅಧ್ಯಯನಕ್ಕೆ ತುಂಬು ಅವಕಾಶವಿದೆ ಎಂದು ಪ್ರಸ್ತುತ ಸಂಶೋಧಕ ಸೂಚಿಸಬಯಸುತ್ತಾನೆ.

ಪರಾಮರ್ಶನ ಗ್ರಂಥಗಳು

1) ಕೆ.ಪಿ.ಸಾಗೇರಿಯಾ, ಫಾರೆಸ್ಟ್ಸ್ ಅಂಡ್ ಫಾರೆಸ್ಟ್ರೀ ನ್ಯೂ ಡೆಲ್ಲಿ–1983

2) ಆಲ್ಬನ್ ಹುಗ್ಡೆ, ದ ಫ್ರಿ ಹಿಸ್ಟರಿ ಆಫ್ ಎ ಡೆಸರ್ಟ್, ಡೆಲ್ಲಿ 1981

3) ರಾಮಚಂದ್ರಗುಹಾ ಅಂಡ್ ಮಾದವ ಗಾಡ್ಗಿಲ್, ದಿಸ್ ಪುಸರ್ಡ್ ಲ್ಯಾಂಡ್: ಆನ್ ಇಕೋಲಾಜಿಕಲ್ ಹಿಸ್ಟರಿ ಆಫ್ ಇಂಡಿಯಾ, ಡೆಲ್ಲಿ–1993

4) ಕೌಟಿಲ್ಯ ಅರ್ಥಶಾಸ್ತ್ರ 11,17, ಟ್ರಾನ್ಸ್‌ಲೇಟೆಡ್ ಬೈ ಆರ್ ಶ್ಯಾಮಾ ಶಾಸ್ತ್ರಿ, ಮೈಸೂರು–1915

5) ಮಾಧವ ಗಾಡ್ಗಿಲ್, ರಾಮಚಂದ್ರಗುಹಾ (ಅನುವಾದ) ಶಾರದ ಗೋಪಾಲ, ಪರಿಸರ ನ್ಯಾಯದ ತಕ್ಕಡಿಯಲ್ಲಿ, ಕನ್ನಡ ಪುಸ್ತಕ ಪ್ರಾಧೀಕಾರ ಬೆಂಗಳೂರು–2003

6) ಸುರುಮಾರನ್ ಭಟ್ಟಚಾರ್ಯ, (ಸಂಪಾದಕತ್ವ) ಮೌಂಟೈನ್ ಅಂಡ್ ಫಾರೆಸ್ಟ್ಸ್ ಇನ್ ಇಂಡಿಯಾನ್ ಹಿಸ್ಟರಿ, ಇನ್ಸ್ಟಿಟ್ಯೂಟ್ ಆಫ್ ಹಿಸ್ಟೂರಿಕಲ್ ಸ್ಟಡೀಸ್, ಕೊಲ್ಕತ್ತಾ 2004

7) ಬಿ.ರಿಬ್ಬನ್ ಟ್ರೂಪ್ ಫಾರೆಸ್ಟ್ರೀ ಇನ್ ಬ್ರಿಟಿಷ್ ಇಂಡಿಯಾ ಕಲ್ಕತ್ತ–1899

8) ಇ.ಪಿ.ಸ್ಟೆಬ್ಬಿಂಗ್ ಫಾರೆಸ್ಟ್ರೀ ಆಫ್ ಇಂಡಿಯಾ ವಾಲ್ಯೂಮ್–1

9) ರಾಮಚಂದ್ರಗುಹಾ ಫಾರೆಸ್ಟ್ರೀ ಇನ್ ಬ್ರಿಟಿಷ್ ಅಂಡ್ ಪೋಸ್ಟ್ ಬ್ರಿಟಿಷ್ ಇಂಡಿಯಾ: ಎ ಹಿಸ್ಟೂರಿಕಲ್ ಅನಾಲಿಸಿಸ್ ಎಕಾನಮಿಕ್ ಎಂಡ್ ಪೊಲಿಟಿಕಲ್ ವೀಕ್ಲಿ ಅಕ್ಟೂಬರ್ 29–1983

10) ಇರ್ಫಾನ್ ಹಬೀಬ್–ಎಸ್ಸೇ ಇನ್ ಇಂಡಿಯಾನ್ ಹಿಸ್ಟರಿ ಟುವರ್ಡ್ಸ್ ಮಾರ್ಕ್ಸಿಸ್ಟ್ ಪರ್ಶಪ್ಸನ್–ನ್ಯೂಡೆಲ್ಲಿ–1995

11) ಜಾಕ್ವೇಸ್ ಪೂಚಪ್ಪದಾಸ್, ಕೊಲೊನಿಯಾಲಿಸಂ ಎಂಡ್ ಎನ್ವಿರಾನ್ಮೆಂಟ್ ಇನ್ ಇಂಡಿಯಾ: ಕಂಪೆರಿಟೀವ್, ಇಪಿಡಬ್ಲ್ಯೂ, ವಾಲ್ಯೂಮ್–30–ನಂ–33 (ಆಗಸ್ಟ್ 19,1995)

12) ಬಿ.ಎಲ್.ರೈಸ್ (ಸಂ) ಇಂಪಿರಿಯಲ್ ಗೆಜೆಟಿಯರ್ ಆಫ್ ಇಂಡಿಯಾ, ಮೈಸೂರು ಅಂಡ್ ಕೂರ್ಗ್–ಕೊಲ್ಕತ್ತಾ–1908

13) ಸ್ಕಾಲೀಸ್– ಮ್ಯಾನ್ಯುವೆಲ್ ಆಫ್ ಫಾರೆಸ್ಟ್ರೀ ಪಾಲಿಸಿ ಇನ್ ದ ಬ್ರಿಟಿಷ್ ಎಂಪೈರ್, ಲಂಡನ್–1922

14) ಕೆ.ಕೆ.ಸೋಮಯ್ಯ, ವರ್ಕಿಂಗ್ ಪ್ಲಾನ್ ಫಾರ್ ದ ಪೊರ್ಶನ್ ಆಫ್ ಈಸ್ಟರ್ನ್ ಡೆಸಿಡಿಸ್ ಫಾರೆಸ್ಟ್ ಆಫ್ ಕೂರ್ಗ್–1959

15) ದ ಕೂರ್ಗ್ ಫಾರೆಸ್ಟ್ ಮ್ಯಾನ್ಯುವಲ್–1922

16) ರೋಜರ್ ಜೇಪ್ರಿ ದ ಸೋಸಿಯಲ್ ಸನ್ಸಸ್ಟ್ರಕನ್ ಆಫ್ ಇಂಡಿಯಾನ್ ಫಾರೆಸ್ಟ್ಸ್

17) ಏವರಣೆಗಾಗಿ ಶ್ರಿ ಸತ್ಯನ್, ಬಿ ಎನ್. ಮೈಸೂರು ಸ್ಟೇಟ್ ಗೆಜೆಟಿಯರ್ ಕೂರ್ಗ ಡಿಸ್ಟ್ರಿಕ್ಟ್, ಬೆಂಗಳೂರು 1905, ಡಿ ಎನ್ ಕೃಷ್ಣಯ್ಯ ಕೊಡಗಿನ ಇತಿಹಾಸ ಐ ಎಂ ಮತ್ತಣ್ಣ ಹಿಸ್ಟರಿ ಆಫ್ ಕೊಡಗು, ಸೂರ್ಯನಾಥ್, ಯು.ಕಾಮತ್(ಸಂ) ಕರ್ನಾಟಕ ರಾಜ್ಯ ಗೆಜೆಟಿಯರ್ ಕೊಡಗು ಜಿಲ್ಲೆ.

18) ಸೂರ್ಯನಾಥ್ ಯು.ಕಾಮತ್(ಸಂ) ಕರ್ನಾಟಕ ರಾಜ್ಯ ಗೆಜೆಟಿಯರ್ ಕೊಡಗು ಜಿಲ್ಲೆ.

19) ಜಾರ್ಜ್ ಬಿಡ್ಡೈ, ಇಫೆಕ್ಟ್ ಆಫ್ ಪಾರೆಸ್ಟ್ ಡಿಸ್ಟ್ರಕನ್ ಇನ್ ಕೂರ್ಗ್, ಜನರಲ್ ಆಪ್ ರಾಯಲ್ ಜಿಯೋಗ್ರಾಫಿಕಲ್ ಸೊಸೈಟಿ ಲಂಡನ್–ವಾಲ್ಯೂಮ್–39(1869)

20) ಕನ್ನಡ ವಿಶ್ವಕೋಶ ಸಂಪುಟ–5 ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ 19725

21) ಡಿ.ಎನ್ ಕೃಷ್ಣಯ್ಯ ಕೊಡಗಿನ ಇತಿಹಾಸ ಪ್ರಸಾರಾಂಗ ಮೈಸೂರು,1995

22) ಪ್ರಾಂಸಿಸ್ ಬುಕಾನನ್ ಎ ಜರ್ನಿ ಫ್ರಂ ಮದ್ರಾಸ್ ಥ್ರೂ ದ ಕಂಟ್ರಿಸ್ ಆಫ್ ಮೈಸೂರು ಕೆನರಾ ಅಂಡ್ ಮಲಭಾರ್ ಸಂಪುಟ–3

23) ಕೊಡಗು ಜಿಲ್ಲೆ ಗೆಜೆಟಿಯರ್

24) ವಿವರಣೆಗಾಗಿ ಶ್ರೀ ಸತ್ಯನ್, ಬಿ.ಎನ್. ಮೈಸೂರು ಸ್ಟೇಟ್ ಗೆಜೇಟಿಯರ್ ಕೂರ್ಗ್ ಡಿಸ್ಟ್ರಿಕ್ಟ್, ಬೆಂಗಳೂರು 1965 ಡಿ ಎನ್ ಕೃಷ್ಣಯ್ಯ ಕೊಡಗಿನ ಇತಿಹಾಸ ಐ ಎಂ ಮುತ್ತಣ್ಣ, ಹಿಸ್ಟರಿ ಆಪ್ ಕೊಡಗು ಸೂರ್ಯನಾಥ್ ಯು ಕಾಮತ್ (ಸಂ) ಕರ್ನಾಟಕ ರಾಜ್ಯ ಗೆಜೆಟಿಯರ್ ಕೊಡಗು ಜಿಲ್ಲೆ.

25) ವರ್ಕಿಂಗ್ ಪ್ಲಾನ್ ಫಾರ್ ದ ಘಾಟ್ ಫಾರೆಸ್ಟ್ ಆಫ್ ಕೂರ್ಗ್ ರೆಸಿಡೆನ್ಸಿ ಪ್ರೆಸ್, ಬೆಂಗಳೂರು 1916

26) ಹೆಚ್ ಮೋಗ್ಲಿಂಗ್ ಕೂರ್ಗ್ ಮೆಮ್ವಾ–ಅನ್–ಎಕೌಂಟ್ ಆಫ್ ಕೂರ್ಗ್ ಆಂಡ್ ಆಪ್ ದ ಕೂರ್ಗ್ ಮಿಷನ್, ಬೆಂಗಳೂರು–1855

27) ತಂಬಂಡ ವಿಜಯ ಪೊಣಚ್ಚ ಆಧುನಿಕ ಕೊಡಗು ಪ್ರಸಾರಾಂಗ, ಹಂಪಿ–2000–ಪುಟ–21

28) ಹೆಚ್ಚಿನ ವಿವರಗಳಿಗೆ ನೋಡಿ ಕೆ.ಎನ್.ಫಣಿಕ್ಕರ್ "ಮಾರ್ಡನ್ ಇಂಡಿಯಾ ಸೆಷನ್‌ನಲ್ಲಿ ಮಾಡಿದ ಅಧ್ಯಕ್ಷಿಯ ಭಾಷಣ, ಪ್ರೋಸಿಡಿಂಗ್ಸ್ ಆಫ್ ದ ತರ್ಟಿಸಿಕ್ಸ್ಥ ಸೆಷನ್ ಆಫ್ ಇಂಡಿಯಾನ್ ಹಿಸ್ಟರಿ ಕಾಂಗ್ರೆಸ್, ಅಲಿಗರ್–1975ರಲ್ಲಿ ಕಲ್ಕತ್ತಾ–1976

29) ಎಫ್.ಏಂಗಲ್ಸ್ ಡಯಕೆಕ್ಟೀಸ್ ಆಫ್ ನೇಚರ್–ಮಾಸ್ಕೋ–1975

30) ಇ.ಪಿ.ಥಾಮ್ಸನ್, ವಿಂಗ್ಸ್ ಅಂಡ್ ಹಂಟರ್ಸ್ ದ ಓರಿಜಿನ್ಸ್ ಆಫ್ ದ ಬ್ಲಾಕ್ ಅಕ್ಟ್ (ಹರ್ಮಂಡ್ಸ್‌ವರ್ಥ ಲಂಡನ್–1975)(ಕೆಂಬ್ರಿಡ್ಜ್–1988)

31) ರಿಚರ್ಡ್ ವಿಲ್ಕಿನ್‌ಸನ್ ದ ಇಂಗ್ಲಿಷ್ ಇಂಡಸ್ಟ್ರೀಯಲ್ ರೆವಲ್ಯೂಷನ್ ಇನ್ ಡೊನಾಲ್ಡ್ ವರ್‌ಸ್ಟರ್ (ಎಡಿಟ್) ದ ಎಂಡ್ಸ್ ಆಫ್ ಆರ್ಥ್ ಪರ್ಸಫಕ್ಟಿವ್ ಅನ್ ಮಾಡರ್ನ್ ಎನ್ವಿರಾನ್ಮೆಂಟಲ್.

ಮಕ್ಕಿ ಶಾಸ್ತವು ಮತ್ತು ಟೆರ್ರಾಕೋಟಾ ಶಿಲ್ಪದ ಆಚರಣೆ

ಕೊಡಗಿನ ದೇವತೆಗಳ ಕೇರಳ ಹಾಗೂ ತುಳುನಾಡಿನ ನಂಡು ಹೆಚ್ಚು. ಗ್ರಾಮದೇವತೆಗಳ ಹಬ್ಬಗಳ ವಿಚಾರಗಳಲ್ಲಿ ಇದು ಇದ್ದು ಕಾಣುತ್ತದೆ ಆಗಮ ಶುದ್ಧಿ ಪಡೆದ ದೇವತೆಗಳಾದರೆ ತಂತ್ರಭಾಗ ತುಳು ನಾಡಿನದು ಹಾಗೂ ನೃತ್ಯ ಭಾಗ ಕೇರಳ ನಾಡಿನದನ್ನು ಅಳವಡಿಸಿಕೊಂಡಿದೆ. ಕೊಡಗಿನಲ್ಲಿ ಪ್ರಸಿದ್ಧವಾದ ಸಾರ್ತಾವು (ಶಾಸ್ತಾವು) ನೆಲೆಗಳಲ್ಲಿ ಇದು ಪ್ರಚಲಿತ. ಇವುಗಳಲ್ಲಿ ಈಶ್ವರನಿಗೆ, ಸುಬ್ರಮಣ್ಯನಿಗೆ ಸಮೀಕರಣದಂತಹವೂ ಇದೆ. ಕೊಡಗಿನ ಹೆಗ್ಗಳದ ಪೆರೆಮಲೆ ಶಾಸ್ತಾವು ಪಾಲಂಗಾಲದ ಮಲೆಶಾಸ್ತಾವು ಹಾಗೂ ಬೇತು ಗ್ರಾಮದ ಮಕ್ಕಿ ಶಾಸ್ತಾವು ಪ್ರಸಿದ್ಧಿಯಾದವು.

ಈ ಶಾಸ್ತಾವುಗಳು ಕೊಡಗಿಗೆ ಬಂದ ಕತೆಗಳೆಲ್ಲ ಸವಾರಸ್ಯವಾಗಿದೆ. ಪೆರುಮಲೆ ಶಾಸ್ತಾವು ಚೌರಿ ಮೆಲಯಲ್ಲಿ ತಪ್ಪಿಸಿಕೊಂಡ ಹಸು ಕರುಗಳನ್ನು ದೊರೆಕಿಸಿಕೊಟ್ಟು ನೆಲೆ ಪಡೆದ. ಮಲೆ ಶಾಸ್ತಾವು ಶಿವ-ಅರ್ಜುನರ ಕಾಳಗದ ಹಿನ್ನೆಲೆಯನ್ನು ಪಡೆದು ನಿಂತವ. ಪನ್ನೋಲ ಶಾಸ್ತಾವು ವನದೇವತೆಯ ಭಕ್ತಿಗೆ ಮೆಚ್ಚಿ ವರಕೊಟ್ಟು ನಿಂತವ. ಮಕ್ಕಿ ಶಾಸ್ತಾವಿನ ಕತೆಯಾದರೋ ಶಬರಿಮಲೆಯ ಶಾಸ್ತಾವಿನ ಕತೆಯನ್ನು ಹೆಚ್ಚು ಕಡಿಮೆ ಹೋಲುತ್ತದೆ. ಆದರೆ ಸ್ಥಳೀಯ ಪ್ರಭಾವಗಳೊಡನೆ ಬೆರೆತು ಕತೆ ಮತ್ತಷ್ಟು ರೋಚಕವಾದಿ ಕಾಣುತ್ತದೆ. ಮಕ್ಕಿ ಶಾಸ್ತಾವಿನ ಬಿರ್ಚಿಯಾರ್ ಸಂಕ್ರಮಣ ಸಮಯದ್ದು ಸಣ್ಣ ಹಬ್ಬ. ದೊಡ್ಡದು ಏಣಿದ್ದರೂ ಮೇ ತಿಂಗಳ ಸಮಯದಲ್ಲಿ. ಸಣ್ಣ ಹಬ್ಬವೂ ಚೆನ್ನವೆ. ಈ ಮಕ್ಕಿ ಶಾಸ್ತಾವಿನ ಕತೆಯು ಕೊಡಗಿನ ಜನಪದ ರೂಪಿಸಿಕೊಂಡಂತೆ ಹೀಗಿದೆ.

ಸಾಸ್ತಾವು ಜನ್ಮ ವೃತ್ತಾಂತ: ದೇವಾಸುರರಲ್ಲಿ ಯುದ್ಧ ಆಗಿ ಹೋದ ಮೇಲೆ ನಡೆದ ಕತೆ: ಮೃಗೇಶ್ವರ ರಾಕ್ಷಸ ಒಂಟಿ ಕಾಲಿನಲ್ಲಿ ದೀರ್ಘಕಾಲ ತಪಸ್ಸು ಮಾಡಿ ಈಶ್ವರನನ್ನು ಮೆಚ್ಚಿಸಿದ. ಅಗ್ನಿಕರಗಳನ್ನು ಬೇಡಿ ಪಡೆದ. 'ಅಗ್ಗ್ನಿರ ಕೈಯಾಂಡು' – ಬೆಂಕಿ ಕೈಗಳಿಂದ ಯಾರ ತಲೆಯ ಮೇಲೆಯೇ ಕೈಯಿಡಲು ಹೋದ, ಈಶ್ವರ ಓಡಿದ. ಮರದ ಪೊಟರೆಯೊಂದನ್ನು ಹೊಕ್ಕ ರಾಕ್ಷಸ ಹಿಂಬಾಲಿಸಿ ಬಂದ. ಮರದ ಪೊಟರೆಗೆ ಗಾಳಿ ಹೀಗದಂತೆ ಕತ್ತೆಯೊಂದು ತಲೆ ಹಾಕ ನಿಂತಿತು. ವನದ ಮಧ್ಯೆ ಕೆರೆ. ನಡುವೆ ಮರ. ಅದರ ಕೊಂಬೆಗಳಿಗೆ ಉಯ್ಯಾಲೆ ಹಾಕಿ ವಿಷ್ಣು ಮೋಹಿನಿ ರೂಪದಲ್ಲಿ ಪದ ಹೇಳುತ್ತ ತೂಗಿಕೊಳ್ಳುತ್ತಿದ್ದ ಈ ಹಾಡು ಮೃಗೇಸ್ವರ ರಾಕ್ಷನಿಗೆ ಕೇಳಿಸಿ ಅತ್ತ ಗಮನ ಹೋಯಿತು. ನೋಡಿದರೆ ಸರ್ವಾಂಗ ಸುಂದರಿ. ಅವಳ್ನು ನೋಡಿ ಮೋಹಗೊಂಡು "ಮದುವೆ ಆಗು" ಎಂದು ಪೀಡಿಸಿದ ರಾಕ್ಷಸ. ವಿಷ್ಣು ಮೋಹಿನಿ ರೂಪದಲ್ಲಿ ಏಳು ರೀತಿ ನೃತ್ಯವಾಡುತ್ತ ಮೃಗೇಶ್ವರ ರಾಕ್ಷಸಿಯನ್ನು ತನ್ನ ಹಾವ ಭಾವಗಳಿಂದ ಪ್ರೇರೇಪಿಸಿದ. ಮೃಗೇಶ್ವರ ಕೈ ಅವನ ತಲೆ ಮೇಲೆಯೇ ಬರುವಂತೆ ಮೋಹಿನಿ ನೃತ್ಯದಲ್ಲಿ ತೋರಿದಾಗ ರಾಕ್ಷಸ ಭಸ್ಮವಾದ. ವಿಷ್ಣು ಮೋಹಿನಿ ರೂಪ

ತ್ಯಜಿಸಿ ಶಿವನ್ನು ಪೊಟರೆಯಿಂದ ಹೊರಬರಲು ಕರೆದ. ಆದರೆ ಪೊಟರೆಗೆ ತಲೆ ಹಾಕಿದ್ದ ಕತ್ತೆಯ ಕಾಲನ್ನು ವಿಷ್ಣು ಹಿಡಿದೆಳೆದ ಮೇಲೆಯೇ ಶಿವ ಹೊರಬರಲಿಕ್ಕಾಯಿತು. ಮೃಗೇಶ್ವರನನ್ನು ಕೊಂದ ಬಗೆ ತಿಳಿದ ಶಿವ ವಿಷ್ಣುವನ್ನು ಅದೇ ರೂಪ ತೊಡಲು ಹೇಳಿದ. "ನೀನು ಕಾಮುಕ" ಎಂದು ವಿಷ್ಣು ಹೇಳಿದರೂ ಕೊನೆಗೆ ಶಿವನ ಕಾರಣ ಬಲವಂತವಾಗಿ ಮೋಹಿನಿ ರೂಪ ಧರಿಸಿದ. ಆಗ ಮೋಹಿನಿಯೊಂದಿಗೆ ಶಿವನ ಸಂಪರ್ಕವಾಗಿ ಮೋಹಿನಿಯ ಬಲ ತೊಡೆಯಲ್ಲಿ ಗರ್ಭ ಕಟ್ಟಿತು. ಆಗ ಹುಟ್ಟಿದವನೇ ಹರಿಹರ ಪುತ್ರ - ಸಾರ್ತವು ಸರ್ಪ ಲೋಕಗಳನ್ನು ಗೆದ್ದವನು.

ಇವನು ವೇದ ವ್ಯಾಸನ ನಂತರ ಬ್ರಹ್ಮ ತನಗೆ ಬೇಕು ಎಂದ. ಇವನ ಗರ್ಭ ಭಂಗ ಮಾಡಲು ನಾರದ ಮರೆವು ಮೂಡಿಸಿ "ಇನ್ನು ನಿನ್ನ ತಂದೆ ತಾಯಿ ಯಾರು ಹೇಳು?" ಸಾರ್ತಾವಿಗೆ ಹೇಳಲಾಗಲಿಲ್ಲ. ಆಗ ಇಂದ್ರಾದಿ ದೇವತೆಗಳು ನೆರವಿಗೆ ಬಂದು ಹಾಲು ಬರುವ ಮರದ ಕೆಳಗೆ ತಪಸ್ಸು ಮಾಡಿದರೆ ಸ್ವ-ಜ್ಞಾನ ನೆನಪು ಬರುತ್ತದೆ ಎಂದರು. ತದೇಕ ಚಿತ್ತದಿಂದ ಮಾಡಿದ ನೆನಪು ಮರುಕಳಿಸಿತು. ಆಗ ದೇವತೆಗಳು ಶ್ರವಣ ರೂಪದಲ್ಲಿ ಜಗತ್ತಿನಲ್ಲಿ ಸತ್ಯ, ಭಕ್ತಿಗಳನ್ನು ಹರಡು ಎಂದರಂತೆ. ನಾರದರ ಆ ಹುಡುಗನನ್ನು ಸನ್ಯಾಸಿ ರೂಪದಲ್ಲಿ ಏಳು ಸಮುದ್ರದ ಬಳಿಯ ಹಾಲು ಸಮುದ್ರದ ಕೆರೆಯಲ್ಲಿ (ದಂಡೆ) ಇಳಿಸಿದ. ಹುಡುಗ ಆಗ ಸನ್ಯಾಸಿ. ಏಣು ಮಾಡಲು ತೋಚಲು ಕಾಡಿನತ್ತ ಹೊರಟು ಕೂಗಿದ. (ಇಲ್ಲಿಂದ ಶಬರಿಮಲೆ ಶಾಸ್ತ್ರಾವು ಮಣಿಕಂಠನ ಕಥೆಯನ್ನು ಹೋಲುತ್ತದೆ. ಅಲ್ಲಿನ ಪಂದಲಂ ರಾಜಶೇಖರ ಇಲ್ಲಿ ತಂಬಿರಾನ್ ಆಗಿ ಜನಪದ ಕತೆಯಲ್ಲಿ ಮೂಡಿದ್ದಾನೆ.)

ಆಗ ಕೊಡಗಿನ ತಂಬಿರಾನ್ (ನಂಬೀಶ) ಪಾಳೆಗಾರನಿಗೆ ಹೆಗ್ಗಳದ ಚೌರಿಮಲೆಯ ಬಳಿ ಸಣ್ಣ ಮಗುವಿನಂತೆ ಕೂಗು ಕೇಳಿಸಿತು. ಅವನು ಪರಿವಾರ ಸಮೇತ ಹೊರಟ. ಅವನಿಗೆ ಮಕ್ಕಳಿರಲಿಲ್ಲ. ದೊರೆತ ಆ ಬಾಲಕನನ್ನೆ ದೇವಪುತ್ರನೆಂದು ಪಾಳೆಯಕ್ಕೆ ಕರೆತಂದ ಪೋಷಿಸಲು ಹೆಂಡಿತಿಗೆ ಹೇಳಿದ ತನ್ನದಾದ ಮಗುವಿಲ್ಲ ಎಂದು ಆಕೆಯ ಕೊರಗು. ಆದರೆ ಆ ದೇವತಾ ಪುತ್ರನ ಪ್ರಭಾವ ಅವಳ ಅರಿವಿಗೆ ಬಂದಿತು. ತುಂಟ ಹಸು ಅವನ ಬಳಿ ಸಾಧುವಾಗುತ್ತಿತ್ತು. ಮುಟ್ಟಿದ್ದೆಲ್ಲ ಒಳ್ಳೆಯ ಫಲ ಕೊಡುತ್ತಿತ್ತು. ಆದರೂ ಅವಳಿಗೆ ಸಂತಾನವಿಲ್ಲದೆ ಚಿಂತೆ ದೇವಪುತ್ರನಿಗೆ ಅದು ತಿಳಿಯಿತು. ಅವನಿರುವ ನೆಲೆಯೇ ಫಲದ ನೆಲೆಯಲ್ಲವೇ?

ವರ್ಷ ಕಳೆದ ಮೇಲೆ ಅವಳಿಗೊಂದು ಗಂಡು ಮಗುವಾಯಿತು. ಆದರೆ ತಂಬುರಾನ್‌ಗೆ ದೇವಪುತ್ರನ ಮೇಲಿದ್ದ ಮಮತೆ ಸ್ವಂತ ಪುತ್ರನ ಮೇಲಿರಲಿಲ್ಲ. ಅಂತಾಗಿ ಬೆಳೆಯುತ್ತಿದ್ದ ದೇವಪುತ್ರನ ಮೇಲೆ ತಂಬಿರಾನ್ ಹೆಂಡತಿಗೆ ಅಸೂಯೆ. ಇವನಿಗೆ ಪಟ್ಟವಾದರೆ ತನ್ನ ಮಗನ ಗತಿ ಹಾಗೂ ತನ್ನ ಯಜಮಾನಿಕೆ ಹೇಗೋ? ಸರಿ ದೇವಪುತ್ರನಿಗೆ ಕಾಟ ಶುರುವಾಯಿತು. ಮದ್ದು ಉಣಿಸಿದಳು, ವಿಷವಿಟ್ಟಳು; ಉಪಾಯ ಫಲಿಸಲಿಲ್ಲ. ಕೊನೆಗೆ ಹೊಟ್ಟೆ ನೋವಿನ ನೆಪ ಮಾಡಿ ಹುಲಿಯ ಹಾಲನ್ನು ತಂದರೆ ವಾಸಿಯಾಗುವುದೆಂದು ಸನ್ಯಾಸಿ ಸೂಚಿಸಿರುವಂತೆ ತಂಬಿರಾನ್‌ಗೆ ತಿಳಿಸಿದಳು. ಸಾಕುತಂದೆಯ ಕಷ್ಟ ತಿಳಿದ ದೇವಪುತ್ರ ಹುಲಿ ಹಾಲು ಅರಸಿ

ಹೊರಟ. ಹುಲಿಯ ಮೇಲೆ ಸವಾರಿ ಮಾಡುತ್ತಾ ಬಂದು ಹುಲಿಯ ಕರೆದು ಕೊಟ್ಟು ನಂತರ ನಂತರ ಸಾಕು ತಂದೆಗೆ "ನಾನು ಎಲ್ಲಿಯಾದರೂ ಜೀವಸಬಲ್ಲೆ ಬಿಟ್ಟುಕೊಡು" ಎಂದ ತಂಬಿರಾನ್ ಒಪ್ಪಲಿಲ್ಲ. ಆದರೆ ಪಾಳೇಯ ಬಿಟ್ಟು ದೇವಪುತ್ರ ಚೌರಿ ಮಲೆಯತ್ತ ನಡೆದು ನೋಟ ತೆಗೆದ. ಅಲ್ಲಿಂದ ಸೂಕ್ತ ಸ್ಥಳಕ್ಕೆ ಮಧ್ಯಾಹ್ನ ತಲುಪಬೇಕು ಎಂದುಕೊಂಡ. ಶಾಂತಿಯು ಬೇಕು ಎಂದುಕೊಂಡು ಇಗ್ಗುತಪ್ಪನ ಮನೆಗೆ ಬಂದ. ಆಗಿನ ಕಾಲಕ್ಕೆ ಇಗ್ಗುತ್ತಪ್ಪ ಕೊಡಗಿನ ಪ್ರಧಾನ ದೇವತೆಯಾಗಿದ್ದ.

ಇಗ್ಗುತ್ತಪ್ಪನಲ್ಲಿ ನೆಲೆ ಕೇಳಿದ. ಕಾವೇರಿ ಹೊಳೆ, ಕಕ್ಕಬೆ ಹೊಳೆ ಕೂಡುವ ಸಂಗಮ ಬಳಿ (ಮುಕ್ಕೋಳಿ) ನೆಲೆ ತೆಗೆದುಕೊ ಎಂದು ಇಗ್ಗುತ್ತಪ್ಪ ಮೂರು ಬಾಣಗಳನ್ನು ಕೊಟ್ಟ ದೇವಪುತ್ರ (ಸಾರ್ತಾವು) ಶಾಸ್ತಾವು ಅವುಗಳಿಂದ ಒಂದು ಬಾಣ ಬಿಟ್ಟ ಅದು ಬಿದ್ದಾಟಂಡ ವಾಡೆ ಬಳಿ ಬಿತ್ತು. ಆದರೆ ಅಲ್ಲಿ ಕುಳಿತುಕೊಳ್ಳಲು ಸರಿಯಾದ ಹಲಸಿನ ಮರ ಇರಲಿಲ್ಲ. ಮನಸಿಗೆ ಸರಿಯಾದ ಕಾಡು ಅಲ್ಲ ಎಂದ. ಮುಂದೆ ನಡೆದ. ಬಿದ್ದಾಟಂಟ ಪೊನ್ನಪ್ಪ (ಕೊಳಗೇರಿ ಗ್ರಾಮದ ಬಳಿ) ದನ ಕಾಯುತ್ತಿದ್ದ ಸನ್ಯಾಸಿ ರೂಪದಲ್ಲಿ ಈ ಸಾರ್ತಾವು ಬಂದು ಅವನನ್ನು ಕೇಳಿದ – "ನನಗೆ ಕುಡಿಯಲು ಹಸುವಿನ ಹಾಲು, ತಿನ್ನಲು ಪೂಬಾಳೆ ಕೊಡು" ಎಂದ. ಪೊನ್ನಪ್ಪ ಬ್ರಹ್ಮಚಾರಿ, ದೈವಭಕ್ತ. ಅಂತೆ ನಮಿದು ಹೇಳಿದ ಈಗ ಎಲ್ಲಿಂದ ತರಲಿ? ದನಕ್ಕೆ ಮರು ಬಿಡಲು ಆಗದಲ್ಲ! ಬಾಳೆ ಬೇರೆ ಈಗ ಇಲ್ಲವಲ್ಲ?" ಎಂದ.

ಶಾಸ್ತಾವು ಹೋಗಿ ನೋಡು. ಹಣ್ಣು ಸಿಗುತ್ತದೆ. ಹಸುವನ್ನು ಕರೆದು ನೋಡು, ಹಾಲು ಕೊಡುತ್ತದೆ; ಎಂದ. ಅದರಂತೆ ಹಸುವನ್ನು ಕರೆಯಲು ಹಾಲು ದಕ್ಕಿತು. ಹಣ್ಣೂ ಅರಸಲು ಹಣ್ಣೂ ಸಿಕ್ಕಿತು. ಸಂತೋಷ ಆಶ್ಚರ್ಯಗಳಿಂದ ಹಾಲು ಫಲಗಳನ್ನು ತಂದು ದೀಪವಿಟ್ಟು ಶಾಸ್ತ್ರಾವಿಗೆ ನಮಸ್ಕರಿಸಿದ. ಆಗ ಶಾಸ್ತ್ರಾವು ನಿನ್ನ ಕುಟುಂಬ ಉದ್ಧಾರವಾಗಲಿ, ದೊಡ್ಡ ಕುಟುಂಬವಾಗಿ ಬೆಳೆಯಲಿ. ನಾನು ನಿಲ್ಲಲು ಸ್ಥಳವೆಂದು ಬಾಣಬಿದ್ದ ನೆಲೆಯ ಕಾರಣ ವರ್ಷಕ್ಕೊಮ್ಮೆ ಇಲ್ಲಿಗೆ ಬರುತ್ತೇನೆ ಎಂದ. ಪೊನ್ನಪ್ಪ ಪುನೀತನಾದ.

ಮತ್ತೆ ಶಾಸ್ತ್ರಾವು ಇನ್ನೊಂದು ಬಾಣ ಹೊಡೆದ ಅದು ಬೇತು ಗ್ರಾಮದ ಆಚೆ ತಲೆಯಲ್ಲಿ, "ಕುರುಂಬಳಿ ಕೊಟ (ಕುರುಂಬರಾಟ್) ದಲ್ಲಿ ಬಿತ್ತು. ಆದರೆ ಅಲ್ಲಿ ಪೊವ್ವೇಲಿ ಮರ (ಗೋಳಿ ಮರದ) ಜಾಸ್ತಿ ಇದ್ದು, ಹಲಸಿನ ಮರ ಇರಲಿಲ್ಲ. ಇದು ನನಗೆ ಸರಿಯಾದ ಸ್ಥಳ ಅಲ್ಲ. ಆದರೆ ವರ್ಷದಲ್ಲಿ ಬಿದ್ದಾಟಂಡ ವಾಡೆಗೆ ಭೇಟಿ ನೀಡುವಲ್ಲಿ ಒಂದು ಘಳಿಗೆ ತಂಗಲು ಈ ನೆಲೆ ಇರಲಿ ಎಂದ. ನಂತರ ಅಲ್ಲಿಂದ ಮೂರನೇ ಬಾಣ ಬಿಟ್ಟ ಅದು ಮಕ್ಕಿಯ ಹಲಸಿನ ಮರದ ಬುಡದಲ್ಲಿ ಬಂದು ಬಿದ್ದಂತೆ. ಅದೇ ಸರಿಯಾದ ನೆಲೆ ಎಂದು ಶಾಸ್ತಾವು ನೆಲೆಯಾದ. ಉದ್ಭವ ಲಿಂಗ ರೂಪದಲ್ಲಿ ಎದ್ದು ನಿಂತ. ಇದು ಮಕ್ಕಶಾಸ್ತಾವು ನೆಲೆಯಾದ ಕಥೆ. ಶಬರಿಮಲೆಯ ಶಾಸ್ತ್ರಾವಿನ ಸರಂಕುಟ್ಟಿಯಲ್ (ಆಲದ ಮರಕ್ಕಾಗಿ ಬಾಣ ಬಿಟ್ಟು, ಬಿದ್ದು ನೆಲೆಯಲ್ಲಿ ಗುಡಿ ಕಟ್ಟಿಸಿದ ನೆಲೆ) ಕಥೆಯ ಪರ್ಯಾಯ ರೂಪವಾಗಿ ಕೊಡಗಿನಲ್ಲಿ ಹೀಗೆ ಮಕ್ಕಿ ಶಾಸ್ತ್ರಾವಿನ ಕಥೆ ರೂಪುಗೊಂಡಂತಿದೆ. ಶ್ರೀ ಇಗ್ಗುತ್ತಪ್ಪ ಹಾಗೂ ಅವನ ಸಹೋದರ, ಸಹೋದರಿ ಹೀಗೆ ಬಾಣದ ನೆಲೆ

ಪಡೆದವರಲ್ಲವೇ? ಕೇರಳದ ದೇವರುಗಳು ಕೊಡಗಿಗೆ ಬರುವ ಕ್ರಮ ಹೀಗೆಯೇ ಏನೋ? ಜನಪದ ಕಂಡ ರೀತಿ."

ಹುತ್ತರಿ ನಂತರದ ಆಚರಣೆ

ಏನೇ ಇರಲಿ, ಕತೆಯ ವಸ್ತುವಿಗನುಗುಣವಾಗಿ ಬಿರ್ಚಿಯಾರ್‌ನಲ್ಲಿ ಹುತ್ತರಿ ಕಳೆದು 2ನೇ ದಿನದ ನಂತರ ಮೂರನೇ ದಿನ ಮಕ್ಕಿಯ ಕಾವುಕಾರರು (ಕೊಂಡಿರ) ಮೂರು ದಿನಗಳ ಕಾಲ ಏಕಪ್ರಕಾರ ಸ್ನಾನ ಮಾಡಿ ಬರೀ ಚಾಪೆಯ ಮೇಲೆ ಮಲಗಿ ಹೊರಡುವಲ್ಲಿ ದೇಗುಲದ ಕೆರೆಯಲ್ಲಿ ಸ್ನಾನ ಮಾಡಿ, ಬಿಳಿ ಕುಪ್ಪಸ, ದಟ್ಟಿ ಧರಿಸುತ್ತಾರೆ. ರುಮಾಲು ಕಟ್ಟಿರುತತಾರೆ. ಊರವರೆಲ್ಲ ಒಂದು ಸೇರಿ ನಾಡಿನವರನ್ನು ಕರೆದು ಕೋಲುಕೊಟ್ಟು ಕಳುಹಿಸಿದ ನಂತರ ಬಲ್ಯಕೊಂಡಿರ ಕಾವುಕಾರರು ಎರಡು ಬೆಳ್ಳಿ ತಿರುವಾಯುಧ ಹಿಡಿದು, ಕುತ್ತಿಗೆಗೆ ದೇವರಮಾಲೆ ಹಾಕಿಕೊಂಡು ಮುಂದೆ ಹೊರಡುವರು. ಅವರ ಹಿಂದೆ ದುಡಿಕೊಟ್ಟ್ ಪಾಟ್‌ನಲ್ಲಿ ಮಕ್ಕಿಯ ಈ ಮೇಲಿನ ಕತೆಯನ್ನು ಹಾಡುತ್ತಾ ಸಾಗುವರು. ಕೋಲಾಟಕ್ಕೆ ಹೋಗುವಲ್ಲಿ ಇದು ಪದ್ಧತಿ, ಇನ್ನೊಬ್ಬರು ಅದೇ ವೇಷದಲ್ಲಿ ತಲೆ ಮೇಲೆ ಪಟ್ಟು ಇಟ್ಟು ನಾಲ್ಕು ಮಡಿಕೆ ವಸ್ತ್ರ ಮಡಿಸಿಟ್ಟು ಒಂದು ಕೋಲನ್ನು ಕೈಯಲ್ಲಿ ಹಿಡಿದು "ಓ ಕುಂಞ..." ಎಂದು ಅರಪು ತೆರೆಯಲ್ಲಿ ಹೋಗಿ ಕುರುಂಬಳ್ಳಿ ತೋಟದ ಬಳಿ ಹತ್ತು ನಿಮಿಷ ನಿಂತು ಅಲ್ಲಿಂದ ಬಿದ್ದಾಟಂಡ ವಾಡೆಗೆ ಹೋಗಿ ಅಲ್ಲಿ ಕೋಲು ಹೊಡೆಯುವರು. ನಂತರರ ತಿರುವಾಯುಧ ಹಿಡಿದು ದೇಗುಲಕ್ಕೆ ವಾಪಸು ಬರುತ್ತಾರೆ. ಹುತ್ತರಿ ಸಮಯದ ಆಚಾರ ಇದು. ಬಹುಶಃ ಹುತ್ತರಿ ತಂದ ಇಗ್ಗುತ್ತಪ್ಪ ನೀಡಿದ ಬಾಣಗಳು ಬಿದ್ದ ನೆಲೆಗಳಾದ ಕಾರಣ ಮಕ್ಕಿ ಶಾಸ್ತಾವಿಗೂ ಹುತ್ತರಿಗೂ ಈ ಸಂಬಂಧ ಕೂಡಿರಬೇಕು. ಕಕಣಿಯನು ಬಂದು ಮಕ್ಕಿ ದೇವರಿಗೆ ರಾಶಿ ಇಟ್ಟು ತಿಳಿಸುತ್ತಾನೆ. ಹುತ್ತರಿ ಪೊಳ್ದು ಅಂತ. ಆ ದೇವರ ಸಣ್ಣ ಹಬ್ಬ ಬಿರ್ಜೆಯಾರ್ ಸಂಕ್ರಮಣದಲ್ಲಿ ನಡೆಯುತ್ತದೆ. ಅದರಲ್ಲಿ ಮಿಳಿತವಾದ ಜನಪದ ಆಚರಣೆಗಳೂ ಅರ್ಥಪೂರ್ಣವಾಗಿದೆ. ಈ ಶಾಸ್ತಾವಿನ ನೆಲೆಯ ವಿವರಗಳು ಮುಂದಿನಂತಿವೆ.

ಮಕ್ಕಿ ಶಾಸ್ತಾವಿನ ನೆಲೆ

ಕೊಡಗಿನ ಸಾಂಸ್ಕೃತಿಕ ಹೃದಯ ಎನಿಸುವ ಊರು ನಾಪೋಕ್ಲು ! ಅಲ್ಲಿಂದ ಪೂರ್ವಕ್ಕೆ ಬೇತು ಗ್ರಾಮದಿಂದ 2 ಮೈಲಿ ದೂರದಲ್ಲಿ ಮಕ್ಕಿ ಶಾಸ್ತಾವಿನ ನೆಲೆ. ಹೋಗಿ ಬರುವ ಹಾದಿಯಲ್ಲಿ ಆಯಾಸ ಭಯವಿಲ್ಲದ ಕಾರಣ ಸನ್ನಿವೇಶ. ಹಲಸು, ಕಿತ್ತಳೆ, ತೇಗೆ, ಬೀಟೆಮರಗಳ ದಟ್ಟ ಆವರಣದಲ್ಲೂ ಭಯವಿಲ್ಲದೆ ನಿಂತಿರುವ ಜನಬೀಡು ಬಿಡಾರಗಳು ಮಕ್ಕಿಯ ಹಾದಿಯನ್ನು ನಿದೇಸಿಸುತ್ತವೆ. ಹಾದಿ ಸರಿದು ಬಂದು ನಿಂತು ನೋಡಿದರೆ ಪ್ರಶಾಂತ ವಾವಾವರಣದಲ್ಲಿ ಮಕ್ಕಿ ಶಾಸ್ತಾವಿನ ಬಿಡಾರ. ಎದುರಿನ ಪುಷ್ಕರಿಣಿಯಲ್ಲಿ ಕಾಲು ತೊಳೆದು ಮೇಲ ಬಂದರೆ ಅಚ್ಚುಕಟ್ಟಾಗಿ ಕಾಣುವ ಮೆಟ್ಟಿಲುಗಳು. ಮೆಟ್ಟಿಲೇರಿ ಬಂದ ಮೇಲೆ ಚಪ್ಪಡಿ ಹಾಸಿ

ನೆಲದ ಮಲೆ ಈಶಾನ್ಯದಲ್ಲಿ ಹಲಸಿನ ಮರದ ಬಳಿ ಸುಮಾರು 15 ಅಡಿ ವ್ಯಾಸದ ವೃತ್ತಾಕಾರದ ವೇದಿಕೆಯ ಮೇಲೆ ಶಾಸ್ತಾವಿನ ಸಾಂಕೇತಿಕ ಲಿಂಗ ಶಿಲೆಗಳು. ಹರಕೆಗೆ ಬಂದ ತ್ರಿಶೂಲ, ಬಾನಗಳನ್ನು ಹೊತ್ತು ನಿಂತಿದೆ. ವೃತ್ತಾಕಾರದ ವೇದಿಕೆ. ಸೀಗೆಕಲ್ಲಿನದಾದರೂ ವಿನ್ಯಾಸಗೊಂಡು ಹೊಯ್ಸಳ ಶೈಲಿಯನ್ನು ನೆನಪಿಗೆ ತರುತ್ತದೆ. ಆದರೂ ಬೌದ್ಧ, ಜೈನ ಪರಂಪರೆಯ ವಾಶ್ತುವಿನ ಸಂಕೇತವೂ ತಳವೇದಿಕೆಯಲ್ಲಿರುವಂತಿದೆ. ಶಿಲಾಹಸ್ತಿಗಳು ದ್ವಾರದಲ್ಲಿದ್ದು ಕೈಪಿಡಿಯು ಹಸ್ತಿ ಸೋಪಾನವಾಗಿದೆ. ಪ್ರಾಚೀನವಾದ ಕರವಲೆ ಬಾಡಗದ ಭದ್ರಕಾಳಿಯ ದೇಗುಲದ ತಳ ವಿನ್ಯಾಸದ ಹೋಲುವ ಈ ವೃತ್ತಾಕಾರಾದ ವೇದಿಕೆಯ ಅಂಚಿನಲ್ಲಿ ಹರಕೆಯಾಗಿ ತಂದ ಮೃಣ್ಮಯ ಆನೆ, ಕುದರೆ, ಬೇಟೆ ನಾಯಿ ಬೊಂಬೆಗಳನ್ನು ಅಚ್ಚುಕಟ್ಟಾಗಿ ಜೋಡಿಸಿದ್ದು, ರಥ ಸೂರ್ಯನಂತೆ ಶಾಸ್ತಾವು ಕಂಗೊಳಿಸುತ್ತದೆ. ಈ ಆವರಣದ ಪಾಶ್ವದೇವತೆ ಆಗಿ ಬೋಟೆಕಾರ ಅಯ್ಯಪ್ಪ ಇದೆ. ಜೊತೆಗೆ, ಶಾಸ್ತಾವಿನ ಹಿಂಬದಿಗೆ ಬ್ರಹ್ಮರಾಕ್ಷಸನ ನೆಲೆ ಇದೆ. ಅದು ಇಂಥ ನೆಲೆಯನ್ನು ನಿವೃತ್ತಿಗೊಳಿಸಲು ಪರಿಹಾರವು ಪೇರೂರು, ಕಂಡಗಾಲದಲ್ಲಿ ಕಾಣಬರುತ್ತದೆ. ಪೇರೂರಿನಲ್ಲಿ ಬ್ರಹ್ಮರಾಕ್ಷಸನ ನೆಲೆಯನ್ನು ಸುದರ್ಶನ ಹೋಮ ಮಾಡಿ ನಿವೃತ್ತಿ ಮಾಡಲಾಗಿದೆ.

ಕರ್‌ಪತ್ ಚಂದ್ ನಡೆ

ಮಕ್ಕಿ ಶಾಸ್ತಾವಿನ ಸಣ್ಣ ಹಬ್ಬದಲ್ಲಿ 'ಕರ್‌ಪತ್ ಚಂದ್' ನಡೆಯಿಂದ ಹರಕೆಯ ನಾಯಿಗಳನ್ನು ತರುವುದು ವಿಶೇಷ ಆಚರಣೆ. ಎರಿಗೆ-ತೆರಿಗೆಗೆ ಈ ದೇಗುಲಕ್ಕೆ ಸಂಬಂಧಿಸಿದಂತೆ ಬೇತು ಗ್ರಾಮದಲ್ಲಿ 30 ಕುಡಿ ಕೊಡವ ಮನೆತನಗಳುಂಟು. ಎರಿಗೆ-ನಡಾವಳಿ, ದೇಗುಲ ಶುದ್ಧಿ ಮಾಡುವಿಕೆ, ಕಾರು ಬಾರು, ತೆರಿಗೆ-ಹಬ್ಬಕ್ಕೆ ಬೇಕಾದ ಬತ್ತ, ತೆಂಗು, ಅಕ್ಕಿ, ಬೆಲ್ಲ, ಕೋತ್ರಿ, ಬತ್ತಿ, ಎಲೆ, ಅಡಿಕೆ, ಬಾಳೆ ಇತ್ಯಾದಿ ಮನೆತನಗಳ ಕುಡಿಗಳಿವೆ. ಮುಖ್ಯವಾಗಿ 12 ಕುಡಿಗಳಿವೆ. ಬಲ್ಯಕೊಂಡಿರ, ಬಡಿಕೊಂಡಿರ, ಸಣ್ಣಕೊಂಡಿರ, ಕುಟ್ಟಂಜೆಟ್ಟಿರ, ಕಾಳೆಯಂಡ, ಬೊಳ್ಳೆಪಂಡ, ಚೋಕೀರ, ಕೀಕಂಡ, ನಾಡಿಚಂಡ, ಮುಕ್ಕಾಟಿರ (ಗೌಡ) ಅಪ್ಪೇರಂಡ ಇತ್ಯಾದಿ 12 ಕುಡಿಗಳು. ಈ ಕುಡಿಗಳೇ ಸಣ್ಣ ಹಬ್ಬದಲ್ಲಿ 'ಕರ್‌ಪತ್ ಚಂದ್ ನಡೆ' ದಿನದಲ್ಲಿ ಆಗುವ ನಾಯಿಗಳನ್ನು (ಬೊಂಬೆರೂಪ) ತರುವವರು. ಈ 'ನಡೆ' ಕುಟ್ಟಂಜೆಟ್ರ ಮನೆಗೆ ಮೀಪವಿದೆ. ಗದ್ದೆಯ ಮೇಳಿನ ಭಾಗವಿದು.

ಈ ಸಣ್ಣಹಬ್ಬಕ್ಕೆ ಕಟ್ಟು ಬಿದ್ದಮೇಲೆ ಪ್ರತಿ ಕುಡಿಯ ಒಬ್ಬೊಬ್ಬ ಹೆಣ್ಣು ಮಗಳು ಶುದ್ಧ ಮುದ್ರಿಕೆಯಲ್ಲಿರಬೇಕು. ಹೊರಗಾದವರು ಮನೆಬಿಡಬೇಕು. ಮನೆಯಲ್ಲಿನ ಹಿರಿಯ (ನಾಯಿ ಹಾಖುವವ) ಶುದ್ಧಮುದ್ರಿಕೆಯಲ್ಲಿ ಪ್ರತ್ಯೇಕ ಮಲಗಬೇಕು. ಹಬ್ಬದ ದಿನ ಆಯಾ ಕುಡಿಯ ಹೆಣ್ಣು ಮಗಳು ಮುಂಜಾನೆ ಎದ್ದುಅಕ್ಕಿ ಹಿಟ್ಟು, ಬಾಲೆ ತೆಗೆದುಕೊಂಡು ಹೋಗಿ ಅಯ್ಯಪ್ಪನ ನೆಲೆ 'ಕರ್‌ಪತ್ ಚಂದ್ ನಡೆ'ಯಲ್ಲಿಡುವರು. ದೋಬಿ ಬಂದು ಮಾವಿನ ಎಲೆಯಿಂದ ತೀಥ ಪ್ರೋಕ್ಷಿಸುವರು. ಅಲ್ಲಿಂದ ಅವರು ನೆಟ್ಟಗೆ ಮಕ್ಕಿಗೆ ಹೋಗಿ,

ಒಲೆ ಮಾಡಿ ಸೌದೆ ಶೇಖರಿಸುವರು. 12 ತಿರಿ, ಎಲೆ, ಅಕ್ಕಿ, ಬಾಳೆ, ಮಣ್ಣಿನತವ (ಕಾವಲಿ) ತೆಗೆದುಕೊಂಡು ದೇವರ ಮುಂದೆ ಬರುವರು. 12 ಸಲ ಪ್ರದಕ್ಷಿಣೆಯ ನಂತರ ಹಣ್ಣು ಕಾಯಿ ಹಾಗೂ ಮಾಡಿದ ಹುಟ್ಟನ್ನು ಕುಕ್ಕೆಗೆ ಹಾಕಿಕೊಂಡು ದೇವರ ನೆಲೆಯಿಂದ 'ಕರ್‌ಪತ್ ಚಂದ್ ನಡೆ' ಯವರಿಗೆ ತ್ತು ನೆಲೆಗಳಲ್ಲಿ ಮೇಲೆ ಇಡುತ್ತ ಬರುವವರು ಹೀಗೆ ಮೀದಿ ಇಡುವಾಗ ಮಂಜಲಕ್ಕಿ ಹಾಕುವರು ನಾಯಿ ಹೊತ್ತು ಬಂದ ಗಂಡಸರಿಗೆ ಇವರ್‍ಯಾರು ಕಾಣಬಾರದು. ಇತರ್‍ಯಾರು ಹಾದಿಯಲ್ಲಿ ಕಾನಸಿಗಬಾರದು.

ಮಣ್ಣಿನ ನಾಯಿಗಳನ್ನು ಒಯ್ಯುವ ನೀರು ಒಂದು ದಿನ ಮುಂಚೆ ಕೊಯವರು ಕುಂಬಾರಿಕೆಯವರೂ 'ಕರ್‌ಪತ್ ಚಂದ್ ನಡೆ'ನಲ್ಲಿ ಮಣ್ಣಿನ ನಾಯಿಗಳನ್ನು ತಂದಿಡುತ್ತಾರೆ. ರಾತ್ರಿ ಇಡೀ ಅವುಗಳನ್ನು ಅಲ್ಲಿಟ್ಟಿರಬೇಕು. ಮೇದನು ರಾತ್ರಿಯೆಲ್ಲ ಬೆಂಕಿ ಹಾಕಿಕೊಂಡು ಡೋಲು ಬಡಿಯುತ್ತ ಅಲ್ಲಿರುತ್ತಾನೆ. ಡೋಲು ಬಡಿಯುವುದನ್ನು ಒಮ್ಮೆಯೂ ನಿಲ್ಲಿಸಬಾರದು. (ಒಂದು ಬಾರಿ ನಿದ್ರಿಸಿ ನಿಲ್ಲಿಸಿದ್ದಕ್ಕೆ ಎಚ್ಚರವಾಗಿ ನೋಡಿದಾಗ ಹುಲಿ ಬಾಯ್ದೆರೆದು ನಿಂತಿತಂತೆ. ಹರಕೆ ಹೊತ್ತ ಮೇಲೆ ಹುಲಿ ಮಾಯವಾಯಿತೆಂದು ಪ್ರತೀತಿ) ಬೆಳಿಗ್ಗೆ ಅವನೂ ಸ್ನಾನ ಮಾಡಿ ಶುದ್ಧ ಮುದ್ರಿಕೆಯಲ್ಲಿ ಇರಬೇಕು.

ಈ ಹೊತ್ತಿಗೆ ಸ್ನಾನ ಪೂಜೆ ಮುಗಿಸಿ ಪ್ರಸಾದದೊಡನೆ ಈ 'ನಡೆ'ಗೆ (ಕುಡಿ) ಕುಟುಂಬದವರು ಬರುವುದರೊಳಗೆ ಬಿಳಿ ಕುಪ್ಪಸ ದಟ್ಟಿ ಚೌಕ ವಸ್ತ್ರಪಟಿ ಧರಿಸಿರುವರು. ಈ ಕುಟುಂಬದವರು ಭುಜಕ್ಕೆಡೆರಂತೆ 4 ನಾಯಿಗಳನ್ನು ಎತ್ತಿಕೊಂಡು ಎರಡೂ ಹಸ್ತಗಳನ್ನು ಭುಜದ ಮೇಲಿರಿಸಿ ಅರಪುತೆರೆ ಕೂಗುತ್ತ ('ಅರೋಹ' 'ಆರೋಹಿ'.....) ಬರುವರು. ಮುಂದಾಳಾಗಿ ಬಲ್ಯಕೊಂಡಿರ ಕುಟುಂಬದ ಹಿರಿಯ ಮನುಷ್ಯ ಕೂಗುತ್ತಾ ಬರುತ್ತಾರೆ. ಒಂದೊಂದು ಗುಂಪಿಗೂ ತಲಾ ಆರು ಜನರು ಇರುತ್ತಾರೆ. ಒಂದು ಗುಂಪಿನ ನಂತರ ಇನ್ನೊಂದು ಗುಂಪು ತಲಾ 3 ಸಲ ಅರಪುತೆರೆ ಕೂಗುತ್ತ ಬರುತ್ತದೆ. ಇವರನ್ನು ಮುಂದಿನಿಂದ ಯಾರೂಹಾದಿಯನ್ನು ನೋಡಬಾರದು. ಅಂದರೆ ನಾಯಿ ತರುವುದನ್ನು ನೋಡುವಂತಿಲ್ಲ. ಗ್ರಾಮದ ಜನರೂ ಆ ಸಮಯದಲ್ಲಿ ಮನೆಯಿಂದ ಹೊರಡುವುದಿಲ್ಲ. ಮೇದ ಮುಂದೆ, ನಾಯಿ ಹೊತ್ತವರು ಹಿಂದೆ, ದೇವರನ್ನು ಕೂಗುತ್ತ 'ನಾಯಿ ತಾತ್‌ವ' –ಅಲ್ಲಲ್ಲಿ ನಿರ್ದಿಷ್ಟ ದೇವಳ ಸಾಶ್ತಾವಿನ ಬಳಿ ನಿಲುಕಿ 3 ಸುತ್ತು ಸುತ್ತಿ 'ನಡೆ'ಯಲ್ಲಿ ಬಂದು ನಾಯಿಗಳನ್ನು ಕೆಳಗೆ ಇಳಿಸುವರು. ನಾಯಿಗಳನ್ನು ಊನ ಮಾಡದಂತೆ (ಮಾಡಿದರೆ ಕುತ್ತಿನಾಶ) ತಂದಿರಬೇಕು.

ಆಗ ಅರ್ಚಕರು ಗುಡಿಯೊಳಗೆ ಇರುವರು. ನಾಯಿ ಹಾಕುವವರ್ಲ್ಲಿ ಒಬ್ಬರು 'ಸ್ವಾಮಿಯೇ' ಎಂದ ಕರೆದಾಗ ಅರ್ಚಕನು ಬಂದು, ಹರಕೆ ಇರುವವರೆಲ್ಲ ಬರಬಹುದು ಎನ್ನುತ್ತಾರೆ. ಮೊದಲಿಗೆ ದೇವರ ತೀರ್ಥವನ್ನು 'ನಡೆ'ಯಲ್ಲಿ ಬಂದ 12 ಕುಡಿಗಳ ನಾಯಿಗಳಿಗೆ ಪ್ರೋಕ್ಷಿಸುವರು. ವೇದಿಎಯ ಅಂಚಿನ ಸುತ್ತ ('ನಾಯಿ ಮದ್'ನಲ್ಲಿ) ಇಡುವರು. ನಂತರ ಉಳಿದವರ ಹರಕೆ ನಾಯಿಗಳನ್ನು ಈ ನಾಯಿಗಳಿಗೆ ಚೆಂಡು ಹೂ

ಪೂಸಿ, ಹಣೆಗೆ ಮಸಿಕೆಂಡ ಅರೆದು ಅದಕ್ಕೆ ಒಂದು ಬೊಟ್ಟು ಚುಕ್ಕೆಯನ್ನು ಮಾತ್ರ ಹಚ್ಚಿರುವರು. ಚಂದನ ಹಚ್ಚಿರುವರು. ಈ ಹರಕೆ ಮುಗಿದ ಮೇಲೆ, ದೇವರ ಆರತಿ ಪೂಜೆ ನಡೆದು ಪಾಯಸದ ಪ್ರಸಾದ ವಿನಿಯೋಗವಾಗುತ್ತದೆ. ಅದೇ ದೊಡ್ಡ ಹಬ್ಬದ ಸಮಯದಲ್ಲಿ ನಾಯಿಗಳ ಬದಲು ಎತ್ತು ಪೊರಟವು ಬರುತ್ತದೆ. ಅದೊಂದೇ ಪ್ರಮುಖ ವ್ಯತ್ಯಾಸ. ಆದರೆ ಎರಡೂ ಹಬ್ಬಗಳಲ್ಲೂ ಅಂಜ್‌ಕೂಟ್ ಮೂರ್ತಿಗಳ ತೆರೆಗಳುಂಟು. ಇವು ಹಬ್ಬದ ಪ್ರಮುಖ ಜನಪದ ಆಕರ್ಷಣೆಯಾಘಿದೆ. ಅಂಜ್‌ಕೂಟ್ ಮೂರ್ತಿಗಳ ತೆರೆ ಎಂದರೆ ಕುಟ್ಟಿಜಾತ. ಕರಿಬಾಳ, ಭೈರವ, ನಚ್ಚುಟ್ಟಿ ಹಾಗೂ ವಿಷ್ಣುಮೂರ್ತಿ ತೆರೆಗಳನ್ನು ಅನುಕ್ರಮವಾಗಿ ಕಟ್ಟಿಸುತ್ತಾರೆ. ಜೊತೆಗೆ ಕಲ್ಯಾಣಜ್ಜಪ್ಪನ ತೆರೆಯೂ ಉಂಟು. ಇದು ಸಾಮಾನ್ಯವಾಗಿ ವಿಷ್ಣುಮೂರ್ತಿ ತೆರೆ ಆಗುವ ಮಂಚೆ ನಡಯುತ್ತದೆ.

ಲಕ್ಷ ದೀಪಾರಾಧನೆ

ಹಬ್ಬದ ದಿನದಲ್ಲಿ ರಾತ್ರಿ 9–10 ಗಂಟೆ ವೇಳೆಗೆ ಲಕ್ಷ ದೀಪಾರಾಧನೆ ಬಹು ಸುಂದರವಾಗಿ ನಡೆಯುತ್ತದೆ. ಈ 'ಅಂದಿ ಬೊಳಕಿಗೆ' 25 ರೂಪಾಯಿ ಪ್ರಕಾರ ಹರಕೆ ವಸೂಲಿ ಆಗಿರುತ್ತೆ. ಕಲ್ಲಿನ ದೀಪಸ್ತಂಪಭಕ್ಕೆ ದೀಪ ರೆಂಬೆಗಳನ್ನು ಸೇರಿಸಿಡುವರು. ಒಂದೊಂದರಲ್ಲಿ 8 ಬತ್ತಿ ದೀಪಗಳಿಗೆ ಅವಕಾಶ ತುದಿಯಲ್ಲಿ ನಾಗಹಡೆಯ ಈ ಸ್ತಂಭ ನಾಗ ದೀಪ ಸ್ತಂಭದಂತೆ ಕಂಗೊಳಿಸುತ್ತದೆ. ದೀಪ ಹಚ್ಚಿದ ಮೇಲೆ ದೇಗುಲದ ಸುತ್ತಲೂ 'ಕುತ್ತ್‌ಬೊಳಕು' (ನಂದಾದೀಪ) ಹಚ್ಚಿ ಶಾಸ್ತಾವು ಕಟ್ಟೆಗೂ ಸುತ್ತ ಇರುವರು. ಈ 'ಅದಿಬೊಳಕು; ಸುಮಾರು 5–60 ಹರಕೆಗಳ ಪ್ರತೀಕ. ನೋಡಲು ಅದೊಂದು ಶಾಸ್ತಾವು ದೀಪಾವಾಳಿ. ವರ್ಷಕ್ಕೆರಡು ಬಾರಿ ಆ ಮನೋಹರ ಬೆಳಕಿನ ದೃಶ್ಯ ಮಾರಾಯರು ಚಂಡೆ ಹೊಡೆಯುತ್ತಿರುತ್ತಾರೆ. ಮಂಗಳಾರತಿ ಪೂಜೆ ಆಗುತ್ತಿರುತ್ತದೆ. ರಾತ್ರಿ 12ರವರೆಗೂ ಈ ದೀಆರಾಧನೆ ನಡೆಯುತ್ತದೆ. ಒಂದು ರೀತಿಯಲ್ಲಿ ರುದ್ರಾಕಾರ್ತಿಕೋತ್ಸವದಂತೆ ಕಾಣುತ್ತದೆ.

ಈ ಸಮಯದಲ್ಲಿ ತೆರೆಗಳನ್ನು ಕಟ್ಟಲು ತಯಾರಿ ನಡೆಯುತ್ತಿರುತ್ತದೆ. ಕಟ್ಟಿಚಾತ ತೆರೆ ದೊಡ್ಡ ಹಬ್ಬದಲ್ಲಿ ಮಧ್ಯಾಹ್ನ ಮೂರು ಗಂಟೆಗೆ ನಡಯುತ್ತದೆ. (ಎತ್ತು ಪೊರಟ ಮುಗಿದ ಮೇಲೆ) ಸಣ್ಣ ಹಬ್ಬದಲ್ಲೂ ಈ ತೆಗೆ ಉಂಟು.

ಬೆಳ್ಳಿ ಕಣ್ಣೂ, ಕಟ್ಟು, ಅಗಲ ಕಿವಿ, ಮೀಸೆ, ಗಡ್ಡದವೇಷ, ಕೆಂಪು ಬಟ್ಟೆ, ಕಾಲಿಗೆ, ಗಗ್ಗರ (ಕಡಗ), ಕೈಗೆ ಬೆತ್ತ ಹಿಡಿದು, ವಿಷ್ಣಮೂರ್ತಿ ಕೋಟದ ಬಳಿ (ಶಾಸ್ತಾವಿನ ದೇಗುಲಕ್ಕೆ ಹೋಗುವಲ್ಲಿ ಮೆಟ್ಟಿಲಿನ ಹಾದಿಯ ಎಡಕ್ಕಿದೆ) ವಿಷ್ಣುಮೂರ್ತಿ ಸ್ಥಾನದಲ್ಲಿ ಬಂದು ಈ ಕುಟ್ಟಿಚಾತ ತೆರೆ ನಿಲ್ಲುತ್ತದೆ. ಕೋತ್ರಿ ಹಚ್ಚಿ (ದೊನ್ನೆ) ಚೊಳ್ಳೆ ಇಟ್ಟು ಕುರ್ದಿ ನೀರು (ಅರಿಶಿನ ಸುಣ್ಣ ಬೆರೆತ ನೀರು) ಹಾಖುವರು. ಹಬ್ಬದ ಕಟ್ಟು ಮುಗಿಯಲು ಈ ತೆರೆ ಅವಕಾಶ ಮಾಡಿಕೊಡುತ್ತದೆ.

ಅಂದಿಬೊಳಕಿನ ಸಯಮದಲ್ಲಿ ವಿಷ್ಣುಮೂರ್ತಿ ಮೊಗ ತಂದುಕೊಂಡಿರ ಮನೆಯುವರು (ಹಬ್ಬ ನಡೆಸುವ ನೊತ್‌ಕಾರ) ಶಾಸ್ತಾವಿನ ಕಟ್ಟೆಯ ಬಳಿ ಇಡುವರು.

ಅಂದಿಬೊಳಕಿನ ಸಮಯದಲ್ಲಿ 'ತೋತ' (ತೆರೆ) ಬಂದು ಕುಣಿದು ನಂತರ ವಿಷ್ಣುಮೂರ್ತಿ ತೆರೆಯ ತೋಟದ ಬಳಿ ವೇಷ ಬಿಟ್ಟುತ್ತದೆ. ಆಗ 'ನೊತ್‌ಕಾರ' ಮೇಲೆ ಕೆಳಗೆ ಬರುವರು. 'ನೊತ್‌ಕಾರ ವಿಷ್ಣುಮೂರ್ತಿ ಮೊಗವನ್ನು ತಂದು ಅರಪುತೆರೆಯನ್ನು ಊರವರ ಜೊತೆಯಾಗಿ ಹೇಳುವನು.' ಕೆಳಗಿನ ಅಂಗಳದಲ್ಲಿ 'ಮೇಲೇರಿ ಕೊಂಡ' ನಡೆವ ನೆಲೆಯ ಪಕ್ಕ ಕಬ್ಬಿಣದ ಕಲ್ಲಿನ ಮೇಲೆ (ಪಳ್ಯಾರ್) ಇಡುವರು. 'ತೋತ' ಕಟ್ಟಿದ ಮಲೆಯ 'ಪಳ್ಯಾರೆ' ಜಾಗಕ್ಕೆ ಊರವರಿಗೆ ಅಕ್ಕಿ ಕೊಟ್ಟು ಕೊಂಡಿರ ನೊತ್‌ಕಾರನಿಗೆ ಹೇಳುತ್ತಾನೆ. (ತೆಂಗಿನೆಣ್ಣೆಯಲ್ಲಿ ಅದ್ದಿದ ಅಕ್ಕಿ ಗಂಟಿಗೆ ಕೋತ್ರಿ ಸಿಗಿಸಿ):

'ನೂರಂಬಡನೂರಿಟ್ಟೊಂದು ಒಕ್ಕಳೂ ಬೇತು ನುಪ್ಪದೊಕ್ಕಳೂ ಮೂಂದ್ ಕುಡಿ ಸಂಪ್ರದಾಯಗಳೂ ಎಲ್ಲರೂ ಕೂಟಿತ್ ಮೇಲೇರಿ ತಿರುಮುಡಿಕ್ ತಿತ್ತ್ ಬೆಪ್ಪಕ ಅರಿತಿರಿ ಕೊಡ್ತವನಲ್ಲ' (ನೂರಂಬಡ ನಾಡಿನ ಬೇತು ಗ್ರಾಮದವರು ಮತ್ತು ಕೇರಿಯ ಮೂರ ಕುಡಿಗಳು ಎಲ್ಲರೂ ಸರಿಯಾಗಿ ಹಾಜರಿದ್ದೀರಾ? ವಿಷ್ಣುಮೂರ್ತಿ ಮೇಳೇರಿ ಬೆಂಕಿ ಇಡಲಿಕ್ಕೆ ಮಲೆಯನಿಗೆ ಅಕ್ಕಿ ಮತ್ತು ತಿರಿಯನ್ನು ಕೊಡಬಹುದೇ?)

ನೊತ್‌ಕಾರ ಎಣ್ಣೆ ಅಕ್ಕಿ ಗಂಟನ್ನು ಮಲೆಯಿಗೆ (ತೋತ) ಕೊಡುತ್ತಾನೆ. ಅವನು ಮೇಲೇರಿ ಇಟ್ಟ ಮೇಲೆ ನೊತ್‌ಕಾರನಿಗೆ ಬೆಂಕಿ ಇಡಲು ಆದೇಶವಾಗುತ್ತದೆ. ಅವನು ಬೆಂಕಿ ಇಟ್ಟ ಮೇಲೆ 'ಮೇಲೇರಿ' ಉರಿಯ ತೊಡಗುತ್ತದೆ. ಊರವರು ಕೊಂಟುಗಳನ್ನು ಓರೆಯಾಗಿ ಶೇಖರಿಸುತ್ತಾರೆ. ಆ ಹೊತ್ತಿಗೆ "ಪಳ್ಯಾರ"ದ ಬಳಿ ಮಲೆಯರು ಭೈರವಸೆರೆ, ಕರಿಬಾಳತೆರೆ ಹಾಗೂ ನುಚ್ಚುಟ್ಟಿ ತೆರೆಳನ್ನು ಕಟ್ಟಿ ಬರುತ್ತಾರೆ.

ತೆಂಗಿನ ಎಳೆಗರಿ ದಂಟನಿಂದ ಜೋಡಿಸಿದ ಛತ್ರಿಯಾಕಾರದ ಮುಡಿ, ಮುಖಕ್ಕೆ ಹಳದಿ ಕೆಂಪು, ಮಿಶ್ರಿತ, ಬಣ್ಣ, ಕೈಗೆ, ಬಳೆ, ಕಡತಲೆ, ಕಾಲಿಗೆ ಗಗ್ಗರ, ಕೆಂಪು ಕಚ್ಚೆ ತೊಟ್ಟು ರೋಚಕವಾದ ನೃತ್ಯವನ್ನು ಭೈರವತೆರೆ ಮಾಡುತ್ತದೆ. ಊರವನಿಗೆ ಆಶೀರ್ವದಿಸುತ್ತದೆ. ಹೀಗೆಯೇ ವೇಷತೊಟ್ಟು ಅಗಲ ಕಿವಿ, ಪ್ರಭಾವಳಿ ಮುಡಿ ಇರುವ ಕರಿಬಾಳನ ತೆರೆಯೂ ಕಣಿದು ದೇವರ ಆಚಾರಗಳನ್ನು ಕಟ್ಟು ನಿಟ್ಟಾಗಿ ಪಾಇಸಲು ಆದೇಶ ನೀಡುತ್ತದೆ.

ಕೆದರಿದ ಮುಡಿ, ಮುಖಕ್ಕೆ ತೆಂಗಿನ ಗರಿ ಇರುವ ಕಡತಲೆ ಬದಲು, ಕೋಲುಹಿಡಿದು ಹಿಂದಿನ ವೇಷಧಾರಿಗಳ ವೇಷಗಳನ್ನು ತೊಟ್ಟು ನುಚ್ಚುಟ್ಟಿ ತೆರೆ ಇರುತ್ತದೆ. ಎಂದಿನಂತೆ ಆಶೀರ್ವಾದ ಹೇಳುತ್ತದೆ.

ಈ ತೆರೆಗಳಲ್ಲಿ ಮುಗಿವ ವೇಳೆಗೆ ಬೆಳಕು ಹರಿಯುತತದೆ. ಸುಮಾರು 400 ವರ್ಷ ಇತಿಹಾಸವಿರುವ ಪ್ರತಿದ್ಧ ಕಲ್ಯಾಟಪ್ಪನ ತೆರೆ ಬರುತ್ತದೆ. ಈತನಿಗೆ ನೆಲೆ ಕೊಟ್ಟವನು ಮಕ್ಕಿ ಶಾಸ್ತಾವು. ವಿಷ್ಣುಮೂರ್ತಿ ತೋಟದ ಎಡಕ್ಕೆ ಇವನ ನೆಲೆ ಉಂಟು. ಕರಿಬಾಳ ಕೊಟ್ಟವನು ತೆರೆಯ ಮುಡಿಯನ್ನು ಹೊಂದಿ ಬಲಗಾಲು ಮಡಿಸಿ ಕುಂಟು ಓಟ, ತೋಳು ಪರಿಯ (ಕೈಮರೆ) ಮತ್ತು ತಂಡು, ಬಲಗೈಯಲ್ಲಿ ವಡಿಕತ್ತಿ ಎತ್ತಿ ಹಿಡಿದು ಬಂದು ಆವೇಶದಿಂದ ಕತ್ತಿ ಬೀಸಿ ತನ್ನ ಕತೆ ಹೇಳಲು ಪ್ರಾರಂಭಿಸುತ್ತದೆ. ಕೊಡವ ಮಾದರಿಯ 'ಓಲಗದಾಟ್' ಕುಣಿತ ಮಾಡುತ್ತದೆ ಈ ತೆರೆ.

ಕುಟ್ಟಂಜೆಟ್ಟಿರ ಮನೆಯಲ್ಲಿನ ಕೋಣೆಯಲ್ಲಿ ಕಲ್ಯಾಟಜ್ಜಪ್ಪನು ಕರ್ಣೇಂಬಾಹು ಪಡೆ ಬಂದು ಸಂರ್ದದಲ್ಲಿ ಮಹಿಡಿಯಿಂದ ಹಾರಿದಾಗ ಕಾಲು ಮುರಿಯಿತು. ಕರ್ಣೇಂಬಾಹುವಿನ ಸೈನಿಕರು ತನ್ನ ತಲೆ ಕಡಿದಾಗ ಅದು ಮಕ್ಕಿ ಶಾಸ್ತಾವಿನ ಬಲಕ್ಕೆ ವಿಷ್ಣುಮೂರ್ತಿ ಎಡಭಾಗಕ್ಕೆ ಬಂದು ನನ್ನ ಮಂಡೆ ಇಟ್ಟ ಸ್ಥಳ ಅದು. ಅಂತೆ ಮಕ್ಕಿ ಶಾಸ್ತಾವಿಗೆ ನಮಸ್ಕಾರ ಮಾಡಿ ಪ್ರಸಾದ ತರುವ ಎಂದು ಊರವರನ್ನೂ ಕೇಳುತ್ತದೆ. ಆಗ ನಾಲ್ಕು ಜನ ದುಡಿಕೊಟ್ ಪದ ಹೇಳುತ್ತ ದೇಗುಲಕ್ಕೆ ಬರುತ್ತಾರೆ. ಅಜ್ಜಪ್ಪ ತನಗೂ ಊರವನಿಗೂ ಒಳ್ಳೆಯದು ಬೇಡುತ್ತಾನೆ.'

"ನಾನ್ ನಡಪ ಕಾಲ್‌ಕ್ ಪರಂದ ನಾವ್ಕ್ ಏರೆಕೋರೆ ಬರತನ್‌ಕೆ ನನ್ನ ಚಾಯಿಲ್ ನಡೆತಿತರಂಡು" (ನಾನು ಹೇಳಿದ ಮಾತು ಸುಳ್ಳಾಗದಂತೆ ನನ್ನ ಸಂಚಾರದಲ್ಲಿ ತೊಂದರೆ ಬರದಂತೆ ಕಾಪಾಡು) ಎಂದು ಅವನ ಪ್ರಾರ್ಥನೆಯಾಗುತ್ತದೆ. ಆಗ ಬಲ್ಯಕೊಂಡಿರ ಕಾವುಕಾರರು ದೇವತೀರ್ಥ ಪ್ರಸಾದ ಪಡೆದು ಅಜ್ಜಪ್ಪನ ತೆರೆಯವನ ಜೊತೆಯ ಮಲೆಯನ ಮೂಲಕ ತೀಥ ಹೂಮಾಲೆ ಅಜ್ಜಪ್ಪನಿಗೆ ಕೊಡುತ್ತಾರೆ. ನಂತರ ಅಜ್ಜಪ್ಪ ನಮಿಸಿ ಕೆಳಗಿನ ಪಲ್ಯಾರೆ ಬಳಿ ಬರುತ್ತಾನೆ. ಆ ಹೊತ್ತಿಗೆ ಸಿದ್ಧವಾದ ಪೂಡಪ್ರಸಾದ (ಅರಳು, ತೆಂಗು, ಬಾಳೆ, ಕುಪ್ಪಿ)ವನ್ನು ಎಲ್ಲರೂ ತನ್ನವರೆಂದು ಅಜ್ಜಪ್ಪ ಊರವನಿಗೆ ಹಂಚಿ, ತಾನೂ ತಿಂದು ಕುಡಿಯುತ್ತಾನೆ. ನಂತರ ತೆಂಗಿನ ತುದಿ ಕಡಿದು ತೂತುಗಳಲ್ಲಿ ಕೋತ್ರಿ ಇರುವ 'ತಟ್ಟೆ'ನ ಮುಂದೆ, ಅಜ್ಜಪ್ಪನಿಗೆ ಕೋಳಿ, ತೆಂಗಿನ ಹರಕೆಯನ್ನು ಒಪ್ಪಿಸುವರು. ಅಜ್ಜಪ್ಪ 'ತಟ್ಟ್ ಕೆತ್ತಿತ್ ನೀಕುವ' ಎಂದು ತೆಂಗಿನ ಮುಚ್ಚಳ ತೆಗೆದು ಸ್ವಲ್ಪ ಕುಡಿದು ಬಿಸಾಡುವನು. ಕುಪ್ಪಿ ಬಾಯಿಗಿಟ್ಟು ಗಟಗಟ ಕುಡಿದು ನಂತರ ಕುಣಿಯುತ್ತಾನೆ. ಯುದ್ಧದ ಅಭಿನಯ ತೋರುತ್ತಾನೆ. ನಂತರ ತಂಡು ಕತ್ತಿ ಪರಿಯ ಸಹಿತ 'ಪಲ್ಯಾರ್' ಎದುರು ಒದ್ದು ಬಿಡುತ್ತಾನೆ. ಅಲ್ಲಿಗೆ ಅಜ್ಜಪ್ಪನ ತೆರೆ ಮುಕ್ತಾಯ.

ವಿಷ್ಣುಮೂರ್ತಿ ತೆರೆ

ಇದಾದ ನಂತರ ವಿಷ್ಣುಮೂರ್ತಿ ತೆರೆ. ನರಸಿಂಹ ಹಿರಣ್ಯಕಶಿಪುವನ್ನು ಕೊಂದ ಬಗೆಯನ್ನು ಮೂಕಾಭಿನಯದಿಂದ ತೋರಿಸುತ್ತಾನೆ. ನೊತ್‌ಕಾರರಿಂದ ಅಕ್ಕಿ ಪಡೆದು ಪುಷ್ಕರಿಣಿಗೆ ಎಸೆದು ಮೀನುಗಳ ಬಗ್ಗೆ ವಿಚಾರಿಸುತ್ತಾರೆ. ನಂತರ ಮೇಲೇರಿ ಬೆಂಕಿಯ ಬಳಿ 'ಅಗ್ನಿಯಾಟ್ ಪೊಂದಿ ಅಡಿಕ್ಟ್ವೆ' – (ಅಗ್ನಿ ಪ್ರವೇಶ ಮಾಡಲೇ) ಎಂದು ಕೇಳುತ್ತಾನೆ. ಊರವರು ನಮಿಸಿ ಹೇಳಿದಾಗ, 101 ಬಾರಿ ಆ ಕೆಂಡದ ಮೇಲೆ ಬೀಳುವುರು, ಏಳುವುದು, ನಡೆಯುತ್ತದೆ. ನಂತರ 'ಪಳ್ಯಾರ್' ದ ಬಳಿ ಬಂತು ಊರವರನ್ನು ಆಶೀರ್ವದಿಸುವನು. ಕುಟುಂಬ, ದನ, ಬೆಳೆ, ಒಂದರಿಂದ – ನೂರರವರೆಗೆ ಎಲ್ಲರಿಗೂ ಒಳ್ಳೆಯದಾಗಲಿ ಎಂದು ಹಾರೈಸಿ ಮಾರಿ ಚೂರಿಗೆ ನಾನು ಇದ್ದೇನೆ ಎನ್ನುತ್ತಾನೆ. ಊರವನಿಗೆ ತೆಂಗು ಪ್ರಸಾದ ನೀಡುತ್ತಾನೆ. ಊವರೊಡನೆ ಅರಪು ತೆರೆಯೊಡನೆ ಶಾಸ್ತಾವಿನ ಬಳಿ ಹೋಗಿ ಅರ್ಚಕನಿಗೆ ಎಚ್ಚರಿಸುತ್ತಾನೆ.

"ನೆಲತ್ ನಡೆನಾಲ್ ಮೊಲೆಕ್ ಸಮನಾಯಿಟ್ ಕೈಪುಡಿಚಿಟ್, ಕರೆಕೇಲ್, ತಪ್ಪಿನಡೆನಾಲ್ ಆಪ ತಲೆ ಇಲ್ಲಾದ ಬೊಳ್ಳತ್‌ಲ್ ತಾತಿ ಕಳೆಯವು" (ಸರಿಯಾಗಿ ಪನಸ್ಕಾರ ನಡೆಸಿಕೊಂಡು ಬಂದರೆ ಎದೆಯ ಮೊಲೆಗೆ ಸಮಾವಾಗಿ ನಿನ್ನನ್ನು ಎತ್ತರಿಸುವೆ. ತಪ್ಪಿದರೆ ಗುಂಡಿ ಆಳ ಎಂಷ್ಟು ಅಂತ ಗೊತ್ತಿಲ್ಲ ಅಂತಹ ನೀರಿನಲ್ಲಿ ಮುಳುಗಿಸುವೆ)

ನಂತರ ಬಲ್ಯಕೊಂಡಿರ ಕಾವುಕಾರನನ್ನು 3 ಬಾರಿ ಕರೆದು ಆಶೀರ್ವದಿಸುತ್ತಾನೆ. ಎಚ್ಚರ ನೀಡುತ್ತಾನೆ. ಪ್ರಸಾದದ ನಂತರ ವಿಷ್ಣುಮೂರ್ತಿ ಕೋಟದ ಬಳಿ ಬಂದು, ಅಲ್ಲಿಂದ ಪಳ್ಯಾರೆಗೆ ಬರುತ್ತಾನೆ. ಊರವರಿಗೆ ಪ್ರಸಾದ ನೀಡುತ್ತಾನೆ. ತದನಂತರ ಹಂದಿ ಆಹಾರ, ಕೋಳಿ, ಹರಕೆಗಳನ್ನು ಪಡೆಯಲು ಹೋಗುತ್ತಾನೆ. ಎಲ್ಲರನ್ನು ಬೆನ್ನು ಹಾಖಿ ನಿಲ್ಲುವಂತೆ ಸೂಚಿಸಿ ಹಂದಿ ಬಲಿ ಪಡೆಯುತ್ತಾನೆ. ಅಲ್ಲಿಗೆ ತೆರೆಗಳೆಲ್ಲ ಮುಕ್ತಾಯ.

ಮಕ್ಕಿ ಶಾಸ್ತಾವಿನ ಮಹಿಮೆಯ ಕತೆಗಳು

ಶಾಸ್ತಾವಿನ ನೆರೆಗಿರುವ ಹಲಸಿನ ಮರಕ್ಕೆ ಅಂಡಿಕೊಂಡಿರುವ 'ಬೇಡಿ'ಯ ಬಗ್ಗೆ ಕತೆಯೊಂದಿದೆ. ಕೆಲವು ವರ್ಷಗಳ ಹಿಂದಿನ ಮಾತು. ತಿರುವಳ (ದೈವಾವೇಶ) ಬರುತ್ತಿದ್ದವ ಕಳ್ಳಬಟ್ಟಿ ಸಾರಾಯಿ ಕೇಸಿಗೆ ಒಳಗಾದ. ಜೈಲಿಗೆ ಹೋದ. ಹಬ್ಬದ ಸಮುಯ ಬಂತು. 'ಅಂದಿ ಬೊಳಕು' (ಲಕ್ಷ ದೀಪಾರಾಧನೆ) ನಡೆಯುತ್ತಿರುವಲ್ಲಿ ಜೈಲಿನಲ್ಲಿದ್ದ ತಿರುವಳದವನಿಗೆ ಬರುವಂತಿರಲಿಲ್ಲ. ಊರುವರು ಅದು ಕಾರಣ ದೇವರೇ ತಿರುವಳ (ದರ್ಶನ ನಡುಕ) ಧರಿಸಬೇಕು ಎಂದು ಪ್ರಾರ್ಥಿಸಿದರಂತೆ. ಅಂದಿಬೊಳಕಿಗೆ ಪದಾರ್ಥಿಸಿದರಂತೆ. ಅಂದಿಬೊಳಕಿಗೆ ಪದಾರ್ಥಿಗಳು ಚಂಡೆ ಕುಟ್ಟ ತೊಡಗಿದರು ಸೆರೆಯಲ್ಲಿದ್ದವನಿಗೆ ತಿರುವಳ ಬಂತು. ಜೈಲಿನ ಬಾಗಿಲು ತನ್ನಷ್ಟಕ್ಕೆ ತಾನೆ ತೆಗಿಯಿತಂತೆ. ಅವನು ಅಲ್ಲಿಂದ ಓಡಿಬಂದ. ಬಂದವನು ನಡೆಯಲ್ಲಿ ಬಿಚ್ಚಿದ ಕೈಯ ಬೇಡಿ ಹಲಸಿನ ಮರದ ಮೇಲೆ ಬಂದು ಕುಳಿತತ್ತಂತೆ. ತಿರುವಳದ ಕಾರಣಕ್ಕಾಗಿ ಊರವರ ಪ್ರಾರ್ಥನೆಯಿಂದಾಗಿ, ಅವನಿಗೆ

ರಿಯಾಯಿತಿ ದೊರೆತು ಬಿಡುಗಡೆಯಾಗಿ ಬಂದಿರಬಹುದು. ಈ ಕತೆ ಆ ಬಗ್ಗೆ ಹುಟ್ಟಿಕೊಂಡ ಐತಿಹ್ಯ ಇರಬೇಕು. ಅದೇನೆ ಇರಲಿ. ಮಕ್ಕಿ ಶಾಸ್ತಾವು ದೇಔರ ಸೇವಾ ಪಟ್ಟಿಯಲ್ಲಿ ಅಂದಿಬೊಳಕು ಸೇವೆಗೆ ಸಾಕಷ್ಟು ಪ್ರಾಮುಖ್ಯ ಇದೆ. ದೇವಮಹತ್ವದ ಕಾರಣ ಮಕಕ್ಳ ಬಾಲಗ್ರಹ ಪೀಡೆ ನಿವಾರಣೆ, ಪ್ರಾಯಶ್ಚಿತ್ತ, ನವಗ್ರಹ ಪೂಜೆ ಹರಿಹೋಮಗಳ ಮೂಲಕ ಪರಿಹಾರ ಪಡೆಯುತ್ತಾರೆ. ಭಕ್ತರು, ಶಿವರಾತ್ರಿಯಂದೂ ಈ ಲಕ್ಷ ದೀಪಾರಾಧಾನೆ ಉಂಟು.

ಎರಡನೆ ಕತೆ ಹೀಗಿದೆ. ಒಮ್ಮೆ ಕೂತಂಡ ಕಾವೇರಪ್ಪ ಮಕ್ಕಿಗೆ ಬರುವಲ್ಲಿ ಮಡಿಕೇರಿಯಲ್ಲಿ ಹಣ್ಣುಆಐಇ ತೆಗೆದರಂತೆ. ಒಂದು ರೂ. ಉಳಿಯಿತು. ಅಂಗಡಿಯವ ಲಾಟರಿ ಟಿಕೇಟು ಕೊಟ್ಟ. ಈ ಒಂದು ರೂ. ಟಿಕೇಟಿಗೆ ಲಕ್ಷ ರೂ. ಲಾಟರಿ ಹಣ ಬಂದರೆ ಮಕ್ಕಿ ಶಾಸ್ತಾವು ಗುಡಿಯ ಆವರಣಕ್ಕೆ ಕಲ್ಲು ಚಪ್ಪಡಿ ಹಾಕಿಸುವ ಹರಕೆ ಹೊತ್ತರಂತೆ. ಹರಕೆ ಫಲಿಸಿತು. ಅದರಂತೆ 13–1–1981ರಲ್ಲಿ ಆವರಣ್ಕಕೆ ಅವರು ಕಲ್ಲು ಚಪ್ಪಡಿ ಹಾಕಿಸಿದ್ದಾರೆ.

ಮೂರನೆಯದು ಗಂಡು ಸಂತಾನ ಪ್ರಾಪ್ತಿಯದು. ಕರಡದ ನಡಿಕೇರಿಯಂಡ ಮನೆಯವರೊಬ್ಬರಿಗೆ 3 ಜನ ಹೆಣ್ಣುಮಕ್ಕಳು. ದುಬೈನಲ್ಲಿ ಅವರ ವಾಸ. ಬಿದ್ದಾಟಂಡ ಮನೆಯಿಂದ ಬಂದ ಹೆಣ್ಣು ನಡಿಕೇರಿಯಂಡ ಮನೆತನದ ಸೊಸೆ. ದಂಪತಿಗಳು ಬಂದು ಗಂಡು ಸಂತಾನಕ್ಕೆ ಹರಕ್ಕೆ ಹೊತ್ತರು ವ್ರತ ದೇವರಿಗೆ ಮುಟ್ಟಿತು. ಗಂಡು ಮಗು ಆಯ್ತು. ಅದಕ್ಕಾಗಿ ದಏವರಿಗೆ ಅವರು 1982ರಲ್ಲಿ ಹತ್ತು ಸಾವಿರ ರೂ. ಕೊಟ್ಟರಂತೆ.

ಹೀಗೆಯೇ ಹರಸಿಕೊಂಡ ಕಂಗಾಣಂಡ ಗಣಪತಿ ದ್ವಾರಸ್ತಂಭದ ಮೇಲೆ ಶಾಸನ ಹಾಕಿಸಿದ್ದಾರೆ. ಸುಮಾರು 100 ವರ್ಷಗಳ ಹಿಂದಿನ ಘಟನೆಯಂತೆ. ಒಬ್ಬನೇ ಮಗ ಸಿಡುಬು ಕಾಯಿಲೆಗೆ ತುತ್ತಾದಾಗ ಬಂದು ಶಾಸ್ತಾವು ದೇವರಿಗೆ ಹರಕೆ ಕಟ್ಟಿದರು. ವಾಸಿ ಆದರೆ ಕಂಬ ಒಪ್ಪಿಸುವೆ ಎಂದು. 3 ದಿನಗಳ ಭಸ್ಮ ಲೇಪನಕ್ಕೆ ಸಿಡುಬು ವಾಸಿ ಆಯಿತು. ಅದಕ್ಕಾಗಿ ಈ 'ಮಣಿಕಂಬ' ದ್ವಾರ ಸ್ತಂಭ ನಿಲ್ಲಿಸಿ ಹೆಸರಿನ ಶಾಸನ ಹಾಕಿಸಿದ್ದಾರೆ. ಪೂಜೆಯ ಸಮಯದಲ್ಲಿ ಇಲ್ಲಿ ನಿಂತು ಹಾಡುವ ಪದ್ಧತಿ ಇದೆ. ಮಕ್ಕಿ ಶಾಸ್ತಾವು ಈಶ್ವರ ಎಂದೇ ಸಂಶೋಧನೆ ಉಂಟು.

ಇನ್ನೊಂದು ಕತೆ. ರೆಡ್‌ಕ್ರಾಸ್ ಸಂಸ್ಥೆಯ ಬೊಳಕಾರಂಡ ಕಾರ್ಯಪ್ಪ ಒಮ್ಮೆ ವಿಮಾನದಲ್ಲಿ ಪ್ರಯಾಣ ಮಾಡುತ್ತಿದ್ದರಂತೆ. ವಿಮಾನ ಅಫಘಾತವಾಗುವ ಸನ್ನಿವೇಶ ಒದಗಿತು. ಮಕ್ಕಿ ಶಾಸ್ತಾವಿಗೆ ರಕ್ಷಿಸಲು ಪ್ರಾರ್ಥಿಸಸಿದರು. ದೈವವಶಾತ್ ಅಪಘಾತ ತಪ್ಪಿತು. ಹರಕೆಯಂತೆ ಅವರು ದೇವರಿಗೆ ಭಂಡಾರ ಒಪ್ಪಿಸಿದರಂತೆ. ಇವೆಲ್ಲ ಮಕ್ಕಿ ಶಾಸ್ತಾವಿನಲ್ಲಿ ಶ್ರದ್ಧೆ ಇಟ್ಟವರಿಂದ ಮನೋಇಚ್ಛೆಯ ಪ್ರಭಾವದಲ್ಲಿ ರೂಪುಗೊಂಡ ಅನುಭವದ ಮಹಿಮೆಯ ಕತೆಗಳೆಂದು ಕಾಣುತ್ತೇವೆ. ಆನರ ಭಾವನೆಗಳನ್ನು ಶ್ರದ್ಧೆಯನ್ನು ಆಧರಿಸುವುದು ನಂಬಿಕೆಯ ನೆಲೆಯಲ್ಲಿ ಸಾಧ್ಯವಾಗಬಹುದು. ಅದು ನಂಬಿದವರ ನಡೆ.

ದೇವರಿಗೆ ನಡೆದುಕೊಳ್ಳುತ್ತಿದ್ದವರು ಸೂಕ್ತವಾಗಿ ನಡೆದುಕೊಳ್ಳದ್ದರಿಂದ ಕುತ್ತಿನಾಶವಾಯಿತಂತೆ. ತಿರುವಳ ಬರುತ್ತಿದ್ದ ಮನೆತನದವರು ಶುದ್ಧಿಯಿಂದ ಇರಬೇಕಿತ್ತು. ಇರಲಿಲ್ಲ. ಅಂತಾಗಿ ನಾಶ ಆಯ್ತಂತೆ. ನಾಡಿಚಂಡ ಮನೆತನ ಹೀಗಾಯ್ತು ಎಂದು ಪ್ರತೀತಿ. ಈ ಮೇಲ್ಕಂಡ ಮನೆತನದ ಗಂಡು ಹುಡುಗನಿಗೆ ಹೆಣ್ಣು ಸಂಬಂಧದ ಕಾರಣ 'ನಾಡಿಚಂಡ' ಹೆಸರಲ್ಲಿ ತಿರುವಳ ಬರುತ್ತದೆ.

ಅದೇ ದೇವರಿಗೆ ಸರಿಯಾಗಿ ನಡೆದು ಬಂದವರು ಕೊಂಡಿರ ಮನೆತನದವರು. ತಕ್ಕರಾಗಿ ಮಕ್ಕಿ ಶಾಸ್ತಾವಿನ ಕಾವುಕಾರರಾಗಿ ಉಳಿದಿದ್ದಾರೆ. ಮೊದಲಿಗೆ ಇವರು ಜೈನರಂತೆ. ಶಾಸ್ತಾವು (ಹಾಲು ಕಡಲ ಬಳಿ) ಜೊತೆಯಲ್ಲಿ ಬಂದ ಈ ಮನೆತನದ ಅಜ್ಜ ತಂಬಿರಾನ್ ಬಳಿಯೂ ಇದ್ದರಂತೆ. ನಂತರ ಶಾಸ್ತಾವು ಅಲ್ಲಿಂದ ಹೊರಟ ಮಲೆ ಅವರೂ ಹಿಂಬಾಲಿಸಿ ಬಂದು ಮಕ್ಕಿಯಲ್ಲಿ ಶಾಸ್ತಾವಿನ ಕೂಟಾಳುವಾಗಿ, ಎಲ್ಲ ಹೊಣೆಗಳನ್ನು ನೋಡಿಕೊಂಡರಂತೆ. ಅಂತೇ ಶಾಸ್ತಾವಿನ ಕಾವುಕಾರರಾಗಿರುವ ಮನೆತನವೇ ಆಯಿತಂತೆ. ಆ ಮನೆತನದಲ್ಲಿ ಕಾರೋಣನಿಗೆ ಕೊಡುವಲ್ಲಿ ಮಾಂಸಾಹಾರ ಕೊಡುವುದಿಲ್ಲ. ಕೊಡವರ ಅಷಾಡ ಮಾಸವೆನ್ನಬಹುದಾದ ಕಕ್ಕಡದಲ್ಲಿ ಅಮಾವಾಸೆಯ ದಿವಸವೇ ಈಗಲೂ ಕಾರೋಣನಿಗೆ ಇವರು ಮೀದಿ ಇಡುತ್ತಾರೆ. ಈಶ್ವರನ ಜೊತೆಯ ಮನೆತನವಾದ್ದರಿಂದ ಕುಳಿಯ, ಪಾಷಾಣಮೂರ್ತಿ, ಕಲ್ಯಾಟಜ್ಜಪ್ಪನ ತೆರೆ ಕಟ್ಟಿಸುವ ಅಗತ್ಯವಿಲ್ಲ ಎಂದು ರಾಶಿಯಲ್ಲಿ ಬಂತು. 'ತೆರೆಯೂ ಹೇಳಿದ ಕಾರಣ ಮಧ್ಯಕಾಲದ ರೂಢಿ ಏನೇ ಇರಲಿ ಮನೆತನ ತನ್ನ ಹೊಣೆಯನ್ನು ಚೊಕ್ಕವಾಗಿ ನಿರ್ವಹಿಸಿಕೊಂಡು ಬಂದಿರುವುದು ಮುಖ್ಯ. ಅಂತು ಕೊಡಗಿನ ಜನಪದ ಸಂಪ್ರದಾಯ ಎಷ್ಟು ಅಡ್ಡಿಗಳ ನಡುವೆಯೂ ತನ್ನಬೇರುಗಳನ್ನು ಕಾಪಾಡಿಕೊಂಡು ಕಾಲಾನುಗುಣವಾಗಿ ಸ್ಪಂದಿಸುತ್ತಿರುವುದೇ ಅದರ ಜೀವಂತಿಕೆಯಾಗಿದೆ.

(ಡಾ. ಎಂ.ಜಿ. ನಾಗರಾಜು, ಸಂದರ್ಶನದ ಸಂದರ್ಭದಲ್ಲಿ ತಿಳಿಸಿದಂತೆ ದಾಖಲಿಸಲಾಗಿದೆ.)

ಜನಪದ ಹಾಡುಗಳು

ಹುತ್ತರಿ ಹಬ್ಬದ ಹಾಡು

ಬಾಳಲಿ ಬಾಳಲಿ ನಮ್ಮದೆಲ್ಲವೂ ನಾವೆಲ್ಲವೂ
ಬಾಳಲಿ, ಬಾಳಿಸಲೆಮ್ಮ ಮಾದೇವ
ಬಾಳಲಿ ಭೂಮಿ ಜನ್ಮದ ಭೂಮಿ
ಬಾಳಲಿ ಭೂಮಿ ಜಮ್ಮದ ಭೂಮಿ
ಬಾಳಲಿ ಜಂಬೂ ದ್ವೀಪದ ಭೂಮಿ
ಈ ತರ ಭೂಮಿಯ ಮೇಲಿದೆ ಮೇಲೆ
ಎಂತಹುದೇನದು ಮಾಯದ ಕತೆ !

ಪೊಮ್ಮಾಲೆ ಕೊಡಗಿನಲ್ಲಿ ಎಂತಹುದೆಲ್ಲ ಕತೆ ಬಾಳಿದೆ (ಬಹಳ)
ಹುತ್ತರಿ ಕತೆ ಎನ್ನುವರದನು
ಹೇಗದು ನಡೆವುದು ಎನ್ನುವಿರ?

ಮಾಣಿಕ್ಯದ ಮಲೆನಾಡಿನಲಿ
ಓಡೋಡುತ ಬಂದಿದೆ ಹುತ್ತರಿ
ಓಡೋಡುತ ಬಂದಿದೆ ಹುತ್ತರಿ
ಹುತ್ತರಿ ಎಂದದ ಹೇಳುವರು
ಇಗ್ಗುತಪ್ಪ ದೇವನಿಗಿದೆ ಎಂದು
ಮುಂಜಾವಿನ ಸಮಯದಿ ಎದ್ದು
ನಿತ್ಯದ ಪೂಜೆಯ ಮಾಡಲು ಎಂದು
ನೆಮ್ಮದಿಯಿಂದಲಿ ಮೆಲ್ಲನೆ ಬರುವಲಿ
ಹೊತ್ತು ಮೀರಿದ ಹೊತ್ತಿನೊಳಲ್ಲಿ
ಹಾಲಿನ ಕಳಶದ ಅಡಿಯೊಳಗಲ್ಲಿ
ಕೆಂಭೂತ (ಕೊಳ್ಳಿದೆವ್ವ!) ವೊಂದಿಹುದಲ್ಲಿ

ಹಬ್ಬವ ಕೆಡಿಸಲು ಅಡಗಿಹುದಲ್ಲಿ
ಇಗ್ಗುತ್ತಪ್ಪ ದೇವರೇ ನೋಡಿದಿರಾ?
ತಾಯಿ ಮಕ್ಕಳೆಲ್ಲ ಕೂಡಿಕೊಂಡು ತೂರೆ
ಬೆತ್ತ ಕೈಲಿ ಹಿಡಿದುಕೊಂಡು
ಬೆಂಕಿಕೊಳ್ಳಿ ಕೈಲಿ ಹಿಡಿದುಕೊಂಡು
ಕೆಂಭೂತ ಅಡಗಿ ಇರುವ ನೆಲೆಯ ಕಂಡು
ಅಲ್ಲಿ ಎಲ್ಲ ಇಡುತಲಿ
ದೆವ್ವದೊಡನೆ ಜಗಳ ಮಾಡುತಿರಲು
ದೆವ್ವದೊಡನೆ ಆಗುತ್ತಿರುವ ಜಗಳವ
ಇಗ್ಗುತಪ್ಪ ದೇವ ಕಣ್ಣಾರೆ ಕಂಡರು

ಸದ್ದು ಮಾಡದಂತೆ ಹೆಜ್ಜೆ ಇರಿಸಿ
ತಾವೆ ಅವಿತು ಅಡಗಿ ಅಲ್ಲೆ ನಿಂತರು
ಬಿದಿರು ಕೊಳ್ಳಿ ಕೆಂಪು ಉರಿಯುತಲಿರಲು
ಕೈಯಲದನೆ ತೆಗೆದುಕೊಂಡು ಸಾಗಿ
ದೆವ್ವ ವದನೆ ಅಟ್ಟಿ ಬಂದು ನಿಂತರು
ಈ ಮಾತು ನುಡಿದರು.

ಹುತ್ತರಿಯ ವಿಷಯ ಕೇಳಿರೆಲ್ಲ
ಕೊಡಗಿನ ಜನರೆ, ಮುಖ್ಯರೆ ತಕ್ಕರೆ!
ನೆಟ್ಟ ಬೆಳೆಯ ನೋಡಿ ಕುಯ್ಯಲಿಕ್ಕೆ
ಮುಹೂರ್ತವೊಂದು ಕೂಡಿ ಬಂದಿದೆ
ಅದನು ಕೇಳಿಕೊಂಡ ಕೊಡಗು ಜನರು
ಅಂದು ಬಿಟ್ಟು ಮರುದಿನ
ಮುಂಬೆಳಗು ಹೊತ್ತಿನಲ್ಲಿ
ಕೋಳಿ ಕೂಗು ಸಮಯದಲ್ಲಿ
ಮೈ ಕೊಡವಿ ಎದ್ದರೆಲ್ಲರು
ಕೊಟ್ಟಿಗೆಯ ಸಗಣಿ ತೆಗೆಯುವಲ್ಲಿ

ಮೈಗೆ ಬೆಳಕು ಬೀಳುವಲ್ಲಿ
ತುಂಬ ಹೊತ್ತು ಆಯಿತೆಂದು
ಪೆಟ್ಟಿ ತೆಗೆದು ಪಾತ್ರೆ ಹಿಡಿದು
ಒಂದು ಮನೆಯ ಹಿರಿಯ ಸ್ನಾನ ಮಾಡಿದ
ಆನೆ ಕೊಂಬಿನಂತ ಕುಡುಲು ಕತ್ತಿಗೆ
ಸಣ್ಣ ಬೊಟ್ಟು ಇಟ್ಟರು
ಕೆಂಪು ಗೆಣಸು ಕುಯ್ದರು
ಕುತ್ತ್‌ನಾರು (ಹುತ್ತರಿನಾರು) ತಂದರು
ಅರಳಿ ಎಲೆಯ ತಂದು
ಹೊನ್ನಿನಂತ ನೆರೆಯ ಕಟ್ಟಲು
ಒಕ್ಕದೆಲ್ಲ ಜನರು
ಕಾಪಿ ಸಣ್ಣ ಉಣಿಸು (ಫಲಾಹಾರ) ತಿಂದು
ವಂಶ ಮೂಲ ಹಿರಿಯ ಕಾರೋಣಂಗೆ
ತಮ್ಮ ತಿಳಿದಕಾಣಿಕೆ ಇಟ್ಟರು
ಉಯಿ, ಓ ನಮ್ಮ ಹೆತ್ತ ತಾಯಿ
ಎಲ್ಲದುಡಿಯ ಬಡಿದು ಹಾಡ್ವೆವು
ಸಾಸ್ರ ಭಟ್ಟಿ ಜಮ್ಮ ಭೂಮಿಯಲ್ಲಿ
ಕಳಕಳಿಯಾಗಿ ಬರಲು ನೆಟ್ಟ ಬೆಳೆಗೆ
ಹೊನ್ನಿನಂಥ ನೆರೆಯ ಕಟ್ಟಿ ಇಟ್ಟರು
ದೇವರನ್ನೆ ನೆನೆದು ಕರೆಯುತ ರೂಢಿಯಂತೆ
ಬತ್ತಿ ಕೋವಿ ಗುಂಡು ಹೊಡೆದರು
ಕಳಿಕಳಿಯಾಗಿ ನೆಟ್ಟು ಬಂದ ಬೆಳೆಯ
ಹೆಚ್ಚಲಿ ಹೆಚ್ಚಲಿ ಎಂದು ಕುಯ್ದರು
ಹೊನ್ನು ಬೆಳೆಯ ಕದಿರ ತೆಗೆದುಕೊಂಡು
ಕದಿರು ನಳಿಗೆ ಕುತ್ತಲಿಟ್ಟುಕೊಂಡು
ಕೆಂಪು ಝುಳಪ್ಪ ಪೇಟ ತಲೆ ಮೇಲೆ
ಅಂದವಾಗಿ ಕದಿರ ಇಟ್ಟುಕೊಂಡು
ಬಂದ ದೇವರಿಗೆಲ್ಲ ಕದಿರು ಇಟ್ಟರು

ಕಾರೊಣಂಗೆ ನೆನೆದು ಮೊದಲು ಇಟ್ಟು
ನೆಲ್ಲಕ್ಕಿ ನಡುಬಾಡೆಯಲ್ಲಿ
ಚಂದವಾದ ಓಲೆ ಚಾಪೆ ಹರಡಿ
ಬತ್ತಿ ಬೆಳಕು ದೀಪ ಹಚ್ಚಿ ಇಟ್ಟು
ಬೆಳ್ಳಿಮಾಲೆ ಹೊನ್ನು ಕೈಮಾಲೆಯಲ್ಲಿ
ಕದಿರ ಕುತ್ತಿ ಜೊತೆಗೆ ಚಂದವಿಟ್ಟರು
ಕಾರೊಣಂಗೆ ಕದಿರುಕಟ್ಟಿ
ಬಾಗಿಲಿಂಗೆ ಕದಿರುಕಟ್ಟಿ
ಅಟ್ಟಗಿಟ್ಟಕ್ಕೆಲ್ಲ ಚೆಂದವಾಗಿ
ಕದಿರು ಕಾಳು ಪಾಯಸ
ದೋಸೆ ಗೆಣಸು ಪಾಯಸ
ಎಲ್ಲ ಉಂಡು ತೃಪ್ತಿ ಪಡೆದರು
ಊರಿಗಿದ್ದ ಮೈದಾನದಲ್ಲಿ
ಒಂದೆ ಹಟ್ಟಿ ಜನರ ತೆರದಿ

ಹುತ್ತರಿಯ ಕೋಲು ಆಟ ಆಡ್ವರು
ಅಂದು ಬಿಟ್ಟ ಮರುದಿನ
ಊರು ಮೈದಾನದಲ್ಲಿ ಕೋಲು ಆಟ
ಚಂದವಾಗಿ ಆಡುವರೆಲ್ಲ
ನಾಡು ಮೈದಾನದಲ್ಲಿ ಕೋಲಿನಾಟ
ಸೊಗಸಿನಿಂದ ಆಡ್ವರೆಲ್ಲರು

ಅಂದಲ್ಲ ಮರುದಿನ
ಊರಿನೆಲ್ಲ ಜನರು ಕೂಡಿ
ಆಟ ಊಟ ಊರಿನೂಟಕಿರುವ
ಮೈದಾನದ್ದೊರಗೆ ಸೇರಿನಿಂತು

ಕಾಲು ಹಿಡಿದು ಕೈಯ ಮುಗಿದು
ಹಿರಿಯರಾದ ಎಲ್ಲರಿಗೂ ನಮಿಸಿದರು
ಇಷ್ಟು ಹೇಳಿ ಹಾಡ ಮುಗಿಸ
ವರುಷಕೊಮ್ಮೆ ಒಂದು ಬಾರಿ
ಹುತ್ತರಿಯ ಹೆಸರು ಹೇಳಿ
ಹಬ್ಬವನ್ನು ಮಾಡ್ವರೆಲ್ಲರು
ಹಾಡಿದರೆಂದರೆ ಪೊಮ್ಮಾಲೆ
ಸಿಂಗರಿಸೆಂದರೆ ಹೂಮಾಲೆ
ಜೋಡಿ ಸರದ ಏಲಕ್ಕಿ ಮಾಲೆ
ಏಲಕ್ಕಿ ಮಾಲೆ ಪೊಮ್ಮಾಲೆ
ಮುತ್ತಿನ ಮಾಲೆ ಕೊಡಗಿದುವೆ
ಲೇ ಲೇ ಲೋ ಲೇ ಲೇ ಲೋ

ಹುತ್ತರಿ ಕೋಲಾಟದ ಹಾಡು

ಪೊಯಿಲೇ ಪೊಯಿಲೇ
ಹುತ್ತರಿ ಹಬ್ಬದ ಕೋಲು ಪೊಯಿಲೇ ಪೊಯಿಲೇ
ಹುತ್ತರಿ ಹಾಡನು ಸ್ವಲ್ಪವ ಹಾಡಿರಿ ತರುಣರೇ ಪೊಯಿಲೇ
ಯುವಕರ ಬಾಯೊಳು ತಂಬಿಟ್ಟು ಮುದ್ದೆ
ಸವಿದಿದೆ ನಾಲಗೆ ತಾಳು
ಕಚ್ಚುಟ್ಟಿ ಮುಳ್ಳಿನ ಕಾಡಲ್ಲಿ ಜಿಂಕೆಯ ಹೆಜ್ಜೆ ಪೊಯಿಲೇ
ಅಲ್ಲವು ನಿಮ್ಮಯ ಬಾಳು
ನಮ್ಮಯ ತರುಣರೆ ಹಾಡಿದ ನೀವು ಪೊಯಿಲೆ

ಬೆತ್ತದ ಕೋಲಿಗೆ ಬೆಳ್ಳಿಯ ಮಣಿಸರ ಪೊಯಿಲೇ
ಬೆತ್ತದ ಕೋಲಿಗೆ ರೇಷ್ಮೆಯ ಗೊಂಡೆ ಪೊಯಿಲೇ

ನಮ್ಮಯ ಹುತ್ತರಿ ಕೋಲದು ಬಾಣೆಗೆ ಪೊಯಿಲೇ
ಬರುತಲಿ ಆಡುವುದು ಪೊಯಿಲೇ
ಬೆತ್ತದ ಕೋಲಿಗೆ ರೇಷ್ಮೆಯ ಗೊಂಡೆ ಪೊಯಿಲೇ
ಕೊಲ್ಲೀರ ಮನೆಯೊಳು ಕೊಲ್ಲೀರ ಹಿರಿಯರೇ
ಕೋಲಾಟದ ರಭಸದಿ ಜಾರಿದೆ ಸೊಂಟದ ಪಟ್ಟಿಪೊಯಿಲೇ
ಪೊಯಿಲೇ
ಅಜ್ಜಯ್ಯನ ನಡುಪಟ್ಟಿಯು ಜಾರಿದೆ ಕೋಲಾಟದಿ ಪೊಯಿಲೇ
ನಮ್ಮಯ ತರುಣರೆ ಹಾಡಿರಿ ನೀವು ಪೊಯಿಲೇ
ತರುಣರ ಬಾಯೊಳು ಹುತ್ತರಿ ತಂಬಿಟ್ಟು ಪೊಯಿಲೇ
ತರುಣರ ಬಾಯೊಳು ಕೇಚಕ್ಕಿ ಕೂಳು ಪೊಯಿಲೇ
ಮಳ್ಳಿಮೀನಿನ ಸಾರು ನೆನಪೊಳು ಆಟ ಪೊಯಿಲೇ
ತರುಣರ ಬಾಯೊಳು ಹುತ್ತರಿ ಕೋಲಿನ ಪೊಯಿಲೇ
ಆಟದ ಹಾಡೊಳು ತಂಬುಟ್ಟಿನ ನೆನಪು ಪೊಯಿಲೇ ಪೊಯಿಲೇ ಪೊಯಿಲೇ
ತ ನ ನಾ ನಾ ನಾ ನ

ಹುತ್ತರಿ ಮನೆ ಹಾಡು

ಲೇಲಯ್ಯ ಲೇಲೋ ಲೇಲಾ ಲೇಲಾ
ಒಕ್ಕಡ ಒಡೆಯನ ಮನೆ ಓಣಿಯ ಕೆಲಸ
ಓಣಿಗೆ ಚೆಂದವು ಇಬ್ಬದಿ ಜರಿಗಿಡ ಹುಲುಸು
ಅಯ್ಯನ ತಕ್ಕನ ಮನೆ ಓಣಿಯ ಇಬ್ಬದಿ
ಕಲ್ಕಟ್ಟಡ ಕಾಡ್ಗಲ್ಲಿನ ಆ ಕಟ್ಟೋಣವು ಚೆಂದ
ಅಯ್ಯನ ಒಕ್ಕದ ಮನೆ ಓಣಿಯ ಮಾಡಿನ
ಹಾದಿಯು ಚೆಂದ ಮುಂದಿನ ಮೆಟ್ಟಲು ಕೆಲಸ
ಬಿಳಿಕಲ್ಲೊಳು ಮಾಡಿದ ಮೆಟ್ಟಿಲ ಕೆಲಸ
ಬಾಗಿಲ ಚೌಕಟ್ಟಿನ ಚಂದನ ನೋಡುವ
ಚಿನ್ನದ ಕಟ್ಟಿನ ಬೆಳ್ಳಿಯ ತೊಲೆಗಂಬ

ನಾಲ್ಕಟ್ಟಿನ ಹಟ್ಟಿಯ ಮನೆ ಐಮರ ಚಿತ್ತದ ಕಂಬ
ಚಿತ್ತಾರದ ಕಂಬದಿ ಏನೆಲ್ಲವು ರೂಪವಿದೆ !
ಕಾಡ್‌ಜಾತಿಯ ಹಾವಿನ ಹಕ್ಕಿಯ ಕೆತ್ತನೆಯಿಲ್ಲಿದೆ
ಕೋಳಿ ಬೆಕ್ಕನು ಬರೆದಿಹ ರೂಪಗಳುಂಟು
ದೇವರ, ದೇವಿಯ ರೂಪುಗಳೆಲ್ಲವು ಉಂಟು
ಭಾವಣಿ ಇಹ ಹಟ್ಟಿಯ ಮನೆ ಮುಂದುಮನೆ
ನಾನಾತರ ಮಣ್ಣೊಳು ಕಟ್ಟಿದ ಈ ಮನೆಯೊಳಿದೆ
ತಾವರೆ ದಾಸವಾಳ ಮಲ್ಲಿಗೆ ಹೂಗಳ ರೂಪ
ಕಡಿಯುವ ಕತ್ತಿಯ ಹಿಡಿದಹ ವೀರನ ರೂಪ
ಅಯ್ಯನ ದೇವರ ಚಿತ್ತವ ಬರೆದಿಹ ರೂಪ
ನೆಲ್ಲಕ್ಕಿ ನಡು ಬಾಡೆಯಲಿ ತೂಗಿಹ ಲಕ್ಷ್ಮಿ ದೀಪ

ಮೂರ್ಕಾಲಿನ ಅಗಲದ ಮೇಲ್ಮಣೆಗಿದೆ ಬೆಳ್ಳಿಯ ತಟ್ಟೆ
ಬೆಳ್ಳಿಯ ತಟ್ಟೆಯೊಳಗೆ ಹಸನಿಹ ಸಣ್ಣಕ್ಕಿ
ಸಣ್ಣಕ್ಕಿಯ ಮೇಲಿದೆ ಹೊಂ ಬೆಳಕಿನ ದೀಪ
ಚಿನ್ನದ ದೀಪಕ್ಕೆ ಹಸುವಿನ ತುಪ್ಪದಿ ಅದ್ದಿದ ಒತ್ತಿ
ತುಪ್ಪದಿ ಮಿಂದಿಹ ಬತ್ತಿಯ ಹಚ್ಚಿದ ದೀಪ
ಒಕ್ಕಕೆ ಮುಡಿಪಿಹ ಆಚಾರವನೆಲ್ಲವ ಹಾಡುತ
ಒಕ್ಕಕೆ ಸಂತದ ಹೆಚ್ಚಲಿ ಎಂದು ಹಾಡಿಬಿಟ್ಟೆವು ಇಂದು
ಆದಿಮೂಲನೆ ಆಮೂಲಾಗ್ರನೆ ಲೇಲಯ್ಯ ಲೇಲೋ

ಜಾನಪದ ಆಚರಣೆಗಳು

ತುಲಾ ಸಂಕ್ರಣದ ಸಮಯದಲ್ಲಿ ಇಲ್ಲಿ ದೀಪ ಪೂಜೆ ನಡೆಯುತ್ತದೆ. ಜನಪದ ಆಚರಣೆಗಳು ಆರಂಭವಾಗುತ್ತದೆ. ಅವುಗಳೆಂದರೆ ಸಂಕ್ರಮಣಕ್ಕೆ ಏಳು ದಿನ ಮುಂಚಿತವಾಗಿ 'ಬೇಡು ಕಟ್ಟುವುದು' (ಹರಕೆಯ ಹಾಡು – ಆದರೂ ಒಂದು ರೀತಿಯಲ್ಲಿ ದೇವರ ನಿಂದಾಸುತ್ತಿಗೆ ಸಮೀಪವೇನೋ?) ಆರಿಸಿದರೆ, ಸಂಕ್ರಮಣದ ಹಿಂದಿನ ಸಂಜೆ 'ಬೆತ್ತಲೆ ಕಳಿ' (ಹಸಿರೆಲೆಗಳಿಂದ ದೇಹವನ್ನು ಮುಚ್ಚಿಕೊಂಡು ಹರಕೆ ಒಪ್ಪಿಸುವ ಬಗೆ) ಹಾಗೂ'ಕುದರೆ ಬೋಡುಕಳಿ' (ಕುದುರೆ ಕುಣಿತ) ಆರಂಬಿಸುತ್ತಾರೆ. ಬೆತ್ತದ ಪಟ್ಟೆಗಿಂದ ಮಾಡಿದ ಕುದುರೆ ಅಸ್ತಿಪಂಜರಕ್ಕೆ ಅಲಂಕಾರ ಮಾ, ಮನೆಯಪ್ಪಂಡ, ಸಣ್ವಂಡ್ರ ಮನೆತನದ ತರುಣರು ಹೊತ್ತು ಬೆಟ್ಟೆ ಹೊಡರಲು ತಯಾರಾಗುತ್ತಾರೆ.

ಎಂಟನೇ ದಿನ ಪೂಜೆ ಭಜನೆ, ಅರ್ಚನೆ, ಅಭಿಷೇಕ, ಜಾತ್ರೆ ಎಲ್ಲವೂ ಬೆಟ್ಟದ ಮೇಲೆ ನಡೆಯುತ್ತದೆ. ಈ ಜಾತ್ರೆಯಲ್ಲಿ ನೆರೆದ ಜನತೆ ಎದುರು ಕುದುರೆ, ದುಡಿ ಹಾಗೂ ಜೊಯ್ ಗುಟ್ಟುವ ಓಲಗದ ಧ್ವನಿ ಬೆರೆತಾಗ ಮೋಡಿ ಅಡರುತ್ತದೆ. ಈ ಕುಣಿತದಲ್ಲಿ ಹಿರಿಯರು, ಕಿರಿಯರು ಎಂಬ ಭೇದವಿಲ್ಲದೆ ಎಲ್ಲರೂ ಸೇರುತ್ತಾರೆ. ಹದಿಹರೆಯದ ಹೆಣ್ಣು-ಗಂಡುಗಳಿಗೆ ಈ ನೋಟ, ನಾದ, ತಾಳಗತಿ ಚೇತೋಹಾರಿ. ಈ ಸಂಕ್ರಮಣ ಸಂದರ್ಭದಲ್ಲಿ ಇಲ್ಲಿ ಆರಂಭವಾದ ಈ ಬಗೆಯ 'ಕುದುರೆ ಬೋಡು ಕಳಿ' ಕೊಡಗಿನಾದ್ಯಂತ ಮುಮದುವರಿದು ಮುಂದಿನ ಜೂನ್ ನಾಲ್ಕರ ವೇಳೆಗೆ ಮುಕ್ತಾಯವಾಗುತ್ತದೆ. ಇದಕ್ಕೆ 'ಪಾರಣಮಾನಿ' (ಪಾರಣ ಬಾಣೀ) ಎನ್ನುತ್ತಾರೆ. ಈ ಸಂದರ್ಭದಲ್ಲಿ ಒಂದು ಕೊಡವ ಗಾದೆಯೇ ಇದೆ :

"ಕುಂದತ್ ಬೊಟ್ಟಲ್ ನೇಂದ ಕುದುರೆ ಪಾರಣ ಬೋಡಲ್ ಅಳಂಜ ಕುದುರೆ" – "ಕುಂದರ ಬೆಟ್ಟದಲ್ಲಿ ಎದ್ದು ಕುದುರೆ ಪಾರಣ ಬೋಡಲ್ಲಿ ಬಿದ್ದು ಹೋಗುತ್ತದೆ" ಈ ಮುಕ್ತಾಯ ನಡೆಯುವುದು 'ಕಡಂಗಾಲ' ಎಂಬ ಸ್ಥಳದಲ್ಲಿ.

ದೇರಟ್ ಕಲ್ಲು: ಗಿರಿಯ ದೇಗುಲದ ಎಡಕ್ಕೆ (ನೈರುತ್ಯದಲ್ಲಿ) ಸುಮಾರು 5ದ ಅಡಿ ದೂರದಲ್ಲಿ ಬಂಡೆಯ ಚಾಚಿದ ಕೊಂಡೋಂದಿದೆ. ಮುಕ್ಕಾಲು ಅಡಿ ಉದ್ದ. ಅರ್ಧ ಅಡಿ ಅಗಲದ ಈ ಕೋಡುಕಲ್ಲನ್ನು ಇಲ್ಲಿಯ ಜನತೆ 'ದೇರಟ್ ಕಲ್ಲು' ಎನ್ನುತ್ತಾರೆ. ಸಂಕ್ರಮಣ ಸಮಯದ ಜಾತ್ರೆಯ ದಿನ, ಹಿರಿಯರು, ಕಿರಿಯರು ಈ ಕಲ್ಲಿನ ಮೇಲೆ ಎರಡೂ ಪಾದಗಳ ಮೇಲೆ ನಿಂತು ಮೂರು ಸುತ್ತು ನಿಂತಲ್ಲಿ ತಿರುಗುತ್ತಾರೆ. ಕುಂದಗಿರಿಯ ಸುಮಾರು 900 ಅಡಿ ಎತ್ತರದಲ್ಲಿನ ಈ ತಿರುವಿನ ಕಲ್ಲನ್ನು 'ದೇವರ ಪಾರೆ' ಎನ್ನುವುದೂ ಉಂಟು. ಈ ಕಲ್ಲಿನ ಮೇಲಿನ ತಿರುಗುವಿಕೆ ನೋಡುವ ಹೊಸಬರಿಗೆ ನಡುಕ ಹುಟ್ಟಿಸಿದರೆ, ಭಕ್ತಿಯಿಂದ ತಿರುಗುವ ಭಕ್ತಜನರ ವೀರತ್ವದ ಛಲದ, ಮಾನಸಿಕ ಶಕ್ತಿ ಸಂಕೇತವಾಗಿ ನಡೆಯುತ್ತದೆ.

ಕಾರ್ತೀಕ ಮಾಸ ನಾಲ್ಕು ಅಥವಾ ಐದು ಸೋಮವಾರಗಳಲ್ಲಿ ಗಿರಿಯ ಈಶ್ವರನಿಗೆ ಪೂಜೆ ನಡೆದರೂ, ಕೊನೆಯ ಸೋಮವಾರದ ಪೂಜಾ ಸಮಯದಲ್ಲಿ ವೈಶಿಷ್ಟ್ಯವಿದೆ. ಮನೆಯಪ್ಪಂಡ್ರ ಹಾಗೂ ಸಣ್ಣಿಂಡ್ರ ಮನೆತನದ ಕೊಡವರು ತಪ್ಪದೆ ಈ ಮಾಸದ ಸೇವೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಆ ದಿನ ವಿಶೇಷ ಪೂಜೆಯ ನಂತರ ವನಭೋಜನದ ವ್ಯವಸ್ಥೆ ಇರುತ್ತದೆ. ಊಟದ ನಂತರ ದೇರಟ್ ಕಲ್ಲಿನ ಮೇಲೆ ಅರ್ಚಕರು ಬಂದು ದಕ್ಷಿಣಾಭಿಮುಖವಾಗಿ ಕೈ ಜೋಡಿಸಿ ನಿಲ್ಲುತ್ತಾರೆ. ಅವರ ಹಿಂದೆ ಬಂಡೆಯ ಮೇಲೆ ಬಂದಿರುವ ಭಕ್ತರು ಹರಕೆಯರೆಲ್ಲರೂ ಕೈಜೋಡಿಸಿ ನಿಲ್ಲುತ್ತಾರೆ. ಅರ್ಚಕರು 'ಬೆಟ್ಟದ ಮಹದೇವ ಈಶ್ವರ'ನ ಪಾದಕ್ಕೆ ಅಗಸ್ತೇಶ್ವರನ ಪಾದಕ್ಕೆ ವಿಶ್ವನಾಥನ ಪಾದಕ್ಕೆ, ಅಷ್ಟದಿಕ್ಪಾಲಕರ ಪಾದಕ್ಕೆ, ಪಾರ್ವತಿದೇವಿಯ ಪಾದಕ್ಕೆ, ಇಗ್ಗುತಪ್ಪನ ಪಾದಕ್ಕೆ, ಕಾವೇರಿಯಮ್ಮನ ಪಾದಕ್ಕೆ ಎನ್ನುವಾಗ ಪ್ರತಿ ಬಾರಿಯೂ ಹಿಂದೆ ನಿಂತ ಭಕ್ತರು 'ಗೊಂವಿಂದೋ' ಎಂದು ಘೋಷಿಸುತ್ತಾರೆ. (ಇಲ್ಲಿ 'ಗೋವಿಂದೋ' ನಮಸ್ಕಾರ ಸೂಚಕವಾಗಿ ಪ್ರಯೋಗವಾಗುವಂತಿದೆ) ಅನಂತರ ಅರ್ಚಕರು ಮೂರು ಸುತ್ತುಸುತ್ತಿ ಪ್ರಾರ್ಥನೆ ಸಲ್ಲಿಸುದ ಮೇಲೆ ಮನೆತನದ ಹಿರಿಯ ಕೊಡವ ಪ್ರತಿನಿಧಿಗಳು ಅರ್ಚಕರು ಕೂಗಿದಂತೆಯೇ ದೇವರುಗಳ ಹೆಸರನ್ನು ಕೂಗುವಾಗ, ಉಳಿದವರು 'ಗೋವಿಂದೋ' ಎನ್ನುತ್ತಾರೆ. ಇದನು 'ಗೋವಿಂದನ ಕೂಗು' ಎನ್ನುವುದುಂಟು. ಇಲ್ಲಿನ ಪ್ರಕೃತಿ ರಮ್ಯ ನೋಟ 'ರಾಜಾಸೀಟ್'ನಿಂದ ನೋಡುವ ನೋಟಕ್ಕಿಂತಲೂ ರಮ್ಯವಾಗಿದೆ. ಇದನ್ನು ಚಾರಣಡು ಗಮನಿಸಬೇಕು.

ಪೂಜಾ ವಿವರ

ಅಲ್ಲಿಂದ ದೇಗುಲದ ಬಳಿಗೆ ಎಲ್ಲರೂ ಬಂದಾಗ ಅಕ್ಕಿ ಮತ್ತು ತೀರ್ಥ ಬೆರಸಿ (ಮಂತ್ರಾಕ್ಷತತೆಯ ಒಂದು ರೂಪ) ಅರ್ಚಕರು ನೀಡುತ್ತಾರೆ. ಅರ್ಚಕರ ಮಂತ್ರೋಚ್ಚಾರಣೆಯ ನಂತರ ಗರ್ಭಗುಡಿಯ ಮೆಟ್ಟಿನಲಿನ ಮೇಲೆ ಎಲ್ಲರೂ ಅಕ್ಕಿತೀರ್ಥವನ್ನು, ಪ್ರಾರ್ಥನೆ ಮಾಡುತ್ತ ಎಸೆದು ಶಿರಸಾಷ್ಟಾಂಗವೆರಗುತ್ತಾರೆ. ಆ ಸಮಯದಲ್ಲಿ ಅರ್ಚಕರು ಶ್ಲೋಕ ಪಠನದೊಡನೆ ಆಶೀರ್ವಾದದ ಅಕ್ಕಿಕಾಳನ್ನು ಅವರೆಲ್ಲರ ಮೇಲೆ ಹಾಕುತ್ತಾರೆ. ಅನಂತರ ಹಿರಿಯ ಕೊಡವರೆದ್ದು ಈ ಎರಡೂ ಮನೆತನಗಳ ಪರವಾಗಿ ಶಿವನಿಗೆ ಅದುವರೆಗಿನ ಸೇವೆಯ ವರದಿಯನ್ನೊಪ್ಪಿಸಿ ತಪ್ಪುಗಳಾಗಿದ್ದರೆ ಕ್ಷಮಿಸಲು ಬೇಡುತ್ತಾರೆ. ಮಕ್ಕಳಿಗೆ, ಕುಟುಂಬಕ್ಕೆ, ಗ್ರಾಮಕ್ಕೆ ಒಳ್ಳೆಯದನ್ನು ಮಾಡು. ಮುಂದಿನ ಬಾರಿ ನಿನ್ನ ಸೇವಾ ಕೈಂಕರ್ಯವನ್ನು ಇನ್ನೂ ವೈಭವದಿಂದ ಮಾಡುವ ಶಕ್ತಿ ಕೊಟ್ಟು ಕಾಪಾಡು ಎಂದು ಪ್ರಾರ್ಥಿಸಿದ ಮೇಲೆ, ಅರ್ಚಕರು ಗುಡಿಯ ಬಾಗಿಲನ್ನು ಮುಚ್ಚುತ್ತಾರೆ. ಆಗ ಗ್ರಾಮದತ್ತ ಎಲ್ಲರೂ ಇಳಿದು ಹೊರಟರೆ – ಮತ್ತೆ ಬರುವುದು ಮುಂದಿನ ತುಲಾಸಂಕ್ರಮಣದ ಸಂದರ್ಭದಲ್ಲಿಯೆ.

ದೈನಂದಿನ ಪೂಜೆಯ ನಾಡತಿರ್ಕೆಯ (ನಾಡ ದೇಗುಲ) ಶಿವನಿಗೆ ನಡೆಯುವಾಗ – ಅಂದರೆ ಬೆಟ್ಟದ ಕೆಳಗಿನ ಶಿವಾಲಯದಲ್ಲಿ – ಅಲ್ಲಿನ ಆರತಿಯನ್ನು ಬೆಟ್ಟ ಮಹಾದೇವನಿಗೆ ಆರೋಹಿಸುತ್ತಾರೆ. ಈ ಕೆಳ ದೇಗುಲದ ಶಿವನಿಗೆ ಕುಂಭಮಾಸದಲ್ಲಿ ಏಳು ದಿನಗಳ ಉತ್ಸವ ನಡೆದರೆ (ಫೆಬ್ರವರಿ ತಿಂಗಳ ಸುಮಾರಿಗೆ) ಪಾರ್ವತಿಗೆ ಮೀನ ಮಾಸದಲ್ಲಿ ನಡೆಯುತ್ತದೆ. ಆರನೇ ದಿನದ ವಿಶೇಷ ಉತ್ಸವನ್ನು 'ನೆರ್ಪು' ಎಂದು ಕರೆಯುತ್ತಾರೆ. ಉತ್ಸವ ಕಳೆದ ಮಾರನೆ ದಿನ ಅಂದರೆ 8 ದಿನ ಬೆಳಿಗ್ಗೆ ಕಳಶಪೂಜೆ ನಡೆದು ಕೊಡಿಮರವನ್ನು ತೆಗೆದು ಮುಕ್ತಾಯದ ಪೂಜೆ ಆಗುತ್ತದೆ. ಈ 7 ದಿನಗಳ ಉತ್ಸವದಲ್ಲಿ ಬೆಟ್ಟಿಯತ್ ನಾಡಿನವರಿಗೆ ಎಂದರೆ ಕುಂದ, ಉದೂರು, ಹಳ್ಳಿಗಟಟು, ಮಗುಟಗೇರಿ ಹಾಗೂ ಅರುವತೊಕ್ಕಲು ಗ್ರಾಮಗಳವರಿಗೆ, ಪ್ರಾಣಿ, ಹಿಂಸೆ, ಮದ್ಯಪಾನಗಳು ನಿಷಿದ್ಧ. ಈ ಉತ್ಸವದ ಸಂದರ್ಭದಲ್ಲಿಯೆ ಸನಿಹದ ಚಾಮುಂಡಿ ಕಲ್ಲಗೆ 'ಉರುಕಲು' (ಅರಳಿನ ತಿಂಡಿ) ಅರ್ಪಿಸುತ್ತಾರೆ.

ಇತಿಹಾಸ

'ಕುಂದ್' ಎಂದರೆ ಕೊಡವ ಭಾಷೆಯಲ್ಲಿಯೂ ಬೆಟ್ಟವೆಂದರ್ಥ. ಕುಂದ ಎಂದರೆ ಮಲ್ಲಿಗೆ, ಸಣ್ಣ ಬೆಟ್ಟ ಎಂಬ ಅರ್ಥವೂ ಉಂಟು. ಇಲ್ಲಿ ಮೊದಲಗೆ ಮಲ್ಲಿಗೆ ಹೆಚ್ಚು ಬೆಳೆಯುತ್ತಿದ್ದು, ಕುಂದ ಮಲ್ಲಿಗೆ ಎಂದೇ ಪ್ರಸಿದ್ಧಿ ಇತ್ತಂತೆ. ಪರಿಸರ ಹಾಗೂ ಕುಂದಗ್ರಾಮದ ಬಳಿಯ ಕಾರಣವಾಗಿ, ಬೆಟ್ಟಕ್ಕೆ ಕುಂದಗಿರಿ – ಕುಂದಬೆಟ್ಟ ಎಂಬ ದ್ವಿರುಕ್ತಿ ರೂಪ ಸಿದ್ಧಿಸಿರಬೇಕು ಎಂದು ಎನಿಸುತ್ತದೆ. ಈ ಕುಂದ ಬೆಟ್ಟದ ಬುಡದ ದಕ್ಷಿಣ ಪಾರ್ಶ್ವಕ್ಕೆ ವೀರರಾಜನ ಕಾಲದಲ್ಲಿ ಒಂದು ದೊಡ್ಡ ಗುಡಿಸಲು ಇತ್ತಂತೆ.

ಕ್ರಿ.ಶ. 1787ರಲ್ಲಿ ಪಿರಿಯಾಪಟ್ಟಣದ ಸೆರೆಯಂದ ವೀರರಾಜೇಂದ್ರ ಒಡೆಯನು ತಪ್ಪಿಸಿಕೊಂಡು ಬಂದು ತಕ್ಷಣ ಕೊಡಗಿನ ಬ್ರಹ್ಮಗಿರಿಯ ಕೆಲವು ತಿಂಗಳು ಗೋಪ್ಯವಾಗಿದ್ದ. (ಬಿ.ಡಿ. ಗಣಪತಿ : 'ಕೊಡವರು', ಪು. 172) ವೇಷ ಮರೆಸಿಕೊಂಡು ಅಲೆದಾಡುತ್ತಿದ್ದ ಅವನಿಗೆ ತಮ್ಮ ಗುಡಿಸಿನಲ್ಲಿ ಆಶ್ರಯ ತೋರಿದ ಕಾರಣ 'ಮನೆಯಪ್ಪಂಡ' ಎಂದ ಹೆಸರು ತಮ್ಮ ಮನೆತನಕ್ಕೆ ನಿಂತಿರು ಎಂದು ವಂಶೀಕರು ಹೇಳುತ್ತಾರೆ. ಈ ಮನೆತನದ ಹಿರಿಯನಾದ ನಾಚಯ್ಯ ವೀರರಾಜೇಂದ್ರನ ಪಡೆಗೆ, ಪಡೆಯಾಳು ನಾಚಯ್ಯ ಎಂದೇ ಪ್ರಸಿದ್ಧಿಗೆ ಬಂದನಂತೆ. ಆಗ ಆತ ಮನೆಯಪ್ಪಂಡ ಮನೆತನದ 'ಕಾರೋಣ' (ಗುರುಸ್ಥಾನದ ಮೂಲ ಹಿರಿಯ) ಎನಿಸಿದ್ದಾನೆ. ಕೆಳಗಿನ ಶಿವಾಲಯದ ನೆರೆಗಿರುವ ಕೈಮಡ (ಕೈಮಠ) ಈತನದೇ.

ಹೀಗೆಯೇ ಸಣ್ವಂಡ್ರ ಮನೆತನದ ಬೋಳಯ್ಯ ಟೀಪುವಿನ ಸೆರೆಯಿಂದ ತಪ್ಪಿಸಿಕೊಂಡು ಬಂದ ವೀರನಂತೆ. ಮೊದಲೇ ತಿಳಿಸಿದಂತೆ ಮನೆಯಪ್ಪಂಡ ತಿಮ್ಮಯ್ಯ ಹಾಗೂ ಸಣ್ವಂಡ್ರ ಬೋಳಯ್ಯ ಇಬ್ಬರೂ ಸೇರಿ, ಕೆಲದೇಗುಲದಲ್ಲಿ ಲಿಂಗ ಮತ್ತು ಗಣಪತಿ ಪ್ರತಿಷ್ಠಾಪನೆ ಮಾಡಿದರಂತೆ.

ಕ್ರಿ.ಶ. 1784–87ರ ಟೀಪುವಿನ ವಶದಲ್ಲಿ ಕೊಡಗು ಇದ್ದ ಕಾಲ. ಸಂತತಿಯವರಿಗೆ ನಿರ್ದಿಷ್ ಇಸವಿ ಗೊತ್ತಿಲ್ಲದಿದ್ದರೂ, ಕತೆ ಹಾಗೂ ಇತಿಹಾಸದಿಂದ ನಡೆದ ಘಟನೆ ತಥ್ಯವಾಗಿ ಕಾಣುತ್ತದೆ.

ಈ ಸಮಯದಲ್ಲಿ ಮನೆಯಪ್ಪಂಡ ಹಾಗೂ ಸಣ್ವಂಡ್ರ ಮನೆತನದವರೆಲ್ಲ 'ಬರಪ್ಪಡೆ' (ಬರಪ್ಪೊಳೆ)ಯ ಸಮೀಪದಲ್ಲಿ ಅಡಗಿದ್ದನು. ತುಲಾ ಸಂಕ್ರಮಣದ ಪೂಜೆಯನ್ನು ಕುಂದದಯ್ಯಪ್ಪನಿಗೆ ತಪ್ಪಿಸಬಾರದೆಂಬ ಭಕ್ತಿಯ ಛಲ, ಮುಸಲ್ಮಾನ ಸೈನಿಕರ ಎಚ್ಚರ ಕಾವಲಿನ ನಡುವೆ ಕಾರ್ಯ ಸಾಧಿಸುವ ಸವಾಲಿನೊಡನೆ, ರಾತ್ರೋರಾತ್ರಿ ಬಂದವರು ಮುಹೂರ್ತಕ್ಕೆ ಸರಿಯಾಗಿ ಪೂಜೆ ಸಲ್ಲಿಸಿ ಹೋದರಂತೆ. ಎಚ್ಚರವಿದ್ದೂ ಪೆಚ್ಚಾದವರು ಶತ್ರು ಸೈನಿಕರೇ. ಅಂತಹ ಛಲಗಾರ ಶೂರರ ಸಂತತಿಯವರೆಂದು ಈ ವಂಶೀಕರಿಗೆ ಹೆಮ್ಮೆ.

ಮುಂದೆ ಕಣ್ಣಿಗೆ ನೇರವಾಗಿ ದಕ್ಕುವ ಇತಿಹಾಸ ಕುಂದಗಿರಿ ಶಿವಾಲಯದ ಸ್ತಂಭ ಶಾಸನದಿಂದಲೇ, ಶಾಸನದ 20ನೇ ಸಾಲಿನಲ್ಲಿ ಬರುವ 'ಮನೆಪ್ಪಂಡ್ರ ಪುಜ್ಜೈಯ ಎಂಬಲ್ಲಿ ಪುಜ್ಜೈಯ ಎನ್ನುವ ಹೆಸರು ಕೊಡವ ಮನೆತನಕ್ಕೆ ಬಂದುದಲ್ಲ ಎಂದು ವಂಶೀಕರ ವಾದ. ಆದ್ದರಿಂದ, ಅದು 'ಮನೆಪ್ಪಂಡ್ರ ನಾಚೈಯ್ಯ' (ಪಾರುಪತ್ಯೆಗಾರನಾಗಿದ್ದವ) ಎಂದಿರಬೇಕು ಎನಿಸುತ್ತದೆ. ಕಾರಣ 'ಚೈ', 'ಯ' ಎಂಬ ಅಕ್ಷರಗಳು ಸ್ಪಷ್ಟವಿದೆ.

ಶಾಸನದ ರೀತ್ಯಾ ಈ ಮಹಾದೇವ ಗುಡಿಯ ಜೀರ್ಣೋದ್ಧಾರದ ಕಾರ್ಯದಲ್ಲಿ ಬೆಟ್ಟಿಯತ್ ನಾಡು, ಅಮ್ಮತಿನಾಡು ಕಕ್ಕೇರಿ (ಕೈಕೇರಿ) ಗ್ರಾಮ 'ತಕ್ಕಮುಖ್ಯಸ್ಥರು' ಅಲ್ಲದೆ 'ಶಾಣಭಾಗ ಬ್ರಾಹ್ಮಣ ವೆಂಕಪ್ಪೈಯ, ಸುಭೇದಾರು ಕೊಡಂದೇರ ಮುದ್ದೈಯ, ಪಾರುಪತ್ತೆಗಾರು ಮನೆಪ್ಪಂಡ್ರ (ನಾ)ಚೈಯ, ಸಣ್ವಂಡ್ರೆ ಬೋಳಯ್ಯ, ಮಣಿಂಡೆ ತಿಂಮ್ಮೆಯ ಗುಡ ಮುಂತಾದವರು ಭಾವಹಿಸಿದ್ದಾರೆ. ಶಾಸನದ 27–28ನ ಸಾಳಿನಲ್ಲಿ ಸ್ವಾರಸ್ಯಕರವಾದ 'ನಂದೀಶ್ವರನ ಪ್ರಸಂನಕ್ಕೆ ಸಾಯ ಮಾಡಿದ್ದು ಕುಂದಗ್ರಾಮದ ಜಾಹಗೀರ್‌ದಾರ್ ಹಯತ್ತಕಾನ ಸಾಬಿ' – ಎಂಬ ವಿಷಯ ಹಿಂದು–ಮುಸ್ಲಿಂ ಸೌಹಾರ್ದದ ನಿಷ್ಕಲ್ಮಷ ಸಾಕ್ಷಿ ಎನಿಸುತ್ತದೆ. ಜೊತೆಗೆ ದೇಗುಲದ ಗರ್ಭಗೃಹದ ಬಾಗಿಲು ತಳದ ದಾಟು ಶಿಲೆಯನ್ನು ಮುಸಲ್ಮಾನರೇ ತಂದುಕೊಟ್ಟು ಜೀರ್ಣೋದ್ಧಾರ ಕಾರ್ಯದಲ್ಲಿ ನೆರವಾದ ಕತೆಯೂ ಪ್ರಚಲಿತವಾಗಿದೆ.

ಶಾಸನದಲ್ಲಿ ಬರುವ 'ಪುರಾಣ ಗುಡಿಯನ್ನು ನವನೆತ್ತವಾಗಿ... ಜೀರ್ಣೋದ್ಧಾರ ಮಾಡುವುದಕ್ಕೆ' ಎಂಬ ಸಾಲು; ದೇಗುಲದ ಚೋಳ ಶೈಲಿಯ ವಾಸ್ತು; 11ನೇ ಶತಮಾನದ ಸುಮಾರಿಗೆ ಕೊಡಗು ಚೋಳರ ವಶಕ್ಕೆ ಬಂದ ವಿಷಯ ಹಾಗೂ ಚೋಳರಸರ ಅಧೀನ ನಾಯಕರಾಗಿ ಆ ಕಾಲಕ್ಕೆ ಅಲ್ಲಿದ್ದ ಚೆಂಗಾಳ್ವರು (ಬೆಟ್ಟಿಯತ್ ನಾಡಿನ ಇವರ ಶಾಸನವೊಂದರಲ್ಲಿ ಕಂಡುಬಂದಿದೆ) ಸಹಜವಾಗಿ ತಮ್ಮ ಆಳರಸರನ್ನು ಮೆಚ್ಚಿಸಲು ಶಿವಾಲಯ ಕಟ್ಟಲು ಕೊಟ್ಟಿರಬಹುದಾದ ಪ್ರೋತಾಸಹ (ಜೈನರಾಗಿದ್ದರೂ); ಈ ದೇಗುಲ ವಾಸ್ತು ಈಎಲ್ಲ ವಿಷಯ ಸಂಶ್ಲೇಷಣೆಯಿಂದ, ಕುಂದಗಿರಿಯ ದೇಗುಲದ ಪೂರ್ವ ಅಸ್ತಿತ್ವವನ್ನು 11–12ನೇ ಶಾತಮನಾಕ್ಕೆ ಕೊಂಡೊಯ್ಯಬಹುದು ಎನಿಸುತ್ತದೆ.

ಹೀಗೆ ಪ್ರಾಚೀನ ಹಾಗೂ ಧಾರ್ಮಿಕ ಇತಿಹಾಸವು ಮೈಗೂಡಿರುವ ತಾಣದಲ್ಲಿ ಮುಜರಾಯಿಯವರ ಕೃಪೆ ಇಲ್ಲದೆ ಜನತೆಯೇ ನಡೆಸುವ ಕೈಂಕರ್ಯಗಳ ಬಲುಮೆಯಲ್ಲಿ, ಜನಪದ ಕಲೆಗಳ ಚೇತೋಹಾರಿ

ಪ್ರದರ್ಶನಗಳ ಆಗರವಾಗಿರುವಲ್ಲಿ ನೈಸರ್ಗಿಕ ಚೆಲುವಿನ ಬಹುಸುಂದರ ಸಾಕ್ಷಿಯಾಗಿರುವಲ್ಲಿ ಈ ಕುಂದಗಿರಿ ದಕ್ಷಿಣ ಕೊಡಗಿನ ನಂದಿ ಬೆಟ್ಟವೆನಿಸುತ್ತದೆ.

ಈ ಗಿರಿಗೆ ಹುಬ್ಬಳ್ಳಿಯ ನೃಪತುಂಗ ಬೆಟ್ಟದಲ್ಲಿ ನಿರ್ಮಿಸಿದಂತೆ ಹದನಾದ ಹಾದಿಯೊಂದನ್ನು ಸಂಬಂಧಿಸಿದವರೆಲ್ಲ ಒಟ್ಟಾರೆ ನಿರ್ಮಿಸಿದರೆ ಭಕ್ತರಿಗೆ, ಇತಿಹಾಸಕಾರರಿಗೆ, ಭಾವುಕರಿಗೆ ನಿಸರ್ಗ ಪ್ರೇಮಿಗಳಿಗೆ ಜನಪದ ಕಲಾಸಕ್ತರಿಗೆ, ಚಲನಚಿತ್ರಗಳ ಹೊರಾಂಗಣ ದೃಶ್ಯ ಚಿತ್ರಿಕರಣಕ್ಕೆ ಒಂದು ಸ್ಥಾವರ ಸನ್ನಿಧಿ ಲಭ್ಯವಾದಂತೆ ಆಗುತ್ತದೆ. ಆಧುನಿಕ ಸವಾಲಾದ ಪರ್ವರೋಹಣ ಅಭ್ಯಾಸಕ್ಕೂ ಅನುಕೂಲವಾದ ನೆಲೆಯಾಗುವ ರಚನೆ ಈ ಗಿರಿಗುಂಟು.

ಹಲವು ದೇವರಕಾಡುಗಳಲ್ಲಿ ಕಂಡುಬಂದ ಟೆರ್ರಾಕೋಟಾ ಶಿಲ್ಪಗಳ ಛಾಯಾಚಿತ್ರಗಳು



ಮಕ್ಕಿ ಶಾಸ್ತಾವು



ಹರಕೆಯ ಟೆರ್ರಾಕೋಟಾ ಶಿಲ್ಪಗಳು



ಮಲೆಕುಡಿಯರು ಹುತ್ತರಿ ಪಾಟ್ ಹಾಡುತ್ತಿರುವ ದೃಶ್ಯ



ದೇವರಕಾಡಿನಲ್ಲಿ ಮಲೆಕುಡಿಯರು ಹರಕೆಯ ಶಿಲ್ಪಗಳನ್ನು ಇಡುವ ಸಂದರ್ಭ



ದೇವರಕಾಡಿನಲ್ಲಿ ಮಲೆಕುಡಿಯರು ಹರಕೆಯ ಶಿಲ್ಪಗಳನ್ನು ಇಡುವ ಸಂದರ್ಭ



ಪ್ರತಿ ದೇವರಕಾಡಿನ ಮುಂಭಾಗದಲ್ಲಿ ಕಂಡುಬರುವ ದೃಶ್ಯ



















ದೇವರಕಾಡಿನಲ್ಲಿರುವ ಬೈನೆ ಮರ



ದೇವರಕಾಡಿನಲ್ಲಿರುವ ಮರಗಳು



ದೇವರಕಾಡಿಗೆ ಹೊಂದಿಕೊಂಡಂತಿರುವ ಮಲೆಕುಡಿಯರ ಮನೆ



ದೇವರಕಾಡಿನಲ್ಲಿರುವ ಸುಗ್ಗಿ ಕಟ್ಟೆ